

# ನಾಲ್ಕನೇ ಆಯಾಮ

ಸಂಪುಟ-1

ಪದ್ಮರಾಜ ದಂಡಾವತಿ

ಸಪ್ನ

# ನಾಲ್ಕನೇ ಆಯಾಮ

## ಸಂಪುಟ – 1

ಪದ್ಮರಾಜ ದಂಡಾವತಿ

ಸಪ್ನ ಬುಕ್ ಹೌಸ್®

3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009
ದೂರವಾಣಿ : 40114455

**NALKANE AAYAMA Vol. 1 - Collection of Articles :** by **Padmaraj Dandavati,** published by **Sapna Book House (P) Ltd.,** R.O. # 11, 3rd Main Road, Gandhinagar, Bangalore - 9, Tel. : 40114455.

[K.B. 1660]

ISBN : 978-81-280-1384-3

ಹಕ್ಕುಗಳು : ಪ್ರಜಾವಾಣಿ
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಸಂಸ್ಥೆಯ ಅನುಮತಿ
ಮೇರೆಗೆ ಈ ಪುಸ್ತಕದ ಲೇಖನಗಳನ್ನು ಬಳಸಿಕೊಳ್ಳಲಾಗಿದೆ

ಪ್ರಥಮ ಮುದ್ರಣ : 2011

| | |
|---|---|
| ಪುಟಗಳು : x + 138 = 148 | ಪ್ರತಿಗಳ ಸಂಖ್ಯೆ : 1000 |
| ಬೆಲೆ : ₹ 80/- | Paper Used : 18.6 Kg (70 gsm) N.S. Maplitho<br>Book Size : 1/8th Demy |

ಹಂಚಿಕೆದಾರರು : ಬುಕ್ಸ್ ಇಂಟರ್‌ನ್ಯಾಷನಲ್
ನಂ. 13, ಕೆ. ಪಿ. ಈಸ್ಟ್, ಹೈಗ್ರೌಂಡ್ಸ್
ಬೆಂಗಳೂರು–560 001

ಅಕ್ಷರ ಜೋಡಣೆ ಮತ್ತು ವಿನ್ಯಾಸ : ದಿವ್ಯ ಪ್ರಿಂಟ್ರಾನಿಕ್ಸ್, ಬೆಂಗಳೂರು
ಈಶ್ವರ್, ಬೆಂಗಳೂರು

ಮುಖಪುಟ ವಿನ್ಯಾಸ : ಎಸ್. ವಿಷ್ಣುಕುಮಾರ್, ಬೆಂಗಳೂರು

ಮುದ್ರಣ : ರವಿ ಗ್ರಾಫಿಕ್ಸ್, ಬೆಂಗಳೂರು

# ಅರ್ಪಣೆ

ನನ್ನ ಸಂಪಾದಕರಾದ

ಶ್ರೀ ಕೆ.ಎನ್. ಶಾಂತಕುಮಾರ್

ಸರ್‌ಗೆ ಪ್ರೀತಿ, ಗೌರವ

ಪೂರ್ವಕವಾಗಿ

# ಯಾರ್‍ಯಾರ ನೆನೆಯಲಿ...?

'ನಾಲ್ಕನೇ ಆಯಾಮ' ಅಂಕಣ ಬರಹಗಳ ಮೊದಲ ಎರಡು ಸಂಪುಟಗಳು ಹೊರಬರುತ್ತಿರುವ ಈ ಸಂದರ್ಭದಲ್ಲಿ ನನ್ನ ಹೃದಯ ಕೃತಜ್ಞತೆಯಿಂದ ಭರ್ತಿಯಾಗಿದೆ. ನನಗೆ ಈ ಅಂಕಣ ಬರೆಯಲು ಹೇಳಿದವರು ನನ್ನ ಸಂಪಾದಕರಾದ ಶ್ರೀ.ಕೆ.ಎನ್.ಶಾಂತಕುಮಾರ್ ಅವರು. ಅವರು ಬರೆಯಲು ಹೇಳಿದಾಗ ಇಷ್ಟು ದೀರ್ಘ ಅವಧಿಗೆ ಈ ಅಂಕಣ ಮುಂದುವರಿಯುತ್ತದೆ ಎಂಬ ಭರವಸೆ ನನಗೆ ಇರಲಿಲ್ಲ. ಪ್ರತಿವಾರ ಹೊಸ ಹೊಸ ವಿಷಯ ಆಯ್ದುಕೊಂಡು ಅಂಕಣ ಬರೆಯುವುದು, ಅದು ಓದುಗರಿಗೆ ಇಷ್ಟವಾಗುವುದು ಬಹು ಕಷ್ಟದ ಕೆಲಸ. ಅಂಕಣ ಬರೆಯುವುದು ಸಾವಿನ ಜತೆಗಿನ ಸೆಣಸಾಟ ಎಂದವರು ಉಂಟು. ಇದು ಹುಲಿ ಸವಾರಿ ಎಂದವರೂ ಉಂಟು. ಎರಡೂ ಅರ್ಥ ಒಂದೇ. ಈ ಸಂಕಟವನ್ನು ನಾನೂ ಅನುಭವಿಸಿದ್ದೇನೆ. ಪ್ರತಿ ಸೋಮವಾರ ಬಂದ ಕೂಡಲೇ ಈ ವಾರ ಏನು ಬರೆಯಬೇಕು ಎಂದು ಚಿಂತಿಸಲು ತೊಡಗಬೇಕಾಗುತ್ತದೆ. ಆ ವಾರದ ಅಂಕಣ ಬರೆದು ಮುಗಿದ ಕೂಡಲೇ ಪೂರ್ತಿ ಡ್ರೇನ್ ಔಟ್ ಆದ ಹಾಗೆ ಆಗುತ್ತದೆ. ಮತ್ತೆ ಇನ್ನೊಂದು ಹೆರಿಗೆಗೆ ಸಿದ್ಧವಾಗಬೇಕಾಗುತ್ತದೆ. ಈ ಹೆರಿಗೆಯ ನೋವು ಎನ್ನುವುದು ಇದೆಯಲ್ಲ ಅದು ಅನುಭವಿಸಿದವರಿಗೇ ಗೊತ್ತು. ನನ್ನ ವಿದ್ಯಾಗುರುಗಳಾದ ಡಾ.ಎಂ.ಎಂ.ಕಲಬುರ್ಗಿಯವರು, 'ಒಂದು ಲೇಖನ ಬರೆದ ಮೇಲೆ ಸುಸ್ತು ಅನಿಸಬೇಕು. ಇನ್ನು ಬರೆಯಲಾರೆ ಅನಿಸಬೇಕು' ಎಂದು ಹೇಳುತ್ತಿದ್ದರು. ನನಗೆ ಹೆಚ್ಚೂ ಕಡಿಮೆ ಪ್ರತಿಸಾರಿ ಅಂಕಣ ಬರೆದಾಗಲೂ ಆ ಅನುಭವ ಆಗಿದೆ. ಅಡಕವಾಗಿ ನನಗೆ ಬರೆಯಲು ಕಲಿಸಿದವರೂ ಅವರೇ.

ಪತ್ರಿಕೋದ್ಯಮವೇ ನೆಗೆಟಿವ್ ಆದುದು. ಮನುಷ್ಯ, ನಾಯಿಗೆ ಕಚ್ಚಿದರೆ ಮಾತ್ರ ಸುದ್ದಿ ಎಂದು ನಂಬಿಕೊಂಡು ಬಂದವರು ನಾವು. ಬರೀ ತಪ್ಪುಗಳನ್ನೇ ಹುಡುಕಿ ಜನರನ್ನು ರಂಜಿಸಬೇಕು ಎಂದು ಅಂದುಕೊಂಡವರು. ಇಲ್ಲಿನ ಕೆಲವು ಅಂಕಣಗಳಲ್ಲಿ ನಾನು ಕೂಡ ನೆಗೆಟಿವ್ ಆದ ಅಂಶಗಳನ್ನೇ ತೆಗೆದುಕೊಂಡು ಬರೆದಿರಬಹುದು. ಆದರೆ, ನನ್ನ ಉದ್ದೇಶ, ಗುರಿ ಇರುವುದು

ಪಾಜಿಟಿವ್ ಆದ ಒಂದು ರಾಜಕೀಯ, ಸಾಮಾಜಿಕ, ಸಾಹಿತ್ಯಕ, ಶೈಕ್ಷಣಿಕ ವ್ಯವಸ್ಥೆ ಬರಬೇಕು ಎಂಬುದು. ನನ್ನ ಎಲ್ಲ ಬರವಣಿಗೆಯಲ್ಲಿ ಆ ಸ್ರೋತವೇ ಇದೆ ಎಂಬುದು ಸೂಕ್ಷ್ಮವಾಗಿ ಗಮನಿಸಿದರೆ ತಮಗೆ ಗೊತ್ತಾಗುತ್ತದೆ ಎಂದು ಭಾವಿಸುವೆ.

ಪತ್ರಿಕೆಯ ಬರವಣಿಗೆಗೆ ಆಯುಷ್ಯ ಕಡಿಮೆ. ಈ ದಿನದ ಸುದ್ದಿ ಮರುದಿನದ ರದ್ದಿ. 'ಅವಲೋಕನ' ಎಂಬ ನನ್ನ ಪುಸ್ತಕಕ್ಕೆ ಲೇಖನಗಳನ್ನು ಆಯ್ಕೆ ಮಾಡುವಾಗಲೂ ನಾನು ಈ ಸಮಸ್ಯೆಯನ್ನು ಎದುರಿಸಿದ್ದೆ. ಒಂದು ಸುದ್ದಿಯನ್ನು, ಲೇಖನವನ್ನು ಎಡಿಟ್ ಮಾಡಿದ ಹಾಗೆಯೇ ನಮ್ಮ ಒಟ್ಟು ಬರವಣಿಗೆಯನ್ನು ಎಡಿಟ್ ಮಾಡುತ್ತ ಹೋದರೆ ಸಾರ್ವಕಾಲಿಕ ಮಹತ್ವದ ಆಧಾರದ ಮೇಲೆ ಉಳಿಯುವ ಬರವಣಿಗೆ ಕಡಿಮೆ. ಪತ್ರಕರ್ತನ ಬರವಣಿಗೆ ಆಯಾ ಕಾಲಕ್ಕೆ ಮಾತ್ರ ಪ್ರಸ್ತುತವಾಗಿರುತ್ತದೆ. ಆದಾಗ್ಯೂ 'ನಾಲ್ಕನೇ ಆಯಾಮ'ದ ಅಂಕಣಗಳನ್ನು ಪುಸ್ತಕ ರೂಪದಲ್ಲಿ ತರಬೇಕು ಎಂದು ನನಗೆ ಬಂದ ಒತ್ತಾಸೆ ಅಪರೂಪದ್ದು. ಈ ಲೇಖನಗಳು ಈ ಕಾಲದ ರಾಜಕೀಯ ಇತಿಹಾಸಕ್ಕೆ ದೊಡ್ಡ ಆಕರ ಎಂದು ಅವರೆಲ್ಲ ಹೇಳಿದರು. ವಿಶೇಷ ಒತ್ತು ಕೊಟ್ಟು ಹೇಳಿದವರು ಲೇಖಕ ಗೆಳೆಯ ಶ್ರೀಧರ ಬಳಗಾರ. ರಾಜಕೀಯ ಲೇಖನ ಬರೆಯುವಾಗ ಈ ಆಕರದ ಕೊರತೆ ನನಗೆ ತುಂಬ ಕಾಡಿದೆ. ಈ ದೃಷ್ಟಿಯಿಂದ ರಾಜಕೀಯ ಇತಿಹಾಸಕಾರರಿಗೆ, ಮಾಧ್ಯಮದ ವಿದ್ಯಾರ್ಥಿಗಳಿಗೆ ಈ ಪುಸ್ತಕಗಳು ಉಪಯುಕ್ತವಾದಾವು ಎಂದು ಭಾವಿಸಿದ್ದೇನೆ.

ಅಂಕಣ ಬರಹಕ್ಕೆ ಇಷ್ಟೊಂದು ಪ್ರತಿಕ್ರಿಯೆ ಇರುತ್ತದೆ ಎಂದು ನನಗೆ ಗೊತ್ತಿರಲಿಲ್ಲ. ಪ್ರತಿ ಭಾನುವಾರ ರಾಜ್ಯದ ಮೂಲೆ ಮೂಲೆಗಳಿಂದ ಪರಿಚಯದವರು, ಅಪರಿಚಿತರು ಮಾಡುವ ಎಸ್.ಎಂ.ಎಸ್ ಮತ್ತು ದೂರವಾಣಿ ಕರೆಗಳಿಗೆ ಉತ್ತರ ಕೊಡುವಾಗ ಅರ್ಧ ದಿನವೇ ಕಳೆದು ಹೋಗುತ್ತದೆ. ಕೆಲವು ಅಂಕಣಗಳಿಗೆ ಎರಡು ದಿನದ ವರೆಗೂ ಪ್ರತಿಕ್ರಿಯೆ ಬಂದಿದೆ. ಇದನ್ನು ಅತ್ಯಂತ ವಿನಯದಿಂದ ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಈ ಸಂಪುಟಗಳು ಹೊರಬರುತ್ತಿರುವ ಸಂದರ್ಭದಲ್ಲಿ ನಮ್ಮ ಸಂಸ್ಥೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಕೆ.ಎನ್.ತಿಲಕ್ ಕುಮಾರ್ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಪ್ರತಿ ಭಾನುವಾರ ನನ್ನ ಜತೆಗೆ ಮಾತನಾಡುವ ಎಲ್ಲರ ಹೆಸರು ಇಲ್ಲಿ ಬರೆಯುವುದು ಕಷ್ಟ. ಆದರೆ, 'ಐ ಆ್ಯಮ್ ಪ್ರೌಡ್ ಆಫ್ ಯು' ಎಂದು ಮತ್ತೆ ಮತ್ತೆ ಹೇಳಿ ಹುರಿದುಂಬಿಸುವ ಡಾ.ಚಂದ್ರಶೇಖರ ಕಂಬಾರ, ಈ ಲೇಖನಗಳ ಪುಸ್ತಕ ಬರಬೇಕು ಎಂದು ಒತ್ತಾಯಿಸಿದ ಹಂಪನಾ ಮತ್ತು ಕಮಲಾ ಹಂಪನಾ, ಕೆಲವು ಸಾರಿ ನಾನು ಏಳುವುದಕ್ಕಿಂತ ಮುಂಚೆಯೇ ಎಸ್.ಎಂ.ಎಸ್ ಕಳುಹಿಸುವ ಸುರೇಶಕುಮಾರ್, ಗುರುಪ್ರಸಾದ್, ಪರಶುರಾಮ್ ಕಲಾಲ್, ಪ್ರತಿವಾರ ತಪ್ಪದೇ ಅಂಕಣ ಕುರಿತು ಮಾತನಾಡುವ, ಚರ್ಚಿಸುವ ಎಂ.ರಾಮಯ್ಯ, ಟಿ.ಪ್ರಭಾಕರ್, ಮಾಜಿ ಮೇಯರ್ ಕೆ.ಚಂದ್ರಶೇಖರ್, 'ಪ್ರತಿ ಭಾನುವಾರ ನನ್ನ ಊರಿನಿಂದ ಏಳು ಕಿ.ಮೀ ದೂರ ಬಂದು ನಿಮ್ಮ ಅಂಕಣ ಓದುವುದಕ್ಕಾಗಿ ಪತ್ರಿಕೆ ಖರೀದಿಸುವೆ' ಎಂದು ಪತ್ರ ಬರೆದ ಕಡೂರು ಬಳಿಯ ತೇಜಮೂರ್ತಿ, 'ಏನ್ ಬರೀತಿಯೋ ತಮ್ಮಾ' ಎಂದು ಉದ್ಗರಿಸುವ ನನ್ನ ಹೈಸ್ಕೂಲ್ ಗುರುಗಳಾದ ಎಸ್.ಜಿ.ಕನ್ನೂರ್, ಗೆಳೆಯರಾದ ಜಿ.ಆರ್.ಹಿರೇಮಠ್, ಎಸ್.ಎ.ಮಾನ್ವಿ, ಗಂಗಾಧರ ಬೆಳಗಲಿ, ನನ್ನ ಅಂಕಣಕ್ಕೆ 'ನಾಲ್ಕನೇ ಆಯಾಮ' ಎಂಬ ಹೆಸರು ನೀಡಿದ ಹಿರಿಯ ಸಹೋದ್ಯೋಗಿ ಡಿ.ವಿ.ರಾಜಶೇಖರ್, ಹಿರಿಯರಾದ ಆರ್.ಟಿ.ಜಗದೀಶ್, ಪ್ರೊ. ಅ.ಶ್ರೀಧರ್, ಪ್ರೊ.ಬಿ.ಕೆ.ಚಂದ್ರಶೇಖರ್, ಕ್ಯಾಪ್ಟನ್

ಜಿ.ಆರ್.ಗೋಪಿನಾಥ್, ಡಾ. ಗುರುರಾಜ ಕರಜಗಿ, ಡಾ. ಎಚ್.ಎನ್.ಕೃಷ್ಣ, ಚೆನ್ನೈ ಕಾನ್ಸುಲೇಟ್‌ನ ಭರತ್‌ಕುಮಾರ್...

ಪ್ರತಿ ಭಾನುವಾರ ಅತ್ತ ನನ್ನ ಅಂಕಣ ಬರಹವುಳ್ಳ ಪುಟ ಸಿದ್ಧವಾಗುತ್ತಿದ್ದಂತೆಯೇ ಅದನ್ನು ಹೆಚ್ಚೂ ಕಡಿಮೆ ಕಸಿದುಕೊಂಡು ಹೋಗಿ ಓದುವ ಜೀವದ ಗೆಳೆಯ ಎಂ.ಎ.ಪೊನ್ನಪ್ಪ, ಅಷ್ಟೇ ಆತ್ಮೀಯರಾದ ಗೋಪಾಲಕೃಷ್ಣ ಹೆಗಡೆ, ಗಂಗಾಧರ ಮೊದಲಿಯಾರ್, ಎಂ.ಕೆ.ಭಾಸ್ಕರ ರಾವ್, ಆಶಾ ಕೃಷ್ಣಸ್ವಾಮಿ, ಎಚ್.ವಿ.ಪ್ರೇಮಕುಮಾರ್, ಆಗಾಗ ತಮ್ಮ ಎಸ್.ಎಂ.ಎಸ್ ಮೂಲಕ ಮೆಚ್ಚುಗೆ ಸೂಚಿಸುವ ಬರಗೂರು ರಾಮಚಂದ್ರಪ್ಪ, ಸಹೋದ್ಯೋಗಿಗಳಾದ ಬಿ.ಎಂ.ಹನೀಫ್, ರವೀಂದ್ರ ಭಟ್, ಎನ್.ಉದಯಕುಮಾರ್, ಬಿ.ವಿ.ಮಹೇಶ್ಚಂದ್ರ, ಬಿ.ಅರವಿಂದ್ ಆನಂದತೀರ್ಥ ಪ್ಯಾಟಿ, ಗಾಣಧಾಳು ಶ್ರೀಕಂಠ, ಎನ್.ಎ.ಎಂ.ಇಸ್ಮಾಯಿಲ್, 'ನಿಮ್ಮ ಲೇಖನಾ ಭಾಳ ಚೊಲೊ ಇತ್ತು' ಎನ್ನುವ ಎಸ್.ರಶ್ಮಿ, ರೋಹಿಣಿ ಮುಂಡಾಜೆ, ಪ್ರೀತಿಯಿಂದ ಬೆನ್ನುಡಿ ಬರೆದುಕೊಟ್ಟ ಚ.ಹ.ರಘುನಾಥ...

ಇಲ್ಲಿನ ಲೇಖನಗಳನ್ನು ಪುಸ್ತಕ ರೂಪದಲ್ಲಿ ತರಬೇಕು ಎಂಬ ಒತ್ತಡಕ್ಕೆ ಒಂದು ರೂಪ ಕೊಟ್ಟವರು ನನ್ನ ಅಣ್ಣನ ಸಮಾನರಾದ ಶ್ರೀ ಮನು ಬಳಿಗಾರ್. ಅವರೇ ಪ್ರಕಾಶಕರ ಜತೆಗೆ ಮಾತನಾಡಿ ಈ ಪುಸ್ತಕಗಳು ಬರುವಂತೆ ಮಾಡಿದ್ದಾರೆ. ಕಳೆದ 15 ವರ್ಷಗಳಿಗೂ ಹೆಚ್ಚು ಅವಧಿಯಿಂದ ಅವರು ನನ್ನ ಬಗ್ಗೆ ತೋರಿಸಿಕೊಂಡು ಬಂದಿರುವ ಪ್ರೀತಿ, ಆದರಕ್ಕೆ ನಾನು ಎಷ್ಟು ಅರ್ಹನೋ ತಿಳಿಯದು. ಆದರೆ, ಅವರು ಅದೇ ನಿಷ್ಕಲ್ಮಶ ಅಭಿಮಾನ ತೋರಿಸಿಕೊಂಡು ಬಂದಿದ್ದಾರೆ. ಅಕ್ಷರಗಳಲ್ಲಿ ಅವರಿಗೆ ಕೃತಜ್ಞತೆ ಹೇಳುವುದು ಕಷ್ಟ. ಅಂಥದೇ ಪ್ರೀತಿ ತೋರಿಸುತ್ತಿರುವ ಎಂ.ರಾಮಯ್ಯ, ಎಚ್.ಬಿ.ದಿನೇಶ್ ಅವರಿಗೂ ನನ್ನ ನೆನಕೆಗಳು. ಪುಸ್ತಕ ಪ್ರಕಟಿಸಲು ತುಂಬು ಸಂತೋಷದಿಂದ ಒಪ್ಪಿದ ಸಪ್ನಾ ಬುಕ್ ಹೌಸ್‌ನ ಮಾಲೀಕರಾದ ನಿತಿನ್ ಷಾ, ದೊಡ್ಡೇಗೌಡ, ಅಕ್ಷರ ಜೋಡಿಸಿದ ರಾಮಕೃಷ್ಣ, ಪುಟ ವಿನ್ಯಾಸ ಮಾಡಲು ಪ್ರೀತಿಯಿಂದ ಮುಂದೆ ಬಂದ ಗೆಳೆಯ ಈಶ್ವರ ಬಡಿಗೇರ, ಅಂದವಾದ ಮುಖಪುಟ ರಚಿಸಿದ ಕಲಾವಿದ ಎಸ್.ವಿಷ್ಣುಕುಮಾರ್ ಅವರಿಗೆಲ್ಲ ನನ್ನ ಕೃತಜ್ಞತೆಗಳು.

ಮೊದಲ ಸಂಪುಟವನ್ನು ನನ್ನ ಸಂಪಾದಕರಾದ ಶ್ರೀ.ಕೆ.ಎನ್.ಶಾಂತಕುಮಾರ್ ಅವರಿಗೆ ಅರ್ಪಿಸಿದ್ದೇನೆ. ಅವರು ನನ್ನ ಬಗ್ಗೆ ಹೊಂದಿರುವ ಪ್ರೀತಿ ಅನ್ಯಾದೃಶವಾದುದು. ನನ್ನ ಜತೆಗೆ ಎಂದೂ ಅವರು ಒಬ್ಬ ಮಾಲೀಕರಂತೆ ನಡೆದುಕೊಂಡಿಲ್ಲ. ಈ ಎರಡೂ ಪುಸ್ತಕಗಳಿಗೆ ಅಂಕಣ ಬರಹಗಳನ್ನು ಬಳಸಿಕೊಳ್ಳಲೂ ಅವರು ಅನುಮತಿ ಕೊಟ್ಟರು. ಅತ್ಯಂತ ಕಷ್ಟದಲ್ಲಿ ಇದ್ದಾಗ ನನಗೆ 'ಪ್ರಜಾವಾಣಿ'ಯಲ್ಲಿ ನೌಕರಿ ಸಿಕ್ಕಿತು. ಕಳೆದ 28 ವರ್ಷಗಳ ನನ್ನ ನೌಕರಿಯ ಅವಧಿಯಲ್ಲಿ ಈ ಸಂಸ್ಥೆ ನನಗೆ ಎಲ್ಲವನ್ನೂ ಕೊಟ್ಟಿದೆ. ಆ ಕೃತಜ್ಞತೆಯ ದ್ಯೋತಕವಾಗಿ ಈ ಅರ್ಪಣೆ.

ಎರಡನೇ ಸಂಪುಟವನ್ನು ನನ್ನ ಪತ್ನಿ ಲಲಿತಾ, ಮಗ ಅಶ್ವಿನ್ ಕುಮಾರ್ ಮತ್ತು ಮಗಳು ವರ್ಷಾ ಅವರಿಗೆ ಅರ್ಪಿಸಿದ್ದೇನೆ. ಅವರು ತೋರುವ ಪ್ರೀತಿಗೆ ಇದು ಕೃತಜ್ಞತೆ.

ನನ್ನ ಅಕ್ಕಂದಿರು, ಅಣ್ಣ ನೇಮಿಚಂದ್ರ, ಭಾವಂದಿರು, ಅತ್ತಿಗೆಯರು, 'ಮಕ್ಕಳು', ನನ್ನ ಬಗ್ಗೆ ಅಪಾರ ಪ್ರೀತಿ, ಅಭಿಮಾನ ಹೊಂದಿರುವ ಎಲ್ಲ ಬಂಧು ಬಳಗವನ್ನು ಈ ಸಂದರ್ಭದಲ್ಲಿ ಪ್ರೀತಿ ಮತ್ತು ಕೃತಜ್ಞತೆಯಿಂದ ನೆನೆಯುವೆ.

-ಪದ್ಮರಾಜ ದಂಡಾವತಿ

# ಪರಿವಿಡಿ


| | |
|---|---|
| ದೊಡ್ಡ ಕನಸು ಕಾಣದವರು... | 01 |
| ಲೋಕಸಭಾ ಚುನಾವಣಾ ಸಮಸ್ಯೆಗಳ ಸುಳಿಯಲ್ಲಿ | 05 |
| ಆತ್ಮಶೋಧನೆಗೆ ಇನ್ನೂ ಎಷ್ಟು ಕಾಲ ಬೇಕು? | 09 |
| ವಯಸ್ಸು, ಒಗ್ಗಟ್ಟು, ದುಡ್ಡು ಸಾಟಿಯಲ್ಲದ ಕಾಂಗ್ರೆಸ್ | 13 |
| ಬಾಬಾಗೌಡರೇ ಹೀಗೇಕೆ ಮಾಡಿದಿರಿ? | 17 |
| ಹಾದಿಯಲ್ಲಿ ಹೊರಟ ಮಾರಿಯನ್ನು ಮನೆಗೆ ಕರೆದು.... | 21 |
| ಸಾಕು ಮಾಡಿ ಯಡಿಯೂರಪ್ಪ ಇದು ಅತಿಯಾಯಿತು | 25 |
| ಚುನಾವಣಾ ಪ್ರಣಾಳಿಕೆ ಎಂಬ ಲೊಳಲೊಟ್ಟೆ... | 29 |
| ಅಂತರಂಗದ ಸಿಟ್ಟಿಗೆ ಅಭಿವ್ಯಕ್ತಿ ಕೊಡೋಣ | 33 |
| ಪ್ರಾದೇಶಿಕ ಪಕ್ಷ ಬೇಕು. ಆದರೆ, ಕಟ್ಟುವವರು ಯಾರು? | 37 |
| ವೋಟು ಕೊಡಿ ಎಂದರೆ ಬೂಟು ಏಕೆ ಎಸೆಯುತ್ತಾರೆ? | 41 |
| ಬದಲಾವಣೆಯ ಚಕ್ರ ತಿರುಗುವುದು ಯಾವಾಗ? | 45 |
| ಯಡಿಯೂರಪ್ಪ ಗೆದ್ದರು: ಕರ್ನಾಟಕದ ಜನ ಸೋತರು | 48 |
| ದುರ್ಬಲರಿಗೆ ದನಿಯಾಗುವ ನಾಯಕ ಎಲ್ಲಿದ್ದಾನೋ? ಯಾವಾಗ ಬಂದಾನೋ? | 53 |
| ಗರಿಕೆ ಕಡ್ಡಿಯ ಹಿಡಿದು ಕಮ್ಯುನಿಸ್ಟ್‌ರನ್ನು ಬಡಿದ ಮಮತಾ... | 57 |

| | |
|---|---|
| ನೀವೇನು ಮಾಡುತ್ತಿದ್ದೀರಿ? | 60 |
| ಎದ್ದು ಬಂದ ಸಿದ್ಧರಾಮಯ್ಯ | 64 |
| ಇದು ಕುಳಿತು ಕೆಲಸ ಮಾಡುವ ಕಾಲ | 68 |
| ನಾವು ಬರುವುದು ಪಾಲುದಾರರಾಗಿ; ಮನವಿದಾರರಾಗಿ ಅಲ್ಲ | 72 |
| ಭದ್ರತಾ ಮಂಡಳಿ: ನಮ್ಮ ಕನಸು, ಆದೀತೇ ನನಸು? | 76 |
| ಭೂ ಹಗರಣವೂ, ಲೋಕಾಯುಕ್ತರ ಸ್ವಯಿಚ್ಛೆಯ ತನಿಖಾಧಿಕಾರವೂ... | 80 |
| ತಿರುವಳ್ಳುವರ್ ವಿರೋಧಿಸಿ, ಸಣ್ಣವರಾಗುವುದು ಬೇಡ | 84 |
| ಇಬ್ಬರು ಸುಂದರಿಯರ 'ನಿರ್ಗಮನ' | 88 |
| ಮಾರಾಮಾರಿ ಬೇಡ 'ಮಾತಿನ ಮನೆ'ಯಾಗಲಿ | 91 |
| ಇರಬೇಕು ಇಂಥ ಜಿಲ್ಲಾಧಿಕಾರಿ | 95 |
| ಅಟ್ಟಾವರ ರಾಮದಾಸ್ ಎಂಬ ಅಪರಂಜಿ ಕನ್ನಡಿಗ | 99 |
| ಗುಳೆ ಬಂದ ಮಲ್ಲಪ್ಪ ಹೇಳಿದ್ದು ಕಣ್ಣೀರ ಕಥೆ | 103 |
| ಕೆಂಪಯ್ಯ ಸ್ವಯಂ ನಿವೃತ್ತಿಯಪಾಠಗಳು | 107 |
| ಮರಳಿ ಶಾಲೆಗೆ ಹೋದರು 25 ವರ್ಷಗಳ ನಂತರ! | 111 |
| ಬರ: ಮಾತಿಗೇನು ಬರ? ಕೃತಿಗೆ....?! | 115 |
| ಅವರೇಕೆ ಹಾಗೆ! ನಾವೇಕೆ ಹೀಗೆ? | 119 |
| ಪೊಲೀಸರೇ ನೀವೇಕೆ ಕಾಲ್ಚೆಂಡಾದಿರಿ? | 123 |
| ಜನ ಕೊಟ್ಟ ದುಡ್ಡು ಲೂಟಿಯಾದೀತು ಎಚ್ಚರ! | 127 |
| ಹೆಜ್ಜೆ ಮೂಡಿಸುವ ಹಾದಿಯಲ್ಲಿ... | 131 |
| ಸರ್ಕಾರ ಉಳಿದು ಮನಸು ಮುರಿದರೆ ಏನು ಬಂತು? | 135 |

# ದೊಡ್ಡ ಕನಸು ಕಾಣದವರು...

ಪ್ರಾಮಾಣಿಕನಾಗಿರುವುದಷ್ಟೇ ಸಾಲದು ಪ್ರಾಮಾಣಿಕನಾಗಿದ್ದೇನೆ ಎಂಬುದನ್ನು ತೋರಿಸಿಯೂ ಕೊಡಬೇಕು ಎನ್ನುವ ಹಾಗೆ ಸರ್ಕಾರ ಇದ್ದರಷ್ಟೇ ಸಾಲದು ಅದು ಇದೆ ಎಂದೂ ಕಾಣಬೇಕು. ಹಾಗಾದರೆ ರಾಜ್ಯದಲ್ಲಿ ಸರ್ಕಾರ ಇಲ್ಲವೇ ಎಂದು ಯಾರಾದರೂ ಕೇಳಬಹುದು. ಇಲ್ಲ ಎಂದರೆ ತಪ್ಪಾದೀತು. ಆದರೆ, ಸರ್ಕಾರ ಇದೆ ಎನ್ನುವುದು ಎದ್ದು ಕಾಣಬೇಕು. ಅದು ನಿತ್ಯದ ಕಾರ್ಯನಿರ್ವಹಣೆಯಲ್ಲಿ, ದಕ್ಷತೆಯಲ್ಲಿ, ಪಾರದರ್ಶಕತೆಯಲ್ಲಿ, ಅಭಿವೃದ್ಧಿಯಲ್ಲಿ ವ್ಯಕ್ತವಾಗಬೇಕು. ಈಗ ಹಾಗೆ ಆಗುತ್ತಿದೆಯೇ ಎಂದರೆ ನಿರಾಶೆಯಾಗುತ್ತದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಹಲವು ವರ್ಷಗಳ ಹೋರಾಟದ ನಂತರ ಈ ಹುದ್ದೆ ಸಿಕ್ಕಿದೆ. ಇದು ಸಾಮಾನ್ಯವಾದ ಕುರ್ಚಿಯಲ್ಲ. ಆದರೆ, ಮುಖ್ಯಮಂತ್ರಿಗಳು ವಿಧಾನ ಸೌಧದ ತಮ್ಮ ಕುರ್ಚಿಯಲ್ಲಿ ಕುಳಿತು ಎಷ್ಟು ದಿನ ಕೆಲಸ ಮಾಡಿದ್ದಾರೆ? ಕಡತಗಳನ್ನು ನೋಡಿದ್ದಾರೆ? ಜನರನ್ನು ಭೇಟಿ ಮಾಡಿದ್ದಾರೆ ಎಂಬ ಪ್ರಶ್ನೆಗೆ ಉತ್ತರ ಹೇಳಲು ಅವರ ಆಪ್ತ ಸಿಬ್ಬಂದಿಯೇ ತಡಕಾಡುತ್ತಾರೆ.

ಮುಖ್ಯಮಂತ್ರಿಗಳ ಕಚೇರಿ ನಿತ್ಯ ಕಳುಹಿಸುವ ಯಡಿಯೂರಪ್ಪ ಅವರ ಕಾರ್ಯಕ್ರಮದ ಮೇಲೆ ಒಂದು ಸಾರಿ ಕಣ್ಣು ಹಾಯಿಸಿ. ಇಂದು ಬೆಳಗಾವಿ, ವಿಜಾಪುರದಲ್ಲಿ ಪ್ರವಾಸ. ಮರುದಿನ ಚಿತ್ರದುರ್ಗ ತುಮಕೂರಿನಲ್ಲಿ ಪ್ರವಾಸ. ಅದರ ಮರುದಿನ ಶಿವಮೊಗ್ಗ, ಶಿಕಾರಿಪುರಕ್ಕೆ ಪ್ರಯಾಣ. ಮತ್ತೆ ಬೆಳಗಾವಿ....! ಬೆಂಗಳೂರಿನಲ್ಲಿ ಇದ್ದಾಗಲಾದರೂ ಅವರು ವಿಧಾನಸೌಧಕ್ಕೆ ಹೋಗಿ ತಮ್ಮ ಕಚೇರಿಯಲ್ಲಿ ಎಷ್ಟು ಹೊತ್ತು ಕುಳಿತಿದ್ದಾರೆ? ಯಡಿಯೂರಪ್ಪ ಅವರಿಗೆ ಯಾವ ಅವಸರ? ಸಂಪುಟದ ಎಲ್ಲ ಸಚಿವರು ಪ್ರತಿ ಗುರುವಾರ ವಿಧಾನಸೌಧದಲ್ಲಿನ ತಮ್ಮ ಕಚೇರಿಯಲ್ಲಿ ಸಾರ್ವಜನಿಕರಿಗೆ ಲಭ್ಯ ಇರಬೇಕು ಎಂಬ ಆದೇಶದ ಗತಿ ಏನಾಯಿತು? ಸಂಪುಟದಲ್ಲಿ ಪ್ರಭಾವಿಗಳಾದ ಒಂದು ಜಿಲ್ಲೆಯ ಸಚಿವರು ವಿಧಾನಸೌಧಕ್ಕೆ ಕಳೆದ ಎಂಟು ಒಂಬತ್ತು ತಿಂಗಳಲ್ಲಿ ಎಷ್ಟು ಸಾರಿ ಬಂದಿದ್ದಾರೆ? 'ನೀವು ಏಕೆ ಬರುವುದಿಲ್ಲ' ಎಂದು ಮುಖ್ಯಮಂತ್ರಿಗಳು ಎಂದಾದರೂ ಅವರಿಗೆ ಕೇಳಿದ್ದಾರೆಯೇ? ಹಾಗಾದರೆ ಆಡಳಿತ ಎಂದರೆ ಏನು? ಒಂದು ಸರ್ಕಾರದ ಅಸ್ತಿತ್ವವನ್ನು ತೋರಿಸುವುದು ಹೇಗೆ?

ನಾಯಕನಾದವನಿಗೆ ಇರುವ ಸಮಸ್ಯೆಗಳು ಹಲವು. ಹೊಣೆಗಳೂ ಜಾಸ್ತಿ; ಅದು ಆತನೇ ಆಯ್ಕೆ ಮಾಡಿಕೊಂಡುದು. ಆತ ನಾಯಕನ ಹೊಣೆಯನ್ನು ಸಮರ್ಥವಾಗಿ ನಿಭಾಯಿಸುವ ಜತೆಗೆ ಇತರರಿಗೂ ಮಾದರಿ ಹಾಕಿಕೊಡಬೇಕು. ತನ್ನ ಸಹವರ್ತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಅಭಿಪ್ರಾಯಗಳನ್ನು ಕೇಳಿ ಒಂದಾಗಿ ನಡೆಯುವ ಮಾರ್ಗಗಳನ್ನು ರೂಪಿಸಬೇಕು. ಈ ಸರ್ಕಾರದಲ್ಲಿ ಯಡಿಯೂರಪ್ಪ ಪ್ರಶ್ನಾತೀತ ನಾಯಕ ಎಂಬುದರಲ್ಲಿ ಅನುಮಾನವಿಲ್ಲ. ಆದರೆ, ಸ್ವತಃ ಯಡಿಯೂರಪ್ಪ ಅವರಿಗೆ ಸಂಪುಟದ ಎಲ್ಲ ಸದಸ್ಯರಲ್ಲಿ ವಿಶ್ವಾಸವಿಲ್ಲ; ಅಥವಾ ವಿಶ್ವಾಸವಿದೆ ಎಂದು ಅವರು ತೋರ್ಪಡಿಸಿಲ್ಲ. ಅತ್ತ ಸಚಿವರು ಕೂಡ ಹಾಗೆಯೇ. ತಮ್ಮ ಪಾಡಿಗೆ ತಾವಿದ್ದಾರೆ. ಈ ಸಂಪುಟದ ಕೆಲವರು ಸಚಿವರು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಅವರ ಜತೆಗೆ ಒಂದೇ ದಿನ ಎರಡೂವರೆ, ಮೂರು ಗಂಟೆ ಕಾಲ ಮಾತನಾಡಿದ್ದಾರೆ. ಆದರೆ, ಯಡಿಯೂರಪ್ಪ ಅವರ ಜತೆಗೆ ಇಡೀ ಎಂಟು ತಿಂಗಳು ಸೇರಿಸಿಯೂ ಅಷ್ಟು ಮಾತನಾಡಿಲ್ಲ. ಯಡಿಯೂರಪ್ಪ ಅವರಿಗೆ ಏನು ಅವಸರ? ಅವಸರ ಬೇರೆ, ಚುರುಕುತನ ಬೇರೆ. ಹಣಕಾಸಿನಂಥ ಪ್ರಮುಖ ಖಾತೆಯ ಗ್ರಹಿಕೆ ಅವರಿಗೆ ಎಷ್ಟು ಕಷ್ಟ ಎಂಬುದು ಮೊನ್ನೆ ಅವರೇ ಕರೆದಿದ್ದ ಸಂಪಾದಕರ ಸಭೆಯಲ್ಲಿ ಬಹಿರಂಗವಾಯಿತು. ಅವರ ಸಹೋದ್ಯೋಗಿಗಳಲ್ಲಿ ಬುದ್ಧಿವಂತರು ಬೇಕಾದಷ್ಟು ಜನ ಇದ್ದಾರೆ. ಆದರೆ, ಅವರಿಗೆ ಮುಖ್ಯಮಂತ್ರಿಗಳ ಆಪ್ತ ವಲಯದಲ್ಲಿ ಪ್ರವೇಶ ಇಲ್ಲ ಎನಿಸಿದೆ. ಅದು ಅವರ ತಪ್ಪೋ ಅಥವಾ ಮುಖ್ಯಮಂತ್ರಿಗಳ ತಪ್ಪೋ? ಉತ್ತರ ಕಠಿಣವಲ್ಲ. ಅವರೆಲ್ಲರನ್ನು ಸೇರಿಸಿ ಒಂದು 'ಥಿಂಕ್‌ಟ್ಯಾಂಕ್' ಮಾಡಬಹುದಲ್ಲವೇ?

ಜನ ಈ ಸರ್ಕಾರವನ್ನು ಅಧಿಕಾರಕ್ಕೆ ತಂದುದು ಬರೀ ಬಿಜೆಪಿಗೆ ಆದ ಮೋಸಕ್ಕೆ ಪರಿಹಾರ ಎಂದು ಅಲ್ಲ. ಜನರಿಗೂ ಆಸೆ ಆಕಾಂಕ್ಷೆಗಳು ಇವೆ. ರಾಜ್ಯದಲ್ಲಿ 2004ರಲ್ಲಿ ಸಮ್ಮಿಶ್ರ ಸರ್ಕಾರ ಬಂದ ಲಾಗಾಯ್ತಿನಿಂದ ಆಡಳಿತ ಎಂಬುದು ಕುಸಿದು ಹೋಗಿದೆ. ಧರ್ಮಸಿಂಗ್ ಅವರಿಗೆ ದೇವೇಗೌಡರನ್ನು ನಿಭಾಯಿಸುವುದೇ ಕಷ್ಟವಾಯಿತು.

ಕುಮಾರಸ್ವಾಮಿ ಅವರೂ ಗ್ರಾಮ ವಾಸ್ತವ್ಯದ ಕಡೆಗೆ ಗಮನ ಕೊಟ್ಟಷ್ಟು ವಿಧಾನ ಸೌಧದ ಆಡಳಿತದ ಕಡೆಗೆ ಗಮನಕೊಡಲಿಲ್ಲ. ಆದರೆ, ಗ್ರಾಮ ವಾಸ್ತವ್ಯ ಒಂದು ಹೊಸ ಪರಿಕಲ್ಪನೆ ಎಂದು ಜನರಿಗೆ ಭಾಸವಾಯಿತು. ಸೋಜಿಗ ಎಂದರೆ ಈಗಲೂ ಯಡಿಯೂರಪ್ಪ ಸರ್ಕಾರಕ್ಕಿಂತ ಕುಮಾರಸ್ವಾಮಿ ಸರ್ಕಾರವೇ ಜನಪ್ರಿಯ ಎಂದು ಸಮೀಕ್ಷೆಯೊಂದು ನಿನ್ನೆ ಮೊನ್ನೆ ಹೇಳಿದೆ. ಆದರೆ, ಎಸ್.ಎಂ.ಕೃಷ್ಣ ಸರ್ಕಾರ ಇದ್ದುದರಲ್ಲಿಯೇ ಒಳ್ಳೆಯ ಆಡಳಿತ ನೀಡಿತು. ಅದಕ್ಕಿಂತ ಒಳ್ಳೆಯ ಆಡಳಿತ ರಾಜ್ಯಕ್ಕೆ ಸಿಕ್ಕುದು (ಈಚಿನ ದಶಕಗಳಲ್ಲಿ) ಎಚ್.ಡಿ.ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ, ಆಡಳಿತದ ಮೇಲಿನ ಆ ಬಿಗಿ ಈಗ ಇಲ್ಲ.

ಈ ಬಿಗಿ ಹೋಗುವುದಕ್ಕೆ ಮುಖ್ಯ ಕಾರಣ ಬೇಕಾಬಿಟ್ಟಿ ವರ್ಗಾವರ್ಗಿ. ಈಗ ಮುಖ್ಯಮಂತ್ರಿಗಳಿಗೂ ಈ ಪರಿಯ ವರ್ಗಾವರ್ಗಿ ಸರಿ ಹೋಗಲಿಲ್ಲ ಎಂದು ಅನಿಸಿರಬೇಕು; ಪ್ರಯೋಜನವಿಲ್ಲ. ಏಕೆಂದರೆ ಶುಕ್ರವಾರ ಮಂಡಿಸಿದ ಬಜೆಟ್‌ನಲ್ಲೂ ಬೇಕಾಬಿಟ್ಟಿ ವರ್ಗಾವಣೆ ತಡೆಯುವ ಕಠಿಣ ಮಾತುಗಳು ಇಲ್ಲ. ವರ್ಗಾವಣೆಯಲ್ಲಿ ಶಾಸಕರ ಹಸ್ತಕ್ಷೇಪ ಶುರುವಾದುದು ರಾಮಕೃಷ್ಣ ಹೆಗಡೆ ಅವರ ಕಾಲದಲ್ಲಿ. ಏಕೆಂದರೆ ಹೆಗಡೆ ಅವರಿಗೆ ಶಾಸಕರನ್ನು 'ಸಂತೃಪ್ತ'ರಾಗಿ ಇಡಬೇಕಿತ್ತು. ಹೆಗಡೆ ಅವರ ನಂತರ ಭಾರಿ ಬಹುಮತದಿಂದ ಆರಿಸಿ ಬಂದ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ವೀರೇಂದ್ರ ಪಾಟೀಲರ ಕಾಲದಲ್ಲಿಯೂ ಅದು ಮುಂದುವರಿದು ಪಾಟೀಲರು ಕೊನೆಗೆ ಸದನದಲ್ಲಿಯೇ ಜನರ ಕ್ಷಮೆ ಕೇಳಿದ್ದರು. ಈಗ ಆ ಸೂಕ್ಷ್ಮತೆ ಯಾರಿಗೂ ಉಳಿದಿಲ್ಲ. ಬೆಂಗಳೂರಿನಲ್ಲಿ ಸರಣಿ ಕೊಲೆಗಳು ನಡೆಯುತ್ತಿರುವುದಕ್ಕೂ ಪೊಲೀಸರ ವರ್ಗಾವಣೆಗೂ ನೇರ ಸಂಬಂಧವಿದೆ. ಬೆಂಗಳೂರಿಗೆ ಈಗ ಬಂದಿರುವ ಅನೇಕ ಪೊಲೀಸರಿಗೆ ಊರೇ ಗೊತ್ತಿಲ್ಲ! ಯಡಿಯೂರಪ್ಪ ಅವರು ಗುಜರಾತ್ ಮಾದರಿಯನ್ನು ಅನುಸರಿಸಲಿ ಬಿಡಲಿ. ಆದರೆ ಆ ರಾಜ್ಯದಲ್ಲಿ ವರ್ಷಕ್ಕೆ ಶೇ 2.5ರಷ್ಟು ಮಾತ್ರ ವರ್ಗಾವಣೆ ಆಗುತ್ತದೆ. ವರ್ಗ ಮಾಡಿದರೂ ಆತನನ್ನು ಏಕೆ ವರ್ಗ ಮಾಡಲಾಯಿತು ಎಂಬ ಷರಾವನ್ನು ಕಡತದಲ್ಲಿ ದಾಖಲಿಸಲಾಗುತ್ತದೆ. ನಿತ್ಯದ ಆಡಳಿತದಲ್ಲಿ ಶಾಸಕರ ಹಸ್ತಕ್ಷೇಪ ಅಲ್ಲಿ ಶೂನ್ಯ ಎಂದರೂ ನಡೆಯುತ್ತದೆ ಎಂದು ಅಲ್ಲಿಗೆ ಹೋಗಿ ಬಂದ ಬಿಜೆಪಿ ನಾಯಕರೇ ಹೇಳುತ್ತಾರೆ. ವರ್ಗಾವಣೆ ಬಂಡವಾಳವಿಲ್ಲದ ದಂಧೆ. ಈ ದಂಧೆಯಲ್ಲಿ ಶಾಸಕರದೇ ಸಿಂಹಪಾಲು. ಆ ಶಾಸಕರಿಗೆ ಮಣಿದುದೇ ಈಗಿನ ಅವಾಂತರಕ್ಕೆ ಮೂಲ ಕಾರಣ.

ಇನ್ನೊಂದು ಮುಖ್ಯ ಸಮಸ್ಯೆ ಈ ಸರ್ಕಾರಕ್ಕೆ ದೊಡ್ಡ ಕನಸುಗಳು ಇಲ್ಲದಿರುವುದು. ಹಾಗೆ ನೋಡಿದರೆ ಯಡಿಯೂರಪ್ಪ ಅವರಿಗೇ ದೊಡ್ಡ ಕನಸುಗಳು ಇಲ್ಲ. ದೊಡ್ಡ ಕನಸುಗಳನ್ನು ಕಾಣಲಾರದವನು ದೊಡ್ಡ ನಾಯಕ ಆಗಲಾರ. ಅವರ ಬಜೆಟ್‌ಗಳೇ ಇದನ್ನು ಹೇಳುತ್ತವೆ. ಸಣ್ಣ–ಪುಟ್ಟ ಘೋಷಣೆಗಳಿಗೇ ಅವರು ಬೀಗುತ್ತಿದ್ದಾರೆ. ದೊಡ್ಡದನ್ನು ಏನಾದರೂ ಮಾಡುತ್ತೀರಾ ಎಂದಾಗಲೂ ಅವರಿಂದ ಸಕಾರಾತ್ಮಕ ಉತ್ತರ ಬರುವುದಿಲ್ಲ. ಯಡಿಯೂರಪ್ಪ ಅವರಿಗೆ ಬಹು ದೊಡ್ಡ ಸಮಾಜದ ಬೆಂಬಲ ಇದೆ. ಆಂತರಿಕ ಸಮಸ್ಯೆಗಳಿಂದ, 'ದೌರ್ಬಲ್ಯ'ಗಳಿಂದ ತತ್ತರಿಸಿ ಹೋಗಿರುವ ವಿರೋಧ

ಪಕ್ಷಗಳೂ ಅವರ ಕೆಲಸ ಹಗುರ ಮಾಡಿವೆ. ಈಗಿನ ಸೂಚನೆಗಳ ಪ್ರಕಾರ ಮುಂದಿನ ಲೋಕಸಭೆ ಚುನಾವಣೆಯಲ್ಲಿಯೂ ರಾಜ್ಯದಲ್ಲಿ ಬಿಜೆಪಿ ಕೈ ಮೇಲಾಗುವ ಸಾಧ್ಯತೆಯೇ ಇದೆ. ಆಗಲೇ ಯಡಿಯೂರಪ್ಪ ಅವರ ಸಮಸ್ಯೆಗಳೂ ಆರಂಭವಾಗುತ್ತವೆ; ಅವರು ತಮ್ಮ ಆಡಳಿತ ಶೈಲಿಯನ್ನು ಬದಲಿಸಿಕೊಳ್ಳದಿದ್ದರೆ. ■

# ಲೋಕಸಭಾ ಚುನಾವಣಾ ಸಮಸ್ಯೆಗಳ ಸುಳಿಯಲ್ಲಿ

ಲೋಕಸಭೆ ಚುನಾವಣೆ ಹೊಸ್ತಿಲಲ್ಲಿಯೇ ಬಂದು ನಿಂತಿದೆ. ಪಕ್ಷಗಳ ಎದೆ ಬಡಿತ ಹೆಚ್ಚತೊಡಗಿದೆ. ಹೊಸದಾಗಿ ಕ್ಷೇತ್ರ ಪುನರ್ ವಿಂಗಡಣೆಯಾದ ನಂತರ ಇದೇ ಮೊದಲ ಬಾರಿಗೆ ಲೋಕಸಭೆಗೆ ಚುನಾವಣೆ ನಡೆಯುತ್ತಿದೆ. ಎದೆಬಡಿತ ಮತ್ತಷ್ಟು ಹೆಚ್ಚಲು ಈ ಪುನರ್‌ವಿಂಗಡಣೆ ತಂದು ಒಡ್ಡಿರುವ ಸಮಸ್ಯೆಯೇ ಮುಖ್ಯ ಕಾರಣ. ಪ್ರಮುಖ ಪಕ್ಷಗಳಲ್ಲಿ ಆಂತರಿಕ ಸಮಸ್ಯೆಗಳಿಗೂ ಕೊರತೆಯಿಲ್ಲ. ಸಾಮಾನ್ಯ ವರ್ಗಕ್ಕೆ ನಿಗದಿಯಾಗಿದ್ದ ಕ್ಷೇತ್ರಗಳು ಮೀಸಲಾಗಿರುವುದು, ಮೀಸಲು ಕ್ಷೇತ್ರಗಳು ಸಾಮಾನ್ಯವಾಗಿರುವುದು, ಒಟ್ಟು ಮತಕ್ಷೇತ್ರದ ಸ್ವರೂಪ, ಜಾತಿ–ಮತಗಳ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಬದಲಾಗಿರುವುದು ದೊಡ್ಡ ದೊಡ್ಡ ಪಕ್ಷಗಳ ಲೆಕ್ಕಾಚಾರವನ್ನೇ ತಲೆಕೆಳಗೆ ಮಾಡಿದೆ.

ಕಳೆದ ಸಾರಿ 16 ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಜೆಪಿಗೆ ಆ ಕ್ಷೇತ್ರಗಳಲ್ಲಿಯೇ ಅಭ್ಯರ್ಥಿ ಗಳನ್ನು ಹುಡುಕಬೇಕಾದ ಸಂದರ್ಭ ತಲೆದೋರಿದೆ! ಏಕೆಂದರೆ ಮೀಸಲಾತಿ ಬದಲಾದ ಕಾರಣ ಗೆದ್ದ ಆ ಎಲ್ಲ ಅಭ್ಯರ್ಥಿಗಳು ಅಲ್ಲಿ ಮತ್ತೆ ಸ್ಪರ್ಧಿಸುವಂತಿಲ್ಲ. ಉದಾಹರಣೆಗೆ ವಿಜಾಪುರದಲ್ಲಿ ಗೆದ್ದಿದ್ದ

ಬಸವನಗೌಡ ಪಾಟೀಲ ಯತ್ನಾಳ ಅವರಿಗೆ ಟಿಕೆಟ್ ಕೊಡಬೇಕು ಎಂದರೂ (ಕೊಡುವಷ್ಟು ಸಂಬಂಧ ಉಳಿದಿಲ್ಲ ಎಂಬ ಮಾತು ಬೇರೆ) ಈಗ ಸಾಧ್ಯವಿಲ್ಲ. ಏಕೆಂದರೆ ಅದು ಈಗ ಮೀಸಲು ಕ್ಷೇತ್ರ. ಇದೇ ಸಮಸ್ಯೆ ಚಿಕ್ಕೋಡಿಯಲ್ಲಿಯೂ ಇದೆ. ಇದುವರೆಗೆ ಮೀಸಲು ಕ್ಷೇತ್ರವಾಗಿದ್ದ ಚಿಕ್ಕೋಡಿ ಈಗ ಸಾಮಾನ್ಯ ಕ್ಷೇತ್ರ. ಅಲ್ಲಿ ಬಿಜೆಪಿಯಿಂದ ಗೆದ್ದಿದ್ದ ರಮೇಶ ಜಿಗಜಿಣಗಿ ಅವರಿಗೆ ಅವರ ಸ್ವಂತ ಜಿಲ್ಲೆಯಾದ ವಿಜಾಪುರದಲ್ಲಿ ಸ್ಥಾನ ಕೊಟ್ಟರೆ ಚಿಕ್ಕೋಡಿಗೆ ಹೊಸಬರನ್ನು ಹುಡುಕಬೇಕು. ಅಲ್ಲಿ ವಲಸಿಗ ರಮೇಶ ಕತ್ತಿಯವರೇ ಅಭ್ಯರ್ಥಿ ಆಗಬಹುದು.

ಹಾವೇರಿ, ಉಡುಪಿ, ಬೆಂಗಳೂರು ಉತ್ತರದಿಂದ ಗೆದ್ದಿದ್ದ ಮೂವರು ಬಿಜೆಪಿ ಸದಸ್ಯರು ಈಗ 'ಕೈ' ಹಿಡಿದಿದ್ದಾರೆ. ಚಿಕ್ಕಮಗಳೂರು ಕ್ಷೇತ್ರ ಪ್ರತಿನಿಧಿಸಿದ್ದ ಡಿ.ಸಿ. ಶ್ರೀಕಂಠಪ್ಪ ನಿಧನರಾಗಿದ್ದಾರೆ. ಈ ಎಲ್ಲ ಅಡಚಣೆಗಳ ನಡುವೆ, 'ಕನಿಷ್ಠ 20 ಕ್ಷೇತ್ರಗಳಲ್ಲಿ ಗೆದ್ದು ಆ ಅಭ್ಯರ್ಥಿಗಳನ್ನು ಅಡ್ವಾಣಿ ಅವರ ಮುಂದೆ ನಿಲ್ಲಿಸುತ್ತೇನೆ' ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಪಂಥ ಬೇರೆ ತೊಟ್ಟಿದ್ದಾರೆ. ಅವರು ತಮ್ಮ ಮಾತು ಉಳಿಸಿಕೊಳ್ಳುವ ಸಲುವಾಗಿಯೇ ಬೀದರ್‌ನಲ್ಲಿ ಗುರುಪಾದಪ್ಪ ನಾಗಮಾರ ಪಲ್ಲಿ ಅವರನ್ನು ಕಾಂಗ್ರೆಸ್‌ನಿಂದ ಕಸಿದುಕೊಂಡಿದ್ದಾರೆ. ತಮಕೂರಿನಲ್ಲಿ ಮತ್ತೊಬ್ಬ ಕಾಂಗ್ರೆಸ್ ಮುಖಂಡ ಜಿ.ಎಸ್. ಬಸವರಾಜು ಅವರನ್ನು ಬಲೆಯಲ್ಲಿ ಬೀಳಿಸಿಕೊಳ್ಳಲು ಬಹುತೇಕ ಯಶಸ್ವಿಯಾಗಿದ್ದಾರೆ. ಹಾವೇರಿ ಕ್ಷೇತ್ರಕ್ಕೆ ಕಾಂಗ್ರೆಸ್ಸಿನಿಂದ ಹಂಪನಗೌಡ ಬಾದರ್ಲಿ ಅವರನ್ನು ಸೆಳೆದು ಕಣಕ್ಕೆ ಇಳಿಸುವ ಪ್ರಯತ್ನವೂ ನಡೆದಿದೆ. ಆದರೂ, ಬೆಂಗಳೂರು ಸೆಂಟ್ರಲ್‌ಗೆ ಸಮರ್ಥ ಅಭ್ಯರ್ಥಿ ಹುಡುಕಲು ಅವರಿಗೆ ಕಷ್ಟವಾಗಿದೆ. ಮಂಗಳೂರಿನಲ್ಲಿಯೂ ಅದೇ ಸಮಸ್ಯೆಯಿದ್ದು ಹೊಸ ಮುಖಕ್ಕೆ ಮೊರೆ ಹೋಗಿದ್ದಾರೆ. ಒಂದು ಸಾರಿ 28 ಮಂದಿ ಬಿಜೆಪಿ ಅಭ್ಯರ್ಥಿಗಳ ಹೆಸರು ಪ್ರಕಟವಾದರೆ, ಮೂಲ ಬಿಜೆಪಿ ಅಭ್ಯರ್ಥಿಗಳನ್ನು ಹುಡುಕಲು ದುರ್ಬೀನು ಬೇಕಾದೀತು!

ಈ ಪ್ರಮಾಣದ ಕೊರತೆ ಕಾಂಗ್ರೆಸ್ಸಿಗೆ ಇಲ್ಲ. ಆದರೆ, ನಾಯಕರಲ್ಲಿನ ಅಪನಂಬಿಕೆ ಮತ್ತು ಪುನರ್‌ರಚನೆಯಿಂದ ಬದಲಾಗಿರುವ ಕ್ಷೇತ್ರಗಳ ಸ್ವರೂಪ ಆ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿದೆ. 'ಜೇವರಗಿಯಲ್ಲಿ ತಮ್ಮ ಸೋಲಿಗೆ ಸಿದ್ದರಾಮಯ್ಯ ಅವರೇ ಕಾರಣ. ಅವರ ಜತೆಗೆ ಖರ್ಗೆ ಅವರೂ ಕೈ ಜೋಡಿಸಿರಬೇಕು' ಎಂಬ ಅನುಮಾನ ಧರ್ಮಸಿಂಗ್ ಅವರನ್ನು ಕಾಡುತ್ತಿದ್ದರೆ, ಒಕ್ಕಲಿಗರ ನಾಯಕ ಡಿ.ಕೆ. ಶಿವ ಕುಮಾರ್ ಅವರಿಗೆ ತೇಜಸ್ವಿನಿಗೆ ಟಿಕೆಟ್ ತಪ್ಪಿಸುವುದೊಂದೇ ದೊಡ್ಡ ಗುರಿ ಯಾದಂತಿದೆ. ಎಸ್.ಎಂ. ಕೃಷ್ಣ ಅವರ ವರ್ಚಸ್ಸು ಮದ್ದೂರು ಉಪಚುನಾವಣೆ ಯಲ್ಲಿ ನೆಲಕಚ್ಚಿದೆ. ಅಕ್ಕಪಕ್ಕದ ಗುಲ್ಬರ್ಗ ಮತ್ತು ಬೀದರ್ ಕ್ಷೇತ್ರಗಳಿಂದ ಖರ್ಗೆ ಮತ್ತು ಧರ್ಮಸಿಂಗ್ ಸ್ಪರ್ಧೆ, ಮುಂದೆ ಕೇಂದ್ರ ಸಚಿವ ಸ್ಥಾನದ ಆಕಾಂಕ್ಷೆಯಿಂದ, ಪಕ್ಷಕ್ಕೆ ಮಾರಕವೇ ಎಂಬ ಶಂಕೆಯೂ ಕಾಂಗ್ರೆಸ್ ಮುಖಂಡರನ್ನು ಕಾಡುತ್ತಿದೆ!

ಈಚೆಗೆ ನಡೆದ ವಿಧಾನಸಭೆಯ ಎಂಟು ಕ್ಷೇತ್ರಗಳ ಉಪಚುನಾವಣೆಯಲ್ಲಿ ಲಿಂಗಾಯತ ಹಾಗೂ ಒಕ್ಕಲಿಗ ಮತಗಳು ಕ್ರಮವಾಗಿ ಬಿಜೆಪಿ ಮತ್ತು ಜೆ.ಡಿ(ಎಸ್) ಕಡೆಗೆ ವಾಲಿರುವ ಸ್ಪಷ್ಟ ಸೂಚನೆ ಸಿಕ್ಕಿರುವುದರಿಂದ ಈ ಎರಡೂ ಸಮುದಾಯಗಳ

ಅಭ್ಯರ್ಥಿಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಅವಕಾಶ ಮಾಡಿಕೊಟ್ಟು ಆ ಮತಗಳನ್ನು ಸೆಳೆಯಲು ಪ್ರಯತ್ನ ಮಾಡಬೇಕಿರುವುದು ಕಾಂಗ್ರೆಸ್ ಮುಂದಿರುವ ಇನ್ನೊಂದು ಸವಾಲು.

ಉತ್ತರ ಕರ್ನಾಟಕದಲ್ಲಿ ಲಿಂಗಾಯತರ ಪ್ರಾಬಲ್ಯವಿರುವ ಬೀದರ್‌ನಲ್ಲಿ ರಜಪೂತ್ ಸಮುದಾಯದ ಧರ್ಮಸಿಂಗ್ ನಿಲ್ಲುವುದು ಹೆಚ್ಚೂ ಕಡಿಮೆ ಖಚಿತ ವಾಗಿದ್ದು, ಚಿಕ್ಕೋಡಿ ಮತ್ತು ಬೆಳಗಾವಿ ಕ್ಷೇತ್ರಗಳಿಗೆ ಲಿಂಗಾಯತ ಸ್ಪರ್ಧಿಗಳನ್ನು ಇನ್ನೂ ಹುಡುಕಬೇಕಿದೆ. ಪ್ರಭಾಕರ ಕೋರೆ ಅವರ ನಿರ್ಗಮನದ ನಂತರ ಈ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಪ್ರಬಲ ಲಿಂಗಾಯತ ನಾಯಕರೇ ಇಲ್ಲದಂತಾಗಿದೆ. ಕೊಪ್ಪಳದಲ್ಲಿ ಹಾಲಿ ಸಂಸದ ಕೆ. ವಿರೂಪಾಕ್ಷಪ್ಪ ಕುರುಬ ಸಮುದಾಯಕ್ಕೆ ಸೇರಿದವರು. ಆದರೆ, ಬಾಗಲಕೋಟೆಯಲ್ಲಿ ಲಿಂಗಾಯತರಿಗೆ ಅವಕಾಶ ಮಾಡಬೇಕು ಎಂದರೆ ತಮ್ಮ ಬೆಂಬಲಿಗ ಹುಲ್ಲಪ್ಪ ಮೇಟಿ (ಇವರೂ ಕುರುಬರು) ಅವರಿಗೆ ಟಿಕೆಟ್ ಕೊಡಬೇಕು ಎಂದು ಸಿದ್ದರಾಮಯ್ಯ ಪಟ್ಟು ಹಿಡಿದಿದ್ದಾರೆ. ಇಬ್ಬರಲ್ಲಿ ಒಬ್ಬರನ್ನು ಆಯ್ದುಕೊಂಡರೆ ಇನ್ನೊಂದು ಕಡೆ ಲಿಂಗಾಯತರಿಗೆ ಅವಕಾಶ ಆಗಬಹುದು. ನ್ಯಾಯವಾಗಿ ನೋಡಿದರೆ ವಿರೂಪಾಕ್ಷಪ್ಪ ಅವರಿಗೆ ಟಿಕೆಟ್ ಸಿಗಬೇಕು. ಆದರೆ, ಸಿದ್ದರಾಮಯ್ಯ ಒಪ್ಪುತ್ತಾರೆಯೇ ಎಂಬ ಚಿಂತೆ ರಾಜ್ಯ ಕಾಂಗ್ರೆಸ್ ನಾಯಕರನ್ನು ಕಾಡುತ್ತಿದೆ.

ಧಾರವಾಡದಿಂದ ಮಂಜುನಾಥ ಕುನ್ನೂರರಿಗೆ ಟಿಕೆಟ್ ಕೊಟ್ಟರೂ ಹಾವೇರಿಯಲ್ಲಿ ಸಮಸ್ಯೆಯಾಗಬಹುದು. ಅಲ್ಲಿ ಸಿ.ಎಂ. ಇಬ್ರಾಹಿಂ ಜತೆಗೆ ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ.ಎಸ್. ಪಾಟೀಲರೂ ಟಿಕೆಟ್ ಆಕಾಂಕ್ಷಿ. ಈ ನಾಲ್ಕೈದು ಕ್ಷೇತ್ರಗಳಲ್ಲಿ ಮಾತ್ರ ಬಣಜಿಗ/ಪಂಚಮಸಾಲಿ ಲಿಂಗಾಯತರಿಗೆ ಅವಕಾಶ ಕೊಡಲು ಸಾಧ್ಯ. ದಾವಣಗೆರೆಗೆ ಬಂದರೆ ಅಲ್ಲಿ ಸಾದರ ಲಿಂಗಾಯತರಿಗೆ ಸೀಟು ಕೊಡಬೇಕು. ಇನ್ನಷ್ಟು ದಕ್ಷಿಣಕ್ಕೆ ಬಂದರೆ ಒಕ್ಕಲಿಗರ ಪ್ರಾಬಲ್ಯ. ಅಲ್ಲಿ ಹಲವು ಕ್ಷೇತ್ರಗಳನ್ನು ಜೆ.ಡಿ. (ಎಸ್) ಜತೆಗೆ ಒಪ್ಪಂದವಾದೀತು ಎಂಬ ನಿರೀಕ್ಷೆಯಲ್ಲಿ ಕಾದಿರಿಸಬೇಕು. ಈ ಒಪ್ಪಂದಕ್ಕೆ ಆರ್.ವಿ.ದೇಶಪಾಂಡೆ ಶತಾಯ ಗತಾಯ ಪ್ರಯತ್ನ ನಡೆಸಿದ್ದಾರೆ.

ಈ ಒಪ್ಪಂದಕ್ಕೆ ತಮ್ಮ ವಿರೋಧವಿಲ್ಲ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸ್ಥಾನದ ಭರವಸೆ ಗಿಟ್ಟಿಸಿಕೊಂಡಿರುವ ಸಿದ್ದರಾಮಯ್ಯ ರಾಜ್ಯ ಕಾಂಗ್ರೆಸ್ಸಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದ (ಹಿಂದಿನ) ಪೃಥ್ವಿರಾಜ್ ಚವಾಣರಿಗೆ ಹೇಳಿದ್ದಾರೆ ಎನ್ನಲಾಗಿದೆ. ಆಗ ಮಂಡ್ಯ, ಬೆಂಗಳೂರು ಗ್ರಾಮಾಂತರ, ಹಾಸನ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ ಜತೆಗೆ ಉತ್ತರದ ಕೊಪ್ಪಳ, ರಾಯಚೂರು ಕ್ಷೇತ್ರಗಳನ್ನು ಜೆ.ಡಿ.(ಎಸ್) ಕೇಳಬಹುದು ಎಂಬ ಅಂದಾಜು ಕಾಂಗ್ರೆಸ್ಸಿನಲ್ಲಿ ಇದೆ.

ಲೋಕಸಭಾ ಚುನಾವಣೆ ನಂತರದ ಹೊಂದಾಣಿಕೆ ಕುರಿತೇ ಮಾತನಾಡಲು ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿದ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಸಕಾರಾತ್ಮಕ ಪ್ರತಿಕ್ರಿಯೆಯೇನೂ ಸಿಕ್ಕಿಲ್ಲ. ಆದರೆ, ದೇಶದ ಮಟ್ಟದಲ್ಲಿ ಒಬ್ಬೊಬ್ಬರೇ ಮಿತ್ರರನ್ನು ಕಳೆದುಕೊಳ್ಳುತ್ತಿರುವ ಕಾಂಗ್ರೆಸ್ಸಿಗೆ ಕರ್ನಾಟಕದಲ್ಲಿ ಜೆ.ಡಿ (ಎಸ್) ಆಸರೆಯಾಗಿ ಕಾಣಬಹುದು. ಒಂದು ವೇಳೆ ಒಪ್ಪಂದವಾದರೂ ಮಂಡ್ಯ, ಹಾಸನ

ದಂಥ ತುರುಸಿನ ರಾಜಕಾರಣದ ಜಿಲ್ಲೆಗಳಲ್ಲಿ ಈ ಮೈತ್ರಿ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತದೆ ಎಂದು ಹೇಳಲಾಗದು. ಈಗಲೂ ದೇವೇಗೌಡರು ಚುನಾವಣೋತ್ತರ ಒಪ್ಪಂದದ ಆಯ್ಕೆಗಳನ್ನೇ ಗಮನದಲ್ಲಿ ಇಟ್ಟುಕೊಳ್ಳಬಹುದು. ಆಗ, ಚೌಕಾಸಿಗೆ ಹೆಚ್ಚಿನ ಅವಕಾಶ ಇರುತ್ತದೆ. ಕುಮಾರಸ್ವಾಮಿಗೆ ಕೇಂದ್ರದಲ್ಲಿ ಸಚಿವ ಸ್ಥಾನ ದೊರಕಿಸುವುದೇ ಈ ಚೌಕಾಸಿ.

ಫೆಬ್ರುವರಿ 16ಕ್ಕೆ ಎಲ್ಲ 28 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಪ್ರಕಟಿಸಿ ಪ್ರಚಾರವನ್ನೇ ಆರಂಭಿಸುವುದಾಗಿ ಹೇಳಿದ್ದ ಜೆ.ಡಿ.(ಎಸ್) ಇನ್ನೂ ಆ ಕೆಲಸ ಮಾಡಿಲ್ಲ. ಬಹುಶಃ ಬಿಜೆಪಿ, ಕಾಂಗ್ರೆಸ್‌ನಲ್ಲಿ ಟಿಕೆಟ್ ಸಿಗದವರು ಈ ಕಡೆ ಬಂದಾರು ಎಂಬ ಲೆಕ್ಕಾಚಾರ ಆ ಪಕ್ಷದ ಧುರೀಣರಿಗೆ ಇರಬಹುದು.

■

# ಆತ್ಮಶೋಧನೆಗೆ ಇನ್ನೂ ಎಷ್ಟು ಕಾಲ ಬೇಕು?

ಠಾಕ್ರೆಯವರು ಖರೆ ಹೇಳಿದ್ದಾರೆ. ಈ ಟಿ.ವಿ.ಯವರದು ಅತಿಯಾಯಿತು. ಠಾಕ್ರೆಯವರಿಗೆ ಅಧಿಕ ರಕ್ತದೊತ್ತಡವೋ, ಕಡಿಮೆ ರಕ್ತದೊತ್ತಡವೋ ವೈದ್ಯರಿಗೇ ಗೊತ್ತು. ಆದರೆ ಟಿ.ವಿ.ಯವರಿಗೆ ಮಾತ್ರ ಇದು ಬ್ರೇಕಿಂಗ್ ನ್ಯೂಸ್. 24 ಗಂಟೆ ಸುದ್ದಿ ಪ್ರಸಾರ ಬಂದ ಮೇಲೆ ಕ್ಷಣ ಕ್ಷಣಕ್ಕೂ ಏನಾದರೂ ಬ್ರೇಕಿಂಗ್ ನ್ಯೂಸ್ ಕೊಡಲೇಬೇಕು. ಆ ಟಿ.ವಿ. ಕೊಡುವದಕ್ಕಿಂತ ಈ ಟಿ.ವಿ. ಸುದ್ದಿಯನ್ನು ಬ್ರೇಕ್ ಮಾಡಬೇಕು. ಅದು ಒಳ್ಳೆಯದೇ ಇರಲಿ, ಕೆಟ್ಟದೇ ಇರಲಿ ತಾನು ಮೊದಲು 'ಬ್ರೇಕ್' ಮಾಡಿದೆ ಎಂಬ ಪೈಪೋಟಿಯಲ್ಲಿ ಸುದ್ದಿಗೆ ಇರಬೇಕಾದ ಸತ್ಯನಿಷ್ಠೆ ಹಾಗೂ ಘನತೆಗಳೆರಡೂ ಮಣ್ಣು ಪಾಲಾಗುತ್ತಿವೆ.

ಟಿ.ವಿ. ವಾಹಿನಿಗಳು ಹೀಗೆ ಟೀಕೆಗೆ ಗುರಿಯಾಗುತ್ತಿರುವುದು ಇದೇ ಮೊದಲೇನೂ ಅಲ್ಲ. ಮುಂಬೈ ಮೇಲೆ ಭಯೋತ್ಪಾದಕರ ದಾಳಿ ನಡೆದಾಗ ಈ ಬಗ್ಗೆ ಇಡೀ ದೇಶದಲ್ಲಿ ಮಾತ್ರವಲ್ಲ ಪ್ರಪಂಚದ ಇತರ ಕಡೆಗಳಲ್ಲೂ ದೊಡ್ಡ ಚರ್ಚೆಯೇ ಆಗಿತ್ತು. ಕಂದಹಾರ್‌ಗೆ ವಿಮಾನ ಅಪಹರಣವಾದ ಸಂದರ್ಭದಲ್ಲಿಯೂ ಈ ಚರ್ಚೆ ನಡೆದಿತ್ತು.

ಈಚಿನ ದಿನಗಳಲ್ಲಿ ಕರ್ನಾಟಕದಲ್ಲಿ ಪದ್ಮಪ್ರಿಯಾ ಪ್ರಕರಣ ಮತ್ತು ಮಂಗಳೂರು ಪಬ್ ದಾಳಿಗಳಲ್ಲಿ ಟಿ.ವಿ. ವಾಹಿನಿಗಳ ಪಾತ್ರವನ್ನು ಒರೆಗೆ ಹಚ್ಚಲಾಗಿತ್ತು.

ನಾನು ಇನ್ನೂ ಸ್ವಲ್ಪ ಹಿಂದೆ ಹೋಗುತ್ತೇನೆ. ಅದು 2005ನೇ ಇಸವಿ. ನಟ ಅಮಿತಾಬ್ ಬಚನ್ ಅಸ್ವಸ್ಥರಾಗಿ ಮುಂಬೈನ ಲೀಲಾವತಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಚಿಕಿತ್ಸೆ ಪಡೆಯುತ್ತಿದ್ದ ಕೊಠಡಿಗೆ ಒಬ್ಬ ವರದಿಗಾರ್ತಿ ನುಗ್ಗಿ ಬಚನ್ ಅವರ 'ಬೈಟ್' ಪಡೆಯಲು ಯತ್ನಿಸಿದ್ದಳು. ಆಕೆಯನ್ನು ಆಸ್ಪತ್ರೆಯ ಸಿಬ್ಬಂದಿ ಆಚೆ ತಳ್ಳಿದ್ದರು. ಅದೇ ವರ್ಷ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಮೇಲೆ ನಡೆದ ಉಗ್ರರ ದಾಳಿಯಲ್ಲಿ ಗಾಯಗೊಂಡಿದ್ದ ಪಟೇಲಪ್ಪ ಎಂಬುವರ ಬೈಟ್ ಪಡೆಯಲು ಒಬ್ಬ ಟಿ.ವಿ. ವರದಿಗಾರ್ತಿ ವೈದ್ಯರ ವೇಷದಲ್ಲಿ ಆಸ್ಪತ್ರೆಗೆ ನುಗ್ಗಿದ್ದಳು. ಈ ಎರಡೂ ಘಟನೆಗಳಲ್ಲಿ ಹಲವು ನೈತಿಕ ಪ್ರಶ್ನೆಗಳು ಇವೆ: ಅದು ಸುದ್ದಿ ಮುಖ್ಯವೇ? ಅಥವಾ ಬಚನ್ ಆರೋಗ್ಯ ಮುಖ್ಯವೇ? ಅಥವಾ ಉಗ್ರರ ದಾಳಿಗೆ ಏಕೈಕ ಪ್ರತ್ಯಕ್ಷ ಸಾಕ್ಷಿ ಯಾಗಿದ್ದ ಪಟೇಲಪ್ಪ ಅವರ ಭದ್ರತೆ ಮುಖ್ಯವೇ? ಒಬ್ಬ ವ್ಯಕ್ತಿಗೆ ಖಾಸಗಿತನ ಎಂಬುದು ಮುಖ್ಯ ಅಲ್ಲವೇ? ಟಿ.ವಿ. ವಾಹಿನಿಗಳು ಮನುಷ್ಯನ ಖಾಸಗಿ ಬದುಕಿಗೇ ಕೈ ಹಾಕುತ್ತಿವೆಯೇ? ಪದ್ಮಪ್ರಿಯಾ ಒಬ್ಬ ಶಾಸಕರ ಪತ್ನಿಯಾಗಿದ್ದರೂ ಆಕೆಗೂ ಒಂದು ಖಾಸಗಿ ಬದುಕು ಇರಬಹುದಿತ್ತಲ್ಲವೇ? ವ್ಯಕ್ತಿಗತ ನೋವು, ಸಂತೋಷ, ಆಯ್ಕೆಗಳು ಇರಬಹುದಲ್ಲವೇ? ಎಲ್ಲವನ್ನೂ ಬಿಚ್ಚಿಡುವ ಧಾವಂತದಲ್ಲಿ ಟಿ.ವಿ. ಸುದ್ದಿಗಾರರು ಜನರ ಬೇಟೆಯಾಡುತ್ತಿದ್ದಾರೆಯೇ?

ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದ ಅವಧಿಯದು. ಶಾಸಕರ ಭವನಕ್ಕೆ ಬಂದಿದ್ದ ಬೆಳಗಾವಿ ಮೇಯರ್ ವಿಜಯ್ ಮೋರೆ ಹಾಗೂ ಅವರ ಇಬ್ಬರು ಸಹಚರರಿಗೆ (ಅವರಲ್ಲಿ ಒಬ್ಬರು ಮಾಜಿ ಉಪಮೇಯರ್ ಹಾಗೂ ಇನ್ನೊಬ್ಬರು ಮಾಜಿ ಶಾಸಕರು) ಕನ್ನಡ ಚಳವಳಿಗಾರರು ಮುಖಕ್ಕೆ ಮಸಿ ಬಳಿದರು. ಭಾರತೀಯ ದಂಡ ಸಂಹಿತೆ ಪ್ರಕಾರ, ಮಸಿ ಬಳಿಯುವುದು ಮಾನಹಾನಿ; ಎರಡು ಭಾಷಿಕರ ನಡುವೆ ದ್ವೇಷ ಹುಟ್ಟಿಸುವ ಕೆಲಸ. ಮೋರೆ ಮುಖಕ್ಕೆ ಮಸಿ ಬಳಿಯುವ ಜಾಗಕ್ಕೆ ಚಳವಳಿಗಾರರು ಟಿ.ವಿ. ವರದಿಗಾರರನ್ನೂ ಕರೆದುಕೊಂಡು ಹೋಗಿದ್ದರು. ಅಪರಾಧಕ್ಕೆ ಸಾಕ್ಷಿಯಾಗುವುದೂ ಅಪರಾಧವೇ ಅಲ್ಲವೇ? ಅಲ್ಲ ಎನ್ನುವುದಾದರೆ ನಾಳೆ ಟಿ.ವಿ. ವರದಿಗಾರರನ್ನು ಕರೆದುಕೊಂಡು ಹೋಗಿ ಯಾರಾದರೂ ಕೊಲೆ ಮಾಡಿದರೆ ನಾವು ಅದನ್ನೂ ವರದಿ ಮಾಡುತ್ತೇವೆ ಎಂದು ಹೇಳಲಾದೀತೇ?

ರೋಚಕತೆಯ ಬೆನ್ನು ಹತ್ತುವ ಟಿ.ವಿ. ವರದಿಗಾರರು ಮಾಡುವ ಕೆಲಸ ಒಂದೆರಡಲ್ಲ. ಮೊನ್ನೆ ಮೊನ್ನೆ ಬೆಳಗಾವಿ ಅಧಿವೇಶನದ ವೇಳೆ, ಧಾರವಾಡದಲ್ಲಿ ಮರಾಠಿಗರ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದ ಕನ್ನಡ ಚಳವಳಿಗಾರರಿಗೆ 'ನೀವು ಬರೀ ಹೀಗೆ ಘೋಷಣೆ ಕೂಗಿದರೆ ಸಾಲದು ಏನಾದರೂ ದಾಂಧಲೆ ಮಾಡಿ' ಎಂದು ಟಿ.ವಿ. ವರದಿಗಾರರೇ ಚಿತಾವಣೆ ಮಾಡಿದರು. ಚಳವಳಿಗಾರರು ಮಹಾರಾಷ್ಟ್ರ ಬ್ಯಾಂಕಿಗೆ ನುಗ್ಗಿ ಪೀಠೋಪಕರಣ ಒಡೆದು ಹಾಕಿದರು. ಬ್ಯಾಂಕ್ ಆಫ್ ಮಹಾರಾಷ್ಟ್ರ ಮರಾಠಿಗರದೇ? ಭಾರತೀಯರದೇ? ಮೈಸೂರು ಬ್ಯಾಂಕ್ ಕೂಡ ದೇಶದ ಆಸ್ತಿಯೇ ತಾನೇ? ಅದೇನು

ಕರ್ನಾಟಕದ ಆಸ್ತಿಯೇ? ನಾವು ಬರೀ ಮಹಾರಾಷ್ಟ್ರ ಬ್ಯಾಂಕಿನ ಒಂದು ಶಾಖೆ ಪುಡಿ ಮಾಡಿದೆವು. ಮರಾಠಿಗರು ಮನಸ್ಸು ಮಾಡಿದ್ದರೆ ಮುಂಬೈ, ಪುಣೆಯಲ್ಲಿನ ಕನ್ನಡಿಗರ ಅಂಗಡಿ, ಮುಂಗಟ್ಟುಗಳನ್ನೆಲ್ಲ ಧ್ವಂಸ ಮಾಡಿಬಿಡುತ್ತಿದ್ದರು. ಪುಣ್ಯ, ಅವರು ಆ ಕೆಲಸಕ್ಕೆ ಕೈ ಹಾಕಲಿಲ್ಲ.

ಟಿ.ವಿ. ವಾಹಿನಿಗಳು ಅನೇಕ ವರ್ಷಗಳಿಂದ ಮುದ್ರಣ ಮಾಧ್ಯಮ ಪಾಲಿಸಿ ಕೊಂಡು ಬಂದ ಸೂಕ್ಷ್ಮತೆಗಳ ಹಂಗು ಹರಿದುಕೊಂಡಿವೆ. ಹಾವೇರಿ ಗೋಲಿಬಾರ್ ನಲ್ಲಿ ಸತ್ತ ರೈತನ ಚಿತ್ರವನ್ನು ನೂರು ಸಾರಿ ತೋರಿಸಿದರೂ ವಾಹಿನಿಗಳಿಗೆ ಸಮಾಧಾನವಿಲ್ಲ; ಚೆನ್ನೈನಲ್ಲಿ ಮೊನ್ನೆಯಷ್ಟೇ ಕಾನೂನು ಕಾಲೇಜಿನಲ್ಲಿ ಒಬ್ಬ ವಿದ್ಯಾರ್ಥಿಗೆ ಸಲಿಕೆಯಿಂದ ಸಾಯುವ ಹಾಗೆ ಹೊಡೆಯುವ ದೃಶ್ಯ ಪ್ರಸಾರದಲ್ಲಿಯೂ ಅಷ್ಟೇ. ರಕ್ತಸಿಕ್ಕ ದೇಹಗಳನ್ನು, ಮೂಗಿನಲ್ಲಿ ಅರಳೆಯಿಟ್ಟ ಪಾರ್ಥಿವ ದೇಹಗಳನ್ನು, ಕೋಮುಗಲಭೆಯಲ್ಲಿ ಸತ್ತವರನ್ನು ತೋರಿಸುವುದು ವಾಹಿನಿಗಳಿಗೆ ಕನಿಷ್ಟ ಜುಗುಪ್ಸೆ ಯನ್ನೂ ತರಿಸುವುದಿಲ್ಲ. ಹಾಗಾದರೆ ಹಿಂಸೆ ಎಲ್ಲಿದೆ? ಹೊರಗೆ ಇದೆಯೇ ಅಥವಾ ಟಿ.ವಿ. ಪೆಟ್ಟಿಗೆಯಲ್ಲಿ ಇದೆಯೇ?

ಮಾಧ್ಯಮವನ್ನು ಇದುವರೆಗೆ ಯಾರೂ ಲಘುವಾಗಿ ತೆಗೆದುಕೊಂಡಿರಲಿಲ್ಲ. ಆದರೆ, ಈಚೆಗಷ್ಟೇ ಬಂದ 'ಎ ವೆನ್ಸ್‌ಡೇ' ಚಿತ್ರ ಮೊದಲ ಬಾರಿಗೆ ಟಿ.ವಿ. ವರದಿಗಾರ ರನ್ನು ಅಪಹಾಸ್ಯ ಮಾಡಿತು. ಜೋಕರ್‌ಗಳ ಹಾಗೆ ಬಿಂಬಿಸಿತು. ಮಾತ್ರವಲ್ಲ, ಚಿತ್ರದ ನಾಯಕ ಟಿ.ವಿ.ಯ ಆ್ಯಂಕರ್‌ವೊಬ್ಬಳನ್ನು ತನ್ನ ದಾಳವಾಗಿಯೂ ಬಳಸಿಕೊಂಡ. ಮೋರೆಯವರ ಮುಖಕ್ಕೆ ಮಸಿ ಬಳಿದವರೂ ಮಾಡಿದ್ದು ಅದನ್ನೇ ಅಲ್ಲವೇ? ಮೋರೆಯ ಮುಖಕ್ಕೆ ಮಸಿ ಬಳಿಯುವುದೇ ಆಗಿದ್ದರೆ ಟಿ.ವಿ.ಯ ವರದಿಗಾರರು ಏಕೆ ಬೇಕು? ಛಾಯಾಗ್ರಾಹಕರು ಏಕೆ ಬೇಕು? ಮಂಗಳೂರಿನ ಪಬ್ ಮೇಲೆ ದಾಳಿ ಮಾಡಿದವರು ಟಿ.ವಿ. ವರದಿಗಾರರಿಗೆ ಮಾಹಿತಿ ನೀಡಿದ್ದೇಕೆ? ಒಂದೋ ಸುದ್ದಿ ಮಾಡುವ ಹುಚ್ಚು ಇರಬೇಕು. ಇಲ್ಲವೇ ದುಡ್ಡು ಮಾಡುವ ಹುನ್ನಾರ ಇರಬೇಕು? ಸುದ್ದಿ ಮಾಡುವ, ದುಡ್ಡು ಮಾಡುವ ಹುನ್ನಾರಕ್ಕೆ ಮಾಧ್ಯಮವೇಕೆ ಪಾಲುದಾರ ನಾಗಬೇಕು?

ಗಾಂಧೀಜಿ ಗುರಿ ಹಾಗೂ ಸಾಧನ ಕುರಿತು ಮತ್ತೆ ಮತ್ತೆ ಮಾತನಾಡುತ್ತಿದ್ದರು. ಗುರಿಯಷ್ಟೇ ಸಾಧನವೂ ಮುಖ್ಯ ಎನ್ನುತ್ತಿದ್ದರು. ಸುದ್ದಿ ಸ್ಫೋಟದ ಈ ಕಾಲದಲ್ಲಿ, ಜನರಿಗೆ ಸುದ್ದಿ ಕೊಡುವ ಧಾವಂತದಲ್ಲಿ ಎಂಥ ಸುದ್ದಿ ಕೊಡುತ್ತಿದ್ದೇವೆ ಎಂಬ 'ಸಾಧನ' ಮರೆತುಹೋಗುತ್ತಿದೆ. ಯಾರು ಮೊದಲು ಸುದ್ದಿ ಕೊಡುತ್ತಾರೆ ಎಂಬುದು ಮುಖ್ಯ ಆಗುತ್ತಿದೆಯೇ ಹೊರತು ಎಂಥ ಸುದ್ದಿ ಕೊಡುತ್ತಿದ್ದೇವೆ? ಅದು ಸತ್ಯವೇ, ನಿಖರವೇ ಎಂಬ ಸಂಗತಿಗಳು ತೆರೆಯ ಹಿಂದೆ ಸರಿಯುತ್ತಿವೆ. ಸುದ್ದಿಗೆ ಮೊದಲೇ ಬಾಳಿಕೆ ಕಡಿಮೆ. ಹೆಚ್ಚೆಂದರೆ ಅದು ಒಂದು ದಿನದ್ದು ಮಾತ್ರ. ಆದರೆ, 24 ಗಂಟೆಗಳ ಸುದ್ದಿ ವಾಹಿನಿಗಳು ಬಂದ ಮೇಲೆ ಇದರ ಆಯುಷ್ಯ ಇನ್ನೂ ಕಡಿಮೆ. ಈಗ ಅದು ಬರೀ ಆ 'ಕ್ಷಣದ್ದು' ಮಾತ್ರ.

ಠಾಕ್ರೆ ಅವರಿಗೆ ಸಿಟ್ಟು ಬಂದಿರುವುದು ಇದೇ ಕಾರಣಕ್ಕೆ. ಕ್ಷಣದ ಸುದ್ದಿಯ ಕೌತುಕಕ್ಕಾಗಿ ತಮ್ಮ ಖಾಸಗಿತನದ ಮೇಲೆ ದಾಳಿ ನಡೆಯುತ್ತಿದೆ ಎಂದು ಅವರಿಗೆ ಅನಿಸಿದ್ದರೆ ಅದು ತಪ್ಪಲ್ಲ. ಸುದ್ದಿ ಮಾಧ್ಯಮಗಳ ಮೇಲೆ ನಿಯಂತ್ರಣ ಹೇರುತ್ತೇವೆ

ಎಂದು ಯಾರಾದರೂ ಹೇಳಿದರೆ ನಾವೆಲ್ಲ 'ಹುಯ್' ಎಂದು ಅವರ ಮೇಲೆ ಬೀಳುತ್ತೇವೆ. ಅದು ಮುದ್ರಣ ಮಾಧ್ಯಮವೇ ಇರಲಿ, ಟಿ.ವಿ. ಮಾಧ್ಯಮವೇ ಇರಲಿ ನೆಲದ ಕಾನೂನಿಗಿಂತ ಅವು ಅತೀತವೇ? ಓಂಬುಡ್ಸ್‌ಮನ್ ಬೇಡ ಎನ್ನುವುದಾದರೆ ಪತ್ರಿಕಾ ಮಂಡಳಿಯಾದರೂ ಏಕೆ ಬೇಕು? ಎಲ್ಲಿಯೋ ನಿಯಂತ್ರಣ ಇರಬೇಕು ಎಂದು ತಾನೇ ಅದನ್ನು ಮಾಡಿದ್ದು. ನಾನೇನು ಓಂಬುಡ್ಸಮನ್ ಬೇಕು ಎನ್ನುವವ ಅಲ್ಲ. ಆದರೆ, ನಮ್ಮ ಅತಿರೇಕಗಳಿಗೆ ಯಾರು ನಿಯಂತ್ರಣ ಹಾಕಬೇಕು? ನಾವೇ ನಿಯಂತ್ರಣ ಹಾಕಿಕೊಳ್ಳುತ್ತೇವೆ ಎಂದು ಹೇಳುವವರು ಮೂಗುದಾರ ಇಲ್ಲದ ಗೂಳಿಯ ಹಾಗೆ ಹೂಂಕರಿಸಿದರೆ ಹಿಡಿಯುವವರು ಯಾರು? ಆತ್ಮಶೋಧನೆಗೆ ಇನ್ನೂ ಎಷ್ಟು ಕಾಲ ಬೇಕು?

■

# ವಯಸ್ಸು, ಒಗ್ಗಟ್ಟು, ದುಡ್ಡು ಸಾಟಿಯಲ್ಲದ ಕಾಂಗ್ರೆಸ್

ಮಾಗಿಯ ಚುಮು ಚುಮು ಚಳಿ ಕಳೆಯುತ್ತಿದ್ದಂತೆಯೇ ಒಡಲೊಳಗಿನ ಹಸಿರನ್ನೆಲ್ಲ ನಿಸರ್ಗ ಹೊರಗೆ ಉಕ್ಕಿಸುತ್ತಿದೆ. ಗಿಡಮರಗಳು ಒಂದೇ ಒಂದು ಹಳದಿ ಎಲೆ ರೆಂಬೆ ಕೊಂಬೆಗಳಲ್ಲಿ ಉಳಿಯದಂತೆ ಜಾಡಿಸಿ ನೆಲಕ್ಕೆ ಬೀಳಿಸಿವೆ. ಹಸಿರು ಗಿಡಗಳ ನಡುವೆ ಹಳದಿ, ನೀಲಿ, ಕೆಂಪು ಬಣ್ಣದ ಹೂಗಳೂ ಅರಳಿ ನಿಂತಿವೆ. ಬೇರು ಹಳೆಯದು ಚಿಗುರು ಮಾತ್ರ ಹೊಸದೇ. ಇದು ನಿಸರ್ಗದ ನಿತ್ಯೋತ್ಸವ.

ಕರ್ನಾಟಕದ ಕಾಂಗ್ರೆಸ್ ಪಕ್ಷದ ಕಚೇರಿಗೆ ಬನ್ನಿ. ಇದಕ್ಕೆ ತದ್ವಿರುದ್ಧ ಚಿತ್ರ ಕಾಣುತ್ತದೆ. ವೇದಿಕೆಯ ಮೇಲೆ ಕುಳಿತವರೆಲ್ಲ 'ಬಾಹತ್ತರ' ಆಸುಪಾಸಿನವರು. ಕೃಷ್ಣ, ಧರ್ಮಸಿಂಗ್, ಜಾಫರ್ ಷರೀಫ್, ಖರ್ಗೆ, ಮಾರ್ಗರೆಟ್, ಶಾಮನೂರು, ಮೊಯಿಲಿ, ದೇಶಪಾಂಡೆ.... ಅವರ ಪಕ್ಕದಲ್ಲಿ ಕಾಣದಂತೆ ಕುಳಿತವರು ಸಿದ್ಧರಾಮಯ್ಯ, ಎಚ್.ಕೆ. ಪಾಟೀಲ, ಡಿ.ಕೆ. ಶಿವಕುಮಾರ್, ಉಗ್ರಪ್ಪ, ಸೋಮಣ್ಣ ಇತ್ಯಾದಿ.

ಕಾಂಗ್ರೆಸ್ಸಿನಲ್ಲಿ ವಯಸ್ಸಾದವರು ಜರುಗುವಂತೆಯೇ ಕಾಣುವುದಿಲ್ಲ. ಖರ್ಗೆ ಅವರಿಗೆ ಮುಖ್ಯಮಂತ್ರಿ ಆಗುವ ಆಸೆ. ಲೋಕಸಭೆ ಚುನಾವಣೆಯಲ್ಲಿ ಗೆದ್ದರೆ ಕೇಂದ್ರ ಸಚಿವ ಪದವಿ

ಸಿಗುತ್ತದೆ ಎಂಬ ಇಂಗಿತ ಇದ್ದರೂ ಅವರಿಗೆ ಇಲ್ಲಿಯೇ 'ಒಂದು ಕೈ ನೋಡೋಣ' ಎನಿಸುತ್ತದೆ. ಧರ್ಮಸಿಂಗ್ ಅವರಿಗೆ ವಯಸ್ಸು ಒಂದು ಚಿಂತೆಯಲ್ಲ. 'ಹೇಗಿದ್ದರೂ ಮುಖ್ಯಮಂತ್ರಿ ಆಗಿದ್ದೇನೆ; ಈಗ ಬೀದರ್‌ನಲ್ಲಿ ನಾನೂ ಒಂದು ಕೈ ನೋಡಿಯೇ ಬಿಡುತ್ತೇನೆ' ಎನ್ನುತ್ತಾರೆ. ಜಾಫರ್ ಷರೀಫ್, ತಮಗೆ ಅಥವಾ ಮಕ್ಕಳಿಗೆ, ಅಳಿಯನಿಗೆ ಟಿಕೆಟ್‌ಗೆ ಅನುಮಾನ ಆದಾಗಲೆಲ್ಲ ದೇವೇಗೌಡರ ಜತೆ ಭೇಟಿ ಮಾಡುತ್ತಾರೆ. ಮಾಯಾವತಿ ಜತೆಗೆ ಕಾಣಿಸಿಕೊಳ್ಳುತ್ತಾರೆ. ಮಾರ್ಗರೆಟ್ ತನ್ನ ಮಗನಿಗೆ ಟಿಕೆಟ್ ಕೊಡಲಿಲ್ಲ ಎಂದು ಮುನಿಸಿಕೊಳ್ಳುತ್ತಾರೆ.

ಕುಳಿತರೆ ನಿಲ್ಲಲು ಆಗದ, ನಿಂತರೆ ಕುಳಿತುಕೊಳ್ಳಲು ಆಗದ ನಾಯಕರನ್ನು ಕಟ್ಟಿಕೊಂಡು ದೇಶಪಾಂಡೆಯವರು ಏಗಬೇಕಾಗಿದೆ. ಹಾಗೆಂದು ಅವರೇನೂ ತರುಣರಲ್ಲ. ಅವರಿಗೂ 60 ದಾಟಿದೆ. ಒಂದು ಪಕ್ಷಕ್ಕೆ, ಸಂಸ್ಥೆಗೆ ಅನುಭವ ಬಹುಮುಖ್ಯ. ಎಲ್ಲ ಹಿರಿಯರನ್ನು ಮನೆಗೆ ಕಳುಹಿಸಲು ಆಗದು. ಆದರೆ, ಅವರನ್ನು ಪಕ್ಕಕ್ಕೆ ಸರಿಸದೇ, ಹೊಸ ರಕ್ತ ತರಲೂ ಆಗದು. ಇದು ಒಂದು ದ್ವಂದ್ವ. ಹಾಗೆಂದು ಇದಕ್ಕೆ ಉತ್ತರವೇ ಇಲ್ಲ ಎಂದು ಅಲ್ಲ.

60ರ ದಶಕದ ಕೊನೆಯಲ್ಲಿ ಇಂದಿರಾ ಗಾಂಧಿ ಈ ಪ್ರಯೋಗ ಮಾಡಿದ್ದರು. ತಮ್ಮ ಸುತ್ತ ಇದ್ದ ಮುದುಕರನ್ನೆಲ್ಲ ಪಕ್ಕಕ್ಕೆ ಸರಿಸಲು ಅವರು ಸುಲಭದ ದಾರಿ ಕಂಡುಕೊಂಡರು. ನಿಜಲಿಂಗಪ್ಪ, ಮೊರಾರ್ಜಿ, ಎಸ್.ಕೆ. ಪಾಟೀಲ, ಕಾಮರಾಜ್ ಅಂಥ ದೊಡ್ಡ ದೊಡ್ಡ ನಾಯಕರೇ ಪಕ್ಕಕ್ಕೆ ಸರಿದು ಹೋಗುವಂತೆ ಇಂದಿರಾ ನೋಡಿಕೊಂಡರು. ಇಂದಿರಾ ಕಾಲದಲ್ಲಿ ದೇವರಾಜ ಅರಸು ಗರಡಿಯಲ್ಲಿ ಬೆಳೆದ ನಾಯಕರೆಲ್ಲ ಈಗಲೂ ಕರ್ನಾಟಕ ಕಾಂಗ್ರೆಸ್‌ನ ಮುಂಚೂಣಿ ನಾಯಕರು. ಖರ್ಗೆ, ಧರ್ಮಸಿಂಗ್ ಕನಿಷ್ಠ ಏಳೆಂಟು ಸಾರಿ ವಿಧಾನಸಭೆ ಪ್ರವೇಶಿಸಿದ್ದಾರೆ. ಪಕ್ಷಕ್ಕೆ ಅವರ ನಿಷ್ಠೆಯೂ ಪ್ರಶ್ನಾತೀತ. ಆ ನಿಷ್ಠೆಯೇ ಈಗ ಕಾಂಗ್ರೆಸ್ ಕೈ ಕಟ್ಟಿ ಹಾಕಿದೆ.

ಕರ್ನಾಟಕ ಈಗ ಲೋಕಸಭೆ ಚುನಾವಣೆಗೆ ಸಮರ ಸನ್ನದ್ಧವಾಗಿದೆ. ಎಲ್ಲರಿಗಿಂತ ಮೊದಲು 20 ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವ ಮೂಲಕ ಮುಖ್ಯಮಂತ್ರಿ ಯಡಿಯೂರಪ್ಪ ಕಾಂಗ್ರೆಸ್ ಪಕ್ಷಕ್ಕೆ ಸೆಡ್ಡು ಹೊಡೆದಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿಯೇ ಕಾಂಗ್ರೆಸ್ಸಿಗೆ ಮುಖಭಂಗವಾಗಿದೆ. ಈಚಿನ ವಿಧಾನಸಭಾ ಉಪ ಚುನಾವಣೆಯಲ್ಲಿಯಂತೂ ಅದರ ಪ್ರತಿಷ್ಠೆ ಮಣ್ಣು ಮುಕ್ಕಿದೆ. ಉದ್ದಕ್ಕೂ ಕಾಂಗ್ರೆಸ್ ಜತೆಗೇ ನಿಂತ ಕರ್ನಾಟಕದ ಮತದಾರನ ಒಲವು ಈಗ ಚಂಚಲ. ಅತಿ ದೊಡ್ಡ ಸಮುದಾಯಗಳಾದ ಲಿಂಗಾಯತರು, ಒಕ್ಕಲಿಗರು ಬೇರೆ ಬೇರೆ ಪಕ್ಷಗಳ ಕಡೆಗೆ ಒಡೆದು ಹೋಗಿದ್ದಾರೆ. ಆ ಮತಗಳು ಬಿಜೆಪಿ, ಜೆಡಿ(ಎಸ್) ಕಡೆಗೆ ಹೆಚ್ಚು ವಾಲುತ್ತವೆ ಎಂದು ಕಾಂಗ್ರೆಸ್ ನಾಯಕರೂ ಈಗ ಒಪ್ಪಿಕೊಳ್ಳುತ್ತಿದ್ದಾರೆ. ಉಳಿದ ದಲಿತ, ಮುಸ್ಲಿಂ, ಕುರುಬ, ಹಿಂದುಳಿದ ವರ್ಗಗಳ ಮತಗಳನ್ನು ಕ್ರೋಡೀಕರಿಸುವ ಕಡೆಗೇ ಈಗ ಕಾಂಗ್ರೆಸ್ ಚಿತ್ತ. ಈ ಛಿದ್ರ ಛಿದ್ರ ಗುಂಪುಗಳ ಮತ ಬ್ಯಾಂಕಿಗೂ ಯಡಿಯೂರಪ್ಪ ಕೈ ಹಾಕುವ ಲಕ್ಷಣ ಇದೆ. ಮತಮಾನ್ಯಗಳಿಗೆ ದುಡ್ಡು ಕೊಡುವಾಗ ಇಂಥ ಸಣ್ಣ ಪುಟ್ಟ ಮತಗಳನ್ನೂ ಅವರು ಬಿಟ್ಟಿಲ್ಲ. ಅದೆಲ್ಲ ಹೇಗೆ ಪರಿಣಾಮ ಬೀರುತ್ತದೆ ಎಂದು ಈಗಲೇ ಹೇಳುವುದು ಕಷ್ಟ.

ಇಂಥ ಸವಾಲಿನ ಕಾಲದಲ್ಲಿ ಕಾಂಗ್ರೆಸ್ಸಿನಲ್ಲಿ ತಲೆಮಾರಿನ ಮೊಡ್ಡ ಸಂಘರ್ಷ ಆರಂಭವಾಗಿದೆ. ತೂಕಡಿಸುವ ನಾಯಕರನ್ನೇ ಕಟ್ಟಿಕೊಂಡು ಚುನಾವಣೆ ಎದುರಿಸ ಬೇಕೇ? ಹೊಸ ರಕ್ತದವರನ್ನು ಮುಂದೆ ಮಾಡಿಕೊಂಡು ಹೋರಾಡಬೇಕೇ? ದೇಶಪಾಂಡೆ ಅವರ ಮುಂದಿರುವ ಪ್ರಶ್ನೆ ಇದು. ಪ್ರಶ್ನೆಗೆ ಅವರಲ್ಲೂ ಉತ್ತರ ಇದ್ದಂತಿಲ್ಲ. ಎದುರಾಳಿ ಬಿಜೆಪಿಯಲ್ಲಿ ಯಡಿಯೂರಪ್ಪ ಅವರೊಬ್ಬರೇ 60 ದಾಟಿದವರು. ಉಳಿದವರೆಲ್ಲ ಕಾಂಗ್ರೆಸ್‌ನ ಘಟಾನುಘಟಿ ನಾಯಕರ ಹಾಗೆ ವಯಸ್ಸಾದವರಲ್ಲ. ಜೆ.ಡಿ(ಎಸ್) ಪಾಳೆಯದಲ್ಲಿ ದೇವೇಗೌಡರೊಬ್ಬರೇ 70 ದಾಟಿದವರು. ಮಂಜುನಾಥ್ ಅವರಂಥ ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರೆಲ್ಲ ಯುವಕರೇ. ಕುಮಾರಸ್ವಾಮಿ ಹಗಲೂ ರಾತ್ರಿ ರಾಜ್ಯ ಸುತ್ತಬಲ್ಲರು. ಇದು ಆ ಅರ್ಥದಲ್ಲಿ ಕಾಂಗ್ರೆಸ್ಸಿಗೆ ಸಾಟಿಯಿಲ್ಲದ ಸಮರ.

ಕಾಂಗ್ರೆಸ್ಸಿನಲ್ಲಿ ಹಳಬರ ಸಮಸ್ಯೆ ಎಂದರೆ ಚಿಕ್ಕಪುಟ್ಟದಕ್ಕೆಲ್ಲ ಸೆಟೆದುಕೊಳ್ಳುವುದು. ಎಸ್. ಎಂ. ಕೃಷ್ಣ ಅವರಿಗೆ ಅಂಬರೀಷ್ ಕಂಡರೆ ಆಗದು. ಅಂಬರೀಷ್ ಅವರಿಗೆ ಕೃಷ ಎಂದರೆ 'ನಾಗರ ಹಾವಿನ' ದ್ವೇಷ. ಈ ದ್ವೇಷ ಹೇಗೆ ಪರ್ಯವಸಾನವಾದೀತು ಎಂಬುದು ಈ ಸಾರಿಯ ಚುನಾವಣೆಯ ಕುತೂಹಲ. ಅವರು ಪಕ್ಷ ಬಿಡುತ್ತಾರೆ ಎಂಬ ವರದಿಗಳೂ ಈಗಾಗಲೇ ಚಾಲ್ತಿಗೆ ಬಂದಿವೆ. ಷರೀಫ್ ಸಾಹೇಬರಿಗೆ ಇಬ್ರಾಹಿಂ ಕಂಡರೆ ಬೇಸರ. ಮಾರ್ಗರೆಟ್ ಅವರಿಗೆ ದೇಶಪಾಂಡೆ ಅವರ ಮೇಲೆ ವಿಶ್ವಾಸವಿಲ್ಲ. ಖರ್ಗೆ ಮತ್ತು ಸಿದ್ಧರಾಮಯ್ಯ ಸಂಬಂಧ ಈಗ ಹೇಗಿರಬಹುದು ಎಂದು ಊಹಿಸುವುದೇ ಬೇಡ. ಸಿದ್ದರಾಮಯ್ಯ ಕೂಡ ಇದಕ್ಕೆ ಹೊರತಲ್ಲ. ಅಧಿಕಾರ ಸಿಗುವವರೆಗೆ ಅವರಿಗೆ ಮದುವೆ-ಮುಂಜಿವೆಗಳು, ಊಟಿ, ಗೋವಾಗಳೇ ಹೆಚ್ಚು ಹತ್ತಿರವಾಗಿದ್ದುವು. ಈಗ ಸೊಂಟ ಗಟ್ಟಿ ಮಾಡಿಕೊಳ್ಳುತ್ತಿದ್ದಾರೆ ಎಂದು ಸುದ್ದಿ. ಹೀಗೆ ಒಂದೊಂದು ಕಡೆ ಮುಖ ಮಾಡಿ ನಿಂತ ನಾಯಕರನ್ನೆಲ್ಲ ಒಂದೇ ವೇದಿಕೆಯ ಮೇಲೆ ತಂದು, ಅದು ಕುಸಿಯದಂತೆಯೂ ನೋಡಿಕೊಂಡು, ಕೈ ಜೋಡಿಸಿ, ಎತ್ತಿ ಹಿಡಿದು ನಿಲ್ಲಿಸುವುದು, ನಗಿಸುವುದು ಸುಲಭದ ಕೆಲಸವೇನೂ ಅಲ್ಲ. ಮತದಾರರಿಗೂ ಸ್ವಲ್ಪ ಬುದ್ಧಿ ಇದೆಯಲ್ಲ?

ಹೇಗಾದರೂ ಮಾಡಿ ಜತೆಗೂಡಿಸಿದರೂ ಥೈಲಿ ಥೈಲಿ ಹಣ ಎಲ್ಲಿಂದ ತರುವುದು ಎಂಬ ಚಿಂತೆಯೂ ರಾಜ್ಯ ಕಾಂಗ್ರೆಸ್ ನಾಯಕರನ್ನು ಕಾಡುತ್ತಿದೆ. ಈ ಹಿರಿಯ ನಾಯಕರೆಲ್ಲ ಕೈಯಿಂದ ಪುಡಿಗಾಸು ಬಿಚ್ಚದವರು. ಹೈಕಮಾಂಡ್‌ನ ಟ್ರಂಕ್‌ನಲ್ಲಿ ಇರುವ ದುಡ್ಡೇ ಬರಲಿ ಎನ್ನುವವರು. ಹೈಕಮಾಂಡಿನ ಕಷ್ಟ ಬೇರೆ. ಅದು ದೇಶಕ್ಕೆಲ್ಲ ದುಡ್ಡು ಕೊಡಬೇಕು. ಅದರಲ್ಲಿ ಕರ್ನಾಟಕಕ್ಕೆ ಬರುವುದು ಎಷ್ಟು ಎಂದು ಗೊತ್ತಿಲ್ಲ. ಹೈಕಮಾಂಡ್‌ನ ಇನ್ನೊಂದು ಚಾಳಿ ಎಂದರೆ ಅದು ಬೆಂಗಳೂರಿನ ಅವೆನ್ಯೂ ರಸ್ತೆ ಇದ್ದಂತೆ, ಏನಿದ್ದರೂ ದುಡ್ಡಿನ ಚಲನೆಗೆ 'ಒಂದೇ ಮುಖ; ಅದು ಮೇಲುಮುಖ' ಎಂದು ಅದು ತಿಳಿದಂತಿದೆ! 'ಕಳೆದ ವಿಧಾನಸಭಾ ಉಪ ಚುನಾವಣೆಯಲ್ಲಿ ಒಬ್ಬೊಬ್ಬ ಅಭ್ಯರ್ಥಿಗೆ ಹತ್ತೋ ಇಪ್ಪತ್ತೋ ಲಕ್ಷ ದುಡ್ಡು ಬಂದಿತ್ತು. ಬಿಜೆಪಿ, ಜೆ.ಡಿ (ಎಸ್) ಅಭ್ಯರ್ಥಿಗಳು ಮಾಡಿದ ಖರ್ಚಿಗೆ ಇದಾವ ಲೆಕ್ಕ?' ಎಂದು ಕಾಂಗ್ರೆಸ್ ನಾಯಕರು ಕೈ ಹಿಸುಕಿಕೊಳ್ಳುತ್ತಾರೆ. ಈ ಸಾರಿಯೂ ಅದೇ ಚಿಂತೆ. ಒಂದು ಲೋಕಸಭಾ ಕ್ಷೇತ್ರಕ್ಕೆ ಕನಿಷ್ಠ

16 ಕೋಟಿ ರೂಪಾಯಿ ಬೇಕು ಎಂಬ ಅಂದಾಜು ಇರುವಾಗ ಕಾಂಗ್ರೆಸ್ ನಾಯಕರ ಹಣೆಯ ಮೇಲಿನ ಗೆರೆಗಳ ಲೆಕ್ಕ ಹಾಕುವುದು ಕಷ್ಟವಲ್ಲ.

ಕಾಂಗ್ರೆಸ್‌ನವರು ಕಾಸು ಬಿಚ್ಚುವುದಿಲ್ಲ ಎಂದೇ ಉತ್ತರ ಕರ್ನಾಟಕದ ನಾಯಕ ರೊಬ್ಬರು ಬೇರೆ ಪಕ್ಷಕ್ಕೆ ವಲಸೆ ಹೋದರು. ಗೆದ್ದರೂ ಸೈ, ಸೋತರೂ ಚಿಂತೆಯಿಲ್ಲ ಎಂಬ ಹವಣು ಅವರದು. ವಯಸ್ಸು, ಬಗ್ಗಟ್ಟು, ದುಡ್ಡು ಯಾವುದರಲ್ಲಿಯೂ ಸಾಟಿಯಲ್ಲದ ಕಾಂಗ್ರೆಸ್ ಪಕ್ಷದ ಕಥೆಯೇನು ಎಂದು ಸೋಮಣ್ಣ ಅವರಂಥ ಎರಡನೇ ಸಾಲಿನ ನಾಯಕರನ್ನು ಕೇಳಿದರೆ 'ದೇವರೇ ಕಾಪಾಡಬೇಕು' ಎಂದು ತಲೆ ಮೇಲೆ ಕೈ ಇಟ್ಟುಕೊಳ್ಳುತ್ತಾರೆ. ಹೋಗಲಿ ದೇವರಾದರೂ ಕಾಪಾಡಿಯಾನೇ?

■

# ಬಾಬಾಗೌಡರೇ ಹೀಗೇಕೆ ಮಾಡಿದಿರಿ?

ಚುನಾವಣೆ ಬಂದರೆ ಸಾಕು ಬೇಲಿ ಮೇಲೆ ಕುಳಿತವರಿಗೆ ಹಬ್ಬ. ಈ ಕಡೆಯಿಂದ ಆ ಕಡೆಗೆ, ಆ ಕಡೆಯಿಂದ ಈ ಕಡೆಗೆ ಕೋತಿಯಂಥ ನೆಗೆತ ಇದ್ದುದೇ. ಅದಕ್ಕೆ 'ಪಕ್ಷದ ಸಿದ್ಧಾಂತದಲ್ಲಿ ನಂಬಿಕೆ' ಎಂಬ ನೆಪಗಳೂ ಜತೆಯಾಗುತ್ತವೆ. ಅದನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ ಎಂಬುದು ಬೇರೆ ಮಾತು. ಬಹುಶಃ ಚುನಾವಣೆಯಲ್ಲಿ ಇದೆಲ್ಲ ಸಾಮಾನ್ಯ ಎಂಬ ಅನಿಸಿಕೆಯಿಂದಲೇ ಬಾಬಾಗೌಡ ಪಾಟೀಲರು ಮೊನ್ನೆ ಕಾಂಗ್ರೆಸ್ ಸೇರಿದ್ದೂ ದೊಡ್ಡ ಸುದ್ದಿ ಅನಿಸಲಿಲ್ಲ.

ಆದರೆ, ಬಾಬಾಗೌಡರು ಒಂದು ಕಾಲದಲ್ಲಿ ಇಡೀ ಕರ್ನಾಟಕದ ರೈತ ಸಮುದಾಯವನ್ನು ತಮ್ಮ ಭಾಷಣದ ಮೋಡಿಯಲ್ಲಿ, ನಾಯಕತ್ವದ ಹಿಡಿತದಲ್ಲಿ ಇಟ್ಟುಕೊಂಡಿದ್ದ ದೊಡ್ಡ ನಾಯಕ ಆಗಿದ್ದರು. ಎಚ್.ಎಸ್. ರುದ್ರಪ್ಪ, ನಂಜುಂಡ ಸ್ವಾಮಿ, ಎನ್.ಡಿ. ಸುಂದರೇಶ್ ಸಾಲಿನಲ್ಲಿ ಬಾಬಾಗೌಡರಿಗೂ ಜಾಗವಿತ್ತು. ಬೆಳಗಾವಿ ಜಿಲ್ಲೆ ಕಿತ್ತೂರು ಬಳಿಯ ಚಿಕ್ಕಬಾಗೇವಾಡಿ ಎಂಬ ತೀರಾ ಪುಟ್ಟ ಊರಿನ ಬಾಬಾಗೌಡರು ರೈತ ಸಂಘದಲ್ಲಿ ಮುಂಚೂಣಿ ನಾಯಕರಾಗಿ

ಬೆಳೆದು ನಿಂತುದು ಒಂದು ಅಪರೂಪದ ದೃಷ್ಟಾಂತ. ಬೆಳಗಾವಿ ಜಿಲ್ಲೆಯಲ್ಲಿ ಮೊದಲು ರೈತ ಸಂಘ ಕಟ್ಟಿದವರು ಕುಂದರನಾಡ ಪಾಟೀಲ ಎಂಬ ಲೇಖಕ. ಈಗ ಅವರು ಇಲ್ಲ.

ನರಗುಂದ-ನವಲಗುಂದ ಭಾಗದ ರೈತರು ತಮ್ಮ ಬೆಳೆಗೆ ನ್ಯಾಯವಾದ ಬೆಲೆ ಕೊಡಬೇಕು, ಮಲಪ್ರಭಾ ನೀರಾವರಿ ಅಭಿವೃದ್ಧಿ ಶುಲ್ಕ ರದ್ದು ಮಾಡಬೇಕು ಎಂದು ಆಗ್ರಹಿಸಿ 1979-80ರ ದಶಕದಲ್ಲಿ ಭಾರಿ ಹೋರಾಟವನ್ನೇ ಮಾಡಿದರು. ಆ ರೈತರ ಮೇಲೆ ಆಗಿನ ಗುಂಡೂರಾವ್ ಸರ್ಕಾರ ಗೋಲಿಬಾರ್ ಮಾಡಿ 21 ಮಂದಿ ರೈತರು ಸತ್ತ ನಂತರ ರೈತ ಸಂಘಟನೆಗೆ ಹೊಸ ಶಕ್ತಿ ಬಂತು. ಅದು ಇಡೀ ರಾಜ್ಯವನ್ನು ವ್ಯಾಪಿಸಿತು. ಗುಂಡೂರಾವ್ ಸರ್ಕಾರ 1983 ರಲ್ಲಿ ಬೀಳುವುದಕ್ಕಿಂತ ಮುಂಚೆ ಹಾಗೂ ನಂತರ ಬೆಂಗಳೂರಿನ ಕಬ್ಬನ್‌ಪಾರ್ಕಿನಲ್ಲಿ ನಡೆದ ರ್‍ಯಾಲಿಗಳಲ್ಲಿ ಭಾಗವಹಿಸಿದ ರೈತರ ಸಂಖ್ಯೆಯನ್ನು ನೋಡಿದವರಿಗೆ ಇದು ಗೊತ್ತಿರುತ್ತದೆ. ರ್‍ಯಾಲಿಯಲ್ಲಿ ಮಾತನಾಡಿದವರ ಭಾಷಣ ಎಷ್ಟು ಉಗ್ರವಾಗಿರುತ್ತಿದ್ದುವು ಎಂಬುದು ಕೆಲವರ ನೆನಪಿನಲ್ಲಿಯಾದರೂ ಇರಬಹುದು. ಅದು ಒಂದು ದೊಡ್ಡ ಆಂದೋಲನ. ಯಾವುದಾದರೂ ಹಳ್ಳಿಗೆ ಕಂದಾಯ ಅಧಿಕಾರಿಗಳು, ಬ್ಯಾಂಕಿನ ಅಧಿಕಾರಿಗಳು ಆ ಊರಿನ ರೈತ ಮುಖಂಡರ ಅನುಮತಿ ಕೇಳದೇ ಬರುವುದು ಸಾಧ್ಯವೇ ಇರಲಿಲ್ಲ. ರೈತರಲ್ಲಿ ಅಂಥ ಆತ್ಮವಿಶ್ವಾಸ, ಸ್ವಾಭಿಮಾನ ತುಂಬಿದ ಚಳವಳಿ ಅದು.

ಕುಂದರನಾಡ ಪಾಟೀಲರಿಗೂ ನಂಜುಂಡಸ್ವಾಮಿಯವರಿಗೂ ಸಂಬಂಧ ಹಳಸಿದ ಕಾಲಘಟ್ಟದಲ್ಲಿ ಬಾಬಾಗೌಡರು ವೇದಿಕೆಯ ಮುಂದೆ ಬಂದರು. ಬಾಬಾಗೌಡರು ಅಲ್ಪಕಾಲದಲ್ಲಿಯೇ ಎಷ್ಟು ಜನಪ್ರಿಯರಾದರು ಎಂದರೆ 1989ರಲ್ಲಿ ಬೆಳಗಾವಿ ಜಿಲ್ಲೆ ಕಿತ್ತೂರು ಮತ್ತು ಧಾರವಾಡ ಗ್ರಾಮಾಂತರ ಕ್ಷೇತ್ರಗಳೆರಡರಿಂದಲೂ ಗೆದ್ದು ವಿಧಾನಸಭೆ ಪ್ರವೇಶಿಸಿದರು. ಎರಡನೇ ಕ್ಷೇತ್ರವನ್ನು ನಂಜುಂಡಸ್ವಾಮಿ ಅವರಿಗೆ ಬಿಟ್ಟುಕೊಟ್ಟು ಉಪಚುನಾವಣೆಯಲ್ಲಿ ಅವರೂ ಗೆಲ್ಲುವಂತೆ ನೋಡಿಕೊಂಡರು. ವಿಪರ್ಯಾಸ ಎಂದರೆ ಈ ಇಬ್ಬರೂ ರೈತ ನಾಯಕರು ಮತ್ತೆ ವಿಧಾನಸಭೆ ಪ್ರವೇಶಿಸಲು ಆಗಲೇ ಇಲ್ಲ! ಈ ವಿಜಯದ ಸಂಭ್ರಮದಲ್ಲಿ ದೊಡ್ಡ ರಾಜಕೀಯ ಶಕ್ತಿಯಾಗಿ ರೈತ ಸಂಘ ಬೆಳೆಯುವುದನ್ನು ಜನರು ಒಪ್ಪಲಿಲ್ಲ. ಗುಂಡೂರಾವ್ ಸರ್ಕಾರ ಪತನಾನಂತರ ರಾಮಕೃಷ್ಣ ಹೆಗಡೆ ಸರ್ಕಾರದ ಕಾಲದಲ್ಲಿ ಎಲ್ಲ ಜನಪರ ಸಂಘಟನೆಗಳು ನಿರ್ವೀರ್ಯವಾದುವು. ಅದಕ್ಕೆ ರೈತ ಸಂಘವೂ ಹೊರತಾಗಿರಲಿಲ್ಲ. ಬಹುಸಂಖ್ಯಾತ ಹಾಗೂ ಪ್ರಬಲ ಲಿಂಗಾಯತ ಮತ್ತು ಒಕ್ಕಲಿಗ ರೈತರ ಬೆಂಬಲದಿಂದಲೇ ಬೆಳೆದಿದ್ದ ರೈತ ಸಂಘಕ್ಕೆ ಹಿಂದುಳಿದ, ರೈತ ಕೂಲಿಕಾರರ ಬೆಂಬಲ ಇರಲಿಲ್ಲ. ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯಗಳು ರೈತ ಸಂಘದ ರಾಜಕೀಯ ಪ್ರವೇಶಕ್ಕಿಂತ ಹೆಗಡೆ-ದೇವೇಗೌಡ ನೇತೃತ್ವದ ರಾಜಕೀಯವನ್ನೇ ನೆಚ್ಚಿಕೊಂಡುವು.

ಇತ್ತ ನಂಜುಂಡಸ್ವಾಮಿ ತಮ್ಮ ಬೆಂಬಲಿಗರ ಜತೆಗೆ ಕೆಂಟುಕಿ ಚಿಕನ್ ಮಳಿಗೆ ಮೇಲೆ ದಾಳಿ ಮಾಡಿದಾಗ ರೈತ ಚಳವಳಿ ದಿಕ್ಕು ತಪ್ಪಿತು ಎಂದು ಭಾವಿಸಿದ ಬಾಬಾಗೌಡರು, ರೈತ ಸಂಘ ಬಿಟ್ಟು ಬಿಜೆಪಿ ಸೇರಿ 1998ರಲ್ಲಿ ಲೋಕಸಭೆ ಚುನಾವಣೆ ಯಲ್ಲಿ ಸ್ಪರ್ಧಿಸಿ ಗೆದ್ದು, ಕೇಂದ್ರದಲ್ಲಿ ಮಂತ್ರಿಯೂ ಆದರು. ಮೊದಲ ಬಾರಿಯೇ ಲೋಕಸಭೆ

ಪ್ರವೇಶಿಸಿದ್ದ ಗೌಡರಿಗೆ ಆಗಿನ ಪ್ರಧಾನಿ ವಾಜಪೇಯಿ ಗ್ರಾಮೀಣಾಭಿವೃದ್ಧಿ ಯಂಥ ಮಹತ್ವದ ಖಾತೆಯನ್ನೂ ಕೊಟ್ಟಿದ್ದರು. ಗೌಡರು, ಗ್ರಾಮೀಣ ಹೊಲಗಳಿಗೆ ರಸ್ತೆ ಸಂಪರ್ಕ ಕಲ್ಪಿಸುವ ಅಪರೂಪದ ಯೋಜನೆ ರೂಪಿಸಿ ಜಾರಿಗೂ ತಂದಿದ್ದರು. ಅದಕ್ಕಿಂತ ಮುಖ್ಯವಾದುದು ಎಂದರೆ ತಮ್ಮ ಆಸ್ತಿಯ ವಿವರಗಳನ್ನು ಬೆಳಗಾವಿಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಕಟಿಸಿದ್ದರು. ಕೇಂದ್ರ ಮಂತ್ರಿಯೊಬ್ಬರು ಹೀಗೆ ಮಾಡಿದ್ದು ವಿರಳ ಇತಿಹಾಸ; ಇಲ್ಲವೇ ಎಲ್ಲ ಎಂದರೂ ಆದೀತು. ಅದಕ್ಕಾಗಿ ಅವರು ಅಡ್ವಾಣಿಯವರ ಕೆಂಗಣ್ಣಿಗೂ ಗುರಿಯಾಗಿದ್ದರು! ಆದರೆ 99ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಗೌಡರು ಬಿಜೆಪಿ ಅಭ್ಯರ್ಥಿಯಾಗಿ ನಿಂತರೂ ಸೋತು ಬಿಟ್ಟರು. ಮುಂದೆ ಬಿಜೆಪಿ ಜತೆಗಿನ ಅವರ ಮಧುಚಂದ್ರವೂ ಉಳಿಯಲಿಲ್ಲ. ಅನಂತಕುಮಾರ್, ಯಡಿಯೂರಪ್ಪ ಜತೆಗಿನ ವಿರಸ ಅವರನ್ನು ಬಿಜೆಪಿ ತೊರೆಯುವಂತೆ ಮಾಡಿತು.

ಕಾಲಾಂತರದಲ್ಲಿ ಜೆ.ಡಿ.(ಎಸ್) ಅಪ್ಪಿಕೊಂಡ ಬಾಬಾಗೌಡರು, 'ದೇವೇಗೌಡರ ಕುಟುಂಬದ ವಚನ ಭ್ರಷ್ಟತೆ' ಪ್ರತಿಭಟಿಸಿ ಆ ಪಕ್ಷವನ್ನೂ ತೊರೆದರು. ಅಲ್ಲಿ ಸ್ವಾಭಿಮಾನಕ್ಕೆ ಅವಕಾಶವಿಲ್ಲ ಎಂದೇನೋ ಅವರು ಕಾರಣ ನೀಡಿದ್ದಾರೆ. ಈಗ ಕಾಂಗ್ರೆಸ್ ಸೇರಿದ್ದಾರೆ. ಬಾಬಾಗೌಡರು ಹಸಿರು ಟವೆಲ್ ಹಾಕಿಕೊಂಡೇ ಕಾಂಗ್ರೆಸ್ ಸೇರಿದ ಮೊದಲ ರೈತ ನಾಯಕ. ತಮಗೆ ರಾಜಕೀಯ ಆಕಾಂಕ್ಷೆಯಿಲ್ಲ, ಲೋಕಸಭೆಗೆ ಸ್ಪರ್ಧಿಸುವುದಿಲ್ಲ ಎಂದೆಲ್ಲ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ದೇಶಪಾಂಡೆ ಅವರಿಗೆ ಬಾಬಾ ಗೌಡರು ಹೇಳಿದ್ದಾರೆ. ದೇಶಪಾಂಡೆಯವರು ಈಗ ಬಾಬಾಗೌಡರನ್ನು ನೆನಪಿಸಿಕೊಂಡು ಕಾಂಗ್ರೆಸ್ಸಿಗೆ ಕರೆತಂದ ಕಾರಣ ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಪ್ರಸಕ್ತ ಲೋಕಸಭೆ ಚುನಾವಣೆಯಲ್ಲಿ ಉತ್ತರ ಕನ್ನಡ ಕ್ಷೇತ್ರದಿಂದ ದೇಶಪಾಂಡೆ ಅವರ ಪುತ್ರ ಪ್ರಶಾಂತ್‌ಗೆ ಟಿಕೆಟ್ ಸಿಗುವ ಸಾಧ್ಯತೆ ಇದೆ. ಬೆಳಗಾವಿ ಜಿಲ್ಲೆಯ ಕಿತ್ತೂರು, ಖಾನಾಪುರಗಳು ಈ ಕ್ಷೇತ್ರಕ್ಕೆ ಸೇರಿವೆ. ಈ ಎರಡೂ ಕ್ಷೇತ್ರಗಳಲ್ಲಿ ಬಾಬಾಗೌಡರಿಗೆ ಈಗಲೂ ಪ್ರಭಾವ ಇದ್ದೇ ಇದೆ. ಅದರ ಅನುಕೂಲ ತಮ್ಮ ಮಗನಿಗೆ ಆಗಲಿ ಎಂಬುದು ದೇಶಪಾಂಡೆಯವರ ಲೆಕ್ಕಾಚಾರ.

ಇದು ಬಾಬಾಗೌಡರಿಗೆ ಗೊತ್ತಿಲ್ಲ ಎಂದು ಅಲ್ಲ. ಆದರೆ, ಅವರು ರೈತ ಸಂಘದ ಮುಂಚೂಣಿಗೆ ಬಂದುದು ಕಾಂಗ್ರೆಸ್ ನೀತಿಯ ವಿರುದ್ಧದ ಹೋರಾಟ ದಿಂದ. ನರಗುಂದ–ನವಲಗುಂದಗಳಲ್ಲಿ ರೈತರು ಪ್ರತಿಭಟನೆ ಮಾಡಿದ್ದೇ ಆಗಿನ ಕಾಂಗ್ರೆಸ್ ಸರ್ಕಾರದ ದಮನಕಾರಿ ನೀತಿಯ ವಿರುದ್ಧ. ನಂತರ ಬಂದ ಅನೇಕ ಸರ್ಕಾರಗಳು ರೈತರಿಗೆ ಬಡ್ಡಿ ಮನ್ನಾ, ಸಾಲ ಮನ್ನಾ, ಉಚಿತ ವಿದ್ಯುತ್ ಮುಂತಾಗಿ 'ಪರಿಹಾರ'ಗಳನ್ನು ಘೋಷಿಸಿದ್ದರೂ ಒಟ್ಟಾರೆ ರೈತನ ಬದುಕು ಸುಖಕರವಾಗಿಯೇನೂ ಇಲ್ಲ. ಹಾಗೆ ನೋಡಿದರೆ ಆತನ ಸಮಸ್ಯೆಗಳು ಇನ್ನಷ್ಟು ಉಲ್ಬಣಗೊಂಡಿವೆ. ಬಹುಶಃ ಈ ಕಾರಣಕ್ಕಾಗಿಯೇ ರೈತರ ಆತ್ಮಹತ್ಯೆ ಸರಣಿಯೂ ನಿಂತಿಲ್ಲ. ಬಾಬಾಗೌಡರು ಕಾಂಗ್ರೆಸ್ ಸೇರುವಾಗ ಹೇಳಿದ ಹಾಗೆಯೇ ಅವರಿಗೆ ರಾಜಕೀಯ ಆಕಾಂಕ್ಷೆಗಳೇನೂ ಇಲ್ಲ. (ಅವರಿಗೆ ಕೃಷಿ ಅಧ್ಯಯನ ಸಮಿತಿಯ ಅಧ್ಯಕ್ಷ ಹುದ್ದೆ ಸಿಗಬಹುದೇನೋ. ಅಂಥ ಭರವಸೆಯನ್ನು ದೇಶಪಾಂಡೆ ಕೊಟ್ಟಿದ್ದಾರೆ). ಹಾಗಿದ್ದರೆ ರೈತ ಸಂಘಕ್ಕೇ ಮತ್ತೆ

ಬರಬಹುದಿತ್ತಲ್ಲ? ಛಿದ್ರ-ಛಿದ್ರವಾಗಿ ಹೋಗಿರುವ ಸಂಘವನ್ನು ಒಂದುಗೂಡಿಸ ಬಹುದಿತ್ತಲ್ಲ? ಇದು ಸರಳ ಪ್ರಶ್ನೆಯಲ್ಲ, ಅದಕ್ಕೆ ಪರಿಹಾರವೂ ಸುಲಭವಲ್ಲ. ಒಂದು ಸಂಘಟನೆ ಹುಟ್ಟುವುದಕ್ಕೆ, ನಾಶವಾಗುವುದಕ್ಕೆ, ಮತ್ತೆ ಹುಟ್ಟುವುದಕ್ಕೆ ಐತಿಹಾಸಿಕ ಕಾರಣಗಳು ಇರುತ್ತವೆ. ಇದೂ ಬಾಬಾಗೌಡರಿಗೆ ಗೊತ್ತಿರಬಹುದು. ಆದರೆ, ಬಿಜೆಪಿಯಲ್ಲಿ, ಜೆ.ಡಿ(ಎಸ್)ನಲ್ಲಿ ಸ್ವಾಭಿಮಾನಕ್ಕೆ ಇಲ್ಲದ ಬೆಲೆ ಕಾಂಗ್ರೆಸ್ಸಿನಲ್ಲಿ ಇದ್ದೀತೇ? ಆಗ ಎಲ್ಲಿಗೆ ಹೋಗುತ್ತೀರಿ ಬಾಬಾಗೌಡರೇ?

# ಹಾದಿಯಲ್ಲಿ ಹೋರಟ ಮಾರಿಯನ್ನು ಮನೆಗೆ ಕರೆದು....

ಹಾದಿಯಲ್ಲಿ ಹೋಗುವ ಮಾರಿಯನ್ನು ಯಾರಾದರೂ ಮನೆಗೆ ಕರೆದು ಕೊಳ್ಳುತ್ತಾರೆಯೇ? ಬೆಳಗಾವಿ ಸಂಸದ ಸುರೇಶ ಅಂಗಡಿಯವರನ್ನು ಕೇಳಿ. ಅವರು ಅದೇ ಕೆಲಸ ಮಾಡಿದ್ದಾರೆ. ಅಂಗಡಿ ಅಮಾಯಕರಲ್ಲ. ಕಳೆದ ಐದು ವರ್ಷಗಳಿಂದ ಅವರು ಲೋಕಸಭಾ ಸದಸ್ಯರು. ಜಿಲ್ಲೆಯ ದೊಡ್ಡ ವರ್ತಕ. ಹಾದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಎಳೆದುಕೊಂಡರೆ ಏನಾದೀತು ಎಂಬ ಅರಿವು ಅವರಿಗೆ ಇರಬೇಕಿತ್ತು. ಮಹಾರಾಷ್ಟ್ರ ಏಕೀಕರಣ ಸಮಿತಿಯ ಗುಂಪಿನ ಜತೆಗೆ ಹೋಗಿ ಭಗವಾ ಝುಂಡಾ ಹಿಡಿದಾಗ ಈ ಅರಿವು ಅವರಲ್ಲಿ ಇರಲಿಲ್ಲ. ಇದ್ದುದು, ಹೇಗಾದರೂ ಮಾಡಿ ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಈ ಸಾರಿಯೂ ಗೆದ್ದು ಬಿಡಬೇಕು ಎಂಬ ರಾಜಕೀಯ ಲೆಕ್ಕಾಚಾರ ಮಾತ್ರ. ಬೆಳಗಾವಿ ಜಿಲ್ಲೆಯ ವಿದ್ಯಮಾನಗಳನ್ನು ಬಲ್ಲ ಯಾರಿಗೇ ಆದರೂ ಈ ಕೇಸರಿ ಝುಂಡಾ ಎಂಥ ಕೆಂಡ ಎಂದು ಗೊತ್ತಿದ್ದೇ ಇರುತ್ತದೆ. ಕೆಂಡ ಹಿಡಿದರೆ ಕೈ ಸುಟ್ಟೇ ಸುಡುತ್ತದೆ. ಆದರೆ, ಕೆಂಡವನ್ನು ಹಿಡಿದು ನೋಡಿಯೇ ಅದು ಸುಡುತ್ತದೆ ಎಂದು ತಿಳಿದುಕೊಳ್ಳಬೇಕೇ?

ಬೆಳಗಾವಿಯ ವಿವೇಕಾನಂದ ಮಾರ್ಗದಲ್ಲಿನ ಮಹಾನಗರಪಾಲಿಕೆಯ ಹಳೆಯ ಕಟ್ಟಡದ ಮೇಲೆ ರಾಷ್ಟ್ರಧ್ವಜದ ಜತೆಗೇ ಕಳೆದ ಅರ್ಧ ಶತಮಾನದಿಂದ ಹಾರಾಡುತ್ತಿದ್ದ ಭಗವಾ ಝುಂಡಾ ತೆಗೆಸಿ ಹಾಕಲು ನಡೆದ ಪ್ರಯತ್ನಗಳಿಗೆ ದೊಡ್ಡ ಇತಿಹಾಸವೇ ಇದೆ. ಆದರೆ 50ರ ದಶಕದಲ್ಲಿ ಈಗಿನ ಪಾಲಿಕೆ ಹಾಗೂ ಆಗಿನ ನಗರ ಸಭೆಯ ಕಟ್ಟಡದ ಮೇಲೆ ಭಗವಾ ಝುಂಡಾ ಹಾರಿದ್ದಕ್ಕೂ ಇತಿಹಾಸ ಇದೆ. 1958ರ ಜುಲೈ 3ರಂದು ನಡೆದ ಆಗಿನ ನಗರಸಭೆಯ ತಿಂಗಳ ಸಭೆಯಲ್ಲಿ ಭಗವಾ ಝುಂಡಾ ಹಾರಿಸಲು ನಿರ್ಣಯ ಅಂಗೀಕರಿಸಲಾಗಿತ್ತು. ಆಗ ನಗರಸಭೆಯ ಸದಸ್ಯ ಬಲ 37. ಆ ಪೈಕಿ 31 ಮಂದಿ ಭಗವಾ ಝುಂಡಾ ಹಾರಿಸುವ ಪರವಾಗಿ ಕೈ ಎತ್ತಿದರೆ ಆರು ಜನ ವಿರೋಧ ಮಾಡಿದ್ದರು. ಪರವಾಗಿ ಕೈ ಎತ್ತಿದವರಲ್ಲಿ ಮುಂದೆ ಕಾಂಗ್ರೆಸ್ಸಿನಲ್ಲಿ ಬಹುದೊಡ್ಡ ನಾಯಕರಾಗಿ ಬೆಳೆದ ಕನ್ನಡಿಗ ಬಿ. ಶಂಕರಾನಂದ ಅವರೂ ಒಬ್ಬರಾಗಿದ್ದರು. ವಿರೋಧ ಮಾಡಿದವರಲ್ಲಿ ಬೆಳಗಾವಿ ಕನ್ನಡಿಗರು 'ಝಾಲಾಚ ಪಾಹಿಜೆ (ಮರಾಠಿ ಪರ)' ಎಂದೇ ಹಂಗಿಸುವ ವಿಧಾನ ಪರಿಷತ್ತಿನ ಮಾಜಿ ಸಭಾಪತಿ ರಾಮಭಾವು ಪೋತದಾರ್ ಇದ್ದರು!

1956ರಲ್ಲಿ ರಾಜ್ಯಗಳ ಪುನರ್ ವಿಂಗಡಣೆಯಾದ ನಂತರ ಬೆಳಗಾವಿ ಕರ್ನಾಟಕದಲ್ಲಿಯೇ ಉಳಿಯಿತು. ಮಹಾರಾಷ್ಟ್ರವಾದಿಗಳಿಗೆ ಇದನ್ನು ಅರಗಿಸಿ ಕೊಳ್ಳಲು ಆಗಲಿಲ್ಲ. ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಿಕೊಳ್ಳಲು ಮಹಾರಾಷ್ಟ್ರ ಸರ್ಕಾರ ಮತ್ತು ಕರ್ನಾಟಕದ ಗಡಿ ಪ್ರದೇಶದಲ್ಲಿನ ಉಗ್ರ ಮರಾಠರು ಮಾಡಿದ ಪ್ರಯತ್ನ ಒಂದೆರಡಲ್ಲ. 'ಬೆಳಗಾವಿ ನಗರಸಭೆಯ ಮೇಲೆಯೇ ನಮ್ಮ ಝುಂಡಾ ಹಾಕಿಬಿಟ್ಟರೆ ಆಯಿತಲ್ಲ' ಎಂದುಕೊಂಡೇ ಜುಲೈ 3ರ ನಿರ್ಣಯ ಮಂಡಿಸ ಲಾಯಿತು; ಅದು ಬಹುಮತದಿಂದ ಅಂಗೀಕಾರವೂ ಆಯಿತು. ಅಪ್ಪಟ ಕನ್ನಡಿಗರಾದ ಶಂಕರಾನಂದ ಈ ನಿರ್ಣಯದ ಪರವಾಗಿ ಮತ ಚಲಾಯಿಸಿದ್ದಕ್ಕೆ ಕಾರಣ ಅವರು, ಬೆಳಗಾವಿಯ ಶಹಾಪುರದ ಮರಾಠಿ ಪ್ರಾಬಲ್ಯದ ಮಹಾದ್ವಾರ ವಾರ್ಡ್‌ನಿಂದ ಆಯ್ಕೆಯಾದವರು!

ನಗರಸಭೆ ಅಥವಾ ಪಾಲಿಕೆಯ ಯಾವುದೇ ನಿರ್ಣಯವನ್ನು, ಅದು ಕಾನೂನಿಗೆ ಅಥವಾ ರಾಜ್ಯದ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂದರೆ, ಮೂರು ತಿಂಗಳ ಒಳಗಾಗಿ ಸರ್ಕಾರ ತಿರಸ್ಕರಿಸಬೇಕು, ಇಲ್ಲವಾದರೆ ಅದಕ್ಕೆ ಒಪ್ಪಿಗೆ ಸಿಕ್ಕಂತೆಯೇ ಎಂದು ಕಾನೂನು ಹೇಳುತ್ತದೆ. ಜುಲೈ 3ರ ನಿರ್ಣಯದ ಕಥೆಯೂ ಅದೇ ಆಯಿತು. ಆಗಿನ ಸರ್ಕಾರ ಭಗವಾ ಝುಂಡಾ ಕುರಿತ ನಿರ್ಣಯವನ್ನು ತಿರಸ್ಕರಿಸಲಿಲ್ಲ. ಅಲ್ಲಿಗೆ ಅದಕ್ಕೆ ಒಪ್ಪಿಗೆ ಸಿಕ್ಕಂತಾಯಿತು. ಆಗ ಹಾರಿದ ಧ್ವಜವನ್ನು ತೆಗೆಸಿ ಹಾಕಲು 2009ರ ಮಾರ್ಚ್‌ವರೆಗೆ ಕಾಯಬೇಕಾಯಿತು! ಅದೂ ನ್ಯಾಯಾಲಯದ ಆದೇಶದ ಮೂಲಕ.

ಈ ಮಧ್ಯೆ 1962ರಲ್ಲಿ ಬೆಳಗಾವಿ ಮೇಯರ್ ಕಾರಿನ ಮೇಲೆ ಭಗವಾ ಝುಂಡಾ ಹಾಕುವ ನಿರ್ಣಯವನ್ನು ಅಂಗೀಕರಿಸಲಾಯಿತು. ಸರ್ಕಾರ ಇದನ್ನು ತಿರಸ್ಕರಿಸಿದರೂ ಬೆಳಗಾವಿ ಮೇಯರ್ ಅದನ್ನು ಪುರಸ್ಕರಿಸಲಿಲ್ಲ. ತಮ್ಮ ಗಾಡಿಗಳ ಮೇಲೆ ಕೇಸರಿ ಬಾವುಟ ಹಾಕಿಕೊಂಡೇ ತಿರುಗುತ್ತಿದ್ದರು. 1991ರಲ್ಲಿ ಮೊದಲ ಬಾರಿಗೆ ಬೆಳಗಾವಿ ಮೇಯರ್ ಮತ್ತು ಉಪಮೇಯರ್ ಆಗಿ ಕನ್ನಡಿಗರಾದ ಸಿದ್ದನಗೌಡ ಪಾಟೀಲ ಹಾಗೂ ನಿಸಾರ್ ಅಹ್ಮದ್ ಸನದಿ ಆಯ್ಕೆಯಾದ ನಂತರ ತಮ್ಮ ಕಾರಿನ ಮೇಲೆ ಸನದಿ

ಅವರು ಕನ್ನಡ ಧ್ವಜ ಹಾಕಿಕೊಂಡುದು ಇತಿಹಾಸ. ಈ ತಪ್ಪಿಗಾಗಿ ಪಾಲಿಕೆಯ ಸಭೆಯಲ್ಲಿಯೇ ಅವರ ಮೈ ಮೇಲೆ ಎಂ.ಇ.ಎಸ್. ಸದಸ್ಯರು ತುರಿಕೆ ಪುಡಿ ಹಾಕಿದ್ದರು.

1989ರಲ್ಲಿ ರಾಜ್ಯದಲ್ಲಿ ವೀರೇಂದ್ರ ಪಾಟೀಲರ ಸರ್ಕಾರ ಇದ್ದಾಗ ಕನ್ನಡ ಚಳವಳಿ ನಾಯಕ ವಾಟಾಳ ನಾಗರಾಜ್ ಭಗವಾ ಝಂಡಾ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಅದು ಭಾರಿ ಕೋಲಾಹಲಕ್ಕೇ ಕಾರಣವಾಗಿತ್ತು. ಆದರೆ, ಸರ್ಕಾರ, 'ಇದು ಕಾನೂನು ಸುವ್ಯವಸ್ಥೆಗೆ ಭಂಗ ತರುವಂಥ ವಿಚಾರ' ಎಂದೆಲ್ಲ ನೆಪ ಹೇಳಿ ಝಂಡಾ ತೆಗೆಸಿ ಹಾಕುವುದನ್ನು ಮುಂದೆ ಹಾಕುತ್ತಿತ್ತು. ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕಿನ ಮೂಡಲಗಿಯ ಭೀಮಪ್ಪ ಗಡಾದ ಎಂಬ ಕನ್ನಡಾಭಿಮಾನಿ ಈ ಝಂಡಾ ವಿರುದ್ಧ ಹೈಕೋರ್ಟ್ ಮೆಟ್ಟಿಲು ಏರಿದ ನಂತರವೇ ಅದಕ್ಕೆ ಒಂದು ಪರಿಹಾರ ಸಿಕ್ಕಿತು. ರಾಷ್ಟ್ರಧ್ವಜದ ಪಕ್ಕದಲ್ಲಿ ಇನ್ನಾವುದೇ ಧ್ವಜ ಇರಬಾರದು ಎಂದು ವಿಭಾಗೀಯ ಪೀಠ ಆದೇಶಿಸಿತು.

ಕಾಕತಾಳೀಯ ಎಂಬಂತೆ ಪಾಲಿಕೆಯ ಕಚೇರಿಯನ್ನು ವಿವೇಕಾನಂದ ರಸ್ತೆಯಿಂದ ಕುಮಾರ ಗಂಧರ್ವ ರಂಗಮಂದಿರದ ಬಳಿಯ ನೂತನ ಪಾಲಿಕೆಯ ಕಟ್ಟಡಕ್ಕೆ ಸ್ಥಳಾಂತರ ಮಾಡುವಾಗ ಝಂಡಾ ಸ್ಥಳಾಂತರಿಸಬೇಕಾದ ಅಗತ್ಯವೇ ಇರಲಿಲ್ಲ. ಹೇಗಿದ್ದರೂ ಮಾರಿ ಹಾದಿಯಲ್ಲಿ ಹೊರಟು ಹೋಗಿತ್ತು. ಅಂಗಡಿಯವರು ಸುಮ್ಮನಿದ್ದರೂ ಅವರ ಮೇಲೆ ಗೂಬೆ ಬರುತ್ತಿರಲಿಲ್ಲ. ಆದರೆ, ಬೆಳಗಾವಿ ಪರಿಸರದ ಮರಾಠಿ ಮತಗಳ ಮೇಲೆ ಕಣ್ಣು ಹಾಕಿದ್ದ ಅಂಗಡಿಯವರು ಇದಕ್ಕಿಂತ ಸದವಕಾಶ ಮತ್ತೊಂದು ಇರಲಾರದು ಎಂದುಕೊಂಡರು. ಇದಕ್ಕೂ ಮುಂಚೆ ಕೂಡ, ಬೆಳಗಾವಿ ಎ.ಪಿ.ಎಂ.ಸಿ. ಚುನಾವಣೆ, ಯಳ್ಳೂರು ಮರಾಠಿ ಸಾಹಿತ್ಯ ಸಮ್ಮೇಳನಗಳಲ್ಲಿ ಅಂಗಡಿಯವರ ಪಾತ್ರ ಮರಾಠಿಗರ ಪರವಾಗಿಯೇ ಇತ್ತು.

ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಎರಡು ಲಕ್ಷ ಮರಾಠಿ ಮತಗಳು ಇವೆ. 'ಶಿವಾಜಿ ಸಿದ್ಧಾಂತಗಳಿಂದ' ಪ್ರೇರಿತವಾದ ಮಹಾರಾಷ್ಟ್ರ ಏಕೀಕರಣ ಸಮಿತಿಗೆ ಬಿಜೆಪಿ ಹತ್ತಿರದ ಪಕ್ಷ. ಆದರೆ, ಬೆಳಗಾವಿಯಲ್ಲಿ ವಿಧಾನಸಭೆ ಅಧಿವೇಶನ ಮಾಡಿದ ನಂತರ ಶಿವಸೇನೆಯ ಬಾಳ ಠಾಕ್ರೆಯವರು ಮಾತ್ರವಲ್ಲದೇ ಎಂ.ಇ.ಎಸ್. ಮುಖಂಡರೂ ಯಡಿಯೂರಪ್ಪ ಅವರ ಬಗ್ಗೆ ಮುನಿಸಿಕೊಂಡಿದ್ದಾರೆ. ಬೆಳಗಾವಿಯಲ್ಲಿ ಕನ್ನಡ, ಕರ್ನಾಟಕ ಪರ ಚಟುವಟಿಕೆ ಹೆಚ್ಚಿದಷ್ಟೂ ಎಂ.ಇ.ಎಸ್. ದುರ್ಬಲವಾಗುತ್ತ ಹೋಗುತ್ತದೆ ಎಂಬುದು ಅವರ ಚಿಂತೆ.

ಜತೆಗೆ, ಎಂ.ಇ.ಎಸ್. ಮುಖಂಡರು ಗೆದ್ದೆತ್ತಿನ ಬಾಲ ಹಿಡಿಯುವವರು. ಮಹಾರಾಷ್ಟ್ರದಲ್ಲಿ ಯಾವ ಸರ್ಕಾರ ಇರುತ್ತದೋ ಆ ಸರ್ಕಾರದ ಪಕ್ಷದ ಜತೆಗೇ ಅವರ ಸಹವಾಸ. ಇದಕ್ಕೆ ಹಣಕಾಸಿನ ಕಾರಣಗಳೂ ಇರಬಹುದು. ಎಂ.ಇ.ಎಸ್. ಮುಖಂಡರ ಚಳವಳಿಗಳೆಲ್ಲ ಮಹಾರಾಷ್ಟ್ರ ಸರ್ಕಾರದಿಂದಲೇ ಪ್ರೇರಿತವಾದುವು ಎಂಬುದು ರಹಸ್ಯವೇನೂ ಅಲ್ಲ. ಹೀಗಾಗಿ ಈ ಸಾರಿ ಎಂ.ಇ.ಎಸ್. ಮತಗಳು ತಮಗೆ ಸಿಗಲಿಕ್ಕಿಲ್ಲ ಎಂದು ಲೆಕ್ಕ ಹಾಕಿಯೇ ಭಗವಾ ಝಂಡಾ ಹಾರಿಸಲು ಅಂಗಡಿ ಮುಂದಾಗಿರಬೇಕು. ಕ್ರಿಯೆಗೆ ಪ್ರತಿಕ್ರಿಯೆ ಇದ್ದೇ ಇರುತ್ತದೆ. ಕನ್ನಡಿಗರ ಪ್ರತಿಕ್ರಿಯೆ ಏನು

ಎಂದು ಅವರಿಗೀಗ ಗೊತ್ತಾಗಿದೆ. ಆದರೆ, ಕಾಲ ಮಿಂಚಿದೆ. ಅಂಗಡಿಯವರು ಲಿಂಗಾಯತರು. ಅಪ್ಪಟ ಕನ್ನಡಿಗರು. ಅವರಿಗೆ ಮರಾಠಿ ಮಾತನಾಡಲು ಬರುವುದಿಲ್ಲ. ಅವರ ಜತೆಗಾರ ಶಾಸಕ ಸಂಜಯ ಪಾಟೀಲ ಜೈನರು. ಅವರ ಕನ್ನಡ ಭಾಷಾ ಜ್ಞಾನ ಅಷ್ಟಕಷ್ಟೇ. ಬೆಳಗಾವಿಯ ಬಹುತೇಕ ಜೈನರಿಗೆ ಕನ್ನಡಕ್ಕಿಂತ ಮರಾಠಿ ಹೆಚ್ಚು ಪ್ರಿಯ. ಸಂಜಯ ಪಾಟೀಲ ದುಡುಕಿ ದಕ್ಕಿಸಿಕೊಳ್ಳಬಹುದೇನೋ? ಅಂಗಡಿ ಯವರು ಬರೀ ಬೆಳಗಾವಿಯ ಮತಗಳನ್ನು ಲೆಕ್ಕಕ್ಕೆ ಇಟ್ಟುಕೊಂಡು ಲೋಕಸಭೆ ಪ್ರವೇಶಿಸುವುದು ಸುಲಭವಲ್ಲ.

ಬರೀ ಭಗವಾ ಧ್ವಜ ಪ್ರಕರಣ ಮಾತ್ರವಲ್ಲ, ಬೆಳಗಾವಿ ಜಿಲ್ಲೆಯ ಕನ್ನಡ ಹೋರಾಟದ ದೊಡ್ಡ ಸಮಸ್ಯೆ ಎಂದರೆ ಅದು ಬರೀ ಪ್ರತಿಕ್ರಿಯಾತ್ಮಕವಾಗಿರುವುದು. ಕ್ರಿಯೆ ಘಟಿಸುವುದು ಮರಾಠಿಗರಿಂದ, ಪ್ರತಿಕ್ರಿಯೆ ಕನ್ನಡಿಗರಿಂದ. ಕ್ರಿಯೆಗೆ ಇರುವ ಬಲ ಪ್ರತಿಕ್ರಿಯೆಗೆ ಇರುವುದು ಕಷ್ಟ. ಬೆಳಗಾವಿ ಮಟ್ಟಿಗಂತೂ ಇದು ನಿಜ. ಆದರೆ, ಈ ಸಾರಿಯ 'ಪ್ರತಿಕ್ರಿಯೆ'ಗೆ ಅಂಗಡಿ ಮಣಿದಿದ್ದಾರೆ. ಕನ್ನಡಿಗರ ಕ್ಷಮೆ ಕೇಳಿದ್ದಾರೆ. ಹಾಗೆಂದು ವಿವಾದ ಕೊನೆಗೊಂಡಂತೆ ಕಾಣುವುದಿಲ್ಲ. ಅಂಗಡಿಯವರ ಮೇಲಿನ ಸಿಟ್ಟು ಯಡಿಯೂರಪ್ಪ ಮೇಲೆ ತಿರುಗಿದೆ. ಅವರಿಗೆ ಕಪ್ಪು ಬಾವುಟದ ಸ್ವಾಗತ ಸಿಗುತ್ತಿದೆ. ಈ ವಿವಾದ ಚುನಾವಣೆ ಫಲಿತಾಂಶ ಹೊರಗೆ ಬರುವವರೆಗೂ ಇದ್ದೇ ಇರುತ್ತದೆ. ಅಕಸ್ಮಾತ್ ಅಂಗಡಿಯವರು ಗೆದ್ದರೆ ನಿಟ್ಟುಸಿರು ಬಿಡಬಹುದು. ಸೋತರೆ, ಹಾದಿಯಲ್ಲಿ ಹೊರಟಿದ್ದ ಮಾರಿಯನ್ನು ದೂರಲು ಆಗುತ್ತದೆಯೇ?

■

# ಸಾಕು ಮಾಡಿ ಯಡಿಯೂರಪ್ಪ ಇದು ಅತಿಯಾಯಿತು

ಅನುಮಾನವೇ ಇಲ್ಲ ಇದು ಅತಿಯಾಯಿತು. 'ಮಿತವಾದುದು ಅಮೃತ, ಅತಿಯಾದುದು ವಿಷ' ಎಂದು ಈ ಬಿಜೆಪಿ ಮಂದಿಗೆ ಯಾರು ಹೇಳಬೇಕು? ಕಳೆದ ಮೇನಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆದಾಗ ಬಿಜೆಪಿ ಗೆದ್ದುದು 110 ಸೀಟುಗಳಲ್ಲಿ. ಸರ್ಕಾರ ರಚಿಸಲು ಇನ್ನೂ ಮೂರು ಸೀಟು ಬೇಕಿತ್ತು. ಪಕ್ಷೇತರರು ನೆರವಿಗೆ ಬಂದರು. ನಿಜವೋ, ಸುಳ್ಳೋ ಪಕ್ಷೇತರರ ನಿಷ್ಠೆ ಅನುಮಾನಾಸ್ಪದ ಎಂಬ ಹುಳು ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಆಪ್ತರ ತಲೆಯಲ್ಲಿ ಹೊಕ್ಕಿತು. ಶುರುವಾಯಿತು 'ಆಪರೇಷನ್ ಕಮಲ' ಎಂಬ ವಿರೋಧಿಗಳ ಬೇಟೆ. ಇದು ಸಜ್ಜನಿಕೆಗೆ ಹೆಸರಾದ ಕರ್ನಾಟಕದ ರಾಜಕಾರಣದಲ್ಲಿ ಕಂಡು ಕೇಳರಿಯದ ಘಟನೆಗಳಿಗೆ ಕಾರಣವಾಯಿತು.

ಹಣ ಮತ್ತು ಸ್ಥಾನಮಾನದ ಆಮಿಷಕ್ಕೆ ಸೋಲದವರು ಯಾರು? ಅತ್ತೂ ಕರೆದು ಒಂದು ಪಕ್ಷದ ಟಿಕೆಟ್ ಪಡೆದು ಗೆದ್ದ ಶಾಸಕರು ಮರುದಿನ ರಾಜೀನಾಮೆ ಕೊಟ್ಟು ಬಿಜೆಪಿ ಸೆರಗು ಹಿಡಿದರು. ಕೆಲವರು ಸಚಿವರಾದರು, ಇನ್ನು ಕೆಲವರು ಮಂಡಳಿ, ನಿಗಮಗಳ ಅಧ್ಯಕ್ಷರಾದರು, ಇನ್ನು ಕೆಲವರು

ಜೇಬಿಗೆ ದುಡ್ಡು ಇಳಿಸಿ ಹಾಯಾಗಿ ಕುಳಿತರು.

'ಸರಿ, ಇರಬಹುದು, ವಿರೋಧಿಗಳು ಈ ಸರ್ಕಾರವನ್ನು ಅಸ್ಥಿರಗೊಳಿಸಲು ಹುನ್ನಾರ ಮಾಡುತ್ತಿರಬಹುದು, ಸ್ವಂತ ಬಹುಮತ ಹೊಂದುವುದು ಒಂದು ಸರ್ಕಾರದ ಹಕ್ಕು' ಎಂದುಕೊಂಡವರಿಗೆ ದಿಗಿಲಾಗುವಂತೆ ಮತ್ತೆ 'ಆಪರೇಷನ್ ಕಮಲ' ಮುಂದುವರಿಯಿತು. ಅದಕ್ಕೆ, ಎಂಟು ಕ್ಷೇತ್ರಗಳ ಉಪ ಚುನಾವಣೆ ನೆಪ. ಅದೂ ಹೋಗಲಿ ಎಂದರೆ ರಕ್ತದ ರುಚಿ ಹತ್ತಿದ ಬಿಜೆಪಿಯವರು ಸಣ್ಣಪುಟ್ಟ ಪುರಸಭೆ, ನಗರಸಭೆ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಮಹಾನಗರಪಾಲಿಕೆಗಳು ನೆಮ್ಮದಿಯಿಂದ ಅಧಿಕಾರ ನಡೆಸಲು ಬಿಡಲಿಲ್ಲ. ನಂಜನಗೂಡು, ಎಚ್.ಡಿ. ಕೋಟೆ, ದೊಡ್ಡಬಳ್ಳಾಪುರ, ಮಂಡ್ಯ, ಮೈಸೂರು, ಬೆಳಗಾವಿ ಹೀಗೆ ಎಲ್ಲ ಕಡೆಯ ಸ್ಥಳೀಯ ಸಂಸ್ಥೆಗಳ ಸದಸ್ಯರ ಪಕ್ಷಾಂತರ ಸಮೂಹ ಸನ್ನಿಯ ಹಾಗೆ ಹಬ್ಬಿತು.

ಅದೂ ಆಗಲಿ ಎಂದರೆ ಈಗ ಲೋಕಸಭೆ ಚುನಾವಣೆಯ ಪರ್ವ. ಬಿಜೆಪಿ ತಾನು ಎಷ್ಟೆಲ್ಲ ಬಲಿಷ್ಠ ಎಂದು ಕೊಚ್ಚಿಕೊಂಡರೂ ಎಲ್ಲ 28 ಕ್ಷೇತ್ರಗಳಲ್ಲಿ ಮೂಲ ಬಿಜೆಪಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲು ಆಗಲಿಲ್ಲ. ಆ ತುದಿಯ ಬೀದರ್‌ನಿಂದ ಈ ತುದಿಯ ಚಾಮರಾಜನಗರದ ನಡುವೆ ಚಿಕ್ಕೋಡಿ, ರಾಯಚೂರು, ತುಮಕೂರು, ಮಂಡ್ಯ, ಬೆಂಗಳೂರು ಉತ್ತರ, ಗ್ರಾಮಾಂತರಗಳಲ್ಲಿ ಪಕ್ಷಾಂತರಿಗಳಿಗೇ ಮಣೆ, ಮನ್ನಣೆ, ಟಿಕೆಟ್ ನೀಡುವುದಕ್ಕೆ ಮುಂಚಿನ ದಿನದವರೆಗೆ ಕಾಂಗ್ರೆಸ್ಸಿನಲ್ಲಿದ್ದ ಡಿ.ಬಿ. ಚಂದ್ರೇಗೌಡ, ಎಲ್.ಆರ್. ಶಿವರಾಮೇಗೌಡರು ಮರುದಿನ ಲೋಕಸಭಾ ಅಭ್ಯರ್ಥಿ ಗಳಾಗುವುದು ಬಿಜೆಪಿಯಂಥ ಪಕ್ಷಕ್ಕೆ ಹೆಮ್ಮೆಯ ಸಂಗತಿಯಲ್ಲ; ಅದು ಆ ಪಕ್ಷದ ದೌರ್ಬಲ್ಯದ ಸಂಕೇತ. ಚಂದ್ರೇಗೌಡರು ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ಗೆಲ್ಲುತ್ತಾರೋ ಬಿಡುತ್ತಾರೋ ತಿಳಿಯದು ಆದರೆ, ಶಿವಮೊಗ್ಗದಲ್ಲಿ ತಮ್ಮ ಪುತ್ರ ರಾಘವೇಂದ್ರನಿಗೆ ಇನ್ನಷ್ಟು ಬಲ ಬಂದೀತು ಎಂಬ ಲೆಕ್ಕ ಯಡಿಯೂರಪ್ಪ ಅವರದು. ಚಿಕ್ಕಮಗಳೂರಿನ ಚಂದ್ರೇಗೌಡರಿಗೂ ಬೆಂಗಳೂರು ಉತ್ತರಕ್ಕೂ ಎತ್ತಣ ಸಂಬಂಧ? ರಾಯಬರೇಲಿಯ ಇಂದಿರಾ ಮತ್ತು ಚಿಕ್ಕಮಗಳೂರಿನ ಸಂಬಂಧಕ್ಕಿಂತ ಇದು ದೂರದ್ದು ಎಂಬುದಂತೂ ನಿಜ!

ಕೆ.ಎಚ್. ಶ್ರೀನಿವಾಸ ಕೂಡ ಅಷ್ಟೇ. ಅವರು ತಮ್ಮ ರಾಜಕೀಯ ಜೀವನದ ಉದ್ದಕ್ಕೂ ಬಿಜೆಪಿಯ ಜನ್ಮ ಜಾಲಾಡಿದ್ದಕ್ಕಿಂತ ಶಿವಮೊಗ್ಗದ ಬ್ರಾಹ್ಮಣ ಮತಗಳ ಮೇಲೆಯೇ ಮುಖ್ಯಮಂತ್ರಿಗಳಿಗೆ ಕಣ್ಣು, ರಾಜಕಾರಣದಲ್ಲಿ ಸ್ವಾರ್ಥಕ್ಕಿಂತ ದೊಡ್ಡದು ಯಾವುದಿದೆ? ಚೆನ್ನಿಗಪ್ಪ ಅವರನ್ನು ಸೇರಿಸಿಕೊಂಡಾಗಲೇ ಎಲ್ಲ ಸಂಕೋಚ, ಲಜ್ಜೆಗಳನ್ನು ಬಿಜೆಪಿ ಮರೆತು ಬಿಟ್ಟಿತು. ಮಳೆಯಲ್ಲಿ ನೆಂದವರಿಗೆ ಯಾವ ನೀರಿನ ಭಯ?

ಐವತ್ತು ಜನರು ಕುಳಿತುಕೊಳ್ಳುವ ಬಸ್ಸಿನಲ್ಲಿ ಈಗ ನೂರೈವತ್ತು ಜನ ತುಂಬಿದ್ದಾರೆ. ಮೊದಲೇ ಸೀಟು ಹಿಡಿದವರು ಉಸಿರುಗಟ್ಟಿ ಸಾಯುವಂತಾಗಿದೆ. ನೆರೆ ಬಂದು ಊರೆಲ್ಲ ಕೊಚ್ಚಿ ಹೋದಂತೆ ಹೊರಗಿನಿಂದ ಬಂದವರು ಸಚಿವರಾಗಿದ್ದಾರೆ. ತಮ್ಮ ಬೆಂಬಲಿಗರಿಗೆ ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನ ಕೊಡಿಸಿದ್ದಾರೆ. 'ಮೂಲ

ರಾಜಕೀಯ ಕಾರ್ಯಕರ್ತರು ಪಕ್ಷಕ್ಕಾಗಿ ತ್ಯಾಗ ಮಾಡಬೇಕು. ಎಷ್ಟಾದರೂ ಬರಲಿ ವಲಸೆ ಬಂದವರಿಗೆ ಸ್ಥಾನಮಾನ ಕೊಡುತ್ತೇವೆ' ಎಂದು ಯಡಿಯೂರಪ್ಪ ಫರ್ಮಾನು ಹೊರಡಿಸಿದ್ದಾರೆ.

ಅತಿಥಿಗಳಾಗಿ ಬಂದವರು ಮನೆಯ ಮಲಗುವ ಕೋಣೆಯನ್ನೇ ಸೇರಿ ಬಿಟ್ಟರೆ ಆಗುವ ಆಭಾಸಗಳನ್ನು ಎಷ್ಟು ಜನ ಸೂಕ್ಷ್ಮವಾಗಿ ಗಮನಿಸಿದ್ದಾರೋ ತಿಳಿಯದು. ಒಬ್ಬ ಸಚಿವರು ವಲಸಿಗರಿಗೆ ಜಾಗ ಮಾಡಿಕೊಡಲು ರಾಜೀನಾಮೆ ಕೊಟ್ಟು, ಎದೆ ಒಡೆದುಕೊಂಡು ನೇರವಾಗಿ ಆಸ್ಪತ್ರೆಯನ್ನೇ ಸೇರಿದರು. ಉದ್ಯಮಿ ವಿಜಯ ಮಲ್ಯ 2002ರಲ್ಲಿ ರಾಜ್ಯಸಭೆಗೆ ಸ್ಪರ್ಧಿಸಿದ್ದಾಗ, ಅವರಿಗೆ ಪಕ್ಷದ ಆದೇಶ ಉಲ್ಲಂಘಿಸಿ ಅಡ್ಡ ಮತದಾನ ಮಾಡಿ ಅಧಿಕೃತ ಬಿಜೆಪಿ ಅಭ್ಯರ್ಥಿ ಡಿ.ಕೆ. ತಾರಾದೇವಿ ಸೋಲಿಗೆ ಕಾರಣ ರಾಗಿ ಅಮಾನತಾಗಿದ್ದ, ದೊಡ್ಡಬಳ್ಳಾಪುರದ ಮಾಜಿ ಬಿಜೆಪಿ ಶಾಸಕ ಗಂಟಗಾನಳ್ಳಿ ಕೃಷ್ಣಪ್ಪ ಈಗ ಮತ್ತೆ ಬಿಜೆಪಿ ಸೇರಿ ಭೂ ಸೇನಾ ನಿಗಮದ ಅಧ್ಯಕ್ಷರಾಗಿದ್ದಾರೆ. ಅದೇ ದೊಡ್ಡಬಳ್ಳಾಪುರದಲ್ಲಿ ಕಾಂಗ್ರೆಸ್ಸಿನಿಂದ ಗೆದ್ದು ರಾಜೀನಾಮೆ ಕೊಟ್ಟು ಮತ್ತೆ ಶಾಸಕರಾದ ಜೆ. ನರಸಿಂಹಸ್ವಾಮಿ ಕೊಳಚೆ ನಿರ್ಮೂಲನ ಮಂಡಲಿ ಅಧ್ಯಕ್ಷರು. ಅದೇ ಊರಿನ ಪುರಸಭೆಗೆ ಎರಡು ಸಾರಿ ಅಧ್ಯಕ್ಷರಾಗಿದ್ದ, 35 ವರ್ಷಗಳಿಂದ ಬಿಜೆಪಿಯಲ್ಲಿ ಇರುವ ಕೆ.ಎಂ. ಹನುಮಂತರಾಯಪ್ಪ ಎಂಬ ಸಜ್ಜನ ವ್ಯಕ್ತಿ, ನರಸಿಂಹಸ್ವಾಮಿ ಮತ್ತು ಕೃಷ್ಣಪ್ಪ ನವರ ಗೂಟದ ಕಾರುಗಳ ಹಿಂದೆ ಲೂನಾದಲ್ಲಿ ಸುತ್ತಾಡುತ್ತಿದ್ದಾರೆ. ಇದೇ ಮಲ್ಯರಿಗೆ ಅಡ್ಡ ಮತದಾನ ಮಾಡಿ ಅಮಾನತಾಗಿದ್ದ ಕೆ. ಎಚ್. ಹನುಮೇಗೌಡರೂ ಈಗ ಹಾಸನದಲ್ಲಿ ಬಿಜೆಬಿ ಅಭ್ಯರ್ಥಿ.

'ಬಿಜೆಪಿಯನ್ನು ಕಟ್ಟಲು' ಯಡಿಯೂರಪ್ಪ ಉದ್ದಕ್ಕೂ ಹೀಗೆಯೇ ಬೇರೆ ಪಕ್ಷದವರನ್ನು ಕರೆದುಕೊಂಡು ಬಂದಿದ್ದಾರೆ. ಬರೀ ಒಂದು ಜಾತಿ, ಧರ್ಮದ ಮತಗಳನ್ನು ನೆಚ್ಚಿಕೊಂಡು ಕುಳಿತರೆ ಆಡಳಿತದ ಚುಕ್ಕಾಣಿ ಹಿಡಿಯಲು ಆಗದು ಎಂಬ ಅವರ ನಂಬಿಕೆ ಸರಿ ಇರಬಹುದು. ಆದರೆ, ಹೀಗೆ ವಲಸೆ ಬಂದವರು ಪಕ್ಷದಲ್ಲಿ ಉಳಿದರೇ? ಜೀವರಾಜ ಆಳ್ವ ಏಕೆ ಪಕ್ಷ ಬಿಟ್ಟರು? ಎಚ್.ಎನ್. ನಂಜೇ ಗೌಡರು ಪಕ್ಷ ಬಿಡುವಾಗ ಏನು ಹೇಳಿದರು?... ಇತಿಹಾಸ ಎಷ್ಟು ವಿಚಿತ್ರ ನೋಡಿ. ಅದೇ ನಂಜೇಗೌಡರ ಮಗ ಮೊನ್ನೆ ಬಿಜೆಪಿ ಸೇರಿದ್ದಾರೆ. ಇತಿಹಾಸದಿಂದ ಯಾರು ಪಾಠ ಕಲಿಯುತ್ತಾರೆ? ಹೀಗೇಕೆ ಎಂದು ಬಿಜೆಪಿ ಮುಖಂಡರನ್ನು ಕೇಳಿ. 'ನಮ್ಮ ವಾಜಪೇಯಿ ಎಂಥ ದಡ್ಡರು ಎಂದರೆ ನೆಹರೂಗೆ ವಾಜಪೇಯಿ ಮೇಲೆ ತುಂಬ ಪ್ರೀತಿಯಿತ್ತು. ವಾಜಪೇಯಿ ಒಪ್ಪಿದ್ದರೆ 50ರ ದಶಕದಲ್ಲಿಯೇ ಅವರು ನೆಹರೂ ಸಂಪುಟದಲ್ಲಿ ಸಚಿವರಾಗಿ ಬಿಡಬಹುದಿತ್ತು. ಆದರೆ, ಆಗ ವಾಜಪೇಯಿಯವರನ್ನು ಕಾಂಗ್ರೆಸ್ಸಿಗೆ ಸೆಳೆಯಲು ಯಡಿಯೂರಪ್ಪ, ರೆಡ್ಡಿಗಳು, ಕಟ್ಟಾಗಳು, ಅಶೋಕಗಳು ಇರಲಿಲ್ಲವಲ್ಲ' ಎಂದು ಮರುಗುತ್ತಾರೆ!

ಈಗ ಒಂದು ಪಕ್ಷವನ್ನು ಬಿಡಲು, ಇನ್ನೊಂದು ಪಕ್ಷವನ್ನು ಸೇರಲು ತತ್ವ ಸಿದ್ಧಾಂತಗಳು ಏನೂ ಬೇಕಿಲ್ಲ. ಅಧಿಕಾರ ಒಂದಿದ್ದರೆ ಸಾಕು. ಹಣ ಹಿಂದೆಯೇ ಬರುತ್ತದೆ. ಎಷ್ಟು ಸಾಧ್ಯವೋ ಅಷ್ಟು ಬಾಚಿಕೊಂಡು ಮುಂದಿನ ಚುನಾವಣೆ ವೇಳೆಗೆ

ಇನ್ನೊಂದು ಪಕ್ಷದ ಕಡೆಗೆ ವಲಸೆ ಹೋಗಬಹುದು. ಪಕ್ಷ ಬಿಡುವುದಕ್ಕೂ ಅಂಗಿ ಬದಲಿಸುವುದಕ್ಕೂ ಹೆಚ್ಚಿನ ವ್ಯತ್ಯಾಸವೇನೂ ಈಗ ಇಲ್ಲವಲ್ಲ?

'ಬರೀ ಬಿಜೆಪಿಯನ್ನು ಏಕೆ ದೂರುತ್ತೀರಿ? ಕಾಂಗ್ರೆಸ್ಸಿನವರು ಏನು ಸಾಚಾಗಳೇ? ದೇಶಪಾಂಡೆ, ಸಿದ್ದರಾಮಯ್ಯ, ಪ್ರಕಾಶ್ ಯಾರು? ಯಾವ ಪಕ್ಷದವರು' ಎಂದು ಯಡಿಯೂರಪ್ಪ ಕೇಳುತ್ತಿದ್ದಾರೆ. ಹೌದು ಎಲ್ಲರ ಬೀರುಗಳಲ್ಲಿಯೂ ತಲೆಬುರುಡೆಗಳು ಇವೆ. ಈ ತಲೆಬುರುಡೆಗಳು ವೈಢೂರ್ಯಗಳಲ್ಲ; ಆಭರಣಗಳಲ್ಲ. ಅವುಗಳನ್ನು ಧರಿಸಲು ಆಗದು. ಒಂದು ತಪ್ಪಿಗೆ ಮತ್ತೊಂದು ತಪ್ಪು ಸಮರ್ಥನೆಯಲ್ಲ. ಅದು 'ಎಲ್ಲರಿಗಿಂತ ಭಿನ್ನ' ಎನ್ನುವ ಪಕ್ಷದ ಲಕ್ಷಣವೂ ಅಲ್ಲ.

ಸೋಜಿಗ ಎಂದರೆ ಅಡ್ವಾಣಿಯವರಂಥವರೂ ಆಪರೇಷನ್ ಕಮಲದ ಬಗ್ಗೆ ಮೌನ ತಾಳಿರುವುದು. 'ಇನ್ನು ಸಾಕು' ಎಂದು ಹೇಳದಿರುವುದು. ಅವರಿಗೂ ಪ್ರಧಾನಿ ಪಟ್ಟದ ಕನಸು. ಎಲ್ಲಿಂದಲಾದರೂ ಬರಲಿ, ಹೇಗಾದರೂ ಬರಲಿ ಪಕ್ಷದ ಸಂಸದರ ಸಂಖ್ಯೆ ಮಾತ್ರ ಹೆಚ್ಚಾಗಲಿ ಎಂಬ ಲೆಕ್ಕ ಇರಬಹುದು. ಇದೇ ಅಡ್ವಾಣಿ ತಮ್ಮ ಆತ್ಮಕಥನದಲ್ಲಿ 'ಭಾರತಕ್ಕೆ ವಿರೋಧ ಪಕ್ಷಗಳು ಅನಗತ್ಯ' ಎಂದ ಡಿ.ಕೆ. ಬರೂವಾ ಅವರ ಬಗ್ಗೆ ಅಸಹ್ಯ ವ್ಯಕ್ತಪಡಿಸುತ್ತಾರೆ. ಈಗ ಕರ್ನಾಟಕದಲ್ಲಿ ಆಗುತ್ತಿರುವುದೇನು? ಅಶೋಕ್ ಕೂಡ ಬರೂವಾ ಮಾತುಗಳನ್ನೇ ಪುನರುಚ್ಚರಿಸುತ್ತಿದ್ದಾರಲ್ಲವೇ?

ಕಾರವಾರದ ಸಂಸದ ಅನಂತಕುಮಾರ್ ಹೆಗಡೆ ಭಾರತದ ಬಹುಸಂಸ್ಕೃತಿಯ ವಿರುದ್ಧ ಮಾತನಾಡುತ್ತಾರೆ. ಯಡಿಯೂರಪ್ಪ ಮತ್ತು ಅವರ ಗೆಳೆಯರು ಬಹು ಪಕ್ಷೀಯ ಪ್ರಜಾಸತ್ತೆಯ ವಿರುದ್ಧ ಕ್ರಿಯಾಶೀಲರಾಗಿದ್ದಾರೆ. ಎಲ್ಲವನ್ನೂ ಕಂಡೂ ಕಾಣದಂತೆ ಆರ್.ಎಸ್.ಎಸ್. ಮುಖಂಡರು ಮೌನ ತಾಳಿದ್ದಾರೆ. ಆದರೆ, 'ವಿನಾಶಕಾಲೇ ವಿಪರೀತ ಬುದ್ಧಿ....' ಎಂಬ ಮಾತೂ ಇದೆಯಲ್ಲ. ಅದು ಸಾರ್ವಕಾಲಿಕ ಸತ್ಯ. ಆಪರೇಷನ್ ಕಮಲ ತಿರುಗುಬಾಣವಾಗಲು ಬಹಳ ಕಾಲವೇನೂ ಕಾಯಬೇಕಿಲ್ಲ. ■

# ಚುನಾವಣಾ ಪ್ರಣಾಳಿಕೆ ಎಂಬ ಲೊಳಲೊಟ್ಟೆ...

ಇದು ಚುನಾವಣೆಯ ಕಾಲ; ಪ್ರಣಾಳಿಕೆಯ ಕಾಲ ಕೂಡ. ಈಗ ಎಲ್ಲ ಪಕ್ಷಗಳಿಗೂ ಮತದಾರನ ನೆನಪು. ಆತನನ್ನು ಓಲೈಸುವುದೇ ಮುಖ್ಯ ಗುರಿ. ಪ್ರಣಾಳಿಕೆ ಅದಕ್ಕೆ ಒಂದು ನೆಪ. ಅದರ ತುಂಬೆಲ್ಲ ಆಕಾಶದ ನಕ್ಷತ್ರಗಳನ್ನೆಲ್ಲ ಒಟ್ಟಾಗಿ ತಂದು ಮತದಾರನ ಮನೆಯಂಗಳದಲ್ಲಿ ಮಲ್ಲಿಗೆಯಂತೆ ಚೆಲ್ಲುವ ಭರವಸೆಯ ಮಾತುಗಳು. ಕಾಂಗ್ರೆಸ್ ಮತ್ತು ಬಿಜೆಪಿಯ ಪ್ರಣಾಳಿಕೆಯಲ್ಲಿ ಇಂಥವೇ ಭರವಸೆಯ ಮಾತುಗಳು ತುಂಬಿವೆ. ಜೆ.ಡಿ.(ಎಸ್) ಪ್ರಣಾಳಿಕೆಯೂ ಪ್ರಕಟವಾಗಿದೆ. ಈ ಮೂರೂ ಪಕ್ಷಗಳ ಪ್ರಣಾಳಿಕೆಗಳಲ್ಲಿ ಮತದಾರನ ಮನಸ್ಸು ಸೆಳೆಯುವ ಪೈಪೋಟಿ ಎದ್ದು ಕಾಣುತ್ತದೆ. ಕಾಂಗ್ರೆಸ್‌ನವರು ಕಡು ಬಡ (ಬಿ.ಪಿ.ಎಲ್) ಕುಟುಂಬಗಳಿಗೆ ಮೂರು ರೂಪಾಯಿಗೆ ಕೆ.ಜಿ.ಯಂತೆ 35 ಕೆ.ಜಿ. ಅಕ್ಕಿ ಕೊಡುತ್ತೇವೆ ಎಂದು ಹೇಳಿದರೆ, ಬಿ.ಜೆ.ಪಿ.ಯವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುವ ಭರವಸೆ ಕೊಟ್ಟಿದ್ದಾರೆ. ಪ್ರತಿ ಸಾರಿ ಚುನಾವಣೆ ಬಂದಾಗಲೂ, ಪ್ರತಿ ಪಕ್ಷವೂ ಒಂದೊಂದು ಪ್ರಣಾಳಿಕೆಯನ್ನು ಬಿಡುಗಡೆ ಮಾಡುತ್ತದೆ. ಅದರಲ್ಲಿ ಹೊಸ ಭರವಸೆಗಳ ಜತೆಗೆ

ಹಳೆಯ ಭರವಸೆಗಳೂ ಹೊಸ ರೂಪ ತಾಳಿ ಸೇರಿಕೊಳ್ಳುತ್ತವೆ. ಹೇಗಿದ್ದರೂ ಯಾವುದೇ ಪ್ರಣಾಳಿಕೆಯಲ್ಲಿನ ಭರವಸೆಗಳನ್ನು ಅಧಿಕಾರದ ಒಂದು ಅವಧಿಯಲ್ಲಿ ಈಡೇರಿಸಲು ಸಾಧ್ಯವೇ ಇಲ್ಲವಲ್ಲ? ಇದು ಎಷ್ಟು ಕಷ್ಟದ ಕೆಲಸ ಎಂದರೆ ಒಂದು ಪಕ್ಷ, ಆಡಳಿತದ ಚುಕ್ಕಾಣಿ ಹಿಡಿದ ಕೂಡಲೇ ಅದು ಮೊದಲು ಮರೆಯುವುದು ತನ್ನ ಪ್ರಣಾಳಿಕೆಯನ್ನು! 'ಇನ್ನೂ ಐದು ವರ್ಷಗಳು ಇವೆಯಲ್ಲ? ಅದನ್ನೆಲ್ಲ ಮಾಡಲು' ಎಂದೇ ಅಧಿಕಾರಕ್ಕೆ ಬಂದವರು ಸಮಾಧಾನ ಹೇಳುತ್ತಾರೆ.

ನೀವು ಸುಮ್ಮನೇ ಯಾವುದೇ ಪಕ್ಷದ ಯಾವುದೇ ವರ್ಷದ ಪ್ರಣಾಳಿಕೆಯ ಮೇಲೆ ಕಣ್ಣು ಹಾಕಿ, ಬೇಕಾದರೆ, ಕಾಂಗ್ರೆಸ್ ಪಕ್ಷ ಈಗ ಬಿಡುಗಡೆ ಮಾಡಿರುವ ಪ್ರಣಾಳಿಕೆಯನ್ನೇ ತೆಗೆದುಕೊಳ್ಳಿ. ಒಂದೇ ಒಂದು ಭರವಸೆಗೆ ಸಂಬಂಧಿಸಿಯೂ ಅಲ್ಲಿ ಅಂಕಿ ಅಂಶಗಳು ಇಲ್ಲ. ಈ ಭರವಸೆ ಈಡೇರಿಸಲು ಸರ್ಕಾರಕ್ಕೆ ಎಷ್ಟು ಖರ್ಚು ಬರಬಹುದು ಎಂಬ ಲೆಕ್ಕ ಇಲ್ಲ. ಬಿಜೆಪಿಯ ಪ್ರಣಾಳಿಕೆಯ ಕಥೆಯೂ ಅಷ್ಟೇ. ಈ ಅರ್ಥದಲ್ಲಿಯೇ ಪ್ರಣಾಳಿಕೆ ಎಂಬುದು ಒಂದು ಅರ್ಥದಲ್ಲಿ ಹೊಣೆಗೇಡಿ ದಾಖಲೆ ಪತ್ರ (ಡಾಕ್ಯುಮೆಂಟ್). ಬಿಜೆಪಿ ಎರಡು ರೂಪಾಯಿಗೆ ಒಂದು ಕೆ.ಜಿ ಅಕ್ಕಿಯನ್ನು ಕೊಡುವ ಪ್ರಸ್ತಾಪವನ್ನೇ ಒಂದು ಉದಾಹರಣೆಯಾಗಿ ನೋಡೋಣ. ಕರ್ನಾಟಕದಲ್ಲಿ ಕಳೆದ ಮೇನಲ್ಲಿ ಚುನಾವಣೆ ನಡೆದಾಗ ರಾಜ್ಯ ಬಿಜೆಪಿ ಘಟಕ ಇದೇ ಅಕ್ಕಿ ವಿತರಣೆ ಭರವಸೆ ಕೊಟ್ಟಿತ್ತು. ಈಗಿನ ಲೆಕ್ಕದ ಪ್ರಕಾರ ಕರ್ನಾಟಕದಲ್ಲಿ 78 ಲಕ್ಷ ಮಂದಿ ಬಿಪಿಎಲ್ ಕಾರ್ಡ್‌ಗಳನ್ನು ಹೊಂದಿದ್ದಾರೆ. ಲೋಕಸಭಾ ಚುನಾವಣೆ ಬಂತು ಎಂಬ 'ಹುಕಿ'ಯಲ್ಲಿ ಮತ್ತೆ 30 ಲಕ್ಷ ಅರ್ಜಿಗಳು ವಿತರಣೆಯಾಗಿ ಅಷ್ಟೂ ಅರ್ಜಿಗಳು ಭರ್ತಿಯಾಗಿ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಗೆ ಬಂದಿವೆ. ಸರ್ಕಾರ ಈಗ ಬಜೆಟ್‌ನಲ್ಲಿ ಇದಕ್ಕಾಗಿ ನಿಗದಿ ಮಾಡಿದ ಮೊತ್ತ 750 ಕೋಟಿ ರೂಪಾಯಿ. ಆದರೆ, ಹಣಕಾಸು ಇಲಾಖೆ ಅಧಿಕಾರಿಗಳ ಪ್ರಕಾರ ಸುಮಾರು ಒಂದು ಕೋಟಿ ಅಧಿಕಾರಿಗಳ ಪ್ರಕಾರ ಸುಮಾರು ಒಂದು ಕೋಟಿ ಬಿಪಿಎಲ್ ಕಾರ್ಡ್‌ದಾರರಿಗೆ ಅಕ್ಕಿ ಪೂರೈಸಲು ಪ್ರತಿ ತಿಂಗಳಿಗೆ ಹೆಚ್ಚುವರಿಯಾಗಿ 60 ಕೋಟಿ ರೂಪಾಯಿ ಬೇಕಾಗುತ್ತವೆ. ಈ ಅಂಕಿ ಅಂಶಗಳ ಬೆಳಕಿನಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಗಳು ದೇಶಕ್ಕೆ ಕೊಟ್ಟಿರುವ ಭರವಸೆಯ ಖರ್ಚು ವೆಚ್ಚವನ್ನು ಲೆಕ್ಕ ಹಾಕಬಹುದು. ಈ ಲೆಕ್ಕವನ್ನು ಎರಡೂ ರಾಷ್ಟ್ರೀಯ ಪಕ್ಷಗಳೂ ಮಾಡಿರಲಾರವು!

ಪ್ರಣಾಳಿಕೆಯ ವಿಶೇಷವೇ ಅದು. ಇದು ಬಜೆಟ್‌ನ ಹಾಗೆ ಇಲ್ಲ. ಬಜೆಟ್‌ನಲ್ಲಿ ಹಾಕಿಕೊಂಡ ಯೋಜನೆಗಳಿಗೆ ಅನುದಾನವನ್ನೂ ಒದಗಿಸಲಾಗಿರುತ್ತದೆ. ಆದರೆ, ಪ್ರಣಾಳಿಕೆಯಲ್ಲಿ ಅದು ಇರುವುದಿಲ್ಲ. ಬಜೆಟ್ ಹಿಡಿದುಕೊಂಡು, 'ನೀವು ಅದನ್ನೇಕೆ ಮಾಡಲಿಲ್ಲ? ಇದನ್ನೇಕೆ ಸಾಧಿಸಲಿಲ್ಲ' ಎಂದು ಕೇಳಬಹುದು. ಪ್ರಣಾಳಿಕೆ ಹಿಡಿದು ಕೊಂಡು ಅದನ್ನು ಮಾಡಲಾಗದು. ಜನರು ಹಾಗೆ ಮಾಡುವುದಿಲ್ಲ ಎಂಬ ಕಾರಣ ಕ್ಕಾಗಿಯೇ ರಾಜಕೀಯ ಪಕ್ಷಗಳಲ್ಲಿ ಜವಾಬ್ದಾರಿ ಕಾಣುವುದಿಲ್ಲ. 'ಎಲ್ಲರಿಗೂ ಒಂದೊಂದು ಆಕಾಶ ಮಲ್ಲಿಗೆ ಕೊಡುತ್ತೇವೆ' ಎಂಬ ಧಾರ್ಷ್ಟ್ಯ ಪ್ರಣಾಳಿಕೆಯಲ್ಲಿ ಕಾಣುತ್ತದೆ. ಒಂದು ಸಾರಿ ಚುನಾವಣೆ ಮುಗಿಯುತ್ತಿದ್ದಂತೆ ಅದು ಆಯಾ ಪಕ್ಷಗಳ

ಕಪಾಟುಗಳನ್ನು ಸೇರಿಕೊಂಡು ಬಿಡುತ್ತದೆ. ಗೆದ್ದವರನ್ನು ಜನರು ಮಾತನಾಡಿಸಲು ಆಗದು. ಸೋತವರನ್ನು ಕೇಳಲು ಆಗದು. ಜನರ ಸ್ಥಿತಿಗತಿ ಮತ್ತೆ ಎಂದಿನಂತೆ ಇದ್ದಲ್ಲಿಯೇ ಇರುತ್ತದೆ.

1952ರಿಂದ ಇದುವರೆಗೆ ದೇಶದಲ್ಲಿ 14 ಮಹಾಚುನಾವಣೆಗಳು ನಡೆದಿವೆ; ಇದು 15ನೆಯದು. ಕಾಂಗ್ರೆಸ್ ಪಕ್ಷ ಪ್ರತಿ ಚುನಾವಣೆಯಲ್ಲಿಯೂ ಪ್ರಣಾಳಿಕೆ ಬಿಡುಗಡೆ ಮಾಡಿದೆ. ಕಳೆದ ಐದೂವರೆ, ಆರು ದಶಕಗಳ ಅವಧಿಯಲ್ಲಿ ಬಹುಕಾಲ ಕೇಂದ್ರದ ಅಧಿಕಾರ ಚುಕ್ಕಾಣಿ ಕಾಂಗ್ರೆಸ್ ಪಕ್ಷದ ಕೈಯಲ್ಲಿಯೇ ಇತ್ತು. ಪ್ರಣಾಳಿಕೆಯಲ್ಲಿ ಕೊಟ್ಟ ಭರವಸೆಗಳೆಲ್ಲ ಈಡೇರಿದ್ದರೆ, ಒಂದೇ ಮಾತಿನಲ್ಲಿ ಹೇಳುವುದಾದರೆ, ಭಾರತದಲ್ಲಿ ಬಡತನ ಇರಬಾರದಿತ್ತು; ಎಲ್ಲರೂ ಶಿಕ್ಷಣವಂತರಾಗಬೇಕಿತ್ತು. ಮೊದಲ ಮಹಾ ಚುನಾವಣೆ ಸಮಯದಲ್ಲಿ ಜವಾಹರಲಾಲ್ ನೆಹರೂ ಅವರೇ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ ಸಿದ್ಧಪಡಿಸಲು ಸಕ್ರಿಯರಾಗಿ ತೊಡಗಿಕೊಂಡಿದ್ದರು. ಕಾಲ ಬದಲಾದಂತೆ ಈ ಕೆಲಸ ಬೇರೆಯವರ ಹೆಗಲಿಗೆ ಹೋಗಿದೆ. ಕರ್ನಾಟಕದಲ್ಲಿ 80ರ ದಶಕದಲ್ಲಿ ಜನತಾ ಪಕ್ಷದ ಪ್ರಣಾಳಿಕೆಯನ್ನು ಸಿದ್ಧಪಡಿಸಲು ಅನಂತಮೂರ್ತಿಯವರಂಥ ಬರಹಗಾರರೂ ನೆರವಾಗುತ್ತಿದ್ದರು. ಒಂದು ಅರ್ಥದಲ್ಲಿ ಹೊಸ ಕನಸುಗಳನ್ನು, ಆಸೆಗಳನ್ನು ಜನರಲ್ಲಿ ಮೂಡಿಸಲು ಇದು ಅಗತ್ಯವೂ ಇರಬಹುದು.

ಆದರೆ, ವಿಚಿತ್ರ ನೋಡಿ, ತುರ್ತು ಪರಿಸ್ಥಿತಿಯ ನಂತರ ದೇಶದಲ್ಲಿ ಜನತಾ ಪಕ್ಷದ ಸರ್ಕಾರ ಬಂದಿದ್ದಾಗ ಒಂದು ದಿನ, ಒಬ್ಬ ಹಿರಿಯ ಅಧಿಕಾರಿ ಆಗಿನ ಪ್ರಧಾನಿ ಮೊರಾರ್ಜಿ ದೇಸಾಯಿಯವರನ್ನು ಕಂಡು, 'ಸರ್, ಎಲ್ಲ ಇಲಾಖೆಗಳ ಕಾರ್ಯದರ್ಶಿಗಳಿಗೆ ಪ್ರಣಾಳಿಕೆಯನ್ನು ಗಂಭೀರವಾಗಿ ಓದಿಕೊಂಡು ಬರಲು ಹೇಳುವೆ. ಅದರಿಂದ ಸಂಪುಟ ಸಭೆಯಲ್ಲಿ ಚರ್ಚೆಗೆ ಸಹಾಯವಾಗುತ್ತದೆ' ಎಂದರಂತೆ. 'ಹೌದೇ? ನಾನೇ ಪ್ರಣಾಳಿಕೆಯನ್ನು ಓದಿಲ್ಲವಲ್ಲ' ಎಂದರಂತೆ ಮೊರಾರ್ಜಿ. ಮೊರಾರ್ಜಿ ಯಾವುದೇ ಕೆಲಸವನ್ನು ಗಂಭೀರವಾಗಿ ಮಾಡುವವರು. ಅವರೇ ಹೀಗೆ ಹೇಳಿದ ಮೇಲೆ ಪ್ರಣಾಳಿಕೆಗೆ ಏನು ಬೆಲೆ? 1989ರಲ್ಲಿ ರಾಜೀವ ಗಾಂಧಿ ಕೂಡ, 'ಪ್ರಣಾಳಿಕೆಯನ್ನು ಯಾರೂ ಓದುವುದೂ ಇಲ್ಲ; ಗಂಭೀರವಾಗಿ ತೆಗೆದುಕೊಳ್ಳುವುದೂ ಇಲ್ಲ. ನನ್ನ ತಲೆಯನ್ನೂ ಕೆಡಿಸಬೇಡಿ, ನೀವೂ ತಲೆ ಕೆಡಿಸಿಕೊಳ್ಳಬೇಡಿ' ಎಂದು ತಮಗೆ ಪ್ರಣಾಳಿಕೆ ತೋರಿಸಲು ಬಂದವರನ್ನು ಹೊರಗೆ ಹಾಕಿದ್ದರು. ಮೊರಾರ್ಜಿ ಅವರಂಥ ಹಿರಿಯ ತಲೆಮಾರಿನವರು ಮತ್ತು ರಾಜೀವ ಅವರಂಥ ಹೊಸ ತಲೆಮಾರಿನವರು ಪ್ರಣಾಳಿಕೆಯ ಬಗೆಗೆ ಒಂದೇ 'ಅಭಿಪ್ರಾಯ' ಹೊಂದಿದ್ದು ಮಾತ್ರ ಸೋಜಿಗ!

ಪ್ರಣಾಳಿಕೆಯನ್ನೇ ಆಧರಿಸಿ ಯಾರೂ ಚುನಾವಣೆ ಗೆದ್ದಂತೆ ಕಾಣುವುದಿಲ್ಲ. ಜನರೂ ಈ ಬಗ್ಗೆ ಗಂಭೀರವಾಗಿ ಇರದೇ ಇರುವುದಕ್ಕೆ ಕಾರಣ ಮತ್ತೆ ಮತ್ತೆ ಚುನಾವಣೆಗಳು ಬರುತ್ತಿರುವುದೂ ಇರಬಹುದು. ಈಗ ಏನಿದ್ದರೂ ಚುನಾವಣೆ ನಡೆಯುತ್ತಿರುವುದು ಜಾತಿ-ಮತ-ಪ್ರದೇಶ ಮತ್ತು ಹಣದ ಆಧಾರದ ಮೇಲೆ. ಅಭಿವೃದ್ಧಿಯ ಮಾತುಗಳಿಗಿಂತ ರಾಮ ಮಂದಿರ, ಹಿಂದುತ್ವ ಅಥವಾ ಅಲ್ಪಸಂಖ್ಯಾತರ ತುಷ್ಟೀಕರಣದ

ಮಾತುಗಳು ಹೆಚ್ಚು 'ಕ್ಯಾಚಿ' ಅನಿಸುತ್ತವೆ. ರಾಜಕೀಯ ಪಕ್ಷಗಳು ಜನರನ್ನು ಸಂಪ್ರೀತಗೊಳಿಸುವ ಮಾತು ಆಡುವುದಕ್ಕೆ ಮಾಧ್ಯಮಗಳ ಕೊಡುಗೆಯೂ ಇರಬಹುದು. ಒಂದರ್ಥದಲ್ಲಿ ನೇತ್ಯಾತ್ಮಕ ಮತ್ತು ರೋಚಕ ವಿಚಾರಗಳೇ ಮಾಧ್ಯಮಗಳಲ್ಲಿ ಎದ್ದು ಕಾಣುವುದರಿಂದ ರಾಜಕೀಯ ಪಕ್ಷಗಳೂ ಅಂಥ ವಿಚಾರಗಳಿಗೇ ಮೊರೆ ಹೋಗುತ್ತಿರಬಹುದು. ಎಲ್ಲ ಭಾವನಾತ್ಮಕ ಆಟಗಳ ಹಣೆಬರಹ ಇಷ್ಟೇ.

ಒಂದು ಸಾರಿ ನಮ್ಮ ಗ್ರಾಮ ಭಾರತದ ಕಡೆಗೆ ಕಣ್ಣು ಹಾಯಿಸಿ. ಅಲ್ಲಿ ರಸ್ತೆ ಇಲ್ಲ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ವಿದ್ಯುತ್ ಜತೆಗಿನ ಕಣ್ಣು ಮುಚ್ಚಾಲೆ ದಿನದ 24 ಗಂಟೆಯೂ ಇರುತ್ತದೆ. ಮಕ್ಕಳಿಗೆ ಒಳ್ಳೆಯ ಶಾಲೆಗಳು ಕನಸಾಗಿಯೇ ಉಳಿದಿವೆ. ಕಿತ್ತು ತಿನ್ನುವ ಬಡತನ, ದಾರಿದ್ರ್ಯಕ್ಕೂ ಕೊನೆಯಿಲ್ಲ.... ನಗರ ಭಾರತಕ್ಕೆ ಬನ್ನಿ. ಮಹಲುಗಳ ಮಧೆಯೇ ಕೊಳಚೆಗಳು ಎದ್ದಿವೆ. ಹಳ್ಳಿಗಳಿಂದ ಗುಳೆ ಬಂದ ಜನರಿದ್ದಾರೆ. ಕಲಿತವರಲ್ಲಿ ಹತಾಶೆ ಇದೆ. ನಿರುದ್ಯೋಗ ಇದೆ. ಸಿನಿಕತನ ಇದೆ. ಎಲ್ಲ ಪ್ರಣಾಳಿಕೆಗಳ, ಬಜೆಟ್‌ಗಳ, ಯೋಜನೆಗಳ ವೈಫಲ್ಯದ ಸಂಕೇತದಂತೆ ಇದೆಲ್ಲ ಗೋಚರಿಸುತ್ತದೆ. ಕರ್ನಾಟಕದ ಶೇ 40ರಷ್ಟು ಜನರು ಪ್ರಣಾಳಿಕೆಗಳಲ್ಲಿನ ಭರವಸೆ ಗಳಿಗಿಂತ ಅಭ್ಯರ್ಥಿಗಳ ಜೇಬಿನ ಕಡೆಗೆ ನೋಡುತ್ತಿರುವುದು ಇದೇ ಕಾರಣಕ್ಕೆ ಇರಬಹುದು. ಮೂರು ಮತ್ತೊಂದು ರಾಜ್ಯದಲ್ಲಿ ಸ್ಪರ್ಧಿಸಿರುವ ಜೆ.ಡಿ.(ಎಸ್) ಕೂಡ 'ನಾವು ಅಧಿಕಾರಕ್ಕೆ ಬಂದರೆ..... ' ಎಂದು ಪ್ರಣಾಳಿಕೆ ಶುರು ಮಾಡಿದರೆ ಜನರಿಗೆ ಹೇಗೆ ನಂಬಿಕೆ ಬರುತ್ತದೆ?

■

# ಅಂತರಂಗದ ಸಿಟ್ಟಿಗೆ ಅಭಿವ್ಯಕ್ತಿ ಕೊಡೋಣ

ಹಿಂದೆ ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿದ್ದ ಕೆನೆತ್ ಗಾಲ್‌ಬ್ರೆತ್ ಭಾರತದ ಪ್ರಜಾಸತ್ತೆಯನ್ನು 'ಅರಾಜಕತೆಯ ಕಾರ್ಯನಿರ್ವಹಣೆ' ಎಂದು ಕರೆದಿದ್ದರು. 'ರಾಜಕೀಯ ಅಸ್ಥಿರತೆ, ಐಡೆಂಟಿಟಿಗಳ ಸಂಘರ್ಷ, ಜಾತಿ ಶಕ್ತಿಗಳ ಪ್ರಾಬಲ್ಯ, ಸಂಸ್ಥೆಗಳ ಅವನತಿ, ಸಾಮಾಜಿಕ ಅಸಮಾನತೆ ಮತ್ತು ಸಾಂಸ್ಕೃತಿಕ ವಿಭಿನ್ನತೆಗಳ ನಡುವೆ ಈ ಪ್ರಜಾಪ್ರಭುತ್ವ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದು ಒಂದು ವಿಸ್ಮಯ' ಎಂದೂ ಅವರು ಅಚ್ಚರಿ ವ್ಯಕ್ತಪಡಿಸಿದ್ದರು.

ಚುನಾವಣೆಗಳು ಬಂದಾಗಲೆಲ್ಲ ಗಾಲ್‌ಬ್ರೆತ್ ಮಾತು ಎಷ್ಟು ಸತ್ಯ ಅಲ್ಲವೇ ಎಂದು ಅನಿಸುತ್ತದೆ. ಈಗ ಕರ್ನಾಟಕದಲ್ಲಿ ಮೊದಲ ಹಂತದ ಚುನಾವಣೆಗೆ ರಂಗ ಸಜ್ಜಾಗಿದೆ. ಜಟ್ಟಿಗಳು ಮೈಗೆ ಎಣ್ಣೆ ಬಳಿದುಕೊಂಡು ಕಣಕ್ಕೆ ಇಳಿದಿದ್ದಾರೆ. ಒಬ್ಬರ ಕೈಗೆ, ಪೇಚಿಗೆ ಮತ್ತೊಬ್ಬರು ಸಿಗದಂತೆ ಪಟ್ಟುಗಳನ್ನು ಹಾಕುತ್ತಿದ್ದಾರೆ. ಏಪ್ರಿಲ್‌ನ ಸೂರ್ಯ ಧಗಿಧಗಿಸುತ್ತಲೇ ಚುನಾವಣೆಯ ಕಾವನ್ನು ಮತ್ತಷ್ಟು, ಇನ್ನಷ್ಟು ಏರಿಸುತ್ತಿದ್ದಾನೆ.

ನೀವು ಸುಮ್ಮನೇ ಒಂದು ಸಾರಿ ಉತ್ತರದ ಬೀದರ್‌ನಿಂದ ದಕ್ಷಿಣದ ಚಾಮರಾಜನಗರದ ವರೆಗೆ ಯಾವುದೇ ಪಕ್ಷದ

ಅಭ್ಯರ್ಥಿಯ ಜಾತಕ ನೋಡುತ್ತ ಬನ್ನಿ. ಯಾವ ಪಕ್ಷವಾದರೂ ಆ ಕ್ಷೇತ್ರದ ಜಾತಿ–ಮತದ ಲೆಕ್ಕಾಚಾರವನ್ನು ಬಿಟ್ಟು ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದೆಯೇ ಎಂದು ನೋಡಿ. ಕೆಲವರು ತಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಬೇಗ ಪ್ರಕಟ ಮಾಡಿರಬಹುದು, ಇನ್ನು ಕೆಲವರು ತಡ ಮಾಡಿರಬಹುದು. ಅದರ ಹಿಂದಿನ ಗಣಿತ ಒಂದೇ ; ಅದು ಆ ಅಭ್ಯರ್ಥಿಯ ಜಾತಿ ಮತ್ತು ಹಣದ ಬಲ. ಇದಕ್ಕೆ ಒಂದೋ ಎರಡೋ ಅಪವಾದಗಳೂ ಇರಬಹುದು. ಅಂಥ ಅಪವಾದಕ್ಕೆ ಆ ಅಭ್ಯರ್ಥಿಗೆ ಟಿಕೆಟ್ ತಪ್ಪಿಸಲು ಆಗದ ಪಕ್ಷದ ಅಸಹಾಯಕತೆ ಮಾತ್ರ ಇರಬಹುದು.

ಇಂದಿರಾ ಗಾಂಧಿಯವರು ದಲಿತ, ಕ್ರೈಸ್ತ, ಬ್ರಾಹ್ಮಣ ಮತ್ತು ಮುಸ್ಲಿಂ ಎಂಬ ನಾಲ್ಕು ರಾಷ್ಟ್ರೀಯ ಜಾತಿಗಳನ್ನು ಲೆಕ್ಕಕ್ಕೆ ಇಟ್ಟುಕೊಂಡೇ ರಾಜಕಾರಣ ಮಾಡಿದರು. ಕಾಲಾಂತರದಲ್ಲಿ ಈ ಮತಗಳು ಒಟ್ಟಾಗಿ ಉಳಿಯಲಿಲ್ಲ. ಅದಕ್ಕೆ ಕಾರಣ ಹಿಂದುಳಿದ ವರ್ಗಗಳ ಮೇಲೆ ಕಣ್ಣು ಇಟ್ಟ ವಿ.ಪಿ. ಸಿಂಗ್ ಅವರ ಮಂಡಲ ರಾಜಕಾರಣ ಇರಬಹುದು, ಬ್ರಾಹ್ಮಣ ಮತಗಳ ಮೇಲೆ ಕಣ್ಣು ಇಟ್ಟ ಬಿಜೆಪಿ ಪ್ರಾಬಲ್ಯಕ್ಕೆ ಬಂದುದು ಇರಬಹುದು, ದಲಿತರಿಗಾಗಿಯೇ ರಾಜಕಾರಣ ಮಾಡಿದ ಕಾನ್ಶಿರಾಂ ಇರಬಹುದು; ಮುಸ್ಲಿಂ ರಾಜಕಾರಣ ಮಾಡಿದ ಮುಲಾಯಂ ಇರಬಹುದು. ಈಗ ಒಟ್ಟು ಭಾರತ ಒಂದಾಗಿ ಉಳಿದಿಲ್ಲ. ಜಾತಿ–ಮತಗಳ ಮಧ್ಯೆ ಒಡೆದು ಛಿದ್ರ ವಿಚ್ಛಿದ್ರವಾಗಿ ಹೋಗಿದೆ. ಎಲ್ಲ ಜಾತಿ–ಮತಗಳೂ ಸರ್ಕಾರದಲ್ಲಿ ತಮ್ಮ ಪ್ರಾಬಲ್ಯ ಇರಲಿ ಎಂದು ಈಗ ಬಯಸುತ್ತಿರುವುದೂ ಇದೇ ಕಾರಣಕ್ಕೆ. ಕರ್ನಾಟಕದಲ್ಲಿ ಲಿಂಗಾಯತ ಮತ್ತು ಒಕ್ಕಲಿಗರಂಥ ಪ್ರಬಲ ಜಾತಿಗಳು ಇದೇ ಆಕಾಂಕ್ಷೆಯ ಜತೆಗೇ ಚುನಾವಣೆಯಲ್ಲಿ ತೀರ್ಮಾನ ತೆಗೆದುಕೊಳ್ಳುತ್ತವೆ. ಕರ್ನಾಟಕದಲ್ಲಿ ಅರಸು ನಂತರದ ರಾಜಕಾರಣವನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದು ಇನ್ನೂ ಸ್ಪಷ್ಟವಾಗುತ್ತದೆ. ರಾಜ್ಯದಲ್ಲಿ ಜನತಾ ಅಥವಾ ಜನತಾದಳ ಅಧಿಕಾರಕ್ಕೆ ಬರಲು ಲಿಂಗಾಯತರು ಮತ್ತು ಒಕ್ಕಲಿಗರು ಒಟ್ಟಾಗಿ ಮತ ಚಲಾಯಿಸಿದ್ದರೆ ವೀರೇಂದ್ರ ಪಾಟೀಲ ಅಧಿಕಾರಕ್ಕೆ ಬರಲು ಲಿಂಗಾಯತರು ಹಾಗೂ ಎಸ್. ಎಂ. ಕೃಷ್ಣ ಅಧಿಕಾರಕ್ಕೆ ಬರಲು ಒಕ್ಕಲಿಗ ಮತಗಳು ಕಾಂಗ್ರೆಸ್ ಪರವಾಗಿ ಒಟ್ಟಾಗಿ ಬಿದ್ದುದೂ ಕಾರಣ. ಈಗ ಬಿಜೆಪಿ ಅಧಿಕಾರಕ್ಕೆ ಬರಲು ಮತ್ತೆ ಲಿಂಗಾಯತ ಮತಗಳು ಒಟ್ಟಾದುದು ಕಾರಣ.

ಇದು ವೋಟ್ ಬ್ಯಾಂಕ್ ರಾಜಕಾರಣವಲ್ಲದೇ ಮತ್ತೇನೂ ಅಲ್ಲ. ಇದಕ್ಕೆ ಯಾವ ಪಕ್ಷಗಳೂ ಹೊರತಲ್ಲ. ತತ್ವ, ಸಿದ್ಧಾಂತ ಎಂಬುದೆಲ್ಲ ಬರೀ ಬೊಗಳೆ. ಬೊಗಳೆ ಅಲ್ಲವಾಗಿದ್ದರೆ ಕಾಂಗ್ರೆಸ್‌ನಿಂದ ಬಂದವರನ್ನು ಬಿಜೆಪಿ ಕಣಕ್ಕೆ ಇಳಿಸುತ್ತಿರ ಲಿಲ್ಲ. ಇದಕ್ಕೆ ಕಾಂಗ್ರೆಸ್, ಜೆ.ಡಿ.(ಎಸ್) ಕೂಡ ಹೊರತಲ್ಲ. ಈ ಸಾರಿಯ ಚುನಾವಣೆ ಯಲ್ಲಿ ವೋಟ್ ಬ್ಯಾಂಕ್ ರಾಜಕಾರಣದ ಜತೆಗೆ ಕುಟುಂಬ ರಾಜಕಾರಣವೂ ಸೇರಿಕೊಂಡಿದೆ. ಅಧಿಕಾರಸ್ಥರ ಮಕ್ಕಳು, ತಮ್ಮಂದಿರು, ತಂಗಿಯರು, ರಕ್ತ ಸಂಬಂಧಿ ಗಳು ಕಣಕ್ಕೆ ನುಗ್ಗಿದ್ದಾರೆ. ಅಧಿಕಾರ ಒಂದು ಜಾತಿಯಿಂದ ಒಂದು ಕುಟುಂಬದ ವಶವಾಗುವ ಪ್ರಕ್ರಿಯೆ ಇದು. ಇವರಿಗೆಲ್ಲ 'ನಾನು ಮೊದಲು, ಪಕ್ಷ ಎರಡನೆಯದು, ರಾಜ್ಯ ಮೂರನೆಯದು ಮತ್ತು ದೇಶ ನಾಲ್ಕನೆಯದು' ಎಂಬ ಭಾವನೆ!

ಚುನಾವಣಾ ರಾಜಕಾರಣ ಎಂಬುದು ಎಲ್ಲ ಭ್ರಷ್ಟಾಚಾರದ ತಾಯಿ ಬೇರು. ಚುನಾವಣಾ ಆಯೋಗ ನಿಗದಿ ಮಾಡಿದ 25 ಲಕ್ಷದ ಮಿತಿಯಲ್ಲಿ ಈಗ ಯಾರೂ ಚುನಾವಣೆ ಮಾಡಲು ಆಗದು. ಹೀಗೆ ಮಿತಿ ಹಾಕಿ ಅದನ್ನು ನಿಯಂತ್ರಿಸಲು ಆಗದಿರುವುದು ಇನ್ನೂ ಹಾಸ್ಯಾಸ್ಪದ. ರಾಜಕಾರಣ, ದುಡ್ಡು ಹಾಕಿ ದುಡ್ಡು ಮಾಡುವ ದಂಧೆ. ನಮ್ಮ ಈಗಿನ ರಾಜಕೀಯ ವ್ಯವಸ್ಥೆಯಲ್ಲಿ ಲೋಕಸಭೆಗೆ ಸ್ಪರ್ಧಿಸಲು ಕನಿಷ್ಠ ಎಸ್ಸೆಸ್ಸೆಲ್ಸಿ ಕೂಡ ಪಾಸಾಗಿರಬೇಕಿಲ್ಲ. ಸೋಜಿಗ ಎಂದರೆ ಬಹುತೇಕ ರಾಜಕೀಯ ಪಕ್ಷಗಳು ತಮ್ಮ ಗೆಲುವಿಗಾಗಿ ಅನಕ್ಷರಸ್ಥ ಮತಗಳನ್ನೇ ನೆಚ್ಚಿ ಕೊಂಡಿವೆ. ಮುಲಾಯಂ, ಕಂಪ್ಯೂಟರ್ ಮತ್ತು ಇಂಗ್ಲಿಷ್ ವಿರುದ್ಧ ಮಾತನಾಡುವುದು ಇದೇ ಕಾರಣಕ್ಕೆ ಇರಬಹುದು. ಅನಕ್ಷರಸ್ಥ ಮತಗಳನ್ನು ಕೊಳ್ಳುವುದು ಸುಲಭ ಅಥವಾ ಅವರು ಮತಗಟ್ಟೆಗೆ ಬರದಂತೆ ಮಾಡುವುದು ಇನ್ನೂ ಸುಲಭ. ಪರಿಣಾಮ ಎರಡೂ ಒಂದೇ.

ಹೀಗೆ ಅಧಿಕಾರ ಕೇಂದ್ರೀಕೃತವಾಗುತ್ತ ಹೋದಂತೆ ಮತದಾರನಿಗೆ ಭ್ರಮ ನಿರಸನ ಆಗುತ್ತ ಹೋಗುತ್ತದೆ. 'ಯಾರು ಬಂದರೇನು ನಾನು ರಾಗಿ ಬೀಸುವುದು ತಪ್ಪುತ್ತದೆಯೇ' ಎಂಬ ನಿರಾಶೆ ಮೊಳೆಯುತ್ತದೆ. ಈ ನಿರಾಶೆ ಮೊಳೆತು ದಶಕಗಳೇ ಆಗಿ ಹೋದುವು. ಅವನು/ಳು ಚುನಾವಣೆ ದಿನ ಮತಗಟ್ಟೆಗೆ ಹೋಗುವ ಬದಲು ಮನೆಯಲ್ಲಿಯೇ ಹಾಯಾಗಿ ಇರಬಹುದು; ಇಲ್ಲವೇ ಇನ್ನೆಲ್ಲಿಯಾದರೂ ತಿರುಗಲು ಹೋಗಬಹುದು. ಈ ವರ್ಗಕ್ಕೆ, 'ನಾನು ಏನು ಮಾಡಿದರೂ ನನಗೆ ಬೇಕಾದುದು ಸಿಗದು' ಎಂಬ ನಿರಾಶೆ ಇದ್ದರೆ ಇನ್ನು ಕೆಲವರಿಗೆ 'ಮತದಾನ ಮಾಡದೆಯೂ ನನಗೆ ಬೇಕಾದುದನ್ನು ಮಾಡಿಸಿಕೊಳ್ಳಬಲ್ಲೆ' ಎಂಬ ಅಹಂ ಇರಬಹುದು. ನಿಜವಾಗಿಯೂ, 'ನಾನು ಮತದಾನ ಮಾಡುವೆ' ಎಂಬ ಮಧ್ಯಮ ವರ್ಗಕ್ಕೆ ಆಯ್ಕೆಗಳೇ ಇಲ್ಲದೇ ಇರಬಹುದು. ಯಾರಿಗೆ ಮತ ಹಾಕಬೇಕು ಎಂಬ ದಿಗಿಲು ಅವರಿಗೆ!

ಇಷ್ಟೆಲ್ಲ ನಿರಾಶೆಯ ಕಾರ್ಮೋಡ ಕವಿದ ದೇಶದಲ್ಲಿ ಬದಲಾವಣೆ ಆಗಿಯೇ ಇಲ್ಲ ಎಂದಲ್ಲ. ಹಾಗೆ ನೋಡಿದರೆ ಇಡೀ ಜಗತ್ತು ಬೆಚ್ಚಿ ಬೀಳುವಂಥ ಬದಲಾವಣೆಗಳನ್ನು ಭಾರತದ ಮತಪೆಟ್ಟಿಗೆ ಮಾಡಿದೆ. ಇಂದಿರಾಗಾಂಧಿ ಅವರನ್ನೇ ಅವರ ಅಖಾಡದಲ್ಲಿಯೇ ಜನರು ಅಂಗಾತ ಬೀಳಿಸಿ ಬಿಟ್ಟರು. ಕೆಲವೇ ತಿಂಗಳ ಅಂತರದಲ್ಲಿ ಸಾಲಾಗಿ ವಾಜಪೇಯಿ, ಅಡ್ವಾಣಿ, ಚಂದ್ರಶೇಖರ್ ಅವರಂಥವರೂ ಮಣ್ಣು ಮುಕ್ಕಿದರು. ಕರ್ನಾಟಕದಲ್ಲಿ ಅರಸು, ದೇವೇಗೌಡ, ಹೆಗಡೆ, ಬಂಗಾರಪ್ಪ, ಯಡಿಯೂರಪ್ಪ, ಅಂಬರೀಷ್ ಅವರಂಥ ಜನಪ್ರಿಯ ನಾಯಕರೂ ಸೋಲಿನ ರುಚಿ ಕಂಡಿದ್ದಾರೆ. ಶಕ್ತಿ, ಜಾತಿ ರಾಜಕಾರಣದ ನಡುವೆಯೇ ನಡೆದ ಈ ವಿದ್ಯಮಾನಗಳು 'ಜನರು ಒಂದು ಅವಕಾಶಕ್ಕಾಗಿ ಕಾಯುತ್ತಿರುತ್ತಾರೆ' ಎಂಬ ಸಂದೇಶ ಕೊಟ್ಟಿವೆ.

ಈಗಲೂ ಕರ್ನಾಟಕದ ಜನರು ಅವಕಾಶಕ್ಕಾಗಿ ಕಾಯುತ್ತ ಇರಬಹುದು. ಅವರು ಕುಟುಂಬ ರಾಜಕಾರಣಕ್ಕೆ, ಅಧಿಕಾರದ ಹಸಿವಿನ ರಾಜಕಾರಣಕ್ಕೆ, ಜಾತಿ ರಾಜಕಾರಣಕ್ಕೆ, ಹಣ–ತೋಳ್ಬಲದ ರಾಜಕಾರಣಕ್ಕೆ, ಹೆಣ್ಣು ಮಕ್ಕಳು ರಾಜಕೀಯಕ್ಕೆ ಬರಬಾರದು ಎಂಬ ಹುನ್ನಾರಕ್ಕೆ ಉತ್ತರ ಕೊಡಲು ಬಯಸುತ್ತಿರಬಹುದು. ಈ ಉತ್ತರ ರಾಜಕಾರಣಿಗಳಿಗೆ ತಾತ್ಕಾಲಿಕವಾಗಿಯಾದರೂ 'ಇದು ರಾಜಕೀಯ ಮಾಡುವ ರೀತಿ ಅಲ್ಲ' ಎಂಬ

ಪಾತವಾಗಬಹುದು. ಜನರು ಹೀಗೆ ಮನಸ್ಸು ಮಾಡಬೇಕಾದರೆ ಸಾವಿನ ಮೆರವಣಿಗೆಯಂಥ ನೀರವ ಮೌನದಲ್ಲಿ ಚುನಾವಣೆ ನಡೆಯಬಾರದು. ಚುನಾವಣಾ ಆಯೋಗ ಕೆಲವು ಸಾರಿ 'ಅತಿ' ಎನ್ನುವಂತೆ ನಡೆದುಕೊಳ್ಳುತ್ತದೆ. ಈಗಿನ ವಾತಾವರಣ ನೋಡಿದರೆ ನಿಜವಾಗಿಯೂ ಚುನಾವಣೆ ನಡೆಯುತ್ತಿದೆಯೇ ಎಂಬ ಅನುಮಾನ ಬರುತ್ತದೆ. ಗೋಡೆ ಬರಹಕ್ಕೆ ಅವಕಾಶ ಕೊಡುವುದು ಬೇಡ; ಕೊನೆ ಪಕ್ಷ ಅಲ್ಲಲ್ಲಿ ಬಂಟಿಂಗ್, ಫ್ಲೆಕ್ಸ್, ಫಲಕ ಹಾಕಲು ಅವಕಾಶ ಇರಬೇಕು. ಚುನಾವಣೆ ಮುಗಿದ ನಂತರ ಆ ಬಂಟಿಂಗ್, ಫಲಕ ತೆಗೆಸುವ ಕೆಲಸ ಆಯಾ ಪಕ್ಷ ಅಥವಾ ಅಭ್ಯರ್ಥಿಯದು ಎಂಬ ಷರತ್ತು ವಿಧಿಸಬೇಕು.

ಚುನಾವಣೆ ಎಂಬುದು ಒಂದು ಮಹತ್ತರ ಪ್ರಕ್ರಿಯೆ. ಮತದಾರ ತನ್ನ ಇಚ್ಛೆಯನ್ನು ಪ್ರಕಟಿಸಲು ಇರುವ ಏಕೈಕ ಅವಕಾಶ, ಆದರೆ ಆತ ಸ್ವಯಿಚ್ಛೆಯಿಂದ ಪಾಲ್ಗೊಳ್ಳುವುದು ಬಹಳ ಮುಖ್ಯ. ಈಗ ಬಹುಪಾಲು ಇರುವುದು ಆಮಿಷದ ಪಾಲ್ಗೊಳ್ಳುವಿಕೆ. ಮಧ್ಯಮ ವರ್ಗ ಬಹು ಮಟ್ಟಿಗೆ ಈ ಆಮಿಷ ಮೀರಿದ್ದು. ತಿಳಿವಳಿಕೆ ಯುಳ್ಳದ್ದು. ಯಾರಿಗೆ ಮತ ಹಾಕಬೇಕು ಎಂಬ ದಿಗಿಲನ್ನು ಮೀರಿದ ಉತ್ತರವನ್ನು ಮಧ್ಯಮ ವರ್ಗ ಆಯ್ಕೆ ಮಾಡಿಕೊಳ್ಳಬೇಕು. ಎಲ್ಲಿ ಚುರುಕು ಮುಟ್ಟಿಸಬೇಕು ಎಂಬುದನ್ನು ತಿಳಿದುಕೊಳ್ಳಬೇಕು. ನಿಂತ ಮೂವರಲ್ಲಿ ಯಾರನ್ನು ಆಯ್ಕೆ ಮಾಡಿ ಕೊಳ್ಳಬೇಕು ಎಂದು ನಿರ್ಧರಿಸುವುದು ಕಷ್ಟವಲ್ಲ. ಆ ನಿರ್ಧಾರ ಮಾಡಿಕೊಂಡು ಮತಗಟ್ಟೆಯ ಮುಂದೆ ಸಾಲಾಗಿ ನಿಲ್ಲಬೇಕು. ಮತಯಂತ್ರದ ಗುಂಡಿ ಒತ್ತಿ ಬರಬೇಕು. 'ನನ್ನ ಆಯ್ಕೆ ಇದು' ಎಂಬುದನ್ನು ವ್ಯಕ್ತ ಮಾಡಬೇಕು. ಪ್ರಜಾಪ್ರಭುತ್ವ ಬಹುಮತದ ಪ್ರಕ್ರಿಯೆ. ಅನೇಕ ಸಾರಿ ಬಹುಮತದ ತೀರ್ಮಾನ ಸರಿ ಇಲ್ಲದೇ ಇರಬಹುದು. ಆದರೆ ಕನಿಷ್ಠ ಪಕ್ಷ 'ಸರಿಯಿಲ್ಲದ ಈ ತೀರ್ಮಾನಕ್ಕೆ ನನ್ನ ವಿರೋಧ ಇದೆ' ಎಂಬುದನ್ನು ಹೇಳುವುದಕ್ಕಾದರೂ ನಾನು ಮತದಾನ ಮಾಡುವುದು ಮುಖ್ಯ... ಬನ್ನಿ ವೋಟ್ ಮಾಡೋಣ... ದೊಡ್ಡ ಸಂಖ್ಯೆಯಲ್ಲಿ ವೋಟ್ ಮಾಡೋಣ...

■

# ಪ್ರಾದೇಶಿಕ ಪಕ್ಷ ಬೇಕು. ಆದರೆ, ಕಟ್ಟುವವರು ಯಾರು?

ಪ್ರಾದೇಶಿಕ ಪಕ್ಷಗಳ ಬಗ್ಗೆ ಮತ್ತೆ ಚರ್ಚೆ ಶುರುವಿಟ್ಟಿದೆ. 'ನಮಗೆ ಹತ್ತು ಸೀಟುಗಳಲ್ಲಿ ಗೆಲ್ಲಿಸಿ ಬಿಡಿ ಸಾಕು' ಎಂದು ದೇವೇಗೌಡರು ಮತ್ತು ಕುಮಾರಸ್ವಾಮಿ ಮನವಿ ಮಾಡುತ್ತಿದ್ದಾರೆ. ಒಂದು ರಾಜ್ಯದ, ಪ್ರದೇಶದ ಬೇಡಿಕೆಗಳು ಈಡೇರುವುದು ಕೇವಲ ಹತ್ತು-ಹನ್ನೆರಡು ಸೀಟುಗಳಲ್ಲಿ ಗೆದ್ದ ಒಂದು ಪ್ರಾದೇಶಕ ಪಕ್ಷದಿಂದಲೂ ಸಾಧ್ಯ ಎಂಬ ಸ್ಥಿತಿ ಈಗ ದೇಶದಲ್ಲಿ ನಿರ್ಮಾಣವಾಗಿದೆ. 1996ರ ಚುನಾವಣೆಯಲ್ಲಿ ಕೇವಲ 16 ಸೀಟುಗಳಲ್ಲಿ ಗೆದ್ದ ದೇವೇಗೌಡರು ಪ್ರಧಾನಿಯೇ ಆಗಿ ಬಿಟ್ಟರು! ಹಾಗೆ ನೋಡಿದರೆ 96ರಿಂದಲೇ ರಾಷ್ಟ್ರೀಯ ರಾಜಕಾರಣದಲ್ಲಿ ಪ್ರಾದೇಶಿಕ ಪಕ್ಷಗಳ ಪಾತ್ರ ಅನಿವಾರ್ಯ ಎನ್ನುವಂತೆ ಆಯಿತು. ಆದರೆ, ರಾಷ್ಟ್ರ ರಾಜಕಾರಣದಲ್ಲಿ ಎರಡು ಪ್ರಾದೇಶಿಕ ಪಕ್ಷಗಳು ಅಧಿಕಾರ ಹಂಚಿಕೊಂಡುದು 1977ರಲ್ಲಿ. ಆಗ ಅಧಿಕಾರಕ್ಕೆ ಬಂದಿದ್ದ ಜನತಾ ಪಕ್ಷಕ್ಕೆ 295ರಷ್ಟು ಸ್ವಂತ ಸದಸ್ಯ ಬಲವಿದ್ದರೂ ಡಿ.ಎಂ.ಕೆ ಮತ್ತು ಅಕಾಲಿದಳದ ಸದಸ್ಯರಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ನೀಡಲಾಗಿತ್ತು.

ಈಗಂತೂ ಏನಿದ್ದರೂ ಸಮ್ಮಿಶ್ರ ಸರ್ಕಾರಗಳ ಕಾಲ.

ಒಂದು ಪಕ್ಷದ ಆಡಳಿತ ಮುಗಿಯಿತು ಎಂಬ ವಾಸ್ತವ ಮನವರಿಕೆ ಆಗುತ್ತಿದ್ದಂತೆಯೇ ಪ್ರಾದೇಶಿಕ ಭಾವನೆ ಬಡಿದೆಬ್ಬಿಸುವ ಪ್ರಯತ್ನ ಜೋರಾಗಿ ನಡೆದಿದೆ. ಇದೇ ಕೆಲಸವನ್ನು ದೇವೇಗೌಡರು ಮತ್ತು ಕುಮಾರಸ್ವಾಮಿಯವರೂ ಮಾಡುತ್ತಿದ್ದಾರೆ. ಇದರ ನೇರ ಪೆಟ್ಟು ಬೀಳುವುದು 'ರಾಷ್ಟ್ರೀಯ' ಸ್ವರೂಪದ ಕಾಂಗ್ರೆಸ್ ಮತ್ತು ಬಿಜೆಪಿಗೆ. ರಾಜ್ಯದಲ್ಲಿ ಜೆ.ಡಿ(ಎಸ್)ಗೆ ಒಂದು ಮತ ಹಾಕಿದರೂ ಅದರ ಲಾಭ ಬಿಜೆಪಿಗೆ ಎಂದು ಆರ್.ವಿ. ದೇಶಪಾಂಡೆ ಯವರು ಹೇಳುತ್ತಿರುವುದು ಅದಕ್ಕೇ. ಗುಲಾಂ ನಬಿ ಆಜಾದ್ ಕೂಡ, 'ಪ್ರಾದೇಶಿಕ ಪಕ್ಷಗಳಿಗೆ ದೇಶವನ್ನು ಆಳುವ ತಾಕತ್ತಿಲ್ಲ' ಎಂದು ಹಂಗಿಸುತ್ತಿರುವುದು ಈ ಪಕ್ಷಗಳ ಭಯದಿಂದಲೇ.

ಕರ್ನಾಟಕದ ಮಟ್ಟಿಗೆ ಈ ಸಾರಿಯ ಚುನಾವಣೆಯ ಫಲಿತಾಂಶ ಏನಾಗುತ್ತದೆ ಎಂದು ಗೊತ್ತಿಲ್ಲ. ಆದರೆ, ಕರ್ನಾಟಕದ ಜನರು ಕಳೆದ ಅನೇಕ ಚುನಾವಣೆಗಳಿಂದ ರಾಷ್ಟ್ರೀಯ ಪಕ್ಷಗಳ ಜತೆಗೇ ಇದ್ದಾರೆ. ಜನತಾ ಪರಿವಾರವನ್ನೂ ಅವರು 'ಪ್ರಾದೇಶಿಕ' ಎಂದು ಭಾವಿಸಿದ್ದಾರೆ ಎನ್ನಲಾಗದು. ಅದರ ಪರಿಣಾಮ ಏನಾಗಿದೆ ಎಂದು ಗೊತ್ತೇ ಇದೆ. ಹೈದರಾಬಾದ್ ಕರ್ನಾಟಕಕ್ಕೆ ಸಂವಿಧಾನದ 371ನೇ ಕಲಮಿನ ಅಡಿ ಅಶೇಷ ಸ್ಥಾನಮಾನ ಕೊಡುವ ಭರವಸೆಯನ್ನು ಈಗ ಕಾಂಗ್ರೆಸ್ ಹಾಗೂ ಬಿಜೆಪಿಗಳೆರಡೂ ನೀಡುತ್ತಿವೆ. ಆದರೆ, ಎರಡೂ ಸರ್ಕಾರಗಳು ಅಧಿಕಾರದಲ್ಲಿ ಇದ್ದಾಗ ಈ ಕೆಲಸ ಮಾಡಲಿಲ್ಲ. ಹಾಗೆಂದು ಕರ್ನಾಟಕದಿಂದ ದೆಹಲಿಗೆ ನಿಯೋಗಗಳು ಹೋಗಲಿಲ್ಲ ಎಂದೇನೂ ಅಲ್ಲ. ಅದರಿಂದ ಫಲ ಸಿಗಲಿಲ್ಲ ಅಷ್ಟೇ. ನೀತಿ ಏನು ಎಂದರೆ 'ರಾಷ್ಟ್ರೀಯ ಪಕ್ಷಗಳನ್ನು ಕಟ್ಟಿಕೊಂಡರೆ ಸುಖವಿಲ್ಲ'. ಈಗ ಮತ್ತೆ ಅಡ್ವಾಣಿ, ಸೋನಿಯಾ ಅದೇ ರಾಗ ಹಾಡುತ್ತಿದ್ದಾರೆ. ಬರೀ ಗುಲಾಂ ನಬಿ ಏಕೆ ಪ್ರಧಾನಿ ಮನ ಮೋಹನ್ ಅವರೇ ಪ್ರಾದೇಶಿಕ ಪಕ್ಷಗಳನ್ನು ದೂರುತ್ತಾರೆ. ಆದರೆ, ಅದಕ್ಕೆ ಕಾರಣ ಗಳೇನು ಎಂಬುದನ್ನು ಗಮನಿಸಲು ಹೋಗುವುದಿಲ್ಲ, ಅಥವಾ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ.

ಪ್ರಾದೇಶಿಕ ಪಕ್ಷಗಳು ಬೆಳೆಯಲು ರಾಷ್ಟ್ರೀಯ ಪಕ್ಷಗಳ ಇಂಥ ಉದಾಸೀನ (ಅಥವಾ ಅಹಂಕಾರ ಎನ್ನೋಣವೇ?) ಧೋರಣೆಯೇ ಕಾರಣ. ಕರ್ನಾಟಕದಲ್ಲಿ ಒಂದು ಕಾಲದಲ್ಲಿ 28ರಲ್ಲಿ 26, 27 ಸೀಟುಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳೇ ಗೆಲ್ಲುತ್ತಿದ್ದರು. ಇಂದಿರಾ ಹೆಸರಿನಲ್ಲಿ ಯಾರನ್ನು ಕಣಕ್ಕೆ ಇಳಿಸಿದರೂ ಗೆದ್ದು ಬಿಡುತ್ತಾರೆ ಎಂಬ ಭಾವನೆ ಜನಜನಿತವಾಗಿತ್ತು. ಅದು ಬಿಡಿ, ಇಂದಿರಾ ಮತ್ತು ಅವರ ಸೊಸೆ ಸೋನಿಯಾ ತಮ್ಮ ರಾಜ್ಯ ಬಿಟ್ಟು ಬೇರೆ ಕಡೆ ನಿಂತು ಗೆದ್ದುದು ಕರ್ನಾಟಕದಿಂದಲೇ. ಅದರಿಂದ ಕರ್ನಾಟಕಕ್ಕೆ ಆದ ಪ್ರಯೋಜನವೇನು? ಕೆಂಗಲ್ ಅವರಂಥ ಬಹುದೊಡ್ಡ ನಾಯಕ ಕೇಂದ್ರದಲ್ಲಿ ರೈಲ್ವೆ ಸಚಿವರಾದರೂ ಏನೂ ಪ್ರಯೋಜನವಾಗುವುದಿಲ್ಲ. ಹಾಗೆ ನೋಡಿದರೆ ಷರೀಫ್ ಸಾಹೇಬರೇ ನಾಡಿನ ಜನ ನೆನಪು ಇಡುವಂಥ ಕೆಲಸ ಮಾಡಿದ್ದು. ಬಸವನಗೌಡ ಯತ್ನಾಳರು ಬಾಗಲಕೋಟೆ-ವಿಜಾಪುರ ರೈಲು ಮಾರ್ಗ ಕ್ಕಾಗಿಯೇ ಹೋರಾಟ ಮಾಡಿ ರಾಜಕೀಯದಲ್ಲಿ ಮುಂದೆ ಬಂದವರು. ಅವರೇ ರೈಲ್ವೆ ಸಚಿವರಾದರೂ ಈ ಕೆಲಸ ಮಾಡಲು ಆಗಲಿಲ್ಲ!

ಕರ್ನಾಟಕದ ಸಂಸದರ ಬಹುದೊಡ್ಡ ಸಮಸ್ಯೆ ಏನು ಎಂದರೆ ಸಂಸತ್ತಿನಲ್ಲಿ ಬಾಯಿ

ಬಿಡದೇ ಇರುವುದು. ಹಳೆಯ ಮೈಸೂರು ಪ್ರಾಂತ್ಯದ ಬಹುದೊಡ್ಡ ಕಾಂಗ್ರೆಸ್ ನಾಯಕರಾದ ಸಾಹುಕಾರ ಚೆನ್ನಯ್ಯ 60ರ ದಶಕದಷ್ಟು ಹಿಂದೆಯೇ ಒಂದು ಮಾತು ಹೇಳುತ್ತಿದ್ದರು,: 'ನಮ್ಮ ಎಂಪಿಯವರು (ಮೈಸೂರು ಭಾಗದ ಎಂ.ಪಿ. ಉದ್ದೇಶಿಸಿ) ಲೋಕಸಭೆಯಲ್ಲಿ ಒಂದು ಸಾರಿಯೂ ಕೈ ಎತ್ತಿದ್ದಿಲ್ಲ. ಒಂದು ಸಾರಿ ಮಾತ್ರ ಜಲಬಾಧೆ ತಾಳದೆ ಕೈ ಎತ್ತಿದ್ದರು ನೋಡಿ' ಎಂದು. ಇದು ವ್ಯಂಗ್ಯದ ಮಾತು ಇರಬಹುದು. ಆದರೆ, ರಾಮಕೃಷ್ಣ ಹೆಗಡೆ, ಎಸ್.ಎಂ. ಕೃಷ್ಣ ಅವರಂಥ ಬಹು ಭಾಷಾ ಬಲ್ಲಿದರೂ ಸಂಸತ್ತಿನಲ್ಲಿ ಬಾಯಿ ಬಿಟ್ಟಿದ್ದು ಕಡಿಮೆ. ಮಗು ಅತ್ತರೆ ಮಾತ್ರ ತಾಯಿ ಹಾಲು ಕೊಡುತ್ತಾಳೆ. ಕೇಂದ್ರದಲ್ಲಿ ಬಹುವರ್ಷ ಆಳಿದ ಕಾಂಗ್ರೆಸ್, ಕರ್ನಾಟಕಕ್ಕಂತೂ ತಾಯಿ ಆಗಿರಲೇ ಇಲ್ಲ.

ಇಂಥ ಮಲತಾಯಿ ಧೋರಣೆ ವಿರುದ್ಧ ಮೊದಲು ದನಿ ಎತ್ತಿದವರು ರಾಮಕೃಷ್ಣ ಹೆಗಡೆ. 1983ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೊದಲ ಕಾಂಗ್ರೆಸ್ಸೇತರ ಸರ್ಕಾರದ ನೇತೃತ್ವ ವಹಿಸಿದ್ದ ಹೆಗಡೆ ತಮ್ಮ ಬಜೆಟ್‌ಗಳಲ್ಲಿಯೇ ಇದನ್ನು ಪ್ರಸ್ತಾಪ ಮಾಡಿದರು. 'ಪ್ರಬಲವಾದ ಕೇಂದ್ರಕ್ಕೆ ಬಲವಾದ ರಾಜ್ಯಗಳ ಅಗತ್ಯ' ಎಂಬುದು ಅವರ ವಾದವಾಗಿತ್ತು. 'ಬರೀ ಕೇಂದ್ರ ಮಾತ್ರ ಬಲವಾಗುತ್ತ ಸಾಗಿದರೆ ರಾಜ್ಯಗಳು ದುರ್ಬಲವಾಗುತ್ತ ಹೋಗುತ್ತವೆ. ಆರ್ಥಿಕ ಕ್ಷೇತ್ರದಲ್ಲಿ ಹೆಚ್ಚಿನ ಅಧಿಕಾರ ಕೇಂದ್ರದ ಬಳಿ ಇರುವ ಕಾರಣದಿಂದಲೇ ಬಡತನ, ಅನಕ್ಷರತೆಯ ನಿವಾರಣೆ ಸಾಧ್ಯವಾಗಿಲ್ಲ; ಜತೆಗೆ ಇದು ಆರ್ಥಿಕ ವೃದ್ಧಿದರ ಕುಂಠಿತವಾಗಲೂ ಕಾರಣ. ಇದಕ್ಕೆ ಪರಿಹಾರ ಎಂದರೆ ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡುವುದು' ಎಂದು ಹೆಗಡೆ ಪ್ರತಿಪಾದಿಸಿದ್ದರು. ಆದರೆ, ಹೆಗಡೆಯವರೂ ಪ್ರಾದೇಶಿಕ ಪಕ್ಷದ ಪರವಾಗಿ ಇರಲಿಲ್ಲ. 97ರಲ್ಲಿ ಅವರು ಲೋಕಶಕ್ತಿ ಕಟ್ಟಿದಾಗಲೂ 'ಭದ್ರ, ಸಮಗ್ರ ಭಾರತ'ದ ಕುರಿತೇ ಮಾತನಾಡಿದ್ದರು. ಇದಕ್ಕೆ ಹೆಗಡೆ ಬೆಳೆದು ಬಂದ ರಾಷ್ಟ್ರೀಯವಾದದ ಪರಿಸರವೂ ಕಾರಣವಾಗಿರಬೇಕು.

ರಾಜ್ಯದಲ್ಲಿ ಒಂದು ಗಟ್ಟಿ ಮುಟ್ಟಾದ ಪ್ರಾದೇಶಿಕ ಪಕ್ಷವನ್ನು ಕಟ್ಟುವ ಸಾಮರ್ಥ್ಯ ಬಂಗಾರಪ್ಪನವರಿಗೆ ಇತ್ತು. 92ರಲ್ಲಿ ಮುಖ್ಯಮಂತ್ರಿ ಪದವಿಯನ್ನು ಕಳೆದುಕೊಂಡ ನಂತರ ಕರ್ನಾಟಕ ಕಾಂಗ್ರೆಸ್ ಪಕ್ಷ (ಕೆ.ಸಿ.ಪಿ) ಕಟ್ಟಿದಾಗ ಅವರಿಗೆ ಈ ಹೊಳಹು ಇತ್ತು ಅನಿಸುತ್ತದೆ. ಆ ಪಕ್ಷ ಕಟ್ಟುವಾಗ ಅವರು, 'ಐದು ಕೋಟಿ ಕನ್ನಡಿಗರ ಆತ್ಮ ಗೌರವದ ಪ್ರಶ್ನೆಯನ್ನು' ಎತ್ತಿದ್ದರು. 'ಕರ್ನಾಟಕಕ್ಕೆ ಗೌರವ ಪೂರ್ಣವಾದ, ಸನ್ಮಾನ ದಾಯಕವಾದ ಸ್ಥಾನಮಾನ ಒದಗಿಸಿಕೊಡುವ' ಭರವಸೆ ತಾಳಿದ್ದರು. 1994ರಲ್ಲಿ ಅವರ ಪಕ್ಷದಿಂದ ವಿಧಾನಸಭೆಗೆ ಹತ್ತು ಜನ ಶಾಸಕರು ಆರಿಸಿ ಬಂದರು. ಸ್ವತಃ ಬಂಗಾರಪ್ಪ 96ರಲ್ಲಿ ತಮ್ಮ ಪಕ್ಷದಿಂದ ಲೋಕಸಭೆಗೆ ಆಯ್ಕೆಯಾದರು. ಪ್ರಾದೇಶಿಕ ಪಕ್ಷವೊಂದಕ್ಕೆ ಸಿಕ್ಕ ಬಹು ದೊಡ್ಡ ಯಶಸ್ಸು ಇದು. ಬಂಗಾರಪ್ಪನವರು ಅದೇ ಪಕ್ಷವನ್ನು ಬೆಳೆಸಿಕೊಂಡು ಬಂದಿದ್ದರೆ ಅವರು ಒಂದು ಶಕ್ತಿಯಾಗಿ ಬೆಳೆಯಲು ಸಾಧ್ಯವಿತ್ತೋ ಏನೋ? ಆದರೆ, ಕೆ.ಸಿ.ಪಿಯನ್ನು ಕಾಂಗ್ರೆಸ್ ಜತೆಗೆ ವಿಲೀನಗೊಳಿಸುವ ಮೂಲಕ ಆ ಕನಸು ಒಡೆದು ಹೋಯಿತು.

1989ರಲ್ಲಿ ರೈತ ಸಂಘವೂ ಭಾರಿ ಭರವಸೆ ಜತೆಗೆ ಚುನಾವಣೆ ಕಣಕ್ಕೆ ಇಳಿದರೂ

ಜನರ ಪ್ರತಿಕ್ರಿಯೆ ಮಾತ್ರ ಆಘಾತಕಾರಿಯಾಗಿತ್ತು. ಆ ವಿಧಾನಸಭಾ ಚುನಾವಣೆಯಲ್ಲಿ 111 ಮಂದಿ ರೈತ ಸಂಘದ ಅಭ್ಯರ್ಥಿಗಳ ಪೈಕಿ ಗೆದ್ದವರು ಇಬ್ಬರು. 89 ಅಭ್ಯರ್ಥಿಗಳ ಠೇವಣಿಯೇ ನಷ್ಟವಾಯಿತು. 94ರ ವಿಧಾನಸಭಾ ಚುನಾವಣೆ ಯಲ್ಲಿ ಇದು ಇನ್ನೂ ಭೀಕರವಾಗಿತ್ತು. ಗೆದ್ದವರು ಒಬ್ಬರೇ. ಸ್ಪರ್ಧಿಸಿದ 112 ಜನರಲ್ಲಿ ಠೇವಣಿ ಕಳೆದುಕೊಂಡವರು 101 ಜನ! ವಿಧಾನಸಭೆಯಲ್ಲಿ ಬಲ ಪಡೆಯಲಾಗದ ಒಂದು ಸಂಘಟನೆ ಅಥವಾ ಪಕ್ಷ ಲೋಕಸಭೆ ಪ್ರವೇಶಿಸುವ ಮಾತು ದೂರವೇ. ಕೆ.ಸಿ.ಪಿ ಮತ್ತು ರೈತ ಸಂಘ ಎರಡರ ವಿಚಾರದಲ್ಲಿಯೂ ಈ ಮಾತು ನಿಜವಾಯಿತು.

1956ರಷ್ಟು ಹಿಂದೆ ರಾಜ್ಯಗಳ ಪುನರ್ ವಿಂಗಡಣೆಯಾದ ಸಂದರ್ಭದಲ್ಲಿ ಕಾಂಗ್ರೆಸ್ ವಿರುದ್ಧ ಬಂಡು ಎದ್ದು 'ಲೋಕ ಸೇವಾ ಸಂಘ' ಎಂಬ ಪಕ್ಷ ಕಟ್ಟಿದ ಕೊಪ್ಪಳದ ಅಳವಂಡಿ ಶಿವಮೂರ್ತಿ ಸ್ವಾಮಿಗಳ ನೇತೃತ್ವದ ಪಕ್ಷದಲ್ಲಿ ವಿಶ್ವನಾಥರೆಡ್ಡಿ ಮುದ್ನಾಳ, ಎಸ್.ಆರ್. ಬೊಮ್ಮಾಯಿ ಅವರಂಥ ನಾಯಕರು ಇದ್ದರೂ ಅದು ಕೂಡ 'ಪ್ರಥಮ ಚುಂಬನೇ ದಂತಭಗ್ನೇ' ಎಂಬ ಪ್ರಯೋಗವೇ ಎನಿಸಿತು.

ಇಷ್ಟೆಲ್ಲ ವೈಫಲ್ಯಗಳ ಸರಣಿ ಇದ್ದರೂ ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷ ಇಂದಲ್ಲ ನಾಳೆ ಹುಟ್ಟಬಹುದು. ಅದು ಸಾಧ್ಯವಿರುವುದು ದೇವೇಗೌಡರಿಗೆ ಮಾತ್ರ. 90ರದಶಕದಲ್ಲಿ, ಹೆಗಡೆ ಅವರ ಜತೆ ಮುನಿಸಿಕೊಂಡ ನಂತರ, ಗೌಡರು ಕಟ್ಟಿದ್ದು ಕರ್ನಾಟಕ ವಿಕಾಸ ವೇದಿಕೆಯನ್ನು. ಅದರ ಆಶಯ ನಾಡಿನ ಅಭಿವೃದ್ಧಿಯೇ ಆಗಿತ್ತು. ಕವಿ ಸಿದ್ದಯ್ಯ ಪುರಾಣಿಕರಿಗೆ ಅದರ ನೇತೃತ್ವ ವಹಿಸಲಾಗಿತ್ತು. ಆದರೆ, ದೇವೇ ಗೌಡರಿಗೆ ರಾಷ್ಟ್ರ ರಾಜಕಾರಣದ ಹುಚ್ಚು. 'ಮನೆ ಗೆದ್ದವನು ಮಾರು ಗೆಲ್ಲುತ್ತಾನೆ. ಎರಡೂ ದೋಣಿಯಲ್ಲಿ ಕಾಲು ಇಟ್ಟವನು ನಡು ನೀರಿನಲ್ಲಿ ಮುಳುಗುತ್ತಾನೆ' ಎಂದು ಗೌಡರಿಗೆ ಯಾರು ಹೇಳಬೇಕು?

■

# ವೋಟು ಕೊಡಿ ಎಂದರೆ ಬೂಟು ಏಕೆ ಎಸೆಯುತ್ತಾರೆ?

ಇದು ವಿಚಿತ್ರ. ಮತದಾನದ ಮಹತ್ವ ಕುರಿತು ಮಾಧ್ಯಮಗಳು ಈ ಸಾರಿ ಒತ್ತು ಕೊಟ್ಟಷ್ಟು ಹಿಂದೆ ಯವತ್ತಾದರೂ ಮಾಡಿದ್ದವಾ ಎಂದು ಹೇಳುವುದು ಕಷ್ಟ. ಆದರೆ, ಜನ ನೋಡಿ, ಮತಗಟ್ಟೆ ಕಡೆ ಬರಲೇ ಇಲ್ಲ. ಬಂದವರ ಸಂಖ್ಯೆ ಸರಾಸರಿ ಶೇ 60ನ್ನೂ ಮೀರಲಿಲ್ಲ. ಕೆಲವು ಕಡೆ ಹೆಚ್ಚಾಗಿರಬಹುದು, ಕೆಲವು ಕಡೆ ಕಡಿಮೆ ಆಗಿರಬಹುದು. ಬೆಂಗಳೂರಿನಲ್ಲಿಯಂತೂ ಶೇಕಡ ಅರ್ಧದಷ್ಟೂ ಜನ ಮತ ಹಾಕಲೇ ಇಲ್ಲ. ಮುಂಬೈನಲ್ಲಿ ಇದಕ್ಕಿಂತ ಪರಿಸ್ಥಿತಿ ಕೆಟ್ಟದಾಗಿತ್ತು.

ಚುನಾವಣೆ ಬಗ್ಗೆ ಜನರಿಗೆ ಅರಿವಿರಲಿಲ್ಲ ಎನ್ನೋಣವೇ? ಅನಾಸಕ್ತಿ ಕಾರಣ ಎನ್ನೋಣವೇ? ಚುನಾವಣೆ ಪ್ರಕ್ರಿಯೆಯಲ್ಲಿಯೇ ಅವರಿಗೆ ಆಸಕ್ತಿ ಹೊರಟು ಹೋಗಿದೆಯೇ? ಯಾರು ಬಂದರೆ ಏನು ಎಂಬ ತಾತ್ಸಾರವೇ? ರಾಜಕೀಯ ವ್ಯವಸ್ಥೆ ಗಬ್ಬೆದ್ದು ಹೋಗಿರುವುದು ಅವರಿಗೆ ಬೇಸರ, ಅಸಹ್ಯ ಮೂಡಿಸಿರಬಹುದೆ? ಅಥವಾ ಇವೆಲ್ಲವೂ ಕಾರಣಗಳಾಗಿರಬಹುದೇ?

ಚುನಾವಣೆ ಎಂದರೆ ಆಯ್ಕೆ. ಅದು 18 ವರ್ಷ ದಾಟಿದ

ಪ್ರತಿಯೊಬ್ಬ ಪ್ರಜೆಗೆ ಸಂವಿಧಾನ ಕೊಟ್ಟ ಹಕ್ಕು; ಪ್ರಜಾಪ್ರಭುತ್ವವನ್ನು ಅರ್ಥಪೂರ್ಣಗೊಳಿಸುವ ಹಕ್ಕು. ನನ್ನ ಪ್ರತಿನಿಧಿ ಯಾರಾಗಿರಬೇಕು ಎಂಬುದನ್ನು ಗುಪ್ತವಾಗಿ ತಿಳಿಸುವ ಅಧಿಕಾರ. ಅದನ್ನು ಚಲಾಯಿಸಿದಾಗ ಅಲ್ಲವೇ ನಮ್ಮ ಆಯ್ಕೆ ಏನು ಎಂಬುದು ತಿಳಿಯುವುದು. ಆ ಹಕ್ಕಿನ ಚಲಾವಣೆಯೇ ಬೇಡ ಎಂಬ ಸಿನಿಕತನ ಏಕೆ?

ರಾಜಕಾರಣಿಗಳ ಬಗ್ಗೆ ಜನರ ನಂಬಿಕೆ ಅತ್ಯಂತ ವೇಗವಾಗಿ ಕುಸಿಯುತ್ತಿರು ವುದು ಹಾಗೂ ಅವರನ್ನು ಆಯ್ಕೆ ಮಾಡುವ ಚುನಾವಣಾ ಪ್ರಕ್ರಿಯೆಯಲ್ಲಿ ನಂಬಿಕೆ ಹೊರಟು ಹೋಗುತ್ತಿರುವುದು ಈ ನಿರಾಸಕ್ತಿಗೆ ಮುಖ್ಯ ಕಾರಣವಾಗಿರುವಂತಿದೆ. ಈಗಿನ ಚುನಾವಣೆ ಎಂದರೆ ದುಡ್ಡು ಇದ್ದವರು ಸ್ಪರ್ಧಿಸುವುದು, ದುಡ್ಡು ತೆಗೆದು ಕೊಂಡವರು ಮತ ಹಾಕುವುದು ಎನ್ನುವಂತೆ ಆಗಿದೆ. ಕಲಿತವರಲ್ಲಿ ಈ ವ್ಯವಸ್ಥೆಯನ್ನು ಬದಲು ಮಾಡಲು ಸಾಧ್ಯವಿಲ್ಲ ಎಂಬ ನಿರಾಶೆ ದಟ್ಟವಾಗಿದೆ.

ಚುನಾವಣಾ ಪ್ರಕ್ರಿಯೆಯನ್ನು ಹಣ ಮತ್ತು ತೋಳ್ಬಲದಿಂದ ಮುಕ್ತಗೊಳಿಸಲು ಚಿಂತನೆ, ಪ್ರಯತ್ನ ನಡೆದಿಲ್ಲ ಎಂದಲ್ಲ. ಆದರೆ, ಫಲ ಮಾತ್ರ ಸೊನ್ನೆ. ಟಿ. ಎನ್. ಶೇಷನ್, ಕೇಂದ್ರ ಚುನಾವಣಾ ಆಯುಕ್ತರಾಗಿ ದೊಡ್ಡ ಸದ್ದು ಮಾಡಿದಾಗಲೇ ಒಂದು ಚುನಾವಣಾ ಆಯೋಗ ಇದೆ ಎಂಬುದು ಗಮನಕ್ಕೆ ಬಂದುದು. ಚುನಾವಣೆ ಪ್ರಕ್ರಿಯೆಯ ಶುದ್ಧೀಕರಣ ಕೊಂಡ ಮಟ್ಟಿಗೆ ಆರಂಭವಾದುದು. ಈ 'ಆರಂಭ' ಕೂಡ ಒಟ್ಟು ಚುನಾವಣಾ ಪ್ರಕ್ರಿಯೆಯನ್ನು ಹಣವಂತರಿಂದ ಮುಕ್ತ ಮಾಡಲು ಸಫಲವಾಗಿಲ್ಲ. 'ಸಂಪೂರ್ಣ ಕ್ರಾಂತಿ'ಯ ಹರಿಕಾರರಾದ ಜಯಪ್ರಕಾಶ ನಾರಾಯಣ 1975ರಷ್ಟು ಹಿಂದೆ ದೊಡ್ಡ ಮೆರವಣಿಗೆ ಮಾಡಿ, 'ಲೋಕಸಭೆ ಮತ್ತು ವಿಧಾನಸಭೆಗಳು ಜನತೆಯ ಆಸೆ ಆಕಾಂಕ್ಷೆಗಳನ್ನು ನೈಜವಾಗಿ ಪ್ರತಿನಿಸಬೇಕು; ಚುನಾವಣೆಗಳು ಅಧಿಕಾರ ಯಂತ್ರದ ದುರುಪಯೋಗ, ಹಣ ಮತ್ತು ಹಿಂಸೆಯಿಂದ ಮುಕ್ತವಾಗಿರಬೇಕು' ಎಂದು ಲೋಕಸಭೆ ಮತ್ತು ರಾಜ್ಯಸಭೆಯ ಅಧ್ಯಕ್ಷರಿಗೆ ಮನವಿ ಸಲ್ಲಿಸಿದ್ದರು.

ಇದಕ್ಕಿಂತ ಸುಮಾರು ಮೂರು ವರ್ಷ ಮುಂಚೆ ಅಂದರೆ 1972ರಲ್ಲಿ ಸೋಮನಾಥ ಚಟರ್ಜಿ, ಅಟಲ ಬಿಹಾರಿ ವಾಜಪೇಯಿ ಮತ್ತು ಎಲ್. ಕೆ. ಅಡ್ವಾಣಿ ಅವರನ್ನು ಒಳಗೊಂಡ ಒಂದು ಜಂಟಿ ಸಮಿತಿಯನ್ನು ಚುನಾವಣಾ ಕಾಯ್ದೆಗಳ ತಿದ್ದುಪಡಿಗೆ ರಚಿಸಲಾಗಿತ್ತು. ಈ ಸಮಿತಿ 121 ಪುಟಗಳ ವರದಿಯನ್ನೂ ಸಲ್ಲಿಸಿತ್ತು. ಈ ಸಮಿತಿಯ ಸದಸ್ಯರು ತಮ್ಮ ರಾಜಕೀಯ ಜೀವನದ ಏನೆಲ್ಲ ಎತ್ತರಗಳನ್ನು ಕಂಡರೂ ಸಮಿತಿಯ ವರದಿಯ ಮೇಲಿನ ದೂಳು ಮಾತ್ರ ಹಾಗೇ ಉಳಿಯಿತು.

ಚುನಾವಣಾ ಸುಧಾರಣೆಗಾಗಿ ನೇಮಕವಾದ ಗೋಸ್ವಾಮಿ ಸಮಿತಿ (1990) ಕೂಡ ಹೇಳಿದ್ದು, 'ಚುನಾವಣಾ ಸುಧಾರಣೆ ಎಂಬುದು ಒಂದು ನಿರಂತರ ಪ್ರಕ್ರಿಯೆ ಎಂಬುದೇನೋ ನಿಜ. ಆದರೆ, ಈ ದಿಸೆಯಲ್ಲಿ ಇದುವರೆಗೆ ಮಾಡಿದ ಪ್ರಯತ್ನಗಳು ಏನೇನೂ ಅಲ್ಲ' ಎಂದು. ಹಾಗೆ ನೋಡಿದರೆ ಚುನಾವಣೆ ಪ್ರಕ್ರಿಯೆಯನ್ನು ಸುಧಾರಿಸಲು ವಿ. ಪಿ. ಸಿಂಗ್ ಸರ್ಕಾರ ಗಂಭೀರ ಪ್ರಯತ್ನ ಮಾಡಿತು. ಸಿಂಗ್ ಸರ್ಕಾರದ ಪತನದ ಜತೆಗೆ ಆ ಪ್ರಯತ್ನ ಬರೀ ಪ್ರಯತ್ನ ಮಾತ್ರವಾಗಿ ಉಳಿಯಿತು. ತದನಂತರ ಇಂಥ ಪ್ರಯತ್ನಗಳು ನಡೆದ ಗಟ್ಟಿ ನಿದರ್ಶನಗಳು ಕಾಣುವುದಿಲ್ಲ.

ಚುನಾವಣೆ ಪ್ರಕ್ರಿಯೆಯಲ್ಲಿ ಯಾವುದೇ ಮೂಲಭೂತ ಬದಲಾವಣೆ ತರುವುದಕ್ಕೆ ರಾಜಕೀಯ ಪಕ್ಷಗಳಿಗೆ ಇಚ್ಛಾಶಕ್ತಿ ಇಲ್ಲದಿರುವುದರಿಂದ, ಚುನಾವಣೆ ಬರುವವರೆಗೆ ಸುಧಾರಣೆ ಕುರಿತು ಚರ್ಚೆ ನಡೆಯುತ್ತದೆ. ಚುನಾವಣೆ ಬಂದಾಗ, 'ಮುಂದಿನ ಸಾರಿ ಮಾಡೋಣ' ಎಂಬ ಮಾತು ಕೇಳಿ ಬರುತ್ತದೆ. ಆದರೆ, ಆ 'ಮುಂದಿನ ಸಾರಿ' ಬರುವುದೇ ಇಲ್ಲ. 1985ರಲ್ಲಿ ರಾಜ್ಯದಲ್ಲಿ ವಿಧಾನಸಭೆಗೆ ಚುನಾವಣೆ ನಡೆದಾಗ ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪ ಅವರ ಅಧ್ಯಕ್ಷತೆಯಲ್ಲಿ ಐವರು ಸದಸ್ಯರ ಕಾವಲು ಸಮಿತಿಯೊಂದನ್ನು ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ರಚಿಸಿದ್ದರು. ಆದರೆ, ಈ ಸಮಿತಿಯಿಂದಲೂ ಚುನಾವಣೆ ಅಕ್ರಮ ತಡೆಯಲು ಆಗಲಿಲ್ಲ ಎಂಬುದು ವಿಷಾದಕರ ಬೆಳವಣಿಗೆ.

ಚುನಾವಣೆಯಲ್ಲಿ ಹಣದ ಹಾವಳಿಯೊಂದನ್ನು ತಡೆದು ಬಿಟ್ಟರೆ ಸಾಕು. ಎಲ್ಲವೂ ಸರಿ ಹೋಗುವಂತೆ ಕಾಣುತ್ತದೆ. ದಿನದಿಂದ ದಿನಕ್ಕೆ ಚುನಾವಣೆ ವೆಚ್ಚ ಗಗನಕ್ಕೆ ಹೋಗುತ್ತಿದೆ. ಅದಕ್ಕೆ ಒಂದು ಮಿತಿ (ಚುನಾವಣೆ ಆಯೋಗ ಮಿತಿ ಹಾಕಿದ್ದರೂ) ಇರುವಂತೆ ಕಾಣದು. ಯಾರು ಎಷ್ಟು ಹಣ ಖರ್ಚು ಮಾಡಬಹುದೋ ಅವರವರ ತಾಕತ್ತಿಗೆ ಬಿಟ್ಟಿದ್ದು ಎನ್ನುವಂಥ ಸ್ಥಿತಿ ಈಗ ಕರ್ನಾಟಕದಲ್ಲಿಯೇ ಇದೆ. ಮೊನ್ನೆ ತುಮಕೂರಿನಲ್ಲಿ ರಾಷ್ಟ್ರೀಯ ಪಕ್ಷವೊಂದರ ಅಭ್ಯರ್ಥಿ ಸಿಕ್ಕಿದ್ದರು. ಅವರ ಮುಖದಲ್ಲಿ ಅಂಥ ಕಳೆಯೇನೂ ಇರಲಿಲ್ಲ. 'ನೋಡಿ, ನಾನು ಪ್ರತಿ ಮತಗಟ್ಟೆಗೆ 10,000 ರೂಪಾಯಿಯಂತೆ ಕಾರ್ಯಕರ್ತರಿಗೆ ಕೊಡಲೇಬೇಕು. ಅದಕ್ಕಾಗಿಯೇ 1.70 ಕೋಟಿ ಬೇಕು. ನನ್ನ ಎದುರಾಳಿ ಇದರ ದುಪ್ಪಟ್ಟು ಖರ್ಚು ಮಾಡುತ್ತಾನೆ. ನನ್ನ ಬಳಿ ಇರುವುದು ಕೇವಲ ರೂ. 75 ಲಕ್ಷ ಮಾತ್ರ. ಬಾಕಿ ದುಡ್ಡನ್ನು ಪಕ್ಷ ಕೊಡದೇ ಇದ್ದರೆ ನಾನು ಇಲ್ಲಿ ಇರುವುದಿಲ್ಲ' ಎಂದರು. ಹತ್ತು ವರ್ಷಗಳ ಹಿಂದೆಯೇ ಒಂದು ಲೋಕಸಭಾ ಚುನಾವಣೆಗೆ ತಗಲುವ ವೆಚ್ಚ ಎರಡರಿಂದ ಮೂರು ಕೋಟಿ ಎಂದು ಲೆಕ್ಕ ಹಾಕಲಾಗಿತ್ತು. ಈ ಅಭ್ಯರ್ಥಿ ಹಾಕಿದ ಲೆಕ್ಕ ಏನೇನೂ ಅಲ್ಲ ಅಥವಾ ಅವಾಸ್ತವಿಕ.

ಚುನಾವಣೆಯಲ್ಲಿ ಖರ್ಚಾಗುವುದು ಕಪ್ಪು ಹಣ ಎಂದು ಬೇರೆ ಹೇಳಬೇಕಿಲ್ಲ. ಚುನಾವಣೆಯಲ್ಲಿ ಕಪ್ಪು ಹಣದ ಚಲಾವಣೆ ಬಂದುದು 1970ರಷ್ಟು ಹಿಂದೆ. ಆಗ, ವೈ.ಬಿ. ಚವಾಣರು ಇಂದಿರಾ ಸಂಪುಟದಲ್ಲಿ ಹಣಕಾಸು ಸಚಿವರು. 1971ರಲ್ಲಿ ವಾಂಛೂ ಸಮಿತಿ ಕೊಟ್ಟ ವರದಿ ಹಿಡಿದುಕೊಂಡು 'ದೊಡ್ಡ ನೋಟುಗಳ ಚಲಾವಣೆ ರದ್ದು ಪಡಿಸೋಣವೇ?' ಎಂದು ಇಂದಿರಾ ಮುಂದೆ ಕಡತ ಇಟ್ಟರು. 'ಚವಾಣರೇ? ಇನ್ನು ಮುಂದೆ ಕಾಂಗ್ರೆಸ್ ಪಕ್ಷ ಚುನಾವಣೆ ಎದುರಿಸುವುದೇ ಬೇಡವೇ?' ಎಂದು ಇಂದಿರಾ ಕೆಂಗಣ್ಣು ಬೀರಿದ್ದೇ ತಡ, ಚವಾಣ್ ಕಡತದ ಜತೆ ಹೊರಬಿದ್ದರು. ದೊಡ್ಡ ದೊಡ್ಡ ಉದ್ಯಮಗಳು ಮಾತ್ರವೇಕೆ, 'ಅಮೆರಿಕಾ ದೇಶವೇ ಕಾಂಗ್ರೆಸ್ಸಿಗೆ ದುಡ್ಡು ಕೊಟ್ಟಿತ್ತು' ಎಂಬ ಇಂಗಿತ ಆ ದೇಶದ ರಾಯಭಾರಿ ಮೊಯ್ನಿಹಾನ್ ಅವರಿಂದಲೇ ವ್ಯಕ್ತವಾಗಿತ್ತು. ಇದೆಲ್ಲ ಹಳೆಯ ಕಥೆ. ಆದರೆ, ಈಗಿನ ಪರಿಸ್ಥಿತಿಗೆ ಬೇರುಗಳು ಈ ಹಳೆಯ ಕಥೆಗಳಲ್ಲಿಯೇ ಇವೆ. ಬಳ್ಳಾರಿಯಲ್ಲಿ ಕೋಟಿಗಟ್ಟಲೆ ದುಡ್ಡು ಚೆಲ್ಲುವವರನ್ನು ಹಿಡಿದು ಯಾರು ಏನು ಮಾಡಿದ್ದಾರೆ? ಇದನ್ನೆಲ್ಲ ತಾರ್ಕಿಕ ಅಂತ್ಯಕ್ಕೆ ಕೊಂಡು ಹೋಗಬೇಕಾದ

ಚುನಾವಣಾ ಆಯೋಗಕ್ಕೂ ಹೆಚ್ಚಿನ ಕಾನೂನು ಬಲ ಇಲ್ಲ.

ದುಡ್ಡು, ಹೆಂಡ ಹಿಂದೆಯೂ ಇತ್ತು. ಮುಂದೆಯೂ ಇರುತ್ತದೆ. ಇದನ್ನು ಮೀರಿ ಜನರನ್ನು ಮತಗಟ್ಟೆಗೆ ಸೆಳೆಯಲು ಆಕರ್ಷಕ 'ವಿಷಯ' (ಇಶ್ಯೂ) ಗಳೂ ಬೇಕು. ಈ ಸಾರಿಯ ಚುನಾವಣೆಯಲ್ಲಿ ಅದೇ ಇಲ್ಲ. ಅದಕ್ಕಾಗಿಯೇ ಹೊಡಿ, ಬಡಿ, ಕಡಿ ಎಂಬ ಬೈದಾಟಗಳು ಜಾಸ್ತಿಯಾಗಿರಬಹುದು. ಒಬ್ಬನಾದರೂ ನಾಯಕ/ಕಿ ಒಂದು ಸೊಗಸಾದ ಭಾಷಣ ಮಾಡಿದ ಉದಾಹರಣೆ ಇಲ್ಲ. ಸೊಗಸಾದ ಮಾತು ಮತದಾರನ ಜತೆಗಿನ ಸಂಭಾಷಣೆಯಾಗಿರುತ್ತದೆ. ಬೈದಾಟಕ್ಕೆ ಆ ಸಾಧ್ಯತೆಯಿಲ್ಲ. ರಾಜಕಾರಣಿಗಳು ಸಾರ್ವಜನಿಕರನ್ನು ಹೇಗಾದರೂ ನಿಭಾಯಿಸಬಹುದು. ಆದರೆ, ಮತದಾರನನ್ನು ಅಲ್ಲ. ಆತ ಮೀಸೆಯ ಕುಡಿಯಲ್ಲಿಯೇ ನಗುತ್ತ ಏನು ಮಾಡಬೇಕು ಎಂದು ಲೆಕ್ಕ ಹಾಕುತ್ತ ಇರುತ್ತಾನೆ ಅಥವಾ ವ್ಯವಸ್ಥೆಯ ಬಗೆಗೆ ಹತಾಶೆ ಬೆಳೆಯುತ್ತ ಹೋಗಿ ಚಪ್ಪಲಿ, ಶೂ ಎಸೆಯತೊಡಗುತ್ತಾನೆ. ನಮ್ಮ ಚುನಾವಣೆ ವ್ಯವಸ್ಥೆ ಬಗ್ಗೆ ಇದಕ್ಕಿಂತ ಕೆಟ್ಟ ಭಾಷ್ಯ ಇನ್ನೇನು ಇರಲು ಸಾಧ್ಯ?

■

# ಬದಲಾವಣೆಯ ಚಕ್ರ ತಿರುಗುವುದು ಯಾವಾಗ?

ನನಗೆ ಕುತೂಹಲವಿತ್ತು: ಪಕ್ಷೇತರ ಅಭ್ಯರ್ಥಿಯೊಬ್ಬ ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಪ್ರಸ್ತುತನೇ? ಹತ್ತು ಹಲವು ಅಡಚಣೆಗಳನ್ನು ದಾಟಿ ಆತ ಚುನಾವಣೆ ಯನ್ನು ಹೇಗೆ ಎದುರಿಸಿಯಾನು? ತನ್ನ ಪ್ರಸ್ತುತತೆಯನ್ನು ಹೇಗೆ ಸಾಬೀತು ಮಾಡಿಯಾನು ಎಂದು. ಕ್ರೀಡೆಯಲ್ಲಿ ಗೆಲುವು ಅಮುಖ್ಯ. ಈಗಿನ ಚುನಾವಣೆ ವ್ಯವಸ್ಥೆಯಲ್ಲಿಯೂ ಅಷ್ಟೇ. ಕೇವಲ ಸ್ಪರ್ಧೆ ಮಾಡುವುದರಿಂದಲೇ ಅನೇಕ ಸತ್ಯ ಗಳನ್ನು, ವಾಸ್ತವಗಳನ್ನು ಆತ ಜನ ಸಮುದಾಯಕ್ಕೆ ಮನಗಾಣಿಸಬಲ್ಲ. ಅಂಥ ಪ್ರಯತ್ನವನ್ನು ಒಬ್ಬಿಬ್ಬರಲ್ಲ ಅನೇಕ ಜನ ಈ ಸಾರಿಯ ಚುನಾವಣೆಯಲ್ಲಿ ಮಾಡಿದರು.

ದೊಡ್ಡ, ದುಡ್ಡಿರುವ ಒಂದು ಪಕ್ಷದ ಅಭ್ಯರ್ಥಿಯಾಗಿ ಚುನಾವಣೆಗೆ ನಿಂತು ಅದು ಕೊಡುವ ನಿಧಿ, ಅದು ಪ್ರತಿನಿಧಿಸುವ ಜಾತಿ, ಮತ, ಭಾವನೆಗಳ ಬೆಂಬಲ ದಿಂದ ಚುನಾವಣೆಯಲ್ಲಿ ಗೆಲ್ಲುವುದಕ್ಕಿಂತ 'ಅದಾವುದೂ ಬೇಕಿಲ್ಲ, ಸೋತರೂ ಚಿಂತೆಯಿಲ್ಲ' ಎಂದು ಕಣಕ್ಕೆ ಇಳಿದವರು ಮಲ್ಲಿಕಾ ಸಾರಾಭಾಯಿ, ಮೀರಾ ಸನ್ಯಾಲ, ಕ್ಯಾಪ್ಟನ್ ಗೋಪಿನಾಥರಂಥ ಗಣ್ಯರು ಮಾತ್ರವಲ್ಲ. ಕೊಪ್ಪಳದ ಮಾರಮ್ಮ, ಮಂಗಳೂರಿನ

ತಿರುಮಲರಾಯ ಹಳೆಮನೆ, ದಾವಣಗೆರೆಯ ಯೋಗೀಶರಾವ್ ಶಿಂಧೆ, ವಿಜಾಪುರದ ನಿರ್ಮಲಾ ಅರಕೇರಿ ಮುಂತಾದವರು...

ಕ್ಯಾಪ್ಟನ್ ಗೋಪಿನಾಥ್ ಚುನಾವಣೆಗೆ ನಾಮಪತ್ರ ಸಲ್ಲಿಸುವುದಕ್ಕಿಂತ ಮುಂಚೆ ನಮ್ಮ ಕಚೇರಿಗೆ ಬಂದಿದ್ದರು. ಅನೇಕ ಕನಸುಗಳನ್ನು ತಲೆಯಲ್ಲಿ ಹೊತ್ತು ಕೊಂಡಂತಿದ್ದರು. ತಮ್ಮ ಸಾಧ್ಯತೆಗಳು ಹಾಗೂ ಮಿತಿಗಳೆರಡೂ ಅವರಿಗೆ ಆಗ ಗೊತ್ತಿತ್ತು. ಈಗಿನ ಚುನಾವಣೆ ವ್ಯವಸ್ಥೆ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂದೂ ಅವರಿಗೆ ತಿಳಿದಿತ್ತು. ಈಗ ಚುನಾವಣೆ ಮುಗಿದಿದೆ. ಅವರ ಅನುಭವ ಹೇಗಿತ್ತು ಎಂಬ ಕುತೂಹಲದಿಂದಲೇ ಅವರ ಜತೆಗೆ ಮಾತಿಗಿಳಿದೆ. ನನ್ನ ಶಂಕೆ ಸುಳ್ಳಾಗಿರಲಿಲ್ಲ. ಗೋಪಿನಾಥ್ ತಾವು ಸೋಲುವುದಾಗಿಯೇನೂ ನನಗೆ ಹೇಳಲಿಲ್ಲ. ಆದರೆ, ಅವರಿಗೆ ಕೊಳೆತು ಹೋದ ಚುನಾವಣೆ ವ್ಯವಸ್ಥೆ ಬಗ್ಗೆ ತೀವ್ರ ವಿಷಾದವಾಗಿತ್ತು. ಇತರ ಅಭ್ಯರ್ಥಿಗಳ ಹಾಗೆ ಗೆಲ್ಲಲು ಏನು ಬೇಕಾದರೂ ಮಾಡಬಹುದಾದ ಆಯ್ಕೆಯೂ ಅವರ ಮುಂದೆ ಇತ್ತು. ಗೋಪಿನಾಥ್‌ಗೆ ನಾಲ್ಕಾರು ಕೋಟಿ ಖರ್ಚು ಮಾಡುವುದು ಕಷ್ಟವೇನೂ ಇರಲಿಲ್ಲ. ಹಾಗೆ ಮಾಡಬೇಕೇ? ಗೆಲ್ಲುವ ಗುರಿಗಿಂತ ಅದಕ್ಕೆ ಬಳಸುವ ಸಾಧನ ಮುಖ್ಯವಲ್ಲವೇ ಎಂಬ ದ್ವಂದ್ವ ಅವರನ್ನು ಕಾಡಿತು.

ಗೋಪಿನಾಥ್ ಹೇಳುತ್ತ ಹೋದರು : 'ಈಗಿನ ಚುನಾವಣೆಯಲ್ಲಿ ಕಪ್ಪು ಹಣ ಮತ್ತು ಜಾತಿಯ ಬಲವಿಲ್ಲದೆ ಗೆಲ್ಲುವುದು ಕಷ್ಟ. ವಿಚಿತ್ರ ಎಂದರೆ ಜನರು ಜಾತಿಯ ನೆಲೆಯಲ್ಲಿ ಯೋಚನೆ ಮಾಡುವಂತೆ ಮಾಧ್ಯಮಗಳೂ ನಡೆದುಕೊಳ್ಳುತ್ತಿವೆ. ನನ್ನ ಜತೆಗೆ ಬರೀ ಬೆಂಗಳೂರಿನ ಮಾಧ್ಯಮದವರು ಮಾತ್ರವಲ್ಲ, ಪಾಕಿಸ್ತಾನದ ಅಲ್ ಜಜೀರಾ ಟಿ.ವಿಯವರೂ ಮಾತನಾಡಿದರು. ಆದರೆ, ಅವರೆಲ್ಲ ತಮ್ಮ ವರದಿಗಳನ್ನು ಕನ್‌ಕ್ಲೂಡ್ ಮಾಡಿದ್ದು, ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿನ ಜಾತಿ ಲೆಕ್ಕಾಚಾರದಿಂದಲೇ. ಜನರೇ ಹೀಗೆ ಜಾತಿ ಆಧಾರದ ಮೇಲೆ ಯೋಚಿಸುವಂತೆ ನಾವು ಅವರಿಗೆ ಬಲವಂತ ಮಾಡುತ್ತಿದ್ದೇವೆಯೇ?

'ನನಗೂ ತಕ್ಕ ಮಟ್ಟಿಗೆ ಜಾತಿ ಮತ್ತು ಹಣದ ಬಲವಿತ್ತು. ಆದರೆ, ಅದನ್ನು ಬಳಸಿಕೊಂಡರೆ ನನಗೆ 'ವ್ಯತ್ಯಾಸ'ವನ್ನು ತೋರಿಸಿಕೊಟ್ಟಂತೆ ಆಗುತ್ತಿರಲಿಲ್ಲ. ನನಗೆ ಇದ್ದ ಇನ್ನೊಂದು ಸಮಸ್ಯೆ ಎಂದರೆ ಕಪ್ಪು ಹಣವನ್ನು ಬಿಳುಪು ಮಾಡುವುದಲ್ಲ. ಬಿಳಿ ಹಣವನ್ನು ಕಪ್ಪು ಮಾಡುವುದು! ನನ್ನ ಜತೆಗೆ ಇದ್ದವರು, ಬೆಂಬಲಕ್ಕೆ ನಿಂತ ಹಲವರು 'ನಾವೂ ಒಂದಿಷ್ಟು ಹಣ ಚೆಲ್ಲೋಣ' ಎಂಬ ಒತ್ತಡಕ್ಕೆ ಸಿಲುಕಿದ್ದರು. ಆಗಲೂ 'ನನಗೂ ಇತರರಿಗೂ ವ್ಯತ್ಯಾಸ' ಇರುವುದಿಲ್ಲ ಎಂಬುದೇ ನನ್ನ ಅಭಿಪ್ರಾಯವಾಗಿತ್ತು.

'ನನ್ನನ್ನು ತುಂಬ ಕಾಡಿದ್ದು ಮಧ್ಯಮ ವರ್ಗದ ಇನ್‌ಡಿಫರನ್ಸ್ ಅಥವಾ ಔದಾಸೀನ್ಯ. ಅವರು ಭದ್ರವಾದ ಒಂದು ಗೂಡಿನಲ್ಲಿ ಹಾಯಾಗಿದ್ದಾರೆ. ಒಂದು ನೌಕರಿ, ಹೆಂಡತಿ, ಮನೆ, ಮಕ್ಕಳ ಶಿಕ್ಷಣ... ಇದರಾಚೆ ಅವರಿಗೆ ಅನ್ಯ ಜಗತ್ತು ಇಲ್ಲ. ಸಮಾಜದಲ್ಲಿನ ಕೆಡುಕಿಗೆ ಅವರ ಪ್ರತಿಕ್ರಿಯೆ ತಣ್ಣನೆಯದು. ಅವರಿಗೆ ಸಿಟ್ಟು ಬರುವುದಿಲ್ಲ. ಬಂದರೂ ಅದನ್ನು ವ್ಯಕ್ತ ಮಾಡುವುದಿಲ್ಲ. ಅವರನ್ನು ತಲುಪಲು ಎಲ್ಲ ಬಗೆಯ ಆಧುನಿಕ ಸಂಪರ್ಕ ಮಾಧ್ಯಮಗಳನ್ನು ಬಳಸಿದರೂ ಪ್ರಯೋಜನವಾಗಲಿಲ್ಲ. ಒಟ್ಟು ಜನಸಂಖ್ಯೆಯಲ್ಲಿ ಇಂಥ

ಅರ್ಧದಷ್ಟು ಜನ ಮತಗಟ್ಟೆಗೇ ಬರದೇ ಇದ್ದರೆ ಗೆದ್ದ ಅಭ್ಯರ್ಥಿ ಎಲ್ಲ ಮತದಾರನನ್ನು ಹೇಗೆ ಪ್ರತಿನಿಧಿಸುತ್ತಾನೆ? ಚುನಾವಣೆಯನ್ನು ಭಾವನೆಗಳ ಆಧಾರದ ಮೇಲೆ ಗೆಲ್ಲಬೇಕು; ಔದಾಸೀನ್ಯದ ಆಧಾರದ ಮೇಲೆ ಅಲ್ಲ. ಆದರೆ, ಗೂಡಿನಲ್ಲಿ ಹಾಯಾಗಿರುವ ಮಧ್ಯಮ ವರ್ಗದಲ್ಲಿ 'ಭಾವನೆ'ಗಳನ್ನು ಕೆರಳಿಸುವುದು ಹೇಗೆ? ಹಿಂದು-ಮುಸ್ಲಿಂ, ಒಕ್ಕಲಿಗ-ಲಿಂಗಾಯತ-ಬ್ರಾಹ್ಮಣ ಎಂಬ ಭಿನ್ನ ಭೇದಗಳ ಆಚೆ ಏನೂ ಇಲ್ಲವೇ? ದೇಶದ ಅಭಿವೃದ್ಧಿ, ಉದ್ಯೋಗ ಸೃಷ್ಟಿ, ಸ್ವಚ್ಛ ಆಡಳಿತ ಇವೆಲ್ಲ ಚುನಾವಣೆಯಲ್ಲಿ ಮುಖ್ಯವಾದ ಸಂಗತಿಗಳು ಅಲ್ಲವೇ? ಇದೆಲ್ಲ ಕಲಿತ, ಸುಶಿಕ್ಷಿತ ಮಧ್ಯಮ ವರ್ಗಕ್ಕೆ ಕಾಡುವುದಿಲ್ಲವೇ?'

ಗೋಪಿನಾಥ್ ಹೀಗೆಯೇ ಹೇಳುತ್ತಲೇ ಇದ್ದರು. ಅವರಿಗೆ ಮತದಾರರ ಜತೆಗೆ 'ಮಾತನಾಡಲು', 'ಸಂವಾದ ಮಾಡಲು' ಸಾಧ್ಯವಾಗಲಿಲ್ಲ ಎಂದು ಅನಿಸಿತು. ಈ ಮಾತುಕತೆ ಯಾವಾಗ ಸಾಧ್ಯವಾಗುತ್ತದೆ? ಇದೇ ಸ್ಥಿತಿ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಎಲ್.ಕೆ. ಅಡ್ವಾಣಿ ಅವರ ವಿರುದ್ಧ ನಿಂತ ಮಲ್ಲಿಕಾ ಸಾರಾಭಾಯಿ ಅವರಿಗೂ ಆಗಿರಬೇಕು. ದಾವಣಗೆರೆಯಲ್ಲಿ ತನಗಿದ್ದ ಒಂದೇ ನಿವೇಶನ ಮಾರಿ ಚುನಾವಣೆಗೆ ನಿಂತ ಯೋಗೀಶರಾವ್, ತವರು ಮನೆಯವರು ಕೊಟ್ಟ ಒಡವೆ ಮಾರಿ ಸ್ಪರ್ಧಿಸಿದ ವಿಜಾಪುರದ ನಿರ್ಮಲಾ ಅರಕೇರಿ, ಕೊಪ್ಪಳದ ಮಾರಮ್ಮ ಅವರಂಥವರಿಗೆ ಗೋಪಿನಾಥ್ ಅವರಿಗೆ ಇರುವ ಯಾವ ಅನುಕೂಲಗಳೂ ಇರಲಿಲ್ಲ. ಗೋಪಿನಾಥ್ ಮನಸ್ಸು ಮಾಡಿದ್ದರೆ ಜಾತಿಯ 'ಕಾರ್ಡ್' ಬಳಸಬಹುದಿತ್ತು. ಹಣವನ್ನೂ ಚೆಲ್ಲಬಹುದಿತ್ತು. ಯೋಗೀಶರಾವ್, ನಿರ್ಮಲಾ, ಮಾರಮ್ಮ ಅವರಿಗೆ ಇದಾವುದೂ ಸಾಧ್ಯವಿರಲಿಲ್ಲ. ಇಂಥವರೇ ಇನ್ನೊಬ್ಬ 'ಅಸಹಾಯಕ' ಅಭ್ಯರ್ಥಿ ಬಾಗಲಕೋಟೆಯಲ್ಲಿ ಸ್ಪರ್ಧಿಸಿದ್ದ ಕಲ್ಲಪ್ಪ ಕಡೇಚೂರ್, ಕಡೇಚೂರ್, ಪವಾಡ ಬಯಲು ಕಾರ್ಯಕ್ರಮ ಮಾಡುತ್ತ ವೋಟ್ ಕೇಳಿದರು!

ಭಾರತದ ಪಕ್ಷ ರಾಜಕಾರಣದಲ್ಲಿ ಅಲ್ಲೊಬ್ಬರು, ಇಲ್ಲೊಬ್ಬರು ಸ್ವತಂತ್ರ ಅಭ್ಯರ್ಥಿಗಳು ಗೆದ್ದಿದ್ದರೂ ಒಟ್ಟಾರೆಯಾಗಿ ಪಕ್ಷೇತರ ಅಭ್ಯರ್ಥಿಗೆ ಒಂದು 'ಸ್ಪೇಸ್' ಇರುವಂತೆ ಕಾಣದು. ಇದು ವ್ಯವಸ್ಥೆಯಲ್ಲಿನ ದೋಷವೇ ಅಥವಾ ಮತದಾರನ ಗ್ರಹಿಕೆಯಲ್ಲಿನ ಸಮಸ್ಯೆಯೇ ಹೇಳುವುದು ಕಷ್ಟ. ಅಥವಾ ಎರಡೂ ಇರಬಹುದು. ಒಂದು ದೊಡ್ಡ ಪಕ್ಷದಿಂದ ಗೆದ್ದು ಸರ್ಕಾರದ ಭಾಗ ಆಗುವವರೇ ಮಾಡಲಾಗದ್ದು, ಪಕ್ಷೇತರ ಮಾಡಿಯಾನೇ ಎಂಬ ಶಂಕೆ ಮತದಾರರಲ್ಲಿ ಇರಬಹುದು, ಅಥವಾ ಇದನ್ನೆಲ್ಲ ಯೋಚನೆ ಮಾಡದ ಜನರು ಮಾತ್ರ ವೋಟ್ ಮಾಡುತ್ತಿರಬಹುದು. ಅಥವಾ ಅವರೇ ಬಹುಸಂಖ್ಯಾತ ಮತದಾರರಾಗಿರಬಹುದು.

ಒಂದು 'ವ್ಯವಸ್ಥೆ' ಹಳತಾಗುತ್ತ ಬಂದಂತೆ ಬದಲಾವಣೆಯ ಚಕ್ರ ಅದರ ಹೂಳಿನಲ್ಲಿ ಸಿಕ್ಕಿ ಬೀಳುತ್ತದೆ. ಅದನ್ನು ಬಲವಾದ ಶಕ್ತಿಯಿಂದ ಎತ್ತುವವರೆಗೆ ಅದು ಮೇಲೆ ಬರುವುದಿಲ್ಲ, ಅಥವಾ ಚಲಿಸುವುದಿಲ್ಲ. ಈಗಿನದು ಒಂದು ಕೊಳೆತ ಸ್ಥಿತಿ, ಈ ಕೊಳಕಿನಲ್ಲಿ ಸಿಲುಕಿಕೊಂಡಿರುವ ಚಕ್ರಕ್ಕೆ ಚಲನೆ ತುಂಬುವವರು ಯಾರು? ಅಂತಿಮವಾಗಿ ಮತದಾರರೇ! ಅವರು ಚಕ್ರಕ್ಕೆ ಯಾವಾಗ ಕೈ ಹಚ್ಚುತ್ತಾರೆ? ಗೊತ್ತಿಲ್ಲ. ಅವರು ಕೈ ಹಚ್ಚುವಷ್ಟು ವ್ಯವಸ್ಥೆ ಇನ್ನೂ ಕೊಳೆತು ಹೋಗಿಲ್ಲವೇ? ಇರಬಹುದು.

# ಯಡಿಯೂರಪ್ಪ ಗೆದ್ದರು: ಕರ್ನಾಟಕದ ಜನ ಸೋತರು

ಅನುಮಾನವೇ ಇಲ್ಲ ಇದು ಯಡಿಯೂರಪ್ಪ ವಿಜಯ. ಇಪ್ಪತ್ತು ಲೋಕಸಭಾ ಸೀಟುಗಳಲ್ಲಿ ಗೆದ್ದು ಅವರನ್ನೆಲ್ಲ ಎಲ್.ಕೆ. ಅಡ್ವಾಣಿ ಅವರ ಮನೆಯ ಮುಂದೆ ನಿಲ್ಲಿಸುವೆ ಎಂದಿದ್ದ ಯಡಿಯೂರಪ್ಪ ತಮ್ಮ ಮಾತನ್ನು ಉಳಿಸಿ ಕೊಂಡಿದ್ದಾರೆ. ಆದರೆ, ಕರ್ನಾಟಕದ ಜನ ಸೋತಿದ್ದಾರೆ.

2004ರಲ್ಲಿ ಮಾಡಿದ ತಪ್ಪನ್ನು ಮತ್ತೆ ಮಾಡಿದ್ದಾರೆ. ದೇಶದ ಮತದಾರನ ಯೋಚನಾಲಹರಿಗೂ ಕರ್ನಾಟಕದ ಮತದಾರನ ಚಿಂತನ ಕ್ರಮಕ್ಕೂ ಅಕ್ಷರಶಃ ಸಂಬಂಧ ವಿಲ್ಲದಂತಾಗಿದೆ. ಕೇಂದ್ರದಿಂದ ಮತ್ತೆ ಅನ್ಯಾಯ ಪರಂಪರೆ ಮುಂದು ವರಿದರೆ ರಾಜ್ಯದ ಮತದಾರ ತನ್ನನ್ನೇ ತಾನು ದೂರಿಕೊಳ್ಳಬೇಕು.

ದೇಶದ ರಾಜಕೀಯ ಭವಿಷ್ಯ ನಿರ್ಧರಿಸುವ ದೃಷ್ಟಿಯಿಂದ ಕರ್ನಾಟಕ ಹೊರತುಪಡಿಸಿ ಇತರ ಬಹುತೇಕ ರಾಜ್ಯಗಳ ಮತದಾರರು ಅತ್ಯಂತ ಜಾಣ್ಮೆಯಿಂದ ಮತದಾನ ಮಾಡಿದ್ದಾರೆ. ಕೇಂದ್ರದಲ್ಲಿ ಒಂದು ಸುಭದ್ರ, 'ಜಾತ್ಯತೀತ' ಸರ್ಕಾರ ಇರಬೇಕು ಎಂಬುದು ಈ ಸಾರಿಯ ಸ್ಪಷ್ಟ ಜನಾದೇಶ. ಕರ್ನಾಟಕದ ಮತದಾರರು ಆ ಸಂದೇಶ

ಕೊಡುವಲ್ಲಿ ವಿಫಲರಾಗಿದ್ದಾರೆ. ಅವರು ಹಣಕ್ಕೆ ಸೋತಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ. ಆದರೆ, ಹಿಂದೂ ಮತ್ತು ಹಿಂದೂಯೇತರ ಎಂಬ ವಿಭಜನೆ ಜತೆಗೆ ಜಾತಿ ಕೇಂದ್ರಿತವಾಗಿ ಬಿಜೆಪಿ ಪರ ಮತದಾನ ಆಗಿರುವುದು ಫಲಿತಾಂಶದಲ್ಲಿ ಎದ್ದು ಕಾಣುತ್ತದೆ. ಜತೆಗೆ, ರಾಜ್ಯ ಸರ್ಕಾರದ ಹಲವು ಜನಪ್ರಿಯ ಯೋಜನೆಗಳೂ ಬಿಜೆಪಿ ಅಭ್ಯರ್ಥಿಗಳ ಕೈ ಹಿಡಿದಿರಬೇಕು.

ಯಡಿಯೂರಪ್ಪ ಅವರಿಗೆ ಈ ಚುನಾವಣೆ ಪ್ರತಿಷ್ಠೆಯದಾಗಿತ್ತು. ಎನ್.ಡಿ.ಎ. ಸರ್ಕಾರ ಕೇಂದ್ರದಲ್ಲಿ ಬಂದೇ ಬರುತ್ತದೆ. ಅಡ್ವಾಣಿ ಪ್ರಧಾನಿ ಆಗಿಯೇ ಆಗುತ್ತಾರೆ ಎಂಬುದು ಅವರ ಖಚಿತ ನಂಬಿಕೆಯಾಗಿತ್ತು. ದಕ್ಷಿಣ ಭಾರತದಲ್ಲಿ ಸ್ವಂತ ಬಲದ ಮೇಲೆ ಮೊದಲ ಬಿಜೆಪಿ ಸರ್ಕಾರ ಬಂದ ಮೇಲೆ ಕೇಂದ್ರದಲ್ಲಿಯೂ ರಾಜ್ಯದ ದೊಡ್ಡ ಕಾಣಿಕೆ ಇರಬೇಕು ಎಂಬ ದೃಷ್ಟಿಯಿಂದಲೇ ಅವರು ರಾಜ್ಯದಾದ್ಯಂತ ಮಿಂಚಿನ ಸಂಚಾರ ಮಾಡಿದರು. ಎದುರಾಳಿಗಳಿಗಿಂತ ಬಹು ಮುಂಚೆಯೇ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದರು. ಗೆಲ್ಲುವ ಅಭ್ಯರ್ಥಿಗಳನ್ನು ಹುಡುಕಲು ಕುಟುಂಬ ರಾಜಕಾರಣ, ಪಕ್ಷಾಂತರ ಮುಂತಾದ ಯಾವ ತಂತ್ರ ಅನುಸರಿಸಲೂ ಹಿಂದೇಟು ಹಾಕಲಿಲ್ಲ. 250ಕ್ಕೂ ಹೆಚ್ಚು ಸಭೆಗಳಲ್ಲಿ ಭಾಗವಹಿಸಿದರು.

ಆರಂಭದಲ್ಲಿ ಕಾಣಿಸಿಕೊಂಡ ಅಪಸ್ವರವನ್ನು ಮೊಳಕೆಯಲ್ಲಿಯೇ ಚಿವುಟಿದರು. ಎಸ್. ಮಲ್ಲಿಕಾರ್ಜುನಯ್ಯ, ಬಿ.ಬಿ. ಶಿವಪ್ಪ ಅವರನ್ನು ಮೆತ್ತಗೆ ಮಾಡಿದರು. ಬಸನಗೌಡ ಪಾಟೀಲ ಯತ್ನಾಳ ಬಾಲ ಮಡಿಚಿಕೊಂಡರು. ಅನಂತ್‌ಕುಮಾರ್, ಯಡಿಯೂರಪ್ಪ ಜತೆಗೆ ಕೈ ಎತ್ತಿ ಹಿಡಿದು 'ನಮ್ಮ ನಾಯಕ ಇವರೇ' ಎಂದರು! ಎಲ್ಲಕ್ಕೂ ಮೇಲಾಗಿ ಅಧಿಕಾರ ಮತ್ತು ಗಣಿ ಧಣಿಗಳ 'ಬಂಡವಾಳ' ಜತೆಯಾದುದರಿಂದ 'ಸಂಪನ್ಮೂಲ'ದ ವಿಚಾರದಲ್ಲಿಯೂ ಅವರು ಎಲ್ಲರಿಗಿಂತ ಮುಂದೆ ಇದ್ದರು. 19–20 ಸ್ಥಾನಗಳಲ್ಲಿ ಗೆದ್ದರೆ ತಮ್ಮ ಸ್ಥಾನ ಅಲುಗಾಡದು ಎಂಬುದೂ ಅವರಿಗೆ ಗೊತ್ತಿತ್ತು.

ಕಾಂಗ್ರೆಸ್‌ಗೆ ಪ್ರತಿಯೊಂದು ಸ್ಥಾನವೂ ಅಷ್ಟೇ ಮುಖ್ಯವಾಗಿದ್ದರೂ ಕರ್ನಾಟಕದ ಮಟ್ಟಿಗೆ ಅವರಲ್ಲಿ ಯಾವ ತಂತ್ರಗಾರಿಕೆಯೂ ಇದ್ದಂತೆ ಕಾಣಲಿಲ್ಲ. ಅಭ್ಯರ್ಥಿಗಳ ಪಟ್ಟಿ ಎಂದಿನಂತೆ ಕೊನೆ ಗಳಿಗೆಯ ವರೆಗೂ ಪ್ರಕಟವಾಗಲಿಲ್ಲ. ಮುಖಂಡರು ಒಬ್ಬೊಬ್ಬರಾಗಿ ಪಕ್ಷ ಬಿಟ್ಟು ಬಿಜೆಪಿ ಸೇರುವುದನ್ನು ತಡೆಯುವ ಯಾವ ಪ್ರಯತ್ನವನ್ನೂ ರಾಜ್ಯ ನಾಯಕರು ಮಾಡಲಿಲ್ಲ; ಅಥವಾ ಕೈ ಚೆಲ್ಲಿ ಕುಳಿತು ಬಿಟ್ಟರು. ಅಭ್ಯರ್ಥಿಗಳ ಆಯ್ಕೆಯಲ್ಲಿಯೂ ಕಾಂಗ್ರೆಸ್ ಎಡವಿತು. ಶಿವಮೊಗ್ಗದಲ್ಲಿ ಬಂಗಾರಪ್ಪ ಬದಲಿಗೆ ಕುಮಾರ ಬಂಗಾರಪ್ಪಗೆ, ಉತ್ತರ ಕನ್ನಡದಲ್ಲಿ ಮಾರ್ಗರೆಟ್ ಬದಲಿಗೆ ಪ್ರಶಾಂತ ದೇಶಪಾಂಡೆಗೆ, ಬೆಂಗಳೂರು ಕೇಂದ್ರದಲ್ಲಿ ಸಾಂಗ್ಲಿಯಾನ ಬದಲಿಗೆ ಷರೀಫ್‌ಗೆ ಟಿಕೆಟ್ ಕೊಟ್ಟಿದ್ದರೆ, ಬಳ್ಳಾರಿಯಲ್ಲಿ ಹನುಮಂತಪ್ಪ ಅವರಿಗೆ ಇನ್ನಷ್ಟು ಶಕ್ತಿ ತುಂಬಿದ್ದರೆ, ಅಲ್ಲಿ ಬಿಜೆಪಿಗೆ ಪ್ರಬಲ ಪ್ರತಿಸ್ಪರ್ಧೆ ಒಡ್ಡಲು ಸಾಧ್ಯವಿತ್ತು; ಗೆದ್ದೂ ಬಿಡಬಹುದಿತ್ತು.

ಬೆಂಗಳೂರು ಗ್ರಾಮಾಂತರದಲ್ಲಿ ಕುಮಾರಸ್ವಾಮಿಗೆ ತೇಜಸ್ವಿನಿ ಸಾಟಿಯಲ್ಲ ವಾದರೂ ಅಲ್ಲಿ ಕಾಂಗ್ರೆಸ್ ನಾಯಕರು ಮನಮುಟ್ಟಿ ಕೆಲಸ ಮಾಡಲಿಲ್ಲ. ಮಂಡ್ಯದಲ್ಲಿ ಅಂಬರೀಷ್‌ಗೆ ಸ್ಪರ್ಧಿಸುವಂತೆ ದುಂಬಾಲು ಬೀಳುವ ಅಗತ್ಯವೇ ಇರಲಿಲ್ಲ.

ಈ ಸಾರಿಯ ಸೋಲು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹುದ್ದೆ ವಹಿಸಿಕೊಂಡ ನಂತರ ದೇಶಪಾಂಡೆ ಅವರಿಗೆ ಬೀಳುತ್ತಿರುವ ಸತತ ಎರಡನೇ ಪೆಟ್ಟು. ಎಂಟು ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಸೊನ್ನೆ ಸುತ್ತಿದಾಗಲೇ ಅವರು ಎಚ್ಚೆತ್ತು ಕೊಳ್ಳಬೇಕಿತ್ತು. ಈಗ ಎಚ್ಚೆತ್ತುಕೊಳ್ಳಬೇಕಾದ ಸರದಿ ಹೈಕಮಾಂಡ್‌ದು. ಸಿದ್ಧ ರಾಮಯ್ಯ ಕೊನೆಯವರೆಗೆ ವಿರೋಧ ಪಕ್ಷದ ನಾಯಕನ ಸ್ಥಾನಕ್ಕಾಗಿ ಕೊಸರಾಡಿ ಅಶಿಸ್ತಿನ ಪರಮಾವಧಿ ಮೆರೆದರೂ ಮೈಸೂರು, ಚಾಮರಾಜನಗರದಲ್ಲಿ ಕಾಂಗ್ರೆಸ್ ಗೆಲ್ಲುವಂತೆ ನೋಡಿಕೊಂಡು ತಮ್ಮ ಮತ್ತು ಪಕ್ಷದ ಮಾನ ಕಾಪಾಡಿದ್ದಾರೆ. ಆದರೆ, ಕಾಂಗ್ರೆಸ್ ನಾಯಕರಲ್ಲಿ ಒಗ್ಗಟ್ಟಿನ ಕೊರತೆ ಎದ್ದು ಕಾಣುತ್ತಿತ್ತು. ಯಡಿಯೂರಪ್ಪ ಮಾಡಿದ್ದನ್ನು ಮಾಡಲು ದೇಶಪಾಂಡೆ ಅವರಿಗೆ ಸಾಧ್ಯವಾಗಲಿಲ್ಲ. ಇದರ ಪರಿಣಾಮವಾದ ಒಳ ಹೊಡೆತಗಳೂ ಪರಾಜಯಕ್ಕೆ ಕಾರಣವಾಗಿರಬಹುದು. ದೇಶಪಾಂಡೆಯವರು ಮಾರ್ಗರೆಟ್ ಬೆಂಬಲಕ್ಕೆ ಬಂದರೇ, ಅಂಬರೀಷ್ ನೆರವಿಗೆ ಕೃಷ್ಣ ಹೋದರೇ ಎಂಬ ಪ್ರಶ್ನೆಗಳಿಗೆಲ್ಲ ಉತ್ತರ ಸಿಗುವುದು ಕಷ್ಟ, ಅಥವಾ ತೀರಾ ಸುಲಭ!

ಸಂಪನ್ಮೂಲ ಸಂಗ್ರಹಣೆ, ವಿತರಣೆ ವಿಚಾರದಲ್ಲಿಯೂ ರಾಜ್ಯ ಕಾಂಗ್ರೆಸ್ ನಾಯಕರ ಕೈ ಕಟ್ಟಿ ಹಾಕಿದಂತೆ ಆಗಿತ್ತು. ಅನೇಕ ಅಭ್ಯರ್ಥಿಗಳು ಕನಿಷ್ಠ ಖರ್ಚಿಗಾಗಿಯೂ ಗೋಗರೆದರು. ಆದರೆ, ಅದು ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಆಯಿತು.

ಕರ್ನಾಟಕ ಮೂಲತಃ ಕಾಂಗ್ರೆಸ್ ಪರವಾಗಿ ನಿಂತ ರಾಜ್ಯ. ತುರ್ತು ಪರಿಸ್ಥಿತಿಯಂಥ ಸಂದರ್ಭದ ನಂತರ ನಡೆದ ಚುನಾವಣೆಯಲ್ಲಿ ಇಡೀ ಉತ್ತರ ಭಾರತ ಇಂದಿರಾ ವಿರುದ್ಧ ಸೆಟೆದು ನಿಂತರೆ ಕರ್ನಾಟಕ ಇಂದಿರಾ ಬೆಂಬಲಕ್ಕೇ ನಿಂತಿತ್ತು. ಇಂಥ ಒಂದು ರಾಜ್ಯವನ್ನು ಈಚಿನ ಹಲವು ಚುನಾವಣೆಗಳಲ್ಲಿ ಕಳೆದು ಕೊಳ್ಳುತ್ತಿರುವುದರಲ್ಲಿ ಹೈಕಮಾಂಡ್ ದೋಷವೂ ಇದೆ. ಕನಿಷ್ಠ 2004ರ ಚುನಾವಣೆಯಲ್ಲಿ ಮಾಡಿಕೊಂಡ ಎಡವಟ್ಟನ್ನು ಸರಿಪಡಿಸಿಕೊಳ್ಳಲೂ ಹೈಕಮಾಂಡ್ ಪ್ರಯತ್ನ ಮಾಡಿದಂತೆ ಕಾಣಲಿಲ್ಲ.

ಇಂಥವೇ ಎಡವಟ್ಟನ್ನು ಜೆ.ಡಿ.(ಎಸ್)ಕೂಡ ಮಾಡಿಕೊಂಡಿತು. ಸೋನಿಯಾ ಗಾಂಧಿಯವರನ್ನು ಮುಖ ಮುಚ್ಚಿಕೊಂಡು ಹೋಗಿ ಭೇಟಿ ಮಾಡಿದ ಕುಮಾರಸ್ವಾಮಿ ಮತ್ತು ಅವರ ತಂದೆಯ ನಡುವೆ ಚುನಾವಣೆ ಉದ್ದಕ್ಕೂ ಕಾರ್ಯತಂತ್ರದ ಮಟ್ಟಿಗೆ ಯಾವುದೇ 'ಸಾಮರಸ್ಯ' ಇರಲಿಲ್ಲ. ಐದು ಕಡೆಗಳಲ್ಲಿ ತನ್ನ ಅಭ್ಯರ್ಥಿಗಳನ್ನೇ ಹಾಕದೇ ಇದ್ದುದಕ್ಕೆ ಹಣದ ಕೊರತೆ ಕಾರಣ ಎಂಬ ಆ ಪಕ್ಷದ ನೆಪವನ್ನು ಯಾರೂ ನಂಬು ವಂತಿರಲಿಲ್ಲ.

'ಜಾತ್ಯತೀತ' ಮತಗಳ ಕ್ರೋಡೀಕರಣಕ್ಕಾಗಿ ಕಾಂಗ್ರೆಸ್ ಜತೆ ಹೊಂದಾಣಿಕೆ ಸಾಧ್ಯವಾಗಿದ್ದರೆ ಜೆ.ಡಿ. (ಎಸ್) ಮತ್ತು ಕಾಂಗ್ರೆಸ್ ಪಕ್ಷಗಳೆರಡಕ್ಕೂ ಸಹಾಯವಾಗ ಬಹುದಿತ್ತು. ಆದರೆ, ಪರೋಕ್ಷವಾಗಿ ಕಾಂಗ್ರೆಸ್‌ಗೆ ಸಹಾಯ ಮಾಡಲು ಅಥವಾ ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸಲು (!) ಐದು ಕಡೆಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸದ ಜೆ.ಡಿ.(ಎಸ್) ನಾಯಕರು ಇನ್ನೊಂದು ಕಡೆ ತೃತೀಯ ರಂಗಕ್ಕೆ ತುಮಕೂರಿನಲ್ಲಿ ಮಂಚ ಹಾಕಿದರು. ಮಂಚ ಹಾಕಿದ ನಂತರವೂ ಬಾಗಲಕೋಟೆ, ದಾವಣಗೆರೆ ಕ್ಷೇತ್ರಗಳಿಂದ ತನ್ನ ಅಭ್ಯರ್ಥಿಗಳನ್ನು ಕಣದಿಂದ ಹಿಂದಕ್ಕೆ ಸರಿಸಿದರು.

ಇದಕ್ಕೆ ದೇವೇಗೌಡರ ಅನುಮತಿ ಇರಲಿಲ್ಲ. ಮೈಸೂರಿನಲ್ಲಿ ಜೆ.ಡಿ(ಎಸ್) ಅಭ್ಯರ್ಥಿ ಯಿದ್ದರೂ ಕೊನೆ ಗಳಿಗೆಯಲ್ಲಿ ಪಕ್ಷದ ಉನ್ನತ ನಾಯಕರು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಲು ಪರೋಕ್ಷ ಸೂಚನೆ ನೀಡಿದರು. ದಕ್ಷಿಣ ಕನ್ನಡ ಮತ್ತು ಉಡುಪಿ-ಚಿಕ್ಕಮಗಳೂರು ಕ್ಷೇತ್ರಗಳಲ್ಲಿ ಎಡಪಕ್ಷಗಳಿಗೆ ಬೆಂಬಲ ನೀಡಿದ್ದರೂ ಆಂತರಿಕವಾಗಿ ಆದುದೇ ಬೇರೆ ಎಂಬ ದೂರು ಕೂಡ ಕೇಳಿ ಬಂತು. ಕಾಂಗ್ರೆಸ್ ದೋಣಿಯಲ್ಲಿ ಕುಮಾರಸ್ವಾಮಿ ಕಾಲು ಇಟ್ಟಿದ್ದರೆ ದೇವೇಗೌಡರು ತೃತೀಯ ರಂಗದಲ್ಲಿ ಕಾಲು ಇಟ್ಟಿದ್ದರು. ಎರಡು ದೋಣಿ ಸವಾರಿಯ ಫಲ ಏನು ಎಂಬುದಕ್ಕೆ ಫಲಿತಾಂಶ ಸಾಕ್ಷಿಯಾಗಿದೆ.

ಈ ಸಾರಿಯ ಫಲಿತಾಂಶದಲ್ಲಿ ಎದ್ದು ಕಾಣುವ ಒಂದು ಅಂಶ ಎಂದರೆ ಬಳ್ಳಾರಿಯಲ್ಲಿ ಸಚಿವ ಶ್ರೀರಾಮುಲು ತಂಗಿ ಶಾಂತಾ ಕೇವಲ ಎರಡು ಸಾವಿರ ಮತಗಳ ಅಂತರದಿಂದ ಗೆದ್ದುದು. ಇದು ಗೆಲುವಲ್ಲ. ಬಳ್ಳಾರಿಯ ಗಣಿ ಧಣಿಗಳ ಅಬ್ಬರ. ಅಟ್ಟಹಾಸಕ್ಕೆ ಮತದಾರರು ಕಡಿವಾಣ ಹಾಕಿರುವ ಸಂಕೇತ. ಶಾಂತಾ ಸೋತು ಬಿಡಬಹುದಿತ್ತು ಎಂದು ಗಣಿ ಧಣಿಗಳಿಗೆ ಈಗ ಗೊತ್ತಾಗಿರಬೇಕು.

ಇಡೀ ರಾಜ್ಯದಲ್ಲಿ ಅತಿ ಹೆಚ್ಚು ಚುನಾವಣೆ ಅಕ್ರಮಗಳು ನಡೆದುದು ಬಳ್ಳಾರಿಯಲ್ಲಿ. ಬಹುಶಃ ಹೆಚ್ಚು ಹಣದ ಹೊಳೆ ಹರಿದುದೂ ಈ ಜಿಲ್ಲೆಯಲ್ಲಿಯೇ. ಆದರೆ, ಜಿಲ್ಲೆಯ ಜನರು ಕರ್ನಾಟಕದ ಮಾನವಂತಿಕೆಯನ್ನು, ಸಜ್ಜನಿಕೆಯನ್ನು, ಹಣ ಮತ್ತು ತೋಳ್ಬಲಕ್ಕೆ ಸೊಪ್ಪು ಹಾಕದ ಆತ್ಮಸ್ಥೈರ್ಯವನ್ನು ಎತ್ತಿ ಹಿಡಿದಿದ್ದಾರೆ. ಬಳ್ಳಾರಿಯ ಗಣಿ ಧಣಿಗಳು ಈಗ ಹೆಲಿಕಾಪ್ಟರ್‌ನಿಂದ ಕೆಳಗೆ ಇಳಿಯಲೇ ಬೇಕಾಗಿದೆ.

ದೊಡ್ಡ ಗೆಲುವು ಕೂಡ ದೊಡ್ಡ ಸೋಲಾಗಿರಬಹುದು ಎಂಬುದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಇನ್ನೊಂದು ಇರಲಾರದು. '19 ಸೀಟುಗಳಲ್ಲಿ ಗೆದ್ದೆ' ಎಂದು ಯಡಿಯೂರಪ್ಪ ಈಗ ಮೀಸೆ ತಿರುವಲು ಆಗದು. ಕೇಂದ್ರ ಮಟ್ಟದಲ್ಲಿ ಬಿಜೆಪಿಗೆ ಆದ ಹಿನ್ನಡೆಗಿಂತ ಕಾಂಗ್ರೆಸ್‌ಗೆ ಸಿಕ್ಕ ಮುನ್ನಡೆ ಅವರನ್ನು ಹೆಚ್ಚು ವಿಚಲಿತಗೊಳಿಸಬೇಕು. ಕೇಂದ್ರದ ಜತೆಗೆ ಅವರು ಸಂಘರ್ಷಕ್ಕೆ ಇಳಿದಷ್ಟೂ ರಾಜ್ಯಕ್ಕೆ ಅನ್ಯಾಯವಾಗುತ್ತದೆ.

'ಚುನಾವಣೆ ಮುಗಿಯಿತು. ಈಗ ಏನಿದ್ದರೂ ರಾಜ್ಯದ ಅಭಿವೃದ್ಧಿ' ಎಂದು ಅವರು ಎಷ್ಟು ಬೇಗ ತಿಳಿದಷ್ಟೂ ಅಷ್ಟು ಬೇಗ ರಾಜ್ಯಕ್ಕೆ ಒಳ್ಳೆಯದಾದೀತು. ಕೇಂದ್ರದಿಂದ ಏನು ಸಿಗುತ್ತದೆ ಎಂಬುದು ಒಂದು ಲೆಕ್ಕ. ರಾಜ್ಯದಲ್ಲಿಯೇ ಸಂಪನ್ಮೂಲ ಕ್ರೋಡೀಕರಿಸಿಕೊಂಡು ಒಂದು ಮಾದರಿ ರಾಜ್ಯವನ್ನು ರೂಪಿಸಲು ಯಡಿಯೂರಪ್ಪ ಪ್ರಯತ್ನಿಸುವುದು ಇನ್ನೊಂದು ಲೆಕ್ಕ. ಎರಡನೆಯದು ಸುಲಭ. ಗುಜರಾತ್‌ನಲ್ಲಿ ಮೋದಿ ಮಾಡಿದ್ದನ್ನು ಅವರು ಇಲ್ಲಿಯೂ ಮಾಡಬಹುದು.

ತಮ್ಮ ಸರ್ಕಾರದಲ್ಲಿಯೇ ಇರುವ ದಕ್ಷ, ಪ್ರಾಮಾಣಿಕ ಸಚಿವರನ್ನು ಈಗಲಾದರೂ ಅವರು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಯಡಿಯೂರಪ್ಪ, ನಿಕಟ ಭವಿಷ್ಯದಲ್ಲಿ ದೊಡ್ಡ ಚುನಾವಣೆಗಳಿಗಾಗಿ ತಲೆ ಕೆಡಿಸಿಕೊಳ್ಳಬೇಕಿಲ್ಲ. ಮುಂದೆ ಬರುವ ಐದು ಉಪಚುನಾವಣೆಗಳು ಅವರಿಗೆ ಪ್ರತಿಷ್ಠೆಯವಲ್ಲ. ಅವರು ತಮ್ಮ ಪ್ರತಿಷ್ಠೆಯನ್ನು ರಾಜ್ಯದ ಅಭಿವೃದ್ಧಿಗಾಗಿಯೇ ಪಣವಿಡಬೇಕು.

ಕಾಂಗ್ರೆಸ್ ಹೈಕಮಾಂಡ್ ಕೂಡ ಈ ಸೋಲಿನಿಂದ ಕಲಿಯಲು ಬೇಕಾದಷ್ಟು ಪಾಠಗಳು ಇವೆ. ಕರ್ನಾಟಕ ತನಗೆ ಬಲ ತುಂಬಲಿಲ್ಲ ಎಂದು ತಾತ್ಸಾರ ಮಾಡುವ ಬದಲು ಈಗ ಆಯ್ಕೆಯಾಗಿರುವವರಿಗೆ ಸಚಿವ ಸ್ಥಾನ ಕೊಡುವಾಗ ವಿಚಕ್ಷಣೆ ತೋರಿಸಬೇಕು. ಹಿಂದಿನ ಹಾಗೆ ಸಚಿವ ಸ್ಥಾನ ಕೊಟ್ಟರೂ ಕಚೇರಿಗೆ ಬರದವರಿಗೆ, ಬಂದರೂ ಕೆಲಸ ಮಾಡದವರಿಗೆ ಮಣೆ ಹಾಕುವುದರಲ್ಲಿ ಅರ್ಥವಿಲ್ಲ.

ಜೆ.ಡಿ.(ಎಸ್) ತನ್ನ ಎಡಬಿಡಂಗಿತನವನ್ನು ಮತ್ತು ತಾನು ರಾಷ್ಟ್ರೀಯ ಪಕ್ಷ ಎಂಬ ಹುಸಿ ಭ್ರಮೆಯನ್ನು ಬಿಡದಿದ್ದರೆ ಅದರ ಸ್ಥಿತಿ ಇನ್ನೂ ದಯನೀಯವಾದೀತು. ಭವಿಷ್ಯದಲ್ಲಿ ತನಗೊಂದು ಸ್ಥಾನ ಉಳಿಸಿಕೊಳ್ಳಬೇಕಾದರೆ ಅದು ಕರ್ನಾಟಕಕ್ಕೆ ತನ್ನನ್ನು ಸೀಮಿತಗೊಳಿಸಿಕೊಳ್ಳುವುದು ಒಳಿತು.

ದೇವೇಗೌಡರ ಕುಟುಂಬದಲ್ಲಿ ಯಾರಿಗೆ ಅಧಿಕಾರ, ನಾಯಕತ್ವ ಇರಬೇಕು ಎಂಬುದೂ ತೀರ್ಮಾನವಾಗಬೇಕು. ಇತಿಹಾಸದಿಂದ, ತಪ್ಪುಗಳಿಂದ ಪಾಠ ಕಲಿತವನು ಜಾಣ ಎನಿಸಿಕೊಳ್ಳುತ್ತಾನೆ. ಈ ಚುನಾವಣೆಯ ಫಲಿತಾಂತದಿಂದ ಯಾರು ಎಷ್ಟು ಪಾಠ ಕಲಿತರು ಎಂಬುದನ್ನು ಕಾಲ ನಿರ್ಧರಿಸುತ್ತದೆ!

■

# ದುರ್ಬಲರಿಗೆ ದನಿಯಾಗುವ ನಾಯಕ ಎಲ್ಲಿದ್ದಾನೋ? ಯಾವಾಗ ಬಂದಾನೋ?

ಅಂಕಿ ಅಂಶಗಳು ನಿಜಕ್ಕೂ ಕುತೂಹಲಕರ. ಈ ಸಾರಿಯ ಲೋಕಸಭಾ ಚುನಾವಣೆಯ ಫಲಿತಾಂಶ ಪಟ್ಟಿ ಇಟ್ಟುಕೊಂಡು ನೀವು ನೋಡುತ್ತ ಹೋದಷ್ಟೂ ಹೊಸ ಹೊಸ ಸಂಗತಿಗಳು ಕಾಣುತ್ತವೆ. ಬಿಜೆಪಿಯಿಂದ ಗೆದ್ದ 19 ಮಂದಿಯಲ್ಲಿ ಎಂಟು ಮಂದಿ ಲಿಂಗಾಯತರು. ಮೂವರು ಬ್ರಾಹ್ಮಣರು. ಮೂವರು ಒಕ್ಕಲಿಗರು. ಒಬ್ಬರು ಮಾತ್ರ ಹಿಂದುಳಿದವರು. ಉಳಿದ ನಾಲ್ವರು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದವರು. ಜೆ.ಡಿ.(ಎಸ್)ನಿಂದ ಗೆದ್ದವರು ಮೂವರೂ ಒಕ್ಕಲಿಗರೇ. ಕಾಂಗ್ರೆಸ್‌ನಿಂದ ಗೆದ್ದವರು ಮೂವರು ದಲಿತರು, ಉಳಿದ ಮೂವರು ಹಿಂದುಳಿದ ವರ್ಗದವರು! ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯದಿಂದ ಯಾರೂ ಗೆದ್ದಿಲ್ಲ. ಲೋಕಸಭೆಯಲ್ಲಿ 1951ರ ನಂತರ ಇದೇ ಮೊದಲ ಬಾರಿಗೆ ಈ ಎರಡೂ ಅಲ್ಪಸಂಖ್ಯಾತ ಸಮುದಾಯಗಳಿಗೆ ರಾಜ್ಯದ ಪರವಾಗಿ ಪ್ರಾತಿನಿಧ್ಯವಿಲ್ಲ.

ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಸಿ.ಕೆ. ಜಾಫರ್ ಷರೀಫ್, ಸಲೀಂ ಅಹ್ಮದ್, ಮಾರ್ಗರೆಟ್ ಆಳ್ವ ಮತ್ತು ಎಚ್.ಟಿ. ಸಾಂಗ್ಲಿಯಾನ ಹಾಗೂ ಜೆ.ಡಿ.(ಎಸ್)ನಿಂದ ಸ್ಪರ್ಧಿಸಿದ್ದ

ಜಮೀರ್ ಅಹ್ಮದ್ ಖಾನ್ ಹಾಗೂ ಇಕ್ಬಾಲ್ ಅನ್ಸಾರಿ ಅವರಲ್ಲಿ ಯಾರೂ ಲೋಕಸಭೆ ಪ್ರವೇಶಿಸಲು ಸಾಧ್ಯವಾಗಲಿಲ್ಲ. ಹಾವೇರಿಯಲ್ಲಿ ಹೊರತುಪಡಿಸಿ ಉಳಿದ ಕಡೆಗಳಲ್ಲಿ 'ಜಾತ್ಯತೀತ' ಮತಗಳ ವಿಭಜನೆಯಾಗಿದೆ. ಕಾಂಗ್ರೆಸ್ ಮತ್ತು ಜೆ.ಡಿ. (ಎಸ್) ನಡುವೆ ಮೈತ್ರಿ ಸಾಧ್ಯವಾಗಿದ್ದರೆ ಇಲ್ಲಿ ಅಲ್ಪ ಸಂಖ್ಯಾತರು (ಅವರು ಯಾವ ಪಕ್ಷದವರೇ ಇರಲಿ) ಗೆಲ್ಲಬಹುದಿತ್ತು. ಈ ಸಾರಿ ಬಿಜೆಪಿಯು ಅಲ್ಪ ಸಂಖ್ಯಾತರಿಗೆ ಟಿಕೆಟ್ ನೀಡಿರಲೇ ಇಲ್ಲ. ಕಳೆದ ಲೋಕಸಭೆಯಲ್ಲಿ ಕಾಂಗ್ರೆಸ್‌ನಿಂದ ಒಬ್ಬರು ಮುಸ್ಲಿಂ ಹಾಗೂ ಬಿಜೆಪಿಯಿಂದ ಒಬ್ಬರು ಕ್ರೈಸ್ತರು ಆಯ್ಕೆಯಾಗಿದ್ದರು.

ಹಿಂದುಳಿದ ವರ್ಗಗಳಿಗಂತೂ ಈ ಸಾರಿಯ ಚುನಾವಣೆ ಭಾರಿ ನಿರಾಶಾ ದಾಯಕ. ಕಳೆದ ಲೋಕಸಭೆಯಲ್ಲಿ ಈಡಿಗ ಸಮುದಾಯದ ಇಬ್ಬರು ಸದಸ್ಯರು ಇದ್ದರೆ ಈ ಸಾರಿ ಒಬ್ಬರೂ ಆಯ್ಕೆಯಾಗಿಲ್ಲ. ಕುರುಬ ಸಮುದಾಯದ ಪ್ರಾತಿನಿಧ್ಯ ಇಬ್ಬರಿಂದ ಒಬ್ಬರಿಗೆ ಇಳಿದಿದೆ. ಅದರಲ್ಲಿ ಒಂದು ಸೀಟು (ಕೊಪ್ಪಳ) ಲಿಂಗಾಯತರಿಗೇ ಹೋಗಿದೆ. ಕುರುಬ ಸಮುದಾಯದ ಮತಗಳು ಕಾಂಗ್ರೆಸ್ಸಿಗೆ ಬಲ ತುಂಬಬಹುದು ಎಂಬ ನಿರೀಕ್ಷೆಯೂ ನಿಜವಾಗಿಲ್ಲ. ಕೊಪ್ಪಳ, ಹಾವೇರಿ, ಮಂಡ್ಯ ಮುಂತಾದ ಕಡೆಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲುವಿನ ಪಾದಗಟ್ಟೆಯ ಹತ್ತಿರ ಬರದೇ ಇರುವುದಕ್ಕೆ ಕುರುಬ ಮತಗಳು 'ಕೈ' ಹಿಡಿಯದೇ ಇದ್ದುದೇ ಕಾರಣ. ಈಡಿಗ ಸಮುದಾಯದ ಪ್ರತಿಕ್ರಿಯೆಯಂತೂ ಇನ್ನೂ ವಿಚಿತ್ರ. ಅತ್ತ ಜನಾರ್ದನ ಪೂಜಾರಿ ಇತ್ತ ಎಸ್. ಬಂಗಾರಪ್ಪ ಅವರಂಥ ತಮ್ಮ ಜನಾಂಗದ ಘಟಾನುಘಟಿ ನಾಯಕರ ನೆರವಿಗೇ ಈಡಿಗರು ಬಂದಿಲ್ಲ. ಬೆಳ್ತಂಗಡಿಯಲ್ಲಿ ಪೂಜಾರಿ ಅವರಿಗೆ, ಬೈಂದೂರಿನಲ್ಲಿ ಬಂಗಾರಪ್ಪ ಅವರಿಗೆ ಆದ ಹಿನ್ನಡೆ ಇದಕ್ಕೆ ಪ್ರತೀಕ. ಈ ಎರಡೂ ಕ್ಷೇತ್ರಗಳಲ್ಲಿನ ಬಿಲ್ಲವ ಮತಗಳು ಈ ಇಬ್ಬರು ನಾಯಕರನ್ನು ಗೆಲ್ಲಿಸಬಹುದು ಎಂಬ ನಿರೀಕ್ಷೆ ಹುಸಿಯಾಗಿದೆ. ಬಿಲ್ಲವರು ಕಾಂಗ್ರೆಸ್ ಪಕ್ಷದಿಂದ ಬಿಜೆಪಿ ಕಡೆ ಮುಖ ಮಾಡಿರುವುದು ವಿಚಿತ್ರ ವಿದ್ಯಮಾನ. ಬಿಜೆಪಿ, ಲಿಂಗಾಯತರ ಪಕ್ಷ ಎಂಬುದು ಅನುಮಾನವೇ ಇಲ್ಲದಂತೆ ಮತ್ತೆ ಮತ್ತೆ ಸಾಬೀತಾಗುತ್ತಿದೆ. ಕಳೆ ಸಾರಿ ಏಳು ಇದ್ದ ಲಿಂಗಾಯತ ಸದಸ್ಯರ ಬಲ ಈ ಸಾರಿ ಎಂಟಕ್ಕೆ ಏರಿದೆ. ಲಿಂಗಾಯತರು ಒಳಪಂಗಡ ಭೇದ ಮರೆತು ಬಿಜೆಪಿ ಪರ ನಿಂತುದು ಧಾರವಾಡ ಮತ್ತು ಬೆಳಗಾವಿ ಕ್ಷೇತ್ರಗಳಲ್ಲಿ ಸ್ಪಷ್ಟವಾಗಿ ಕಂಡು ಬಂದಿದೆ. ಧಾರವಾಡದಲ್ಲಿ ಕಾಂಗ್ರೆಸ್‌ನ ಮಂಜುನಾಥ ಕುನ್ನೂರ್ ಪರವಾಗಿ ಹಾಗೂ ಬೆಳಗಾವಿಯಲ್ಲಿ ಜೆ.ಡಿ (ಎಸ್)ನ ಎ.ಬಿ. ಪಾಟೀಲ್ ಪರವಾಗಿ ಪಂಚಮಸಾಲಿ ಲಿಂಗಾಯತರು ಮತ ಚಲಾಯಿಸಿ ಬಿಜೆಪಿಗೆ ಬಿಕ್ಕಟ್ಟು ಸೃಷ್ಟಿಸಬಹುದು ಎಂಬ ಶಂಕೆ ಹುಸಿಯಾಗಿದೆ. ಧಾರವಾಡದಲ್ಲಿ ಪಂಚಮಸಾಲಿ ಲಿಂಗಾಯತರು ಬ್ರಾಹ್ಮಣ ಅಭ್ಯರ್ಥಿ ಪ್ರಹ್ಲಾದ ಜೋಶಿ ಕೈ ಹಿಡಿದರೆ ಬೆಳಗಾವಿಯಲ್ಲಿ ಬಣಜಿಗ ಲಿಂಗಾಯತರಾದ ಸುರೇಶ ಅಂಗಡಿ ನೆರವಿಗೆ ಬಂದಿದ್ದಾರೆ.

ಫಲಿತಾಂಶ ಪ್ರಕಟವಾದ ದಿನ ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾದ ಕರ್ನಾಟಕದ ನಕಾಶೆಯಲ್ಲಿ ತಲೆ ಮತ್ತು ಕಾಲಿನ ಭಾಗವನ್ನು ಬಿಟ್ಟು ಉಳಿದೆಲ್ಲ ಭಾಗದಲ್ಲಿ ಕೇಸರಿ ಬಣ್ಣವೇ ಆವರಿಸಿದ್ದನ್ನು ಜನರು ಬೆರಗುಗಣ್ಣಿನಿಂದ ನೋಡಿರಲು ಸಾಕು. ಇದು

'ಜಾತ್ಯತೀತ', 'ಪ್ರಗತಿಪರ' ರಾಜಕೀಯ ಮಾಡುತ್ತೇವೆ ಎಂದು ಹೇಳುವ ಕಾಂಗ್ರೆಸ್ ಮತ್ತು ಜೆ.ಡಿ (ಎಸ್)ಗೆ ದೊಡ್ಡ ಸವಾಲು. ದೇವೇಗೌಡರು ಅಲ್ಪ ಸಂಖ್ಯಾತರವನ್ನು ಓಲೈಸಲು ಏನೆಲ್ಲ ಕಸರತ್ತು ಮಾಡಿದರೂ ಅವರದು ಒಕ್ಕಲಿಗರ ಪಕ್ಷವೇ! ಕಾಂಗ್ರೆಸ್ಸಿಗಂತೂ ಅಡಿಪಾಯವೇ ಕುಸಿಯುತ್ತಿದೆ. ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್. ವೀರಪ್ಪ ಮೊಯಿಲಿ ಮತ್ತು ಕೆ.ಎಚ್. ಮುನಿಯಪ್ಪ ಅವರ ಗೆಲುವಿನಲ್ಲಿ ಪಕ್ಷಕ್ಕಿಂತ ವೈಯಕ್ತಿಕ ವರ್ಚಸ್ಸು ಹೆಚ್ಚು ಕೆಲಸ ಮಾಡಿದೆ. ಎಚ್. ವಿಶ್ವನಾಥ್ ಮತ್ತು ಧ್ರುವನಾರಾಯಣ್ ಅವರಿಗೆ ವೈಯಕ್ತಿಕ ವರ್ಚಸ್ಸಿನ ಜತೆಗೆ ಸಿದ್ದರಾಮಯ್ಯ ಮತ್ತು ಶ್ರೀನಿವಾಸಪ್ರಸಾದ್ ಅವರ ವರ್ಚಸ್ಸೂ ಸಹಾಯ ಮಾಡಿದೆ. ಆದರೆ, ಎಸ್.ಎಂ. ಕೃಷ್ಣ, ದೇಶಪಾಂಡೆ, ಎಚ್.ಕೆ. ಪಾಟೀಲ, ಡಾ. ಜಿ. ಪರಮೇಶ್ವರ್ ಮುಂತಾದ ಘಟಾನುಘಟಿ ನಾಯಕರ ವರ್ಚಸ್ಸು ಯಾರ ಗೆಲುವಿಗೂ ನೆರವಾಗಲಿಲ್ಲ. ಹಾಗೆ ನೋಡಿದರೆ ಸಿದ್ದರಾಮಯ್ಯ ವರ್ಚಸ್ಸು ಕೂಡ ಕುರುಬ ಸಮುದಾಯ ಇರುವ ಎಲ್ಲ ಕಡೆಗಳಲ್ಲೂ ಪಕ್ಷಕ್ಕೆ ಅನುಕೂಲಕರವಾಗಿಲ್ಲ.

ಕರ್ನಾಟಕದ ರಾಜಕೀಯದಲ್ಲಿ ಸರ್ವ ಧರ್ಮ ಜಾತಿಗಳಿಗೆ ಅವಕಾಶ ಹಾಗೂ ಪ್ರಾತಿನಿಧ್ಯ ಸೃಷ್ಟಿಯಾಗಿದ್ದು ದೇವರಾಜ ಅರಸು ಕಾಲದಲ್ಲಿ. ಆದರೆ, ಈಗ ರಾಜ್ಯದ ರಾಜಕಾರಣ ಮತ್ತೆ ಲಿಂಗಾಯತ, ಒಕ್ಕಲಿಗ, ಬ್ರಾಹ್ಮಣ ಜಾತಿಗಳ ತೆಕ್ಕೆಗೆ ಹೋಗಿದೆ. ಇದು ಜೆ.ಡಿ.(ಎಸ್)ಗೆ ಎಷ್ಟರ ಮಟ್ಟಿಗೆ ಸವಾಲಿನ ಪ್ರಶ್ನೆಯೋ ಗೊತ್ತಿಲ್ಲ. ಆದರೆ, ಕಾಂಗ್ರೆಸ್ ಮಾತ್ರ ನಿಜಕ್ಕೂ ಚಿಂತೆ ಮಾಡಬೇಕಾಗಿದೆ. ಹರಿದು ಹಂಚಿ ಹೋಗಿರುವ ತನ್ನ ಬುಟ್ಟಿಯಲ್ಲಿನ ಮತಗಳನ್ನು ಮತ್ತೆ ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಹೊಸ ಕಾರ್ಯತಂತ್ರವನ್ನೇ ರೂಪಿಸಬೇಕಾಗಬಹುದು.

ಅರಸು ಅವರು ಲಿಂಗಾಯತರು ಮತ್ತು ಒಕ್ಕಲಿಗರನ್ನು ಬಿಟ್ಟು ರಾಜಕಾರಣ ಮಾಡುತ್ತಿರಲಿಲ್ಲ. ಆದರೆ ಅವರೂ ಹಿಂದುಳಿದ, ದುರ್ಬಲ, ಅಲ್ಪಸಂಖ್ಯಾತ ವರ್ಗಗಳ ಹಿತದ ಜಪ ಮಾಡಲು ಹಚ್ಚಿದ್ದರು. ಈಗ ಅಂಥ ಮಾತುಗಳು ಕೇಳಿ ಬರುತ್ತಿಲ್ಲ. ಅರಸು ಕಾಲದಲ್ಲಿ ಬೆಳೆದ ಈ ದುರ್ಬಲ ವರ್ಗಗಳ ನಾಯಕರು ತಮ್ಮ ತಮ್ಮ ಸಮುದಾಯಗಳ ಹಿತ ಮರೆತು ಎಲ್ಲೆಲ್ಲಿ ಹಸಿರು ಹುಲ್ಲುಗಾವಲು ಇದೆ ಎಂದು ಹುಡುಕಿಕೊಂಡು ಹೊರಟಿರುವುದು ಮತ ವಿಭಜನೆಗೆ ಕಾರಣವಾಗಿ ಒಟ್ಟು ಸಮುದಾಯದ ಹಿತ ಬಿಂಬಿತವಾಗುತ್ತಿಲ್ಲ ಅಥವಾ ಮರೆತು ಹೋಗುತ್ತಿದೆ. ಆ ಸಮುದಾಯಗಳು ಕೂಡ ತಮ್ಮ ಐಡೆಂಟಿಟಿಯನ್ನು ಉಳಿಸಿಕೊಳ್ಳುವ ಬದಲು ಬಹುಸಂಖ್ಯಾತರ ಅಲೆಯಲ್ಲಿ ತೇಲಿ ಹೋಗುತ್ತಿರುವುದೂ ಈ ಚುನಾವಣೆಯಲ್ಲಿ ಸ್ಪಷ್ಟವಾಗಿ ಬಿಂಬಿತವಾಗಿದೆ. ರೈತ ಸಂಘದ ಪ್ರತಿನಿಧಿಯಾಗಿ ಮಂಡ್ಯದಲ್ಲಿ ಚುನಾವಣೆಗೆ ನಿಂತಿದ್ದ ಕೆ.ಎಸ್. ಪುಟ್ಟಣ್ಣಯ್ಯ ಶೋಚನೀಯ ಸೋಲು ಕಂಡುದು ಕೂಡ ರೈತ ಸಮುದಾಯ ತನ್ನ ಐಡೆಂಟಿಟಿ ಕಳೆದಕೊಂಡುದರ ಉದಾಹರಣೆ.

ಒಂದು ಚಳವಳಿ, ಒಂದು ಆಂದೋಲನ ಜೀವಂತವಾಗಿ ಇರದ ಘಟನೆಯ ಕಾಲ ಇದು. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಅಹಿಂದ ಚಳವಳಿ ಜೋರಾಗಿಯೇ ಇತ್ತು. ಆದರೆ, ಅದು ಹಿಂದುಳಿದ ವರ್ಗಗಳ ಸಂಘಟನೆಯ ಬದಲಿಗೆ

ದೇವೇಗೌಡರನ್ನು ಹಣಿಯಲು ಹುಟ್ಟಿಕೊಂಡ ಸಂಘಟನೆ ಎಂಬುದು ಬಹುಬೇಗ ಬಹಿರಂಗವಾಯಿತು. ಈ ಚಳವಳಿಯಲ್ಲಿ ಸಿದ್ದರಾಮಯ್ಯ ಉತ್ಸವಮೂರ್ತಿಯಾಗಿದ್ದರು. ನಂತರ ಅವರು ಹರಕೆಯ ಕುರಿಯಾದರು. ಈಗ ಸಿದ್ದರಾಮಯ್ಯ ಅವರಿಗೂ ಅಹಿಂದ ನೆನಪಿಲ್ಲ. ಅವರನ್ನು ಬೀದಿಗೆ ಎಳೆದ ಕಾಂಗ್ರೆಸ್ ಮುಖಂಡರಿಗೂ ಅದು ಮರೆತು ಹೋಗಿದೆ. ಬಲಿಷ್ಠ ಸಮುದಾಯಗಳು ಈಗ ಮತ್ತೆ ತಮ್ಮ ಕೈಗೆ ಅಧಿಕಾರವನ್ನು ತೆಗೆದುಕೊಂಡಿವೆ. ಹಿಂದುಳಿದ, ಅಲ್ಪ ಸಂಖ್ಯಾತ ಸಮುದಾಯಗಳು ತಮ್ಮ ತಪ್ಪಿನಿಂದಾಗಿಯೇ ಧ್ವನಿ, ಪ್ರಾತಿನಿಧ್ಯ ಕಳೆದುಕೊಂಡಿವೆ. ಚಿಕ್ಕ ಚಿಕ್ಕ ಸಮುದಾಯಗಳನ್ನು ಒಗ್ಗೂಡಿಸಿ ಮತ್ತೆ ಅವುಗಳಿಗೆ ಬಾಯಿ ಕೊಡುವ, ಪ್ರಾತಿನಿಧ್ಯ ದೊರಕಿಸುವ ನಾಯಕ ಎಲ್ಲಿದ್ದಾನೋ? ಯಾವಾಗ ಬಂದಾನೋ ಯಾರಿಗೆ ಗೊತ್ತು?

■

# ಗರಿಕೆ ಕಡ್ಡಿಯ ಹಿಡಿದು ಕಮ್ಯುನಿಸ್ಟರನ್ನು ಬಡಿದ ಮಮತಾ...

ಒಬ್ಬ ಅಪ್ಪಟ, ನೈಜ ಹೋರಾಟಗಾರ್ತಿ ಹೇಗೆ ರೂಪುಗೊಳ್ಳುತ್ತಾರೆ? ಆಕೆಗೆ ನಿರಂತರವಾಗಿ 'ಹೋರಾಟವೇ ಜೀವನ' ಎಂದು ಏಕೆ ಅನಿಸುತ್ತದೆ? ಇದು ಕುತೂಹಲದ ಪ್ರಶ್ನೆ. ಮಮತಾ ಬ್ಯಾನರ್ಜಿ ಅಂಥ ಅಪ್ಪಟ ಹೋರಾಟಗಾರ್ತಿ. ಇಂಥ ಇನ್ನೊಂದು ಹೆಸರು ಮೇಧಾ ಪಾಟ್ಕರ್. ಇವರಿಗೆ ಜನಪರ ಹೋರಾಟ ಬಿಟ್ಟು ಮತ್ತಾವ ಚಿಂತೆಯೂ ಇಲ್ಲ ಅನಿಸುತ್ತದೆ. ಮಮತಾಗೆ ರಾಜಕೀಯವಾದರೂ ಇದೆ. ಮೇಧಾಗೆ ಅದೂ ಇಲ್ಲ. ಇಬ್ಬರೂ ಮಾಸಿದ ಹತ್ತಿ ಸೀರೆ, ಕೆದರಿದ ಕೂದಲು, ಎಂದೂ ಅಲಂಕಾರ ಕಾಣದ ಮುಖದಲ್ಲಿಯೇ ಇಡೀ ದೇಶದ ಗಮನ ಸೆಳೆದವರು. ಮೇಧಾ ಅವರದು ಸಾತ್ವಿಕ ಸಿಟ್ಟು. ಆದರೆ, ಮಮತಾ ಉಗ್ರ ಹೆಣ್ಣು ಮಗಳು, ಛಲ ಸ್ವಾಭಿಮಾನ ಮೈವೆತ್ತಂಥವರು.

ಅದು 1969ನೇ ಇಸವಿ. ಆಗಿನ ಕಲ್ಕತ್ತೆಯ ಭೊವಾನಿಪುರ ಉಪನಗರದಲ್ಲಿ ನಕ್ಸಲರು ಸಂಜೆಯಾಗುತ್ತಿದ್ದಂತೆಯೇ ಗುಂಪಾಗಿ ಬಂದು ಶಸ್ತ್ರಾಸ್ತ್ರ ಬಳಕೆಯ ತಾಲೀಮು ಶುರು ಮಾಡುತ್ತಿದ್ದರು. ಪೊಲೀಸರ ಪ್ರತಿಕೃತಿ ನಿಲ್ಲಿಸಿ ಅದನ್ನು ಗುರಿ ಯಾಗಿಟ್ಟು ಚಾಕು ಎಸೆಯುತ್ತಿದ್ದರು. ಈ ತಾಲೀಮು ಅತ್ತ ಶುರುವಾಗುತ್ತಿದ್ದಂತೆಯೇ

ಇತ್ತ ಆ ಪ್ರದೇಶದ ಸಭ್ಯ ಜನರೆಲ್ಲ ಬಾಗಿಲು, ಕಿಟಕಿ ಹಾಕಿಕೊಳ್ಳುತ್ತಿದ್ದರು. ನಕ್ಸಲ್‌ರ ಕೇಕೆ ಮುಗಿಲು ಮುಟ್ಟುತ್ತಿತ್ತು. ಒಂದು ದಿನ 15 ವರ್ಷದ ಒಬ್ಬ ಹುಡುಗಿ ಮನೆ ಯಿಂದ ಹೊರಗೆ ಬಂದಳು. ಮೋಟು ಜಡೆ, ಸ್ಕರ್ಟ್‌ನ ಈ ಹುಡುಗಿ ನಕ್ಸಲ್ ಮತ್ತು ಪೊಲೀಸ್ ಪ್ರತಿಕೃತಿಯ ಮಧ್ಯ ನಿಂತು, 'ನೀವು ಇಲ್ಲಿನ ಜನರನ್ನು ಭಯಭೀತ ಗೊಳಿಸುವ ಮೊದಲು ನನ್ನ ಎದೆಗೆ ಚಾಕು ಎಸೆಯಿರಿ' ಎಂದು ಗುಡುಗಿದಳು. ಆಕೆಯ ಗುಡುಗಿಗೆ ಕಿಟಕಿ, ಬಾಗಿಲುಗಳು ನಿಧಾನವಾಗಿ ತೆರೆದುಕೊಂಡವು. ತಮ್ಮ ತಮ್ಮಲ್ಲೆ ಪಿಸುಗುಟ್ಟಿಕೊಂಡ ನಕ್ಸಲ್‌ರು ಜಾಗ ಖಾಲಿ ಮಾಡಿದರು. ಮತ್ತೆ ಅವರು ಅಲ್ಲಿಗೆ ಬರಲಿಲ್ಲ!

ಇದಾದ 21 ವರ್ಷಗಳ ನಂತರ ನಡೆದ ಘಟನೆಯಿದು; ಅದು 1990ನೇ ಇಸವಿ. ಆ ವೇಳೆಗೆ ಪಶ್ಚಿಮ ಬಂಗಾಲದಲ್ಲಿ ಮಮತಾ ದೀದಿ ಕಾಂಗ್ರೆಸ್‌ನ ಏಕೈಕ ಆಶಾಕಿರಣ ಎನಿಸಿದ್ದರು. ಅಲ್ಲಿನ ರಾಜ್ಯ ಸರ್ಕಾರ ಮಾಡಿದ್ದ ಬಸ್ ದರ ಏರಿಕೆ ವಿರುದ್ಧ ಚಳವಳಿ ರೂಪಿಸಿ ಮುಂಚೂಣಿಯಲ್ಲಿ ನಿಂತಿದ್ದರು. ಪ್ರತಿಭಟನಾ ಸ್ಥಳಕ್ಕೆ ಮೂರು ಟ್ಯಾಕ್ಸಿಗಳಲ್ಲಿ ಗೂಂಡಾಗಳು ಬಂದು ಮಮತಾ ಅವರನ್ನು ಮೂರೂ ದಿಕ್ಕುಗಳಲ್ಲಿ ಸುತ್ತುವರಿದರು. ಇವರನ್ನು ನೋಡಿ ಆಕೆಯ ಇತರ ಸಹಚರರು ದಿಕ್ಕಾ ಪಾಲಾಗಿ ಓಡಿದರು. ಮಮತಾ ಚೇತರಿಸಿಕೊಂಡು ಪ್ರತಿಕ್ರಿಯಿಸುವ ಮೊದಲೇ ಅವರ ತಲೆಗೆ ಕಬ್ಬಿಣದ ಸರಳಿನಿಂದ ಬಲವಾದ ಏಟು ಬಿತ್ತು. ತಲೆ ಒಡೆದು ಉಪ್ಪು, ಉಪ್ಪು ರಕ್ತ ಬಾಯಿ ಸೇರಿತು. ಅದರ ಹಿಂದೆಯೇ ಇನ್ನೊಂದು ಏಟು ಬಲಭುಜಕ್ಕೆ ಬಿತ್ತು. ಅದರ ಫಲ ಅವರ ತಲೆಗೆ 26 ಹೊಲಿಗೆ ಬಿದ್ದುವು. ನಾಲ್ಕು ದಿನ ಪ್ರಜ್ಞೆ ಇರಲಿಲ್ಲ. ಮಮತಾ ಬದುಕಿ ಉಳಿದುದೇ ಅದೃಷ್ಟ. ಈಗಲೂ ಅವರಿಗೆ ಆಗಾಗ ತಲೆ ತೂಗಿ ಮಂಪರು ಬಂದಂತೆ ಆಗುತ್ತದೆ. ಬಲ ಭಾಗ ಅಭದ್ರ ಎನಿಸುತ್ತದೆ.

ಮಮತಾ ಜನರ ಜತೆಗೆ ನಿಂತ ಬಗೆಯಿದು. 54 ವರ್ಷದ ಮಮತಾ ತಮ್ಮ ರಾಜಕೀಯ ಜೀವನದಲ್ಲಿ ಅನೇಕ ಏಳು ಬೀಳುಗಳನ್ನು, ಸೋಲು ಗೆಲುವುಗಳನ್ನು ಕಂಡಿದ್ದಾರೆ. ಆದರೆ ಎಂದೂ ಕಂಗೆಟ್ಟಿಲ್ಲ. ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್‌ರ 'ಅಟ್ಟಹಾಸ', 'ಉದ್ಧಟತನ' ಕೊನೆಗಾಣಿಸುವುದು ಅವರ ಹಟ. ಅದಾದ ನಂತರವೇ ಅವರು ಮದುವೆ ಮಾಡಿಕೊಳ್ಳುತ್ತಾರೆ ಎಂಬ ಸುದ್ದಿ! ಈ ಸಾರಿಯ ಲೋಕಸಭೆಯ ಚುನಾವಣೆಯ ಫಲಿತಾಂಶ ಕಮ್ಯುನಿಸ್ಟ್‌ರಿಗೆ ಮರ್ಮಾಘಾತವನ್ನೇ ಉಂಟು ಮಾಡಿದೆ. ಬರಲಿರುವ ವಿಧಾನಸಭೆ ಚುನಾವಣೆ ಚಿಂತೆಯಲ್ಲಿ ಅವರು ಈಗಲೇ ನಿದ್ದೆಗೆಡಿಸಿ ಕೊಂಡಿದ್ದಾರೆ. ಮಮತಾ 1984ರಷ್ಟು ಹಿಂದೆಯೇ ಕಮ್ಯುನಿಸ್ಟ್‌ರ ದೊಡ್ಡ ನಾಯಕ ಸೋಮನಾಥ ಚಟರ್ಜಿ ಅವರನ್ನೇ ಸೋಲಿಸಿದಾಕೆ. ಕಮ್ಯುನಿಸ್ಟ್‌ರ ವಿರುದ್ಧ ರೋಸಿ ಹೋಗಿರುವ ಕೆಳ ಮಧ್ಯಮ ವರ್ಗದ ಪ್ರತಿನಿಧಿ ಮಮತಾ. ನೂರಾರು ಸಾರಿ ಜೈಲಿಗೆ ಹೋದವರು. ಉಪವಾಸ-ವನವಾಸದಂಥ ಸತ್ಯಾಗ್ರಹಗಳಿಗಂತೂ ಲೆಕ್ಕವೇ ಇಲ್ಲ. ನ್ಯಾನೊ ಕಾರು ಘಟಕದ ವಿರುದ್ಧದ ಅವರ ಹೋರಾಟ ಜನಜನಿತ. ಅವರ ಪಕ್ಷದ ಹೆಸರೇ ತೃಣಮೂಲ. ಅಂದರೆ ಹುಲ್ಲಿನ ಮೂಲ. ಗರಿಕೆಯ ಮೂಲ. ಈ ಗರಿಕೆ ಎಂದೂ ಒಣಗುವುದಿಲ್ಲ. ಬೇಸಿಗೆಯಲ್ಲಿ ಹಳದಿಯಾಗಿ ನೆಲಮಟ್ಟವಾದರೂ ಮತ್ತೆ

ಮಳೆ ಬಂದರೆ ಸಾಕು ಚಿಗಿತುಗೊಳ್ಳುತ್ತದೆ. ಮಮತಾ ಆಶಯ ಕೂಡ ಅದೇ ಆಗಿರಬೇಕು.

ಮಮತಾ ಅಧಿಕಾರ ಹೋಯಿತೆಂದು ಮರುಗಿದವರಲ್ಲ. ಬಂತು ಎಂದು ಬೀಗಿದವರೂ ಅಲ್ಲ. ಮೊನ್ನೆ ಮೊನ್ನೆ ರೈಲ್ವೆ ಸಚಿವರಾದ ನಂತರವೂ ಅವರ ಬಟ್ಟೆ ಬರೆ ಬದಲಾಗಿಲ್ಲ. ಕೊಳೆಗೇರಿ ಪ್ರದೇಶವಾದ ಕಾಲಿಘಾಟ್‌ನ ಮನೆಯೂ ಹಾಗೆಯೇ ಇದೆ. ಆಕೆ ಮತ್ತೆ ಜನರ ಮಧ್ಯೆ ಹೋಗಿದ್ದಾರೆ. ತಮ್ಮ ಊರಿನಲ್ಲಿಯೇ ಸಚಿವ ಹುದ್ದೆಯ ಅಧಿಕಾರ ವಹಿಸಿಕೊಂಡಿದ್ದಾರೆ. ಹೀಗೆ ಈಗ ಯಾರು ಮಾಡುತ್ತಾರೆ? ಪಕ್ಕದ ತಮಿಳುನಾಡಿನ ಜಯಲಲಿತಾ ಅವರನ್ನು ನೋಡಿ. ಆಕೆಯ ಮನೆಯಲ್ಲಿ 1,200 ಜೋಡಿ ಚಪ್ಪಲಿಗಳೇ ಸಿಗುತ್ತವೆ. ಒಡವೆ, ಸೀರೆಗಳಿಗಂತೂ ಲೆಕ್ಕವೇ ಇಲ್ಲ. ರಾಜಕೀಯ ಎಂಬುದು ಮಮತಾ ಅಂಥವರನ್ನೂ ರೂಪಿಸುತ್ತದೆ; ಜಯಲಲಿತಾ ಅಂಥವರನ್ನೂ ಸೃಷ್ಟಿಸುತ್ತದೆ. ಸಮಸ್ಯೆ ಎಂದರೆ ಜಯಲಲಿತಾ 'ಸಂತಾನವೇ' ಜಾಸ್ತಿ. ಅಧಿಕಾರ, ಭ್ರಷ್ಟರನ್ನಾಗಿ ಮಾಡುತ್ತದೆ ಎಂದು ಹೇಳುತ್ತಾರೆ. ಮಮತಾ ಅಧಿಕಾರದ ರುಚಿ ಕಂಡುದು ಕಡಿಮೆ. ಆದರೆ, ಆಕೆಯನ್ನು 'ಭ್ರಷ್ಟೆ' ಎಂದು ಹೇಳುವ ಧೈರ್ಯವನ್ನು ಯಾರಾದರೂ ಮಾಡಿದರೆ ಅವರ ಕಥೆ ಮುಗಿದೇ ಹೋಗುತ್ತದೆ. ರಾಜಕಾರಣ ಕೆಟ್ಟು, ಕುಲಗೆಟ್ಟು, ಗಬ್ಬೆದ್ದು ಹೋಗಿದೆ ಎನ್ನುವ ಈ ಕಾಲದಲ್ಲಿಯೂ ಒಬ್ಬ ಮನಮೋಹನ್, ಒಬ್ಬ ಮಮತಾ ಇದ್ದಾರೆ ಎಂಬುದು ದೊಡ್ಡ ಭರವಸೆ.

ಮಮತಾ ಅವರದು ಒಂದೊಂದು ಸಾರಿ ತಿಕ್ಕಲು ಎನಿಸುವಂತಹ ವರ್ತನೆ. ತಮ್ಮ ಹೆಗಲ ಮೇಲಿನ ಶಾಲಿನಿಂದಲೇ ನೇಣು ಹಾಕಿಕೊಳ್ಳಲು ಹೊರಟು ಬಿಡುತ್ತಾರೆ. ಲೋಕಸಭೆಯಲ್ಲಿ ಮಾತನಾಡಲು ಅವಕಾಶ ಸಿಗಲಿಲ್ಲ ಎಂದು ರಾಜೀನಾಮೆ ಕೊಡಲು ಮುಂದಾಗುತ್ತಾರೆ. ಸದನದ ಅಂಗಳದಲ್ಲಿ ಪೆಟ್ರೋಲ್ ದರ ಏರಿಕೆ ವಿರುದ್ಧ ಪ್ರತಿಭಟನೆ ಮಾಡುವಾಗಲೇ ಅಮರಸಿಂಗ್ ಅವರ, ಮಹಿಳಾ ಮಸೂದೆ ಮಂಡನೆಗೆ ವಿರೋಧಿಸಿದ ಅದೇ ಪಕ್ಷದ ದರೋಗಾ ಪ್ರಸಾದ್ ಸರೋಜಾ ಅವರ ಕೊರಳಪಟ್ಟಿಗೆ ಕೈ ಹಾಕುತ್ತಾರೆ. ಇದೆಲ್ಲ. ಚಿಕ್ಕ ಪುಟ್ಟ ಸಂಗತಿಗಳಿಗೆ ಸಟೆದುಕೊಳ್ಳುವ ಪಕ್ಕದ ಮನೆಯ ಹುಡುಗ, ಹುಡುಗಿಯ ವರ್ತನೆಯಂತೆ ಕಾಣುತ್ತದೆ. ಆಕೆ ಈಸ್ಟ್ ಜಾರ್ಜಿಯಾ ವಿಶ್ವ ವಿದ್ಯಾಲಯದಿಂದ ಪಡೆದ ಪಿಎಚ್.ಡಿ ಪದವಿ ಕುರಿತು ಕೊಂಕು ಮಾತನಾಡು ವವರೂ ಇದ್ದಾರೆ. ಇದೇನೇ ಇದ್ದರೂ ಮಮತಾ ಅವರ ಕಾಲು ನೆಲದಲ್ಲಿ ಗಟ್ಟಿಯಾಗಿ ನಿಂತಿವೆ. ಆಕೆ ನಿಜವಾದ ಅರ್ಥದಲ್ಲಿ ನೆಲದ ಮಗಳು, ಮಣ್ಣಿನ ಮಗಳು.

ಕರ್ನಾಟಕದಲ್ಲಿ ಮಮತಾ ಅವರಂಥ ಒಬ್ಬ ಹೋರಾಟಗಾರ/ರ್ತಿ ಹುಟ್ಟುವುದು ಕಷ್ಟ ಇರಬಹುದೇ?

■

# ನೀವೇನು ಮಾಡುತ್ತಿದ್ದೀರಿ?

ಕರ್ನಾಟಕದ ರಾಜಕಾರಣಕ್ಕೆ ಭಿನ್ನಮತ ಬಹು ವರ್ಷಗಳಿಂದ ಅಂಟಿದ ರೋಗ, ಈಗ ಮತ್ತೆ ಉಲ್ಬಣಿಸಿದೆ: ಅದೂ ಶಿಸ್ತಿನ, ಕೇಡರ್ ಪಕ್ಷ ಎಂದು ಹೆಸರಾದ ಬಿಜೆಪಿಯಲ್ಲಿ 'ಯಡಿಯೂರಪ್ಪ ಸರ್ಕಾರಕ್ಕೆ ಈಗ ಯಾವ ಸಮಸ್ಯೆಯೂ ಇಲ್ಲ. ತಲೆ ಬಗ್ಗಿಸಿಕೊಂಡು ಕೆಲಸ ಮಾಡಬೇಕು ಅಷ್ಟೇ' ಎಂದು ಅಂದುಕೊಂಡವರಿಗೆ ನಿರಾಶೆಯಾಗಿದೆ. ಪಕ್ಷದಲ್ಲಿ, ಇಂಧನ ಸಚಿವ ಈಶ್ವರಪ್ಪ, ಯಡಿಯರಪ್ಪ, ಅವರಷ್ಟೇ ಹಿರಿಯರು. ಪಕ್ಷದ ಅಧ್ಯಕ್ಷ, ಶಾಸಾಕಾಂಗ ಪಕ್ಷದ ನಾಯಕ ಹೀಗೆ ಅನೇಕ ಹುದ್ದೆಗಳನ್ನು ಅಲಂಕರಿಸಿದವರು. ಅಂಥವರು ಕೂಡ ಪಕ್ಷದ ವೇದಿಕೆಯಲ್ಲಿ ತಮ್ಮ ಅಸಮಾಧಾನ ತೋಡಿಕೊಳ್ಳುವ ಬದಲು ಮಾಧ್ಯಮಗಳ ಮೊರೆ ಹೊಕ್ಕಿದ್ದಾರೆ. (ಕೊನೆಯ ಪಕ್ಷ ಅನಂತಕುಮಾರ್ ಅವರನ್ನು ನೋಡಿಯಾದರೂ ಈಶ್ವರಪ್ಪ ಕಲಿಯ ಬೇಕಿತ್ತು. ಅನಂತ್, ಎಂದೂ ಯಡಿಯೂರಪ್ಪ ವಿರುದ್ಧ ಮಾಧ್ಯಮಗಳ ಎದುರು ಮಾತನಾಡಿಲ್ಲ. ಆದರೆ, ಮಾಧ್ಯಮಗಳನ್ನು ಬಳಸಿಕೊಂಡೇ ತಮ್ಮ ಕೆಲಸಗಳನ್ನು ಮಾಡಿಸಿಕೊಂಡಿದ್ದಾರೆ!)

ಈಶ್ವರಪ್ಪ ಅವರಿಗೆ ಪಕ್ಷದ ವೇದಿಕೆಯಲ್ಲಿ ಇಂಥ ಚರ್ಚೆ

ಮಾಡಲು ಅವಕಾಶ ಇರಲಿಲ್ಲವೇ? ಅಥವಾ ಅವರಿಗೆ ಮನಸ್ಸು ಇರಲಿಲ್ಲವೇ? ಬಹುಕಾಲದ ಗೆಳೆಯ, ಯಡಿಯೂರಪ್ಪ ಅವರ 'ಅಧಿಕಾರ'ವನ್ನು ಪ್ರಶ್ನಿಸುವ ಮಟ್ಟಕ್ಕೆ ಏಕೆ ಹೋದರು? ಎಲ್ಲ ಮುಗಿದ ಮೇಲೆ ಕುಟುಂಬ ರಾಜಕಾರಣದ ಪ್ರಶ್ನೆಯನ್ನು ಈಗೇಕೆ ಎತ್ತಿಕೊಂಡರು? ಯಡಿಯೂರಪ್ಪ ಅವರ ಮಗನಿಗೆ ಟಿಕೆಟ್ ಕೊಡಲು ತೀರ್ಮಾನಿಸಿದವರು ಹೈಕಮಾಂಡ್‌ನ ನಾಯಕರಲ್ಲವೇ? ಈಶ್ವರಪ್ಪ ಅವರ ಜಗಳ ಇರುವುದು ಯಡಿಯೂರಪ್ಪ ಜತೆಗೋ ಅಥವಾ ಹೈಕಮಾಂಡ್ ಜತೆಗೋ? ಯಡಿಯೂರಪ್ಪ ಕೂಡ ಮಗ ಗೆದ್ದ ಅಂತರದ ಬಗ್ಗೆ ತಲೆ ಕೆಡಿಸಿಕೊಳ್ಳುವುದು ಅಗತ್ಯವಿತ್ತೇ? ಗೆಲುವು ಗೆಲುವೇ ಅಲ್ಲವೇ? ಅದರಲ್ಲಿ ಕೂದಲು ಸೀಳುವುದೇನು? ಇಬ್ಬರ ನಡುವಿನ ಭಿನ್ನಮತಕ್ಕೆ ವೈಯಕ್ತಿಕ ಕಾರಣಗಳು ಇವೆಯೇ? ವ್ಯಾವಹಾರಿಕ ಕಾರಣಗಳು ಇವೆಯೇ? ವೈಯಕ್ತಿಕ, ವ್ಯಾವಹಾರಿಕ ಕಾರಣಗಳಿಗೆ ಈಶ್ವರಪ್ಪ ಸೈದ್ಧಾಂತಿಕ ಚೌಕಟ್ಟು ಹಾಕುವ ಪ್ರಯತ್ನ ಮಾಡುತ್ತಿದ್ದಾರೆಯೇ?

ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಏನೇ ಇರಬಹುದು. ಆದರೆ, ಈ ಪಕ್ಷದಲ್ಲಿನ ಈ ವಿದ್ಯಮಾನ ನಿಷ್ಠಾವಂತ ಕಾರ್ಯಕರ್ತರಿಗಂತೂ 'ಜನಾದೇಶಕ್ಕೆ ಮಾಡುತ್ತಿರುವ ದ್ರೋಹ' ಎಂದು ಅನಿಸಿದೆ. 'ಜೆ.ಡಿ. (ಎಸ್)ನಿಂದ ಬಿಜೆಪಿಗೆ ದ್ರೋಹವಾಯಿತು' ಎಂಬ ಕಾರಣದಿಂದಲೇ ಈ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ ಎಂಬುದು ವಿಪರ್ಯಾಸ. ಈಶ್ವರಪ್ಪ ಭಿನ್ನಮತದ ಕಹಳೆ ಊದಲು ಆಯ್ದುಕೊಂಡ ಸಮಯ ಅವರಿಗೇ ಅನುಕೂಲಕರವಾಗಿಲ್ಲ. ನಿನ್ನೆ ಮೊನ್ನೆಯಷ್ಟೇ ಇಡೀ ದೇಶದಲ್ಲಿಯೇ ಅತಿ ಹೆಚ್ಚು ಬಿಜೆಪಿ ಸಂಸದರನ್ನು ಯಡಿಯೂರಪ್ಪ ಆರಿಸಿ ದೆಹಲಿಗೆ ಕಳುಹಿಸಿದ್ದಾರೆ. ಆದರೂ, ಪ್ರಯೋಜನ ಆಗಲಿಲ್ಲ. ಎಂಬುದು ಬೇರೆ ಮಾತು. ಆದರೆ, ಮುಖ್ಯವಾಗಿ ಯಡಿಯೂರಪ್ಪ ವರ್ಚಸ್ಸಿನಿಂದಾಗಿಯೇ ಇದು ಸಾಧ್ಯವಾಗಿದೆ ಎಂಬುದನ್ನು ಬಿಜೆಪಿಯ ದೆಹಲಿಯ ನಾಯಕರು ಇನ್ನೂ ಮರೆತಿಲ್ಲ. ಜತೆಗೆ ಇಡೀ ರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಇದು ಪುನರುಜ್ಜೀವನದ ಕಾಲ. ಕಾಂಗ್ರೆಸ್ ಪಕ್ಷಕ್ಕೆ ಸೆಡ್ಡು ಹೊಡೆದು ನಿಲ್ಲಲು ಬಿಜೆಪಿ ಬಹಳಷ್ಟು ಕಸರತ್ತು ಮಾಡಬೇಕಾಗುತ್ತದೆ. ಅಂಥದರಲ್ಲಿ ಇಡೀ ದಕ್ಷಿಣ ಭಾರತದಲ್ಲಿ ಏಕೈಕ ಬಿಜೆಪಿ ಸರ್ಕಾರ ಅಸ್ಥಿರಗೊಳ್ಳುವುದನ್ನು ಕೇಂದ್ರ ಬಿಜೆಪಿ ನಾಯಕರು ಬಯಸುತ್ತಾರೆಯೇ? ಖಂಡಿತ ಬಯಸಲಾರರು. ಹಾಗೆಂದು ಭಿನ್ನಮತಕ್ಕೆ ಕಾರಣಗಳನ್ನು ಹುಡುಕದೆಯೂ ಇರಲಾರರು.

ಯಡಿಯೂರಪ್ಪ ಅವರ ಮುಖ್ಯ ಸಮಸ್ಯೆ (ಅದು ಒಂದೆರಡಲ್ಲ!) ಎಂದರೆ ಸಂಪುಟದ ಸದಸ್ಯರ ಜತೆ ಮೊದಲ ದಿನದಿಂದಲೇ ಅಗತ್ಯವಾಗಿ ಇಟ್ಟುಕೊಳ್ಳಬೇಕಾಗಿದ್ದ ಸಂಪರ್ಕವನ್ನು ಇಟ್ಟುಕೊಳ್ಳದೇ ಇದ್ದುದು. ಸುಮ್ಮನೇ, ನಾಲ್ಕಾರು ಸಚಿವರನ್ನು ಕರೆದು ಚಹಾ ಕುಡಿಯುತ್ತ 'ನಿಮ್ಮ ಇಲಾಖೆ ಕೆಲಸ ಹೇಗೆ ನಡೆದಿದೆ, ಸಮಸ್ಯೆಗಳೇನಾದರೂ ಇವೆಯೇ' ಎಂದು ಕೇಳದೇ ಇರುವುದು. ಬರೀ ಪಕ್ಷ ಮಾತ್ರವಲ್ಲ ಯಾವುದೇ ಬಿಕ್ಕಟ್ಟನ್ನು ನಿಭಾಯಿಸಲು ಒಂದು ತಂಡವನ್ನು ಕಟ್ಟದೇ ಇರುವುದು. ಕಟ್ಟಿದರೂ ಅದನ್ನು ಮತ್ತೆ ಮತ್ತೆ ಬದಲಿಸುತ್ತಿರುವುದು. ತಮ್ಮಿಂದಲೇ ಈ ಸರ್ಕಾರ ಬಂದಿದೆ ಎಂಬ ಭ್ರಮೆ ಅಥವಾ ನಂಬಿಕೆ ಅವರ ತಲೆಗೆ ಹೋಗಿರುವುದು...

ಆದರೆ, ಚುನಾವಣೆ ಗೆಲ್ಲುವುದು ಬೇರೆ, ಸರ್ಕಾರ ನಡೆಸುವುದು ಬೇರೆ. ಒಂದು ಸಾರಿ ನಾಯಕನಾದವನು ತಮ್ಮನ್ನು ನಂಬುವುದಿಲ್ಲ ಎಂದು ಅನಿಸ ತೊಡಗಿದಾಗ ಗುಮಾನಿ, ಪಿಸುಮಾತುಗಳು ಶುರುವಾಗುತ್ತವೆ. ವಿಚಿತ್ರ ಎಂದರೆ ಅದರಿಂದ ನಾಯಕನಿಗೆ ತನ್ನ ಹಿಂದೆ ಏನೋ ಷಡ್ಯಂತ್ರ ನಡೆಯುತ್ತಿದೆ ಎಂದು ಭಾಸವಾಗುತ್ತದೆ. ಮತ್ತೆ ಅಪನಂಬಿಕೆಯ ಚಕ್ರ ತಿರುಗತೊಡಗುತ್ತದೆ. ತಮಾಷೆ ಎಂದರೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಬಿಜೆಪಿ ಸಚಿವರ ಜತೆಗೆ ಇಟ್ಟುಕೊಂಡಿದ್ದ ಸಂಬಂಧ, ಸಲಿಗೆ, 'ಅವಕಾಶ'ವನ್ನೂ ಯಡಿಯೂರಪ್ಪ ಇಟ್ಟುಕೊಳ್ಳದೇ ಇರುವುದು. ಅದು ಸಾಲದು ಎನ್ನುವಂತೆ ಯಡಿಯೂರಪ್ಪ ಅವರು ತಮಗೆ ಆಗದ ಪ್ರತಿಯೊಬ್ಬ ಸಚಿವರಿಗೂ ಕೊಕ್ಕೆಯ ರೀತಿಯಲ್ಲಿ ಒಬ್ಬೊಬ್ಬ ಅಧಿಕಾರಿಯನ್ನು ಹಾಕಿದ್ದಾರೆ. ಆ ಅಧಿಕಾರಿ ತಮ್ಮ ಇಲಾಖೆಯ ಸಚಿವರಿಗಿಂತ ಯಡಿಯೂರಪ್ಪ ಆದೇಶವನ್ನು ಶಿರಸಾವಹಿಸಿ ಪಾಲಿಸುತ್ತಾರೆ.

ಚುನಾವಣೆ ಸಮಯದಲ್ಲಿ ಕರ್ನಾಟಕ ವಿದ್ಯುತ್ ನಿಗಮ ಖರೀದಿಸಿದ ಕೋಟ್ಯಂತರ ರೂಪಾಯಿ ಮೊತ್ತದ ವಿದ್ಯುತ್ ಬಿಲ್‌ಗೆ ಈಗ ಮುಖ್ಯಮಂತ್ರಿ ಕೊಕ್ಕೆ ಹಾಕಿರುವುದು ಈಶ್ವರಪ್ಪ ಅವರ ಮುನಿಸಿಗೆ ಮುಖ್ಯ ಕಾರಣ ಎಂಬ ಮಾತು ಇದೆ. ಅತ್ತ ಗಣಿ ದೊರೆಗಳ ಮುನಿಸಿಗೂ ಇಂಥ ವ್ಯಾವಹಾರಿಕ ಕಾರಣಗಳೇ ಹೆಚ್ಚಿಗೆ ಇವೆ. 'ಈ ಸರ್ಕಾರ ಅಧಿಕಾರಕ್ಕೆ ಬರಲು, ಬಂದ ನಂತರ ಆಪರೇಷನ್ ಕಮಲದ ಮೂಲಕ 'ಸ್ಥಿರತೆ' ಗಳಿಸಲು, ಲೋಕಸಭಾ ಚುನಾವಣೆಯಲ್ಲಿ ಸಂಪನ್ಮೂಲ ಒದಗಿಸಲು ನಾವು ಬೇಕು. ಆದರೆ, ನಮಗೆ ಸಿಗಬೇಕಾದ ಪ್ರಾಶಸ್ತ್ಯ ಸಿಗುತ್ತಿಲ್ಲ; ಕೇಂದ್ರ ಸರ್ಕಾರ ಗಣಿ ಭೂಮಿ ಸಮೀಕ್ಷೆಗೆ ಆದೇಶ ಹೊರಡಿಸಿದಾಗ ಮುಖ್ಯಮತ್ರಿ ನಮ್ಮ ಜತೆಗೆ ನಿಲ್ಲಲಿಲ್ಲ' ಎಂಬ ಸಿಟ್ಟು ರೆಡ್ಡಿ ಸೋದರರರನ್ನು ಕಾಡುತ್ತಿದೆ.

ಈ ಸೋದರರಿಗೆ ಬಿಜೆಪಿ ಜತೆಗೆ ಅಂಥ ಭಾವನಾತ್ಮಕ ಸಂಬಂಧವೇನೂ ಇಲ್ಲ. ರಾಷ್ಟ್ರ ಮಟ್ಟದಲ್ಲಿ ಸುಷ್ಮಾ ಅವರೊಬ್ಬರನ್ನು ಬಿಟ್ಟರೆ ಉಳಿದ ನಾಯಕರ ಜತೆಗೂ ಅವರಿಗೆ ಅಂಥ ಸಂಬಂಧವಿಲ್ಲ. ಪಕ್ಕದಲ್ಲಿ ಆಂಧ್ರದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿ ಬೇರೆ ಕಣ್ಣು ಮಿಟುಕಿಸುತ್ತಿದ್ದಾರೆ. ರೆಡ್ಡಿ ಸೋದರರು ಈಗ ಕುಳಿತ 'ರಾಜಹಂಸ' ಬಸ್ಸನ್ನು ಬಿಟ್ಟು ದಾರಿಯಲ್ಲಿ ಬಂದ 'ವೋಲ್ವೊ' ಬಸ್ಸನ್ನು ಹತ್ತಿ ಹೋದರೂ ಅಚ್ಚರಿಯಿಲ್ಲ ಎಂದು ಅನುಮಾನ ಪಡುವವರೂ ಇದ್ದಾರೆ. ಅವರಿಗೆ ತಮ್ಮ ವ್ಯಾಪಾರ ವಹಿವಾಟು ಮುಖ್ಯ. ರಾಜಕಾರಣ ಎಂಬುದು ಒಂದು ಉಪಕಸುಬು ಅಷ್ಟೇ! ಚೆನ್ನಿಗಪ್ಪ ಜೆ.ಡಿ (ಎಸ್) ಬಿಟ್ಟು, ಡಿಬಿ. ಚಂದ್ರೇಗೌಡರು ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಬರುವುದಾದರೆ ಯಾವುದೂ ಅಸಾಧ್ಯವಲ್ಲ ಎಂದು ಹೇಳುವವರೂ ಇದ್ದಾರೆ. ಹೇಗಿದ್ದರೂ ರಾಜಕಾರಣ ಎನ್ನುವುದು ಸಾಧ್ಯತೆಗಳ ಆಟ ಅಲ್ಲವೇ?

ಒಂದು ಅರ್ಥದಲ್ಲಿ ಈ ಸಮಸ್ಯೆಗಳೆಲ್ಲ ಸ್ವಯಂಕೃತಾಪರಾಧಗಳು. ಸಾಮಾನ್ಯ ವಾಗಿ ಆಡಳಿತಕ್ಕೆ ಬರುವ ಎಲ್ಲ ರಾಜಕೀಯ ಪಕ್ಷಗಳು ಮೊದಲು ಮರೆಯುವುದು ಪಕ್ಷವನ್ನು, ನಂತರ ಕಾರ್ಯಕರ್ತರನ್ನು. ಮತ್ತೆ ಚುನಾವಣೆ ಬರುವವರೆಗೆ ಇವೆರಡೂ ನೆನಪಿಗೆ ಬರುವುದಿಲ್ಲ. ವಿಚಿತ್ರ ಎಂದರೆ ಯಡಿಯೂರಪ್ಪ ಅವರೂ ಪಕ್ಷವನ್ನು ಮರೆತರು.

ಲೋಕಸಭೆ ಚುನಾವಣೆಯಲ್ಲಿ 19 ಸೀಟುಗಳನ್ನು ಗೆದ್ದ ನಂತರ ಅವರಿಗೆ ಪಕ್ಷದ ಕಾರ್ಯಕಾರಿಣಿ ಸಭೆ ಕರೆಯಬೇಕು ಎನಿಸಲಿಲ್ಲ. ಕಾರ್ಯಕಾರಿಣಿಯಲ್ಲಿ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಬೇಕು ಎನಿಸಲಿಲ್ಲ. ಪಕ್ಷಕ್ಕಿಂತ ತಾನು ದೊಡ್ಡವನು ಎಂದು ಅನಿಸಿದಾಗ ಆಗುವ ಸಮಸ್ಯೆ ಇದು. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ತೆರಿಗೆ ಸಂಗ್ರಹ ಮಾಡಿದ್ದಕ್ಕೇ ಬಾಡೂಟ ಕೊಡಿಸುವುದಾದರೆ ಚುನಾವಣೆಯಲ್ಲಿ ಗೆದ್ದುದಕ್ಕೆ ಕಾರ್ಯಕರ್ತರಿಗೆ ಒಂದು ಊಟ ಕೊಡಿಸುವುದು ದುಬಾರಿಯೇ? ಸರ್ಕಾರಕ್ಕೆ ಪಕ್ಷ ಎಂಬುದು ಒಂದು ಆಮ್ಲಜನಕದ ಕೊಳವೆ ಇದ್ದಂತೆ; ಈಗ ಈ ನಳಿಕೆ ಕತ್ತರಿಸಿ ಹೋಗಿದೆ. ಕತ್ತರಿಸಿ ಹೋಗದೇ ಇದ್ದಿದ್ದರೆ ಪಕ್ಷದ ಕಾರ್ಯಕರ್ತರೇ ಈಶ್ವರಪ್ಪ ಮುಂತಾದ ಮುಖಂಡರ ವಿರುದ್ಧ ಬಂಡೇಳುತ್ತಿದ್ದರು. ಆ ಧ್ವನಿ ಏಕೆ ಕೇಳುತ್ತಿಲ್ಲ?

ತಳಮಟ್ಟದಲ್ಲಿ ಎಚ್ಚರಿಕೆ ಧ್ವನಿ ಕೇಳದೇ ಇದ್ದರೂ ದೆಹಲಿ ಮಟ್ಟದಲ್ಲಿ ಈ ಬಂಡಾಯವನ್ನು ನಾಯಕರು ಸಹಿಸಿಕೊಳ್ಳುವುದಿಲ್ಲ. ಕರ್ನಾಟಕದ ಜನರು ಯಡಿಯೂರಪ್ಪ ಸರ್ಕಾರಕ್ಕೆ ಇದಕ್ಕಿಂತ ಹೆಚ್ಚಿನ ಜನಾದೇಶ ಕೊಡಲು ಸಾಧ್ಯವಿರಲಿಲ್ಲ. ಈಗಷ್ಟೇ ಒಂದು ವರ್ಷದ ಆಡಳಿತ ಮುಗಿಸಿರುವ ಸರ್ಕಾರಕ್ಕೆ ಆಡಳಿತ ನಡೆಸಲು ಇನ್ನೂ ನಾಲ್ಕು ಪೂರ್ಣ ವರ್ಷಗಳು ಇವೆ. ಮಾಡಲು ಬೇಕಾದಷ್ಟು ಕೆಲಸವೂ ಇದೆ. ಮೊನ್ನೆ ಪ್ರಧಾನಿಯವರನ್ನು ಭೇಟಿ ಮಾಡಲು ಹೋಗಿದ್ದ ಯಡಿಯೂರಪ್ಪ ಅವರಿಗೆ ಮನಮೋಹನಸಿಂಗ್ 'ನೀವೇನು ಮಾಡುತ್ತಿದ್ದೀರಿ ಮೊದಲು ಹೇಳಿ' ಎಂದು ಕೇಳಿದ ಪ್ರಶ್ನೆ ತೀರಾ ಹಿತವಾದುದೇನೂ ಅಲ್ಲ.

ಭಿನ್ನಮತದ ರೋಗ 1985ರಿಂದ ಕರ್ನಾಟಕದ ಅನೇಕ ಸರ್ಕಾರಗಳನ್ನು ಕಾಡಿದೆ. ಯಾರು ಯಾರಿಗೆ ಅಡ್ಡಿಯಾದರು ಎಂಬುದೆಲ್ಲ ಈಗ ಇತಿಹಾಸದಲ್ಲಿ ದಾಖಲಾಗಿದೆ. ಅದನ್ನು ಕೆದಕುವುದರಲ್ಲಿ ಅರ್ಥವಿಲ್ಲ. ಆದರೆ, ಅದರಿಂದ ಆದ ಪರಿಣಾಮ ಎಂದರೆ ಸ್ಥಿರವಾದ ಸರ್ಕಾರವಿಲ್ಲದೇ ಆಡಳಿತ ಹತೋಟಿ ತಪ್ಪಿ ಹೋದುದು, ಅಭಿವೃದ್ಧಿಗೆ ಕಂಟಕವಾದುದು. 1999–04ರವರೆಗೆ ಇದ್ದ ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ಭಿನ್ನಮತದ ಕೂಗು ಇರಲಿಲ್ಲ ಎಂದು ಅಲ್ಲ. ಆದರೆ, ಅದನ್ನು ಕಾಂಗ್ರೆಸ್ ಹೈಕಮಾಂಡ್ ಮೊಳಕೆಯಲ್ಲಿಯೇ ಚಿವುಟಿ ಹಾಕಿತು. ಬಿಜೆಪಿ ಹೈಕಮಾಂಡ್ ಕೂಡ ಮಾಡಬೇಕಾದುದು ಇದನ್ನೇ!

ಮತ್ತೆ ಅದೇ ಮಾತು: ಯಡಿಯೂರಪ್ಪ ಅವರಿಗೂ ಇತಿಹಾಸದಿಂದ ಕಲಿಯಲು ಪಾಠಗಳು ಇವೆ. ಈಶ್ವರಪ್ಪ ಅವರಿಗೂ ಇವೆ. ಕಲಿಯದಿದ್ದರೆ ಜನರು ಪಾಠ ಕಲಿಸುತ್ತಾರೆ. 1983ರಿಂದಲೇ ದುರಾಡಳಿತದ ವಿರುದ್ಧ, ಜಗಳಗಂಟಿತನದ ವಿರುದ್ಧ ಅವರು ಅದನ್ನು ಮಾಡಿಕೊಂಡು ಬಂದಿದ್ದಾರೆ! ನೀವೇನು ಮಾಡುತ್ತಿದ್ದೀರಿ ಎಂದು ನಿಮಗೆ ಗೊತ್ತಿದೆಯೇ ಯಡಿಯೂರಪ್ಪ... ಈಶ್ವರಪ್ಪ?...

■

# ಎದ್ದು ಬಂದ ಸಿದ್ಧರಾಮಯ್ಯ

ರಾಜಕಾರಣ ಕಾಯುವ ಆಟ. ಖರ್ಗೆ ಹಾಗೂ ಧರ್ಮಸಿಂಗ್ ಅವರಂತೆ ಇದು ಕಾಯುವ ಆಟ ಎಂದು ತಿಳಿದುಕೊಳ್ಳದವರು ಬೇಗ ಹತಾಶರಾಗುತ್ತಾರೆ. ಖರ್ಗೆ ಕೂಡ ಈ ಸಾರಿ ತಾಳ್ಮೆ ಕಳೆದುಕೊಂಡಿದ್ದರು. ಕಾಂಗ್ರೆಸ್ ಸಂಸ್ಕೃತಿಯ ಪರಿಚಯವೇ ಇಲ್ಲದ ಸಿದ್ದರಾಮಯ್ಯ ಅವರಿಗಂತೂ ಕಾಯುವ ಆಟ ಸಾಕಾಗಿ ಹೋಗಿತ್ತು. ತಮಗೆ ಪಕ್ಷದ ಹೈಕಮಾಂಡ್ ಕೊಟ್ಟ 'ವಚನ' ಈಡೇರುತ್ತಿಲ್ಲ ಎಂದು ಅವರು ಸಹನೆ ಕಳೆದುಕೊಂಡು ಆಡಿದ ಆಟ ಒಂದೆರಡಲ್ಲ. ಕಾಂಗ್ರೆಸ್ ದೊಡ್ಡ ಸಮುದ್ರ. ಅಲ್ಲಿ ಯಾವಾಗ ಏನಾಗಬೇಕೋ ಆಗಲೇ ಅದು ಆಗುತ್ತದೆ. ನಮ್ಮ ಆತುರ, ಬಯಕೆಗಳು ಈಡೇರುವುದು ಕಷ್ಟ.

ರಾಜಕೀಯ ತಂತ್ರಗಾರಿಕೆ ದೃಷ್ಟಿಯಿಂದ ದಲಿತ ವರ್ಗದ ಖರ್ಗೆ ಅವರು ಮೊದಲು ಕೇಂದ್ರ ಸಂಪುಟ ಸೇರಬೇಕಿದ್ದುದು ಸಹಜ ನ್ಯಾಯವಾಗಿತ್ತು. ಆದರೆ ಕೃಷ್ಣ ಮೊದಲು ಸಚಿವರಾದರು. ಜೆ.ಡಿ(ಎಸ್) ಬಿಟ್ಟು ಬಂದಿದ್ದ ಸಿದ್ದರಾಮಯ್ಯ ಕೆಪಿಸಿಸಿ ಅಧ್ಯಕ್ಷರಾಗಬೇಕಿದ್ದುದು ಸಹಜ ನ್ಯಾಯವಾಗಿತ್ತು. ಆದರೆ, ದೇಶಪಾಂಡೆ ಅವರಿಗೆ ಆ ಹುದ್ದೆ ಸಿಕ್ಕಿತು.

ಸಿದ್ದರಾಮಯ್ಯ ತಮ್ಮ ಮನೆವರೆಗೆ ಬಂದಿದ್ದ ಈ ಹುದ್ದೆಯನ್ನು ಮೊದಲು ಬಿಟ್ಟರು. ನಂತರ ದೇಶಪಾಂಡೆ ಅವರಿಗೆ ಸಿಗುತ್ತದೆ ಎಂದಾಗ ಅದರ ಬೆನ್ನು ಹತ್ತಿದರು. ಕಾಂಗ್ರೆಸ್‌ಗೆ ಈ ಚೌಕಾಶಿಗೆಲ್ಲ ವ್ಯವಧಾನ ಇರಲಿಲ್ಲ!

ಮತ್ತೆ ಸಿದ್ದರಾಮಯ್ಯ ಹತಾಶೆಯ ಬೆನ್ನು ಹತ್ತಿದರು. ರಾಜ್ಯ ವಿಧಾನಸಭೆಯ ಎಂಟು ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಈ ಹತಾಶೆಯ ಕಾರಣದಿಂದಲೇ ಅವರು ಸಕ್ರಿಯವಾಗಿ ತೊಡಗಿಕೊಳ್ಳಲಿಲ್ಲ. ಲೋಕಸಭೆ ಚುನಾವಣೆ ವೇಳೆಯಲ್ಲಿಯೂ ಖರ್ಗೆ ಅವರು ಕಣಕ್ಕೆ ಇಳಿದ ಕೂಡಲೇ ವಿರೋಧ ಪಕ್ಷದ ನಾಯಕನ ಹುದ್ದೆ ತಮಗೆ ಸಿಕ್ಕೇ ಬಿಡುತ್ತದೆ ಎಂದುಕೊಂಡಿದ್ದರು. ಖರ್ಗೆ ಮತ್ತು ಕಾಂಗ್ರೆಸ್ ಲೆಕ್ಕಾಚಾರಗಳು ಬೇರೆಯೇ ಇದ್ದವು. ಈ ಮಧ್ಯೆ ಸಿದ್ದರಾಮಯ್ಯ ಬಿಜೆಪಿ ಸೇರಿಯೇ ಬಿಡುತ್ತಾರೆ ಎಂಬ ಹುಯಿಲೂ ಎದ್ದಿತ್ತು. ಸಿದ್ದರಾಮಯ್ಯ ಅವರೂ ಬೆಳಗಾವಿಯ ವಿಧಾನಮಂಡಲ ಅಧಿವೇಶನದ ವೇಳೆಯಲ್ಲಿ ಯಡಿಯೂರಪ್ಪ ಜತೆಗೆ ಹೆಲಿಕಾಪ್ಟರ್‌ನಲ್ಲಿ ಕಾಗಿನೆಲೆಗೆ ಪ್ರಯಾಣಿಸಿದ್ದೂ ಆಯಿತು. ಸಿದ್ದರಾಮಯ್ಯ ಅವರ ಗೊಂದಲ ಕುರುಬ ಸಮುದಾಯದ ಗೊಂದಲವೂ ಆಗಿತ್ತು. ಅದು ಕಳೆದ ಲೋಕಸಭೆ ಚುನಾವಣೆಯಲ್ಲಿ ಫಲಿತವೂ ಆಯಿತು.

ಇದೆಲ್ಲ ಈಗ ಇತಿಹಾಸ. ಈಗ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ. ಸಿದ್ದರಾಮಯ್ಯ ಅವರ ಹಾಗೆಯೇ ಕುರುಬ ಸಮುದಾಯವೂ ಸಂಭ್ರಮದಿಂದ ಬೀಗುತ್ತಿದೆ. ಇದು ಸಮಸ್ಯೆ ಕೂಡ. ಸಿದ್ದರಾಮಯ್ಯ ಬರೀ ಕುರುಬರ ನಾಯಕ ಮಾತ್ರ ಎಂಬ ಆರೋಪ ಅವರ ಮೇಲೆ ಇದೆ. ಉಪ ಮುಖ್ಯಮಂತ್ರಿಯಾಗಿದ್ದಾಗ ಅವರ ಸುತ್ತ ಬರೀ ಕುರುಬರೇ ಇದ್ದರು. ಒಬ್ಬನೇ ಒಬ್ಬ ಅನ್ಯ ಜಾತಿಯ ಅಧಿಕಾರಿ ಇರಲಿಲ್ಲ. ಹುಟ್ಟು ಒಂದು ಆಕಸ್ಮಿಕ. ಆದರೆ ಸಿದ್ದರಾಮಯ್ಯ ಬರೀ ತಾವು ಹುಟ್ಟಿದ ಸಮುದಾಯಕ್ಕೆ ಮಾತ್ರ ಸೀಮಿತವಾಗಿ ಉಳಿದುಕೊಂಡರೆ ಉಳಿದ ಅನೇಕ ಹಿಂದುಳಿದ ದುರ್ಬಲ, ಅಲ್ಪಸಂಖ್ಯಾತ, ಚಿಕ್ಕಪುಟ್ಟ ಸಮುದಾಯಗಳಿಗೆ ಯಾರು ನಾಯಕತ್ವ ಕೊಡುತ್ತಾರೆ? ತಮ್ಮ ಕ್ರಿಯೆ, ನಡವಳಿಕೆ ಮೂಲಕ ಈ 'ಮಿತಿ'ಯನ್ನು ಮೀರಿ ಅವರು ಬೆಳೆಯಬೇಕು. ಅರಸು ಮಾಡಿದ ರಾಜಕಾರಣದ ಮಾದರಿ ಅವರ ಹಿಂದೆ ಇದ್ದೇ ಇದೆ.

ಸಿದ್ದರಾಮಯ್ಯ ಮೈಸೂರಿನ ವಕೀಲಿ ವೃತ್ತಿಯಿಂದ ವಿಧಾನಸಭೆಯ ವಿರೋಧ ಪಕ್ಷದ ನಾಯಕನ ಸ್ಥಾನದವರೆಗೆ ನಡೆದು ಬಂದ ಹಾದಿ ಹೂವಿನದಲ್ಲ. ಜೆ.ಡಿ(ಎಸ್)ನಲ್ಲಿ ಮುಖ್ಯಮಂತ್ರಿ ಹುದ್ದೆಗೆ ಬೆರಳೆಣಿಕೆಯ ಸಮರ್ಥರಲ್ಲಿ ಅವರೂ ಒಬ್ಬರಾಗಿದ್ದರು. ಆದರೆ ಕುಟುಂಬ ರಾಜಕಾರಣದ ಮೇಲುಗೈ ಇರುವ ಆ ಪಕ್ಷದಲ್ಲಿ ಕುಮಾರಸ್ವಾಮಿ ಅವರೇ ಮುಖ್ಯಮಂತ್ರಿ ಆಗಲು ಸಾಧ್ಯ. ಅವರಿಲ್ಲದಿದ್ದರೆ ರೇವಣ್ಣ ಮಾತ್ರ ಆ ಹುದ್ದೆಗೆ ಬರಬಹುದು. ಅದು ನಿಜವಲ್ಲವಾದರೆ, ಈಗ ಜೆ.ಡಿ(ಎಸ್) ಶಾಸಕಾಂಗ ಪಕ್ಷಕ್ಕೆ ಕುಮಾರಸ್ವಾಮಿ ಉತ್ತರಾಧಿಕಾರಿಯಾಗಿ ರೇವಣ್ಣನವರೇ ಏಕೆ ಬರಬೇಕಿತ್ತು? ಆ ಪಕ್ಷದಲ್ಲಿ ಸಿದ್ದರಾಮಯ್ಯ ಉಪಮುಖ್ಯಮಂತ್ರಿಯ ಹುದ್ದೆಗೆ ಏರಿದ್ದರೂ ಹೊರಗೆ ಹೋಗುವಂತೆ ಹೊಗೆ ಹಾಕುವವರೇ ಹೆಚ್ಚು ಜನ ಇದ್ದರು. ಸಿದ್ದರಾಮಯ್ಯ ಅವರನ್ನು ಜೆ.ಡಿ(ಎಸ್) ನಿಂದ ಹೊರಗೆ ಎಳೆಯುವ ತಂಡವೂ

ಕಾಂಗ್ರೆಸ್ಸಿನಲ್ಲಿ ಇತ್ತು. 2005ರಲ್ಲಿ ನಡೆದ 'ಅಹಿಂದ' ಸಮಾವೇಶಗಳು ಜನರಿಗೆ ಈಗ ಮರೆತು ಹೋಗಿರಬಹುದು. ಈ ಸಮಾವೇಶದ ಉದ್ದೇಶ ಹಿಂದುಳಿದ ವರ್ಗಗಳ ಸಂಘಟನೆ ಆಗಿರಲೇ ಇಲ್ಲ. ಸಿದ್ದರಾಮಯ್ಯ ಅವರನ್ನು ಮುಂದಿನ ಮುಖ್ಯಮಂತ್ರಿ ಎಂದು ಬಿಂಬಿಸುವ ನೆಪದಲ್ಲಿ ಜೆ.ಡಿ(ಎಸ್)ನಿಂದ ಹೊರಗೆ ಎಳೆಯುವುದಾಗಿತ್ತು. ಸಿದ್ದರಾಮಯ್ಯ ಮುಖ್ಯಮಂತ್ರಿಯ 'ಧಾತು' ಎಂಬುದರಲ್ಲಿ ಅನುಮಾನವೇ ಇಲ್ಲ. ಅವರು ಒಬ್ಬ ದಕ್ಷ, ಸಮರ್ಥ ಆಡಳಿತಗಾರ. ವಿಷಯ ಗ್ರಹಣ ಶಕ್ತಿಯಲ್ಲಿ ಅವರನ್ನು ಮೀರಿಸುವವರು ವಿರಳ. ಅಧಿಕಾರಿಗಳನ್ನು ಹದ್ದುಬಸ್ತಿನಲ್ಲಿ ಇಡುವುದರಲ್ಲಿಯೂ ಅವರು ಮುಂದು. ಹಣಕಸು ಖಾತೆಯನ್ನು ಹಿಂದುಳಿದ ವರ್ಗದ ಈ ನಾಯಕನ ಹಾಗೆ ನಿಭಾಯಿಸಿದವರು ಕಡಿಮೆ. ರಾಜ್ಯದಲ್ಲಿ ಮೊದಲ ಉಳಿತಾಯ ಬಜೆಟ್ ಮಂಡಿಸಿದ ಖ್ಯಾತಿಯೂ ಅವರ ಹೆಸರಿನಲ್ಲಿಯೇ ಇದೆ.

ಕುರುಚಲು ಗಡ್ಡ, ಕಪ್ಪು ದೇಹ, ಒರಟು ಮಾತು, ಅಹಂಕಾರದಿಂದ (?) ಅರಳಿಕೊಂಡ ಮೂಗಿನ ಹೊರಳೆಗಳ ಸಿದ್ದರಾಮಯ್ಯ ಈಗ ಮೆದುವಾಗಿದ್ದಾರೆ. ಅನುಭವ, ಪೆಟ್ಟುಗಳು, ಮನುಷ್ಯನನ್ನು ಮಾಗಿಸುತ್ತವೆ. ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಅಧಿಕಾರದ ಕುರ್ಚಿಯಿಂದ ದೂರ ಇದ್ದುದೂ ಅವರನ್ನು ಮೆದು ಮಾಡಿರಬೇಕು. ಚಾಮುಂಡೇಶ್ವರಿಯಲ್ಲಿ ಕೂದಲೆಳೆಯ ಅಂತರದ ಗೆಲುವು ಅವರಿಗೆ ಬೇಕಾದಷ್ಟು ಪಾಠ ಕಲಿಸಿರಲು ಸಾಕು. ಈಗ ವಿಧಾನಸಭೆಯ ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಅಹಂಕಾರ ಪಡುವುದೇನೂ ಇಲ್ಲ. ಅದು ಒಂದು ಅರ್ಥದಲ್ಲಿ ಅಧಿಕಾರ; ಇನ್ನೊಂದು ಅರ್ಥದಲ್ಲಿ ಅಲ್ಲ. ವಿರೋಧ ಪಕ್ಷದ ನಾಯಕನ ಸ್ಥಾನ ಮುಖ್ಯಮಂತ್ರಿಗೆ ಸರಿಸಮನಾದುದು. ಆ ಅರ್ಥದಲ್ಲಿ ಅದು ದೊಡ್ಡ ಅಧಿಕಾರ. ಆದರೆ ಮುಖ್ಯಮಂತ್ರಿಗೆ ಇರುವ 'ಅಧಿಕಾರ'ಗಳೆಲ್ಲ ವಿರೋಧಿ ನಾಯಕನಿಗೆ ಇರುವುದಿಲ್ಲ. ಸರ್ಕಾರವನ್ನು ಹಣಿಯಲು, ಸರಿ ದಾರಿಗೆ ತರಲು ಸಿದ್ದರಾಮಯ್ಯ ಅವರಿಗೆ 72 ಸದಸ್ಯ ಬಲದ ಭಾರಿ ಬೆಂಬಲವಿದೆ; ಸರ್ಕಾರ ಬೇರೆ ತಡವರಿಸುತ್ತಿದೆ, ಎಡವುತ್ತಿದೆ. ಒಬ್ಬ ಪ್ರತಿನಾಯಕನಾಗಿ ಬೆಳೆಯಲು ಇದಕ್ಕಿಂತ ದೊಡ್ಡ ಅವಕಾಶ ಮತ್ತೊಂದು ಇರಲಾರದು.

ಅದ್ಭುತ ಸಂಸದೀಯ ಪಟುವಾದ ಸಿದ್ದರಾಮಯ್ಯ ಧರಣಿ, ಸಭಾತ್ಯಾಗದಂಥ 'ಉಚಿತ ಪ್ರಚಾರ'ದ ಗೀಳಿಗೆ ಬೀಳದೆ ಸದನದಲ್ಲಿ ನಿಂತು ಸರ್ಕಾರವನ್ನು ಎದುರಿಸುವುದು ಲೇಸು. ಅವರು ಒಬ್ಬರೇ ಈ ಕೆಲಸ ಮಾಡಲು ಸಾಧ್ಯವಿಲ್ಲ. ಈಗ ಬೇರೆ 'ವಲಸಿಗರಿಗೇ ಕಾಂಗ್ರೆಸ್ಸಿನಲ್ಲಿ ಮಣೆ' ಎಂಬ ಅಪಸ್ವರ ಎದ್ದಿದೆ. ವಿಧಾನಸಭೆ ಯಲ್ಲಿ ಡಾ.ಜಿ. ಪರಮೇಶ್ವರ್, ಟಿ.ಬಿ. ಜಯಚಂದ್ರ ಅವರಂಥ 'ಹಿರಿಯ ಮೂಲ ನಿವಾಸಿ'ಗಳನ್ನು ಕಡೆಗಣಿಸಿ ಸಿದ್ದರಾಮಯ್ಯ ಅವರಿಗೆ ಪಟ್ಟ ಕಟ್ಟಲಾಗಿದೆ. ಖರ್ಗೆ ಅವರು ವಿರೋಧಿ ನಾಯಕರಾಗಿದ್ದಾಗ ಸಿದ್ದರಾಮಯ್ಯ ಸದನಕ್ಕೆ ಬಂದುದೇ ಅಪರೂಪ. ಈಗ ಪರಮೇಶ್ವರ್, ಜಯಚಂದ್ರ ಅವರೂ ಅದನ್ನೇ ಮಾಡಿದರೆ ಕಷ್ಟ! 'ವಲಸೆಗಾರರು', 'ಮೂಲ ನಿವಾಸಿಗಳು' ಎಂಬ ಭೇದ ಅಳಿಸಿ ಸಮರಸವಾದರೆ ಮಾತ್ರ ಕಾಂಗ್ರೆಸ್ಸಿಗೆ ಭವಿಷ್ಯ.

ಕಾಂಗ್ರೆಸ್ ಹೈಕಮಾಂಡ್ ರಾಜ್ಯದ ಎಲ್ಲ ಪ್ರಮುಖ ಜಾತಿಗಳಿಗೆ ಪ್ರಾತಿನಿಧ್ಯ ಕೊಡುವ

ಪ್ರಾಮಾಣಿಕ ಪ್ರಯತ್ನ ಮಾಡಿದೆ. ಕೇಂದ್ರದಲ್ಲಿ ಸಾಕಷ್ಟು ಉತ್ತಮ ಖಾತೆಗಳೂ ರಾಜ್ಯಕ್ಕೆ ಸಿಕ್ಕಿವೆ. ಬ್ರಾಹ್ಮಣ, ಒಕ್ಕಲಿಗ, ಲಿಂಗಾಯತ, ಹಿಂದುಳಿದ, ದಲಿತ (ಎರಡೂ ಪಂಗಡಗಳು).... ಹೀಗೆ ಸಾಧ್ಯವಾದಷ್ಟು ಸಮುದಾಯಗಳಿಗೆ ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರದ ಸ್ಥಾನಮಾನ ಸಿಕ್ಕಿದೆ. ಮುಸ್ಲಿಂರಿಗೆ ಸಿಗಬೇಕಾದ ಪ್ರಾತಿನಿಧ್ಯ ಇನ್ನೂ ಸಿಕ್ಕಿಲ್ಲ; ಲಿಂಗಾಯತರಿಗೂ 'ಕಾಣುವಂಥ' ಅಧಿಕಾರ ಸಿಕ್ಕಿಲ್ಲ.

ಕರ್ನಾಟಕದಲ್ಲಿ ಕಾಂಗ್ರೆಸ್ಸಿಗೆ ಕಳೆದು ಹೋದ ಮಾನ ಮತ್ತೆ ಸಿಗಬೇಕಾದರೆ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಬೇಕು. ಎಷ್ಟೋ ವರ್ಷಗಳಿಂದ ರಚನೆಯಾಗದ ಕಾರ್ಯಕಾರಿಣಿಯನ್ನು ರಚಿಸಬೇಕು. ವಯಸ್ಸಾದವರನ್ನು ಸಾಧ್ಯವಾದಷ್ಟು ದೂರವಿಟ್ಟು ಯುವಕರಿಗೆ ಮಣೆ ಹಾಕಬೇಕು... ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಬೇಕಾದರೆ (ನ್ಯಾಯವಾಗಿ) ಇನ್ನೂ ನಾಲ್ಕು ವರ್ಷಬೇಕು. ಅಲ್ಲಿಯವರೆಗೆ ಅವರೆಲ್ಲ ತಾಳ್ಮೆಯಿಂದ ಕಾಯಬೇಕು!

■

# ಇದು ಕುಳಿತು ಕೆಲಸ ಮಾಡುವ ಕಾಲ

ಬಿಜೆಪಿಯಲ್ಲಿ ಭಿನ್ನಮತ, ಜೋರು ಮಳೆ ಬಂದು ನಿಂತಂತೆ ಆಗಿದೆ. ಹಾವು ಮುಂಗುಸಿಯಂತೆ ಒಬ್ಬರನ್ನು ಕಂಡರೆ ಒಬ್ಬರು ಮುಖ ಸಿಂಡರಿಸುತ್ತಿದ್ದ ಯಡಿಯೂರಪ್ಪ, ಈಶ್ವರಪ್ಪ 'ಭಾಯಿ-ಭಾಯಿ' ಆಗಿದ್ದಾರೆ. ನಿನ್ನೆ-ಮೊನ್ನೆಯಷ್ಟೇ ಬಿ.ವೈ. ರಾಘವೇಂದ್ರ ಅವರ 'ಆಯ್ಕೆಯ ವಿಧಾನ'ವನ್ನೇ ಪ್ರಶ್ನಿಸುತ್ತಿದ್ದ ಈಶ್ವರಪ್ಪ ಈಗ 'ರಾಘವೇಂದ್ರ ನನ್ನ ಮಗನಿದ್ದಂತೆ' ಎನ್ನುತ್ತಿದ್ದಾರೆ. ಮಾಧ್ಯಮದವರನ್ನು ಕಂಡರೆ ಮುಖ ಬಿಗಿದುಕೊಂಡು ಓಡಿ ಹೋಗುತ್ತಿದ್ದ ರೆಡ್ಡಿ ಸೋದರರೂ ನಗುತ್ತಿದ್ದಾರೆ. ಏನಿದು ವಿಸ್ಮಯ? ಮುಖ್ಯಮಂತ್ರಿ ಯಡಿಯೂರಪ್ಪ ಜತೆಗೆ ಇವರಿಗೆ ಭಿನ್ನಮತವೇ ಇರಲಿಲ್ಲವೇ? ಇದ್ದರೆ ಅದು ಬಗೆ ಹರಿದುದು ಹೇಗೆ? ಈ ಪ್ರಶ್ನೆಗಳಿಗೆ ಉತ್ತರ ತಿಳಿಯುವ ಹಕ್ಕು ಸಾರ್ವಜನಿಕರಿಗೆ ಇದೆ. ಸಿಕ್ಕ ಉತ್ತರ ಒಂದ ಬಗೆಯ ಸಿದ್ಧ ಉತ್ತರ: 'ಇದೆಲ್ಲ ಮಾಧ್ಯಮಗಳ ಸೃಷ್ಟಿ!'

ಯಡಿಯೂರಪ್ಪನವರಾಗಲೀ, ಭಿನ್ನಮತಿಯರಾಗಲೀ ಬಾಯಿ ಬಿಟ್ಟು ಹೇಳದೇ ಇದ್ದರೂ ಭಿನ್ನಮತಕ್ಕೆ ಇದ್ದ ಕಾರಣಗಳಿಗೆ ಒಂದೊಂದಾಗಿ ಪರಿಹಾರ ಸಿಗುತ್ತಿವೆ. ಮೊದಲ ದೊಡ್ಡ 'ಪರಿಹಾರ' ಸಚಿವೆ ಶೋಭಾ ಕರಂದ್ಲಾಜೆ

ಮಾಧ್ಯಮಗಳ ಚಮಕು ಬೆಳಕಿನಿಂದ ಹಿಂದೆ ಸರಿದುದು. ಅವರದು ಗ್ರಾಮೀಣಾಭಿವೃದ್ಧಿ ಖಾತೆ. ಆದರೆ, ಕಳೆದ ಒಂದು ವರ್ಷದಲ್ಲಿ ಸಂಪುಟ ಸಭೆಯ ವಿವರಗಳನ್ನು ವಾರ್ತಾ ಸಚಿವರ (ಕಟ್ಟಾ ಸುಬ್ರಮಣ್ಯ ನಾಯ್ಡು) ಬದಲಿಗೆ ಶೋಭಾ ಅವರೇ ಮಾಧ್ಯಮಗಳಿಗೆ ನೀಡುತ್ತಿದ್ದರು. ಹಾಗಿದ್ದರೆ ಅವರಿಗೇ ವಾರ್ತಾ ಖಾತೆಯನ್ನು ನೀಡಬಹುದಿತ್ತಲ್ಲ? ಅದಕ್ಕೆ ಯಡಿಯೂರಪ್ಪ ಉತ್ತರ ಕೊಟ್ಟಿರಲಿಲ್ಲ. ವಾರ್ತೆ, ತಮ್ಮ ಖಾತೆ ಹೌದೋ ಅಲ್ಲವೋ ಬೇರೆ ಮಾತು. ಆದರೆ, ಅದನ್ನು ಶೋಭಾ ಸಮರ್ಥವಾಗಿಯೇ ನಿರ್ವಹಿಸಿದ್ದರು. ಈಗ ಸಂಪುಟ ಸಭೆಗಳ ವಿವರಗಳನ್ನು ಗೃಹ ಸಚಿವ ಡಾ.ವಿ.ಎಸ್. ಆಚಾರ್ಯ ಒದಗಿಸುತ್ತಿದ್ದಾರೆ.

ಮಾಧ್ಯಮಗಳ ಬೆಳಕಿನಿಂದ ಶೋಭಾ ಅವರನ್ನು ದೂರ ಸರಿಸುವುದೇ ಭಿನ್ನಮತೀಯರ ಗುರಿಯಾಗಿತ್ತು ಎಂದರೆ ಅದು ಸಮಸ್ಯೆಯನ್ನು ತೀರಾ ಸರಳಗೊಳಿಸಿದಂತೆ ಆಗುತ್ತದೆ. 'ಮುಖ್ಯಮಂತ್ರಿಯವರ ಅಧಿಕಾರವನ್ನೆಲ್ಲ ಶೋಭಾ ಚಲಾಯಿಸುತ್ತಾರೆ. ಶೋಭಾ ಅಲ್ಲದಿದ್ದರೆ ಆ ಕೆಲಸವನ್ನು ಮುಖ್ಯಮಂತ್ರಿಯವರ ಮಕ್ಕಳು ಮಾಡುತ್ತಾರೆ. ಅದಕ್ಕಿಂತ ಮುಖ್ಯವಾಗಿ ಯಡಿಯೂರಪ್ಪ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ಅವರಿಗೆ ಪಕ್ಷದ ಇತರ ಹಿರಿಯರು ಲೆಕ್ಕಕ್ಕಿಲ್ಲ' ಎಂಬುವು ಭಿನ್ನಮತೀಯರ ಮುಖ್ಯ ದೂರುಗಳು.

ಈ ದೂರುಗಳು ಅರುಣ್ ಜೇಟ್ಲಿ ಅವರ ಗಮನಕ್ಕೂ ಬಂದವು. ಆದರೆ, ಜೇಟ್ಲಿ ಅದಕ್ಕೆ ಪರಿಹಾರ ಸೂಚಿಸಿದರೇ ಇಲ್ಲವೇ ಎಂಬುದು ತಿಳಿಯಲಿಲ್ಲ. ಅವರು ಮಾಡಿದ್ದು ಎಲ್ಲದರ ನಿರಾಕರಣೆ! ಹಾಗಾದರೆ ಅವರು ಬಂದುದೇಕೆ? 'ಮಾಧ್ಯಮಗಳ ಮುಂದೆ ಭಿನ್ನಮತ ಚರ್ಚಿಸಬೇಡಿ' ಎಂದು ಹೇಳಲು ದೆಹಲಿಯಿಂದ ಇಲ್ಲಿಗೆ ಬರಬೇಕಿತ್ತೇ? ಅಲ್ಲಿಂದಲೇ ಹೇಳಬಹುದಿತ್ತಲ್ಲ? ಜೇಟ್ಲಿ ಬಂದುದರಿಂದ ಲಾಭವಾಗ ಲಿಲ್ಲ ಎಂಬುದನ್ನು ಪಕ್ಷದ ಮೂಲಗಳೂ ಒಪ್ಪಿಕೊಳ್ಳುತ್ತವೆ. ಆದರೆ ಅಪಾಯ ಏನಾಯಿತು ಎಂದರೆ ಯಡಿಯೂರಪ್ಪ ಜತೆಗೆ ಯಾರು ಇದ್ದಾರೆ, ಭಿನ್ನಮತೀಯರ ಜತೆಗೆ ಯಾರು ಇದ್ದಾರೆ ಎಂಬುದು ಜಗಜ್ಜಾಹೀರಾಯಿತು!

ಮಾಧ್ಯಮದ ಎದುರು ತಾವು ಭಿನ್ನಮತೀಯರು ಎಂದು ತೋರಿಸಿ ಕೊಂಡವರು ಕೆಲವೇ ಗಂಟೆಗಳಲ್ಲಿ 'ಭಾಯಿ-ಭಾಯಿ' ಆಗಿ ಬದಲಾದುದು ಸಂಘದ ಮಧ್ಯಸ್ಥಿಕೆಯಿಂದ. ಒಂದು ದಿನದ ಹಿಂದೆಯಷ್ಟೇ ಬಿಜೆಪಿ ಭಿನ್ನಮತದಲ್ಲಿ ತಮಗೆ ಯಾವ ಆಸಕ್ತಿಯೂ ಇಲ್ಲ. ಮಧ್ಯ ಪ್ರವೇಶವನ್ನೂ ಮಾಡುವುದಿಲ್ಲ ಎಂದ ಸಂಘದ ಧುರೀಣರು ಮನಸ್ಸು ಬದಲು ಮಾಡಿ, ಪಕ್ಷದ ಖಜಾಂಚಿ ಲೆಹರ್‌ಸಿಂಗ್ ಮನೆಯಲ್ಲಿ ನಡೆದ ಸಭೆಯಲ್ಲಿ ಎಲ್ಲರ ಕಿವಿ ಹಿಂಡಿದರು. ಯಡಿಯೂರಪ್ಪ ಅವರ ಅಧಿಕಾರಕ್ಕೆ ಕಡಿವಾಣ ಹಾಕಲು 'ಕೋರ್ ಕಮಿಟಿ' ರಚಿಸುವ ಸೂಚನೆಯೂ ಇಲ್ಲಿಯೇ ಬಂದಿದೆ. ಪಕ್ಷ ಮತ್ತು ಸರ್ಕಾರದ ಎಂಟು ಹತ್ತು ಜನ ಹಿರಿಯರು ಇರುವ 'ಕೋರ್ ಕಮಿಟಿ'ಯಲ್ಲಿ 'ಸರ್ವ ಸಮ್ಮತಿ'ಯ ತೀರ್ಮಾನಗಳು ಆದಾವು ಎಂಬುದು ಭಿನ್ನಮತೀಯರ ನಂಬಿಕೆ.

ವರ್ತೂರು ಪ್ರಕಾಶ್ ವಜಾ ಭಿನ್ನಮತೀಯರಿಗೆ, ಮುಖ್ಯವಾಗಿ ಈಶ್ವರಪ್ಪ ಅವರಿಗೆ

ಸಿಕ್ಕ ಎರಡನೇ ವಿಜಯ, ವರ್ತೂರು ಪ್ರಕಾಶ್ ಕುರುಬರು. ಅವರಿಗೆ ಸಿದ್ದರಾಮಯ್ಯ ಒಬ್ಬರೇ ನಾಯಕರು. ಅವರು ಅಷ್ಟಕ್ಕೇ ಸುಮ್ಮನಾಗಿದ್ದರೆ ಆಗುತ್ತಿತ್ತು. 'ಈಶ್ವರಪ್ಪ ಯಾವ ಸೀಮೆ ದೊಡ್ಡ ಕುರುಬ ನಾಯಕ?' ಎಂದು ಕೆಣಕಿದರು. ಈಗ ಅದಕ್ಕೆ ಬೆಲೆ ತೆತ್ತಿದ್ದಾರೆ. ವರ್ತೂರು ಪ್ರಕಾಶ್‌ಗಾಗಿ ಅಳುವವರು ಯಾರೂ ಇದ್ದಂತಿಲ್ಲ. ಆದರೆ, ನಟಿ ಶ್ರುತಿ ಅವರನ್ನು ಮಹಿಳಾ ಅಭಿವೃದ್ಧಿ ನಿಗಮದಿಂದ ತೆಗೆದುದು ಸರ್ವಥಾ ಸರಿಯಲ್ಲ. ಅವರು ಪತಿಗೆ ವಿಚ್ಛೇದನ ಕೊಡುವುದು ಅವರ ವೈಯಕ್ತಿಕ ವಿಚಾರ. ಅದಕ್ಕೂ ಮಹಿಳಾ ಅಭಿವೃದ್ಧಿಗೂ ಸಬಂಧಿವಿರಲಿಲ್ಲ. ಇವೆಲ್ಲ ಸೂಕ್ಷ್ಮ ವಿಚಾರಗಳು. ಶ್ರುತಿ ಅವರನ್ನು ವಜಾ ಮಾಡಿದ್ದರಿಂದ ಬಿಜೆಪಿ ಸರ್ಕಾರಕ್ಕೆ ಇದು 'ಮಧ್ಯಕಾಲಿನ ಕಂದಾಚಾರ'ದ ಸರ್ಕಾರ ಎಂಬ ಹಣೆಪಟ್ಟಿ ಬಂತು ಅಷ್ಟೇ, ಹೆಚ್ಚಿನ ಲಾಭವೇನೂ ಆಗಲಿಲ್ಲ.

ಸರ್ಕಾರ ಮಾಡಿಕೊಂಡ ಇಂಥದೇ ಮತ್ತೊಂದು ಆಭಾಸ ಕೃಷ್ಣಯ್ಯಶೆಟ್ಟಿ ಅವರಿಂದ ರಾಜೀನಾಮೆ ಕೊಡಿಸಿ ವಿ.ಸೋಮಣ್ಣ ಅವರನ್ನು ಆ ಸ್ಥಾನದಲ್ಲಿ ಕೂಡಿಸಿದ್ದು. ಯಡಿಯೂರಪ್ಪ ಅವರೇ ಹೇಳಿದ ಹಾಗೆ 'ಸೋಮಣ್ಣ ದೊಡ್ಡ ನಾಯಕ' ಇರಬಹುದು. ಅವರಿಂದ ಮುಂಬರುವ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಪಕ್ಷಕ್ಕೆ ಸಹಾಯವೂ ಆದೀತು. ಆದರೆ, ಸೋಮಣ್ಣ, ಲಿಂಗಾಯತರು; ದೊಡ್ಡ ಸಮುದಾಯಕ್ಕೆ ಸೇರಿದವರು. ಅವರಿಗೆ ಜಾಗ ಕಲ್ಪಿಸಲು ವೈಶ್ಯ ಸಮುದಾಯದಂಥ ತೀರಾ ಸಣ್ಣ ಸಮುದಾಯದ ಕೃಷ್ಣಯ್ಯ ಶೆಟ್ಟಿ ಅವರಿಂದ ರಾಜೀನಾಮೆ ಕೊಡಿಸುವುದರಿಂದ ಹೋಗುವ ಸಂದೇಶ ಏನು? ಸೋಮಣ್ಣ ಅವರ ಹಾಗೆಯೇ ವಲಸೆ ಬಂದ ಉಮೇಶ ಕತ್ತಿ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಸಂಗಣ್ಣ ಬೆಳ್ಳುಬ್ಬಿಯಂಥ ಪಕ್ಷದ ಹಳಬ, ನಿಷ್ಠಾವಂತರ ಬಲಿಯಾಯಿತು. ಮತ್ತೊಬ್ಬ ವಲಸಿಗ ಸೋಮಣ್ಣ ಅವರಿಗೆ ಸಚಿವ ಸ್ಥಾನ ಕಲ್ಪಿಸಲು ಮುಖ್ಯಮಂತ್ರಿಗೆ ಅತ್ಯಂತ ನಿಷ್ಠರಾಗಿದ್ದ ಕೃಷ್ಣಯ್ಯ ಶೆಟ್ಟಿಯ ಬಲಿಯಾಯಿತು.

ನಿಮಗೆ ಮರೆತು ಹೋಗಿರಬಹುದು: ಈ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಎಲ್ಲ ದೇವಸ್ಥಾನಗಳಲ್ಲಿ ಯಡಿಯೂರಪ್ಪ ಹೆಸರಿನಲ್ಲಿ ಅರ್ಚನೆ ಮಾಡುವಂತೆ ಮುಜರಾಯಿ ಸಚಿವರಾಗಿದ್ದ ಶೆಟ್ಟರು ಆದೇಶ ಹೊರಡಿಸಿದ್ದರು. ಇದಕ್ಕಿಂತ ನಿಷ್ಠೆ ಬೇಕೇ? ಹಾಗಾದರೆ ಈ ಸರ್ಕಾರದಲ್ಲಿ ಯಾವುದಕ್ಕೆ ಬೆಲೆ ಇದೆ? 'ವಲಸಿಗರಿಗೇ ಅಗ್ರಮಣೆ ಹಾಕುವುದಾದರೆ ಮೂರು ನಾಲ್ಕು ಸಾರಿ ವಿಧಾನ ಸಭೆಗೆ ಆರಿಸಿ ಬಂದಿರುವ ನಾವು ಮಾಡಿರುವ ತಪ್ಪೇನು' ಎಂದು ಮೈಸೂರಿನ ರಾಮದಾಸ್ ಮತ್ತು ಶಂಕರಲಿಂಗೇಗೌಡ, ಆನೇಕಲ್‌ನ ನಾರಾಯಣಸ್ವಾಮಿ, ತುಮಕೂರಿನ ಶಿವಣ್ಣ ಅವರಂಥವರು ಕೇಳಿದರೆ ಮುಖ್ಯಮಂತ್ರಿ ಕೊಡುವ ಉತ್ತರವೇನು? ಇವರಿಗೆಲ್ಲ ಸಿಟ್ಟು ಬರದಿದ್ದರೆ ಅದು ಅಸಹಜ ವರ್ತನೆ!

ಸೋಜಿಗ ಎಂದರೆ ಯಡಿಯೂರಪ್ಪ ಹೀಗೆ ಎಡವುತ್ತಿದ್ದರೂ, ಭಿನ್ನಮತೀಯ ಶಾಸಕರನ್ನು 'ಕೂಡಿಸಲು' ರೆಡ್ಡಿ ಸೋದರರು ಮಾಡಿದ ಪ್ರಯತ್ನ ಫಲ ನೀಡಿದಂತೆ ಇಲ್ಲ. ಹಾಗಾಗಿಯೇ ಬಂಡಾಯದ ಬಾವುಟ ಹಾರಿಸಲು ಇನ್ನೂ ಕಾಲ ಕೂಡಿಲ್ಲ ಎಂದು ಅವರು ಲೆಕ್ಕ ಹಾಕಿರಬೇಕು. ಏನಿದ್ದರೂ ಅವರು ವ್ಯವಹಾರ ನಿಪುಣರು. ರೆಡ್ಡಿ

ಸೋದರರಿಗೆ ಸೊಪ್ಪು ಹಾಕಬೇಡಿ ಎಂದು ಸಂಘದ ಮುಖಂಡರೂ ಯಡಿಯೂರಪ್ಪ ಬೆಂಬಲಕ್ಕೆ ನಿಂತಿದ್ದಾರೆ. 'ಅವರ ಹಣದ ಬಲ ಇಲ್ಲದಿದ್ದರೂ ಪರವಾಗಿಲ್ಲ' ಎಂಬ ಮಾತೂ ಸಂಘದ ಮುಖಂಡರ ಜತೆಗಿನ ಸಭೆಯಲ್ಲಿ ಕೇಳಿ ಬಂದಿದೆ. ಬೆಂಗಳೂರಿನ ಕೆಲವರು ಶಾಸಕರು, ಸಚಿವರು, 'ಈ ಸರ್ಕಾರಕ್ಕೆ ರೆಡ್ಡಿ ಸೋದರರಿಂದ ಏನಾದರೂ ಧಕ್ಕೆ ಬಂದರೆ, ಅವರ ಹೆಲಿಕಾಪ್ಟರ್‌ಗಳು ಬೆಂಗಳೂರಿನಲ್ಲಿ ಹೇಗೆ ಇಳಿಯುತ್ತವೆ ನೋಡಿಯೇ ಬಿಡುತ್ತೇವೆ' ಎಂದು ಸೆಡ್ಡು ಹೊಡೆದುದೂ ರೆಡ್ಡಿ ಸೋದರರನ್ನು ಕಂಗೆಡಿಸಿರಬೇಕು. ಆದಾಗ್ಯೂ ಯಡಿಯೂರಪ್ಪ ರೆಡ್ಡಿ ಸೋದರರ ವಿರುದ್ಧದ ಪ್ರಕರಣಗಳನ್ನು ಕೈ ಬಿಟ್ಟಿದ್ದಾರೆ. ಇದು ಅವರು ಸ್ವಯಿಚ್ಛೆಯಿಂದ ಮಾಡಿದರೇ? ಒತ್ತಡಕ್ಕೆ ಮಣಿದು ಮಾಡಿದರೇ?

ಇದೆಲ್ಲ ಏನೇ ಇರಲಿ, ಯಡಿಯೂರಪ್ಪ, ಸರ್ಕಾರದ ಮೇಲೆ ನಿಧಾನವಾಗಿ ಯಾದರೂ ನಿಯಂತ್ರಣ ಸಾಧಿಸುತ್ತಿದ್ದಾರೆ. ಈ ಸರ್ಕಾರ ಬೀಳಬೇಕು ಎಂದು ಯಾರೂ ಬಯಸುತ್ತಿಲ್ಲ. ಬಯಸಿದರೂ ಅದಕ್ಕೆ ಅರ್ಥವಿಲ್ಲ. ಒಂದಾದ ಮೇಲೆ ಒಂದರಂತೆ ಚುನಾವಣೆ ಎದುರಿಸಿರುವ ಸರ್ಕಾರಕ್ಕೆ ಇದೀಗ ಕುಳಿತು ಕೆಲಸ ಮಾಡಲು ವ್ಯವಧಾನ ಸಿಕ್ಕಿದೆ. ಮುಖ್ಯಮಂತ್ರಿಗಳು ಮೂರು ದಿನಗಳ ಕಾಲ ಸಚಿವರು, ಅಧಿಕಾರಿಗಳನ್ನು ಕೂಡಿಸಿಕೊಂಡು ಪ್ರಗತಿ ಪರಿಶೀಲನೆ ಮಾಡಿದ್ದು ಒಳ್ಳೆಯದು. ಆಡಳಿತಶಾಹಿಗೆ ಚುರುಕು ಮುಟ್ಟಿಸಲು ಇದಷ್ಟೇ ಸಾಲದು. ಕೆಲಸ ಮಾಡದ ಒಬ್ಬಿಬ್ಬರು ಹಿರಿಯ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದರೆ ಜಡಗಟ್ಟಿದ ಆಡಳಿತ ಯಂತ್ರ ಇದ್ದಕಿದ್ದಂತೆ ಎದ್ದು ಕುಳಿತೀತು. ರಾಜ್ಯ ಬಿಜೆಪಿ ಅಧ್ಯಕ್ಷರೇ ಕೆಲವರು ಸಚಿವರ ಕಾರ್ಯ ವೈಖರಿ ಸರಿಯಿಲ್ಲ ಎಂದು ಹೇಳುತ್ತಿರುವುದು ಒಳ್ಳೆಯ ಬೆಳವಣಿಗೆ ಅಲ್ಲ. ಅವರೇ ಹೀಗೆ ಸರ್ಕಾರಕ್ಕೆ 'ಸರ್ಟಿಫಿಕೇಟ್' ಕೊಡುತ್ತಿರುವಾಗ 'ನಿಮ್ಮ ಸರ್ಟಿಫಿಕೇಟ್ ನನಗೆ ಬೇಕಿಲ್ಲ' ಎಂದು ಯಡಿಯೂರಪ್ಪ ವಿರೋಧ ಪಕ್ಷಗಳಿಗೆ ಹೇಳುವುದರಲ್ಲಿ ಏನು ಅರ್ಥವಿದೆ?

■

# ನಾವು ಬರುವುದು ಪಾಲುದಾರರಾಗಿ; ಮನವಿದಾರರಾಗಿ ಅಲ್ಲ

'ನಾವು ಇಲ್ಲಿ ಬಂದಿರುವುದು ಮನವಿದಾರರಾಗಿ ಅಲ್ಲ ; ಬದಲಿಗೆ ಪಾಲುದಾರ ರಾಗಿ, ಇಡೀ ಜಗತ್ತನ್ನು ಕಾಡುವ ವಿಚಾರಗಳ ಚರ್ಚೆಯಲ್ಲಿ ನಾವು ಸಮಾನ, ನ್ಯಾಯಬದ್ಧ ಮತ್ತು ಸಮುಚಿತ ಪಾತ್ರವನ್ನು ಬಯಸುತ್ತೇವೆ.'

–ಪ್ರಧಾನಿ ಡಾ.ಮನಮೋಹನ ಸಿಂಗ್ ಅವರು ಜರ್ಮನಿಯಲ್ಲಿ ನಡೆದ ಜಿ8/5 ರಾಷ್ಟ್ರಗಳ ಸಮಾವೇಶದಲ್ಲಿ ಆಡಿದ ದಿಟ್ಟ ಮಾತುಗಳು ಇವು. 'ಜಿ8/5 ಸಮಾವೇಶಕ್ಕೆ ಸೇರುವುದಕ್ಕಿಂತ ಮುಂಚೆ ಜಿ 8 ರಾಷ್ಟ್ರಗಳು ನಮ್ಮ (ಜಿ 5) ಜತೆಗೆ ಮಾತನಾಡಬೇಕು' ಎಂದೂ ಅವರು ಹೇಳಿದ್ದರು.

ಇದಾಗಿ ಸರಿ ಸುಮಾರು ಎರಡು ವರ್ಷಗಳೇ ಕಳೆಯುತ್ತ ಬಂದಿವೆ. ಇದೀಗ ಮತ್ತೆ ಜಿ 8/5 ರಾಷ್ಟ್ರಗಳ ಶೃಂಗಸಭೆ 2009ರ ಜುಲೈ 8ರಿಂದ 10 ರವರೆಗೆ ಇಟಲಿಯಲ್ಲಿ ಸೇರಲಿದೆ. ಆದರೆ, ಡಾ.ಸಿಂಗ್ ಆಗ ನೀಡಿದ ಎಚ್ಚರಿಕೆಗೂ ಈಗ ಇರುವ ಸಂದರ್ಭಕ್ಕೂ ಹೆಚ್ಚು ವ್ಯತ್ಯಾಸವೇನೂ ಆದಂತೆ ಕಾಣುವುದಿಲ್ಲ. ಜಿ 8 ರಾಷ್ಟ್ರಗಳ ಸಭೆಯ ನಂತರ ಜಿ 5 ರಾಷ್ಟ್ರಗಳ ಜತೆಗೆ ಸಭೆ ನಡೆಯಲಿದೆ.

ಟೋನಿ ಬ್ಲೇರ್ ಅವರು ಇಂಗ್ಲೆಂಡ್‌ನ ಪ್ರಧಾನಿಯಾಗಿದ್ದ

ಸಮಯದಲ್ಲಿ ಸ್ಕಾಟಲ್ಯಾಂಡ್‌ನ ಗ್ಲೆನೆಗಲ್ಸ್‌ನಲ್ಲಿ ನಡೆದ 31ನೇ ಜಿ8 ರಾಷ್ಟ್ರಗಳ ಶೃಂಗಸಭೆಯ (2005) ಆತಿಥೇಯ ಅಧ್ಯಕ್ಷರಾಗಿ ಜಿ 8/ಜಿ 5 ರಾಷ್ಟ್ರಗಳ ಸಮೂಹವನ್ನು ರೂಪಿಸಿದರು. ಆದರೆ, ಈಗಲೂ ಈ ಸಮೂಹದಲ್ಲಿನ ಜಿ5 ದೇಶಗಳು ಜಿ8 ರಾಷ್ಟ್ರಗಳ 'ಕೈಚಾಚು' (ಔಟ್‌ರೀಚ್) ಎಂದೇ ಕರೆಸಿಕೊಳ್ಳುತ್ತಿವೆ.

ಜಿ8 ರಾಷ್ಟ್ರಗಳಲ್ಲಿ ಆರ್ಥಿಕವಾಗಿ ಅತ್ಯಂತ ಪ್ರಬಲವಾದ ಅಮೆರಿಕಾ, ಇಂಗ್ಲೆಂಡ್, ಫ್ರಾನ್ಸ್, ಕೆನಡಾ, ಜರ್ಮನಿ, ಇಟಲಿ, ಜಪಾನ್ ಮತ್ತು ರಷ್ಯಾ ರಾಷ್ಟ್ರಗಳು ಇವೆ. ಜಿ 5 ರಾಷ್ಟ್ರಗಳಲ್ಲಿ ಭಾರತ, ಬ್ರೆಜಿಲ್, ಚೀನಾ, ಮೆಕ್ಸಿಕೊ ಮತ್ತು ದಕ್ಷಿಣ ಆಫ್ರಿಕಾ ದೇಶಗಳು ಇವೆ. ಜಿ 8 ರಾಷ್ಟ್ರಗಳ ಸಮೂಹಕ್ಕೆ 1998ರಷ್ಟು ಹಿಂದೆಯೇ ಸೇರಿದ ರಷ್ಯಾ ಕೂಡ ಈಗಲೂ ಇರಿಸು ಮುರಿಸು ಅನುಭವಿಸುತ್ತ ಅಂಚಿನಲ್ಲಿಯೇ ಕುಳಿತು ಕೊಂಡಿದೆ. ಈ ಇರಿಸು ಮುರಿಸನ್ನು ಜಿ5 ರಾಷ್ಟ್ರಗಳೂ ಅನುಭವಿಸುತ್ತಿರುವುದಕ್ಕೆ ಜರ್ಮನಿ ಶೃಂಗ ಸಭೆಯ ನಂತರ ಪ್ರಧಾನಿ ಆಡಿದ ಮಾತುಗಳು ಇನ್ನೊಂದು ನಿದರ್ಶನ.

ಶ್ರೀಮಂತ ರಾಷ್ಟ್ರಗಳು ಅಭಿವೃದ್ಧಿಶೀಲ ದೇಶಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ 'ತಾವು ತೆಗೆದುಕೊಂಡ ತೀರ್ಮಾನಗಳನ್ನು ನಮ್ಮ ಮೇಲೆ ಹೇರುತ್ತಿವೆ' ಎಂಬುದೇ ಈ ಅಸಮಾಧಾನದ ಮೂಲ. 'ಊಟದ ಮನೆಗೆ ನಮ್ಮನ್ನು ಕರೆಯುತ್ತಾರೆ, ಆದರೆ ಊಟದ ಟೇಬಲ್‌ನಿಂದ ದೂರ ಇಡುತ್ತಾರೆ' ಎಂಬ ಅಸಮಾಧಾನದ (ಅವಮಾನದ?) ಅಥವಾ ಬೇಗುದಿಯ ಒಡಲಲ್ಲಿಯೇ ಮತ್ತೊಂದು ಶೃಂಗಸಭೆಗೆ ವೇದಿಕೆ ಸಜ್ಜಾಗಿದೆ.

2003ರಲ್ಲಿ ಫ್ರಾನ್ಸ್‌ನಲ್ಲಿ ನಡೆದ ಜಿ8 ಶೃಂಗಸಭೆಗೆ ಭಾರತವನ್ನು ಒಬ್ಬ ವೀಕ್ಷಕನಾಗಿ ಆಹ್ವಾನಿಸಲಾಗಿತ್ತು. ಆಗ ಭಾರತ ಸಂಭ್ರಮ ಪಟ್ಟಿತ್ತು. ಈಗ ಆ ಸಂಭ್ರಮ ಕರಗಿಹೋಗಿದೆ. ಆರ್ಥಿಕವಾಗಿ ಬೆಳೆಯುತ್ತಿರುವ ತನ್ನನ್ನು ಲಘುವಾಗಿ ಪರಿಗಣಿಸ ಲಾಗದು ಎಂಬ ಆತ್ಮವಿಶ್ವಾಸ ಈಗ ಭಾರತದ ಮಾತುಗಳಲ್ಲಿ ವ್ಯಕ್ತವಾಗುತ್ತಿದೆ. ಇಂಥ ಸಭೆಗಳಲ್ಲಿ ತನ್ನ ಮಾತು ನಡೆಯಬೇಕು ಎಂದು ಭಾರತ ಆಗ್ರಹಿಸುವುದರಲ್ಲಿ ತಪ್ಪೇನೂ ಇಲ್ಲ. ಆದರೆ, ಸಮಸ್ಯೆಯಿರುವುದು ಜಿ 8 ರಾಷ್ಟ್ರಗಳ ಸಂರಚನೆಯಲ್ಲಿಯೇ. 1973ರಲ್ಲಿ ವಿಶ್ವವು ತೈಲ ಬಿಕ್ಕಟ್ಟು ಎದುರಿಸುತ್ತಿದ್ದಾಗ ಹುಟ್ಟಿಕೊಂಡ ಸಮೂಹ ಇದು. ಇದಕ್ಕೆ ಯಾವುದೇ 'ಬಹುಮಾನ್ಯತೆ'ಯೇನೂ ಇಲ್ಲ. ತೈಲ ಬಿಕ್ಕಟ್ಟನ್ನು ಎದುರಿಸಲು ಆಗ ಕೆನಡಾ ಹೊರತುಪಡಿಸಿ ಉಳಿದ ಏಳು ರಾಷ್ಟ್ರಗಳು ಫ್ರಾನ್ಸ್‌ನಲ್ಲಿ 1975ರಲ್ಲಿ ಸಭೆ ಸೇರಿದ್ದುವು. ಒಂದು ವರ್ಷದ ನಂತರ ಕೆನಡಾ ಕೂಡ ಅದರಲ್ಲಿ ಸೇರ್ಪಡೆ ಯಾಯಿತು.

ವಿಶ್ವದ ಕೇವಲ ಶೇ 14ರಷ್ಟು ಜನಸಂಖ್ಯೆ ಹಾಗೂ ಶೇ 61ರಷ್ಟು ಜಿಡಿಪಿಯನ್ನು ಹೊಂದಿರುವ ಜಿ8 ರಾಷ್ಟ್ರಗಳು ಆರೋಗ್ಯ, ಶಿಕ್ಷಣ, ಇಂಧನ, ಭದ್ರತೆ, ಆಹಾರ ಭದ್ರತೆ, ಉದ್ಯೋಗ, ಮಾನವ ಹಕ್ಕು ಮತ್ತು ಪರಿಸರ ರಕ್ಷಣೆಯಂಥ 'ಉದಾತ್ತ ವಿಚಾರ'ಗಳನ್ನು ಇಟ್ಟುಕೊಂಡು ಶೃಂಗಸಭೆಗಳಲ್ಲಿ ಚರ್ಚೆ ನಡೆಸಿದರೂ ಆರೋಗ್ಯ, ಶಿಕ್ಷಣ ಮತ್ತು ಆಹಾರ ಭದ್ರತೆಗೆ ಈ ರಾಷ್ಟ್ರಗಳ ಕೊಡುಗೆ ನಗಣ್ಯ. ಈ ಸಮೂಹ ರಾಷ್ಟ್ರಗಳು ಸ್ವಹಿತಾಸಕ್ತಿಯ ರಕ್ಷಣೆಗೇ ಹೆಚ್ಚು ಗಮನ ಕೊಡುತ್ತವೆ ಎಂಬ ಕಾರಣಕ್ಕಾಗಿ, ಒಳಗೆ ಶೃಂಗಸಭೆ ನಡೆಯುವಾಗಲೆಲ್ಲ ಹೊರಗೆ ಭಾರಿ ಪ್ರತಿಭಟನೆಗಳು ನಡೆಯುತ್ತವೆ.

ಕಳೆದ ವರ್ಷದ ಜುಲೈ 8ರಂದು ಜಪಾನ್‌ನ ಹೊಕ್ಕೈಡೊ-ಟೋಕಿಯೊ

ಶೃಂಗಸಭೆಯ ನಂತರ ಜಿ5 ರಾಷ್ಟ್ರಗಳು ಒಟ್ಟಾಗಿ ನೀಡಿದ 24 ಅಂಶಗಳನ್ನು ಒಳಗೊಂಡ ಹೇಳಿಕೆಯಲ್ಲಿ ಈ ಅಸಮಾನತೆಯ ವಿಚಾರವೇ ಪ್ರಮುಖವಾಗಿ ಪ್ರಸ್ತಾಪವಾಗಿತ್ತು. ಅಂತರ್ ರಾಷ್ಟ್ರೀಯ ಹಣಕಾಸು ನಿಧಿ ಸಂಸ್ಥೆಯನ್ನೇ (ಐಎಂಎಫ್) ತೆಗೆದುಕೊಂಡರೆ ಇಡೀ ವಿಶ್ವದ ಶೇ 1ರಷ್ಟು ಮಾತ್ರ ಜನಸಂಖ್ಯೆಯನ್ನು ಹೊಂದಿರುವ ಇಂಗ್ಲೆಂಡ್ ಈ ಸಂಸ್ಥೆಯಲ್ಲಿ ಚೀನಾ ಮತ್ತು ಭಾರತದಂಥ ಎರಡು ಬಹುದೊಡ್ಡ ರಾಷ್ಟ್ರಗಳು ಸೇರಿ ಹೊಂದಿರುವಷ್ಟೇ ಮತಗಳನ್ನು ಹೊಂದಿದೆ! ವಿಶ್ವಬ್ಯಾಂಕ್ ಮತ್ತು ಐಎಂಎಫ್‌ನಲ್ಲಿ ಜಿ 7 ರಾಷ್ಟ್ರಗಳಿಗೇ 'ವಿಟೊ' ಅಧಿಕಾರವೂ ಇರುವುದು.

ಹೊಕ್ಕೈಡೊ ಸಭೆಯ ನಂತರ ಪ್ರಕಟಿಸಲಾದ ಜಿ 5 ರಾಷ್ಟ್ರಗಳ ಹೇಳಿಕೆ, 'ಐಎಂಎಫ್ ಮತ್ತು ವಿಶ್ವಬ್ಯಾಂಕ್‌ನಂಥ. ಅಂತರ್ ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ತೀರ್ಮಾನಗಳಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಧ್ವನಿ ಮತ್ತು ಪ್ರಾತಿನಿಧ್ಯಗಳೆರಡೂ ಹೆಚ್ಚಬೇಕು' ಎಂದು ವ್ಯಕ್ತವಾಗಿಯೇ ತಿಳಿಸಿತ್ತು. ದುರದೃಷ್ಟಕರ ಎಂದರೆ ಆಗಿಗಿಂತ ಜಗತ್ತು ಈಗ ಹೆಚ್ಚಿನ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ಅಮೆರಿಕಾ ದೇಶವೇ ಈ ಬಿಕ್ಕಟ್ಟಿನಿಂದ ತತ್ತರಿಸಿ ಹೋಗಿದೆ. ನಿರುದ್ಯೋಗ ತಾಂಡವವಾಡುತ್ತಿದೆ. ಹಾಗಾಗಿ ಜಾಗತಿಕ ಸಂಪತ್ತಿನ ಸಮಾನ ಹಂಚಿಕೆಯ ಕೂಗು ಈ ಸಾರಿ ಇನ್ನಷ್ಟು ಜೋರಾಗಿ ಕೇಳಿ ಬಂದರೂ ಅಚ್ಚರಿಯಿಲ್ಲ.

ಅಭಿವೃದ್ಧಿಯಲ್ಲಿನ ಅಸಮತೋಲನ ಕುರಿತು, 'ಜಾಗತಿಕ ಸವಾಲುಗಳನ್ನು ಎದುರಿಸಲು ಸಮಗ್ರ ಮತ್ತು ಅರ್ಥಪೂರ್ಣ ಪ್ರಯತ್ನಗಳು ಅಗತ್ಯವಾಗಿವೆ. ಹೆಚ್ಚುತ್ತಿರುವ ಹವಾಮಾನ ವೈಪರೀತ್ಯವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅಭಿವೃದ್ಧಿ ಸಾಧಿಸುವ ಬಗೆಗೂ ಈ ಪ್ರಯತ್ನಗಳು ಅಗತ್ಯವಾಗಿವೆ' ಎಂಬ ಹೇಳಿಕೆಯೂ ಕಳೆದ ಶೃಂಗಸಭೆಯ ನಂತರ ಕೇಳಿ ಬಂದಿತ್ತು. ಹವಾಮಾನ ವೈಪರೀತ್ಯಕ್ಕೆ ಜಿ 8 ರಾಷ್ಟ್ರಗಳೇ ಹೆಚ್ಚಿನ 'ಕೊಡುಗೆ' (ಅಷ್ಟಿಷ್ಟಲ್ಲ ಶೇ 62 ರಷ್ಟು!) ನೀಡುತ್ತಿರುವುದು ನಿಜವಾದರೂ ಪರಿಸರ ರಕ್ಷಣೆ ಜಿ 5 ರಾಷ್ಟ್ರಗಳ ಹೊಣೆ ಎಂಬಂತೆ ಬಿಂಬಿಸುತ್ತಿರುವುದು ಇನ್ನೊಂದು ವಿಪರ್ಯಾಸ. ಆ ಹಿನ್ನೆಲೆಯಲ್ಲಿಯೇ ಪರಿಸರ ಮಾಲಿನ್ಯ ನಿಯಂತ್ರಣ ಕುರಿತು ಇನ್ನಷ್ಟು ಪ್ರಾಮಾಣಿಕ ನಿಲುವನ್ನು ಜಿ 5 ರಾಷ್ಟ್ರಗಳು ಜಿ 8 ರಾಷ್ಟ್ರಗಳಿಂದ ಬಯಸುತ್ತಿರುವುದು.

ವಿಶ್ವದಲ್ಲಿ ಸಾಕಷ್ಟು ಆಹಾರಧಾನ್ಯ ಉತ್ಪಾದನೆ ಆಗುತಿದ್ದರೂ ಆಹಾರ ಧಾನ್ಯಗಳ ಬೆಲೆ ಏರಿಕೆ, ಹಸಿವು ಮತ್ತು ಬಡತನಗಳು ಬಹುತೇಕ ರಾಷ್ಟ್ರಗಳನ್ನು ಕಾಡುತ್ತಿವೆ. ಇದಕ್ಕೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಕಾಣಿಕೆ ದೊಡ್ಡದು. ಈ ದೇಶಗಳು ಶತಕೋಟಿಗಳಷ್ಟು ಮೊತ್ತವನ್ನು ಕೃಷಿ ವಹಿವಾಟನ್ನು ಹದಗೆಡಿಸು ವುದಕ್ಕಾಗಿಯೇ ಮೀಸಲು ಇಟ್ಟಿವೆ. ಆದರೆ, ಈ ವಹಿವಾಟು ಹದಗೆಡುವುದು ಅಭಿವೃದ್ಧಿಶೀಲ ದೇಶಗಳಲ್ಲಿ! ತಮ್ಮ ತಮ್ಮ ದೇಶಗಳಲ್ಲಿ ಆಹಾರ ಉತ್ಪಾದನೆಗೆ ಸಹಾಯಧನ ಕೊಡುವುದನ್ನು ಮುಂದುವರಿಸಿರುವ ಅಭಿವೃದ್ಧಿ ಹೊಂದಿದ ದೇಶಗಳು ಅಭಿವೃದ್ಧಿಶೀಲ ರಾಷ್ಟ್ರಗಳು ಮಾತ್ರ ಈ ಸಹಾಯಧನ ಕೊಡಬಾರದು ಎಂದು ಬಯಸುತ್ತವೆ. ಇನ್ನೊಂದು ಕಡೆ, ಅಂತರ್ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳ ದರಗಳು ಏರುಪೇರು ಆಗುವಂಥ ವ್ಯವಸ್ಥೆಯನ್ನು ಪೋಷಿಸುತ್ತವೆ. ಇದರ ನೇರ ಪರಿಣಾಮ ಜಿ

5 ರಾಷ್ಟ್ರಗಳ ಮೇಲೆ ಆಗಿ ಅಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಕುಂಠಿತಗೊಂಡು ತತ್ತರಿಸುವಂತೆ ಆಗಿದೆ. ವಿಶ್ವದಲ್ಲಿ ಆಹಾರ ಭದ್ರತೆ ಸಾಧನೆಗಾಗಿ ಅಭಿವೃದ್ಧಿ ಹೊಂದಿದ ದೇಶಗಳು ಉದಾರ ನೆರವನ್ನು ಕೊಡುವ ಮಾತನ್ನು ಆಡಿದರೂ ಅದು ಬರೀ ತುಟಿ ಸಹಾನುಭೂತಿ ಮಟ್ಟದಲ್ಲಿಯೇ ಉಳಿದಿದೆ.

ಇವೆಲ್ಲ ಜಿ 8/5 ಶೃಂಗಸಭೆಗೆ ಮಾತ್ರ ಸೀಮಿತವಾದ ಮಾತುಗಳಲ್ಲ. ಒಂದು ದೃಷ್ಟಿಯಲ್ಲಿ 'ರೆಟ್ಹರಿಕ್'ಗಳು. ಎಲ್ಲ ಶೃಂಗಸಭೆಗಳಲ್ಲಿಯೂ ಸಾಮಾನ್ಯವಾದ ಈ ವಿಚಾರಗಳು ಈ ಸಾರಿಯೂ ಚರ್ಚೆಗೆ ಬರಬಹುದು. ಆದರೆ, ಯಾವುದೇ ಶೃಂಗಸಭೆಗಳಲ್ಲಿ ಮತ್ತೆ ಮತ್ತೆ ಅದೇ ವಿಚಾರಗಳು ಚರ್ಚೆಯಾಗುತ್ತಿದ್ದರೆ ನಮ್ಮ ಕನ್ನಡ ಸಾಹಿತ್ಯ ಸಮ್ಮೇಳನಗಳ ನಿರ್ಣಯಗಳಂತೆಯೇ ಆಗುತ್ತದೆ. ಪ್ರತಿಯೊಂದು ಸಭೆಯಲ್ಲಿಯೂ ಅದೇ ವಿಚಾರ ಚರ್ಚೆ ಆಗುವುದಾದರೆ ಅದು ಚರ್ವಿತ ಚರ್ವಣ ಅನಿಸತೊಡಗುತ್ತದೆ. ಇಟಲಿಯ ಶೃಂಗಸಭೆ ಇದಕ್ಕೆ ಹೊರತಾಗಿ ಇದ್ದೀತೇ? ಕಾದು ನೋಡಬೇಕು.

ಇಟಲಿ ಶೃಂಗಸಭೆಯಲ್ಲಿ ಮಾಧ್ಯಮ ಪ್ರತಿನಿಧಿಯಾಗಿ ಭಾಗವಹಿಸಲು 'ಪ್ರಜಾವಾಣಿ'ಗೆ ಪ್ರಧಾನಿ ಕಚೇರಿ ಆಮಂತ್ರಣ ನೀಡಿದೆ.

■

# ಭದ್ರತಾ ಮಂಡಳಿ: ನಮ್ಮ ಕನಸು, ಆದೀತೇ ನನಸು?

ಪ್ರಧಾನಿ ಡಾ.ಮನಮೋಹನಸಿಂಗ್ ತಮ್ಮ ಇಟಲಿ ಪ್ರವಾಸವನ್ನು ಆರಂಭಿಸಿದ್ದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಂರಚನೆ ಕುರಿತು ಮಾತನಾಡುತ್ತ. ಪ್ರವಾಸ ಮುಗಿಸಿದ್ದೂ ಅದೇ ಮಾತುಗಳಿಂದ. ಪ್ರವಾಸ ಆರಂಭ ಮಾಡುವುದಕ್ಕಿಂತ ಮುಂಚೆ ಅವರು ಜಿ8/ಜಿ5 ರಾಷ್ಟ್ರಗಳ ಶೃಂಗ ಸಭೆಯ ಸಂದರ್ಭದಲ್ಲಿ ಹೊರತಂದ ಪುಸ್ತಕ (ಸ್ಮರಣ ಸಂಪುಟ)ಕ್ಕೆ ಬರೆದ ಲೇಖನದಲ್ಲಿ ಮತ್ತು ಮರಳಿ ಬರುವಾಗ ತಮ್ಮ ವಿಶೇಷ ವಿಮಾನದಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆಗೆ ಆಡಿದ ಮುಖ್ಯ ಮಾತು ಅದೇ ಆಗಿತ್ತು.

ಒಂದು ರೀತಿಯಲ್ಲಿ ಜಾಗತಿಕ ಸಂಸತ್ತಿನಂತಿರುವ ವಿಶ್ವಸಂಸ್ಥೆ ಹುಟ್ಟಿಕೊಂಡುದು ಎರಡನೇ ಜಾಗತಿಕ ಯುದ್ಧದ ನಂತರ. ಆಗ ರಾಜಕೀಯ ಮತ್ತು ಸೇನಾ ಸಾಮರ್ಥ್ಯದ ದೃಷ್ಟಿಯಿಂದ ಇದ್ದುದು ಎರಡೇ ಧ್ರುವಗಳು ಅಥವಾ 'ಜಗತ್ತುಗಳು'. ಅಂತರ ರಾಷ್ಟ್ರೀಯ ವ್ಯಾಪಾರ ಹಾಗೂ ಬಂಡವಾಳದ ಹರಿವೂ ಆಗ ಜಾಸ್ತಿ ಇರಲಿಲ್ಲ. ಅಭಿವೃದ್ಧಿಶೀಲ ರಾಷ್ಟ್ರಗಳು ಆಗ ಆರ್ಥಿಕವಾಗಿ ಮುಖ್ಯ ಆಗಿರಲೇ ಇಲ್ಲ. ಕೆಲವು ಇನ್ನೂ ಸ್ವತಂತ್ರವೂ ಆಗಿರಲಿಲ್ಲ.

ಈಗ ಸಪ್ತ ಸಮುದ್ರಗಳಲ್ಲಿ ಸಾಕಷ್ಟು ನೀರು ಹರಿದಿದೆ. ಎರಡೇ ಧ್ರುವಗಳಿದ್ದ ಜಗತ್ತಿನಲ್ಲಿ ಬಹುಧ್ರುವಗಳು ಹುಟ್ಟಿಕೊಂಡಿವೆ. ಅಭಿವೃದ್ಧಿಶೀಲ ದೇಶಗಳು ಬರೀ ಸಾರ್ವಭೌಮ ಮಾತ್ರವಾಗಿಲ್ಲ; ಬದಲಿಗೆ ಆರ್ಥಿಕವಾಗಿಯೂ ಪ್ರಬಲವಾಗಿ ಬೆಳೆಯುತ್ತಿವೆ. ಜತೆಗೆ ಜಾಗತೀಕರಣ ಪ್ರಕ್ರಿಯೆಯಿಂದ ವಿಶ್ವದಲ್ಲಿ ಅಂತರ್ ಸಂಬಂಧವೂ ಹೆಚ್ಚುತ್ತಿದೆ. ಆದರೆ, ಜಾಗತಿಕ ಆಡಳಿತದ ಸಂಸ್ಥೆಗಳಲ್ಲಿ ಮಾತ್ರ ಅದೇ ಹಳೆಯ ವ್ಯವಸ್ಥೆಯೇ ಮುಂದುವರಿದಿದೆ. 'ದೊಡ್ಡಣ್ಣಂದಿರು' ಅಧಿಕಾರವನ್ನು ಗಟ್ಟಿಯಾಗಿ ಕಚ್ಚಿಕೊಂಡು ಕುಳಿತಿದ್ದಾರೆ. ಜಗತ್ತಿನಲ್ಲಿ ಆದ ಇತರ ಬೆಳವಣಿಗೆಗಳನ್ನು ಈ ಸಂಸ್ಥೆಗಳು ಗಮನಕ್ಕೇ ತೆಗೆದುಕೊಳ್ಳುತ್ತಿಲ್ಲ. ವಿಶ್ವಸಂಸ್ಥೆಯ ಅತ್ಯುಚ್ಚ ಸ್ಥಾನದಲ್ಲಿರುವ ಭದ್ರತಾ ಮಂಡಳಿಯಲ್ಲಿ ಎರಡನೇ ಜಾಗತಿಕ ಯುದ್ಧ ಸಂದರ್ಭದಲ್ಲಿದ್ದ ರಾಷ್ಟ್ರಗಳೇ ಕುಳಿತುಕೊಂಡಿವೆ. ಚೀನಾ ದೇಶಕ್ಕೆ ಐತಿಹಾಸಿಕ ಕಾರಣಗಳಿಗಾಗಿ ವಿಟೊ ಅಧಿಕಾರ ವೇನೋ ಸಿಕ್ಕಿದ್ದರೆ ಬ್ರಿಟನ್ ಮತ್ತು ಫ್ರಾನ್ಸ್‌ಗಿಂತ ಆರ್ಥಿಕವಾಗಿ ಬಲಿಷ್ಠವಾದ ಜರ್ಮನಿ ಹಾಗೂ ಜಪಾನ್ ದೇಶಗಳು ಈ ಅಧಿಕಾರದಿಂದ ಹೊರಗೇ ಉಳಿದಿವೆ. ಜರ್ಮನಿ ಹಾಗೂ ಜಪಾನ್‌ನಂಥ ಆರ್ಥಿಕವಾಗಿ, ಬೌದ್ಧಿಕವಾಗಿ ಬಲಿಷ್ಠ ದೇಶಗಳೇ ಹೊರಗೆ ಉಳಿದಿರುವಾಗ ಭಾರತದ ಕೂಗು ಕೇಳುವುದು ಕಷ್ಟ. ಆದರೆ, ಭಾರತ ಮತ್ತೆ ಮತ್ತೆ ತನಗೆ ಭದ್ರತಾ ಮಂಡಳಿಯಲ್ಲಿ ನ್ಯಾಯವಾಗಿ ಸಿಗಬೇಕಾದ ಸ್ಥಾನಕ್ಕೆ ಹಕ್ಕೊತ್ತಾಯ ಮಾಡುತ್ತಲೇ ಇದೆ.

ಪ್ರಧಾನಿ ಮತ್ತೆ ಹೇಳಿದ್ದೂ ಇದನ್ನೇ: 'ವಿಶ್ವಸಂಸ್ಥೆ ಕಾಲಕ್ಕೆ ತಕ್ಕಂತೆ ಬದಲಾಗ ಬೇಕು. ಇಲ್ಲವಾದರೆ, ಸಮಸ್ಯೆಯನ್ನು ಗುರುತಿಸುವುದು ಕಷ್ಟ. ಅದಕ್ಕೆ ಪರಿಹಾರಗಳನ್ನು ಕಂಡುಕೊಳ್ಳುವುದು ಇನ್ನೂ ಕಷ್ಟ.'

ಜಿ8ರಂಥ ಶೃಂಗಸಭೆಗಳಲ್ಲಿ ಈಗ ಭಾರತ ಮಾಡುತ್ತಿರುವುದು ತನ್ನ ಹಕ್ಕೊತ್ತಾಯದ ಕಡೆಗೆ ಇತರರ ಗಮನ ಸೆಳೆಯುವ ಕೆಲಸ. ಇಂಗ್ಲೆಂಡ್, ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಸ್ಥಾನ ಸಿಗಬೇಕು ಎಂದೇ ಹೇಳಿಕೊಂಡು ಬಂದಿದೆ. ಇದಕ್ಕೆ ಪೂರಕವಾಗಿ ಜಿ 5 ರಾಷ್ಟ್ರಗಳಿಗೆ ಈಗ ಇರುವ 'ಕೈಚಾಚು (ಔಟ್ ರೀಚ್)' ಸ್ಥಾನಮಾನದಿಂದ ಜಿ 13 ರಾಷ್ಟ್ರಗಳ ಒಂದು ಸಮೂಹ ರಚಿಸಬೇಕು ಎಂಬ ಮಾತೂ ಕೇಳಿ ಬರುತ್ತಿದೆ. ಇದಕ್ಕೆ ಫ್ರಾನ್ಸ್ ಉತ್ಸುಕವಾಗಿದೆ. ಆದರೆ, ಜಪಾನ್ ಹಿಂದೇಟು ಹಾಕುತ್ತಿದೆ. ಭದ್ರತಾ ಮಂಡಳಿಯಲ್ಲಿ ಭಾರತದ ಸ್ಥಾನಕ್ಕೆ ಕಂಟಕವಾಗಿರುವುದೂ ಚೀನಾ ಮತ್ತು ಜಪಾನ್‌ನಂಥ ಪೌರ್ವಾತ್ಯ ರಾಷ್ಟ್ರಗಳೇ. ಪಾಕಿಸ್ತಾನವೂ ತನ್ನ ಕೈಲಾದಷ್ಟು ಅಡ್ಡಗಾಲು ಹಾಕುತ್ತಿದೆ. ಭಾರತ ಅದಕ್ಕಾಗಿಯೇ ಅಮೆರಿಕಾ ಪರ ನಿಲುವು ತೆಗೆದುಕೊಳ್ಳುತ್ತಿದೆ. ಅಮೆರಿಕಾ ತನ್ನ ನೆರವಿಗೆ ನಿಂತರೆ ಕೆಲಸ ಹಗುರವಾದೀತು ಎಂಬ ಭಾವನೆ ಅದರದು. ಬರಾಕ್ ಒಬಾಮ ಅವರಿಗೆ ಏನು ಒತ್ತಡಗಳಿವೆಯೋ ಯಾರಿಗೆ ಗೊತ್ತು?

ಇದು ಬರೀ ಭದ್ರತಾ ಮಂಡಳಿಯ ಮಾತು ಅಲ್ಲ. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (ಐಎಂಎಫ್), ವಿಶ್ವ ಬ್ಯಾಂಕ್‌ನಂಥ ಸಂಸ್ಥೆಗಳಿಗೂ ಅನ್ವಯಿಸುವ ಸಂಗತಿ. ಬದಲಾಗಿರುವ ಜಗತ್ತನ್ನು ಈ ಸಂಸ್ಥೆಗಳೂ ಪ್ರತಿನಿಧಿಸುವುದಿಲ್ಲ. ಹಾಗೆ ನೋಡಿದರೆ ಜಗತ್ತಿನ ಬಹುತೇಕ ರಾಷ್ಟ್ರಗಳನ್ನು ಆರ್ಥಿಕ ಬಿಕ್ಕಟ್ಟು ಕಾಡುತ್ತಿದ್ದರೂ ಭಾರತ ಮತ್ತು

ಚೀನಾ ದೇಶಗಳ ಅಭಿವೃದ್ಧಿ ಪ್ರಮಾಣವನ್ನು ಐಎಂಎಫ್ ಮತ್ತು ವಿಶ್ವ ಬ್ಯಾಂಕ್‌ಗಳೇ ಎತ್ತರಿಸಿ ಇಟ್ಟಿವೆ. ಆರ್ಥಿಕವಾಗಿ ಸಬಲವಾಗುತ್ತಿರುವ ಮತ್ತು ಜಗತ್ತಿನ ಅತಿದೊಡ್ಡ ಯಶಸ್ವಿ ಪ್ರಜಾಸತ್ತಾತ್ಮಕ ರಾಷ್ಟ್ರ ಎನಿಸಿರುವ ತನಗೆ ಇಂಥ ಜಾಗತಿಕ ಸಂಸ್ಥೆಗಳಲ್ಲಿ ಸ್ಥಾನ ಸಿಗಬೇಕು ಎಂದು ಭಾರತ ಈಗ ಬಲವಾಗಿ ಪ್ರತಿಪಾದಿಸುತ್ತಿದೆ. ತನ್ನ ಹಕ್ಕಿನ ಪ್ರತಿಪಾದನೆಗಾಗಿ ವೇದಿಕೆಗಳನ್ನು ಬಳಸಿಕೊಳ್ಳುತ್ತಿದೆ. ಜಾಗತಿಕ ಮಾರುಕಟ್ಟೆಯಲ್ಲಿನ ಸ್ಥಿತ್ಯಂತರಗಳನ್ನು ತಹಬಂದಿಗೆ ತರಬೇಕಾದರೆ ಆರ್ಥಿಕವಾಗಿ ಬಲವಾಗುತ್ತಿರುವ ಭಾರತದಂಥ ದೇಶಗಳ ಮಾತು ನಡೆಯಬೇಕು.

ಚೀನಾ ದೇಶ ಕೂಡ ಡಾಲರ್ ವಿರುದ್ಧ ಧ್ವನಿ ಎತ್ತಿದೆ. ಆ ದೇಶದ ಅಧ್ಯಕ್ಷ ಜಿ 8 ಶೃಂಗ ಸಭೆಯನ್ನು ಅರ್ಧಕ್ಕೇ ಬಿಟ್ಟು ಹೋದುದು ತಮ್ಮ ದೇಶದಲ್ಲಿನ ಗಲಭೆಯ ಕಾರಣದಿಂದ ಎಂದು ಹೇಳಿದರೂ ಡಾಲರ್ ಪ್ರಾಬಲ್ಯದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಲು ಎಂದೂ ಇಟಲಿಯಲ್ಲಿ ಅರ್ಥೈಸಲಾಗುತ್ತಿತ್ತು. ಬಹುಶಃ ಈ ಅಸಮಾಧಾನದ ಮುಂದುವರಿಕೆಯಾಗಿಯೇ ಜಿ 5 ರಾಷ್ಟ್ರಗಳು ತಮ್ಮ ವಹಿವಾಟುಗಳಿಗೆ ಪಾವತಿಯಾಗಿ ತಮ್ಮ ರೊಕ್ಕವನ್ನೇ ಬಳಸಲು ಚಿಂತಿಸುತ್ತಿರುವುದು.

ಇಟಲಿ ಶೃಂಗಸಭೆಗೆ ಇಂಥ ಅನೇಕ ಪ್ರಮುಖ ಆಯಾಮಗಳಿದ್ದುವು. ಅದು ಒಂದು ಒಪ್ಪಂದ ಪ್ರಕಟಿಸುವ ವೇದಿಕೆಯಲ್ಲವಾದ್ದರಿಂದ ಘೋಷಣೆಗಳು ಹೊರಬೀಳುತ್ತವೆಯೇ ಹೊರತು ನಿರ್ಣಯಗಳು ಅಲ್ಲ. ಆದರೆ, ನಿರ್ಣಯಗಳು ಹೊರಬರಲು ಇಂಥ ವೇದಿಕೆಗಳು ನಿರ್ಣಾಯಕವಾಗುತ್ತವೆ. ಅಚ್ಚರಿಯೆನಿಸಿದರೂ ಜಿ 5 ರಾಷ್ಟ್ರಗಳ ರಾಜಕೀಯ-ಆರ್ಥಿಕ ಘೋಷಣೆಗಳ ಭಾಷೆಯಲ್ಲಿಯೇ ಜಿ 8 ರಾಷ್ಟ್ರಗಳ ಘೋಷಣೆಗಳೂ ಇದ್ದುದು. ಅಷ್ಟರ ಮಟ್ಟಿಗೆ ಜಿ 5 ರಾಷ್ಟ್ರಗಳ ಮಾತಿಗೆ ಮನ್ನಣೆ ಸಿಕ್ಕಂತೆ ಆಗಿದೆ. ಆದರೆ, ಇದು ಒಂದು ಅಸಮಾನ ವೇದಿಕೆ. ಇಟಲಿಯಲ್ಲಿ ಎಲ್ಲ ಫಲಕಗಳಲ್ಲಿ ಕಂಗೊಳಿಸಿದ್ದು 'ಜಿ 8 ಶೃಂಗಸಭೆ' ಮಾತ್ರ. ಈ ಸಾರಿ ಈಜಿಪ್ಟನ್ನು ಸಭೆಗೆ ಆಮಂತ್ರಿಸಿದ್ದರೂ ಮೂಲ ಜಿ 5 ರಾಷ್ಟ್ರಗಳೇ ಇನ್ನೂ ಅಂಚಿನಲ್ಲಿ ಇವೆ. ಇದು ಜಿ 13 ಅಥವಾ 14 ಆದಾಗ ಅದು ಸಮಾನ ವೇದಿಕೆ ಅನಿಸುತ್ತದೆ. ಭಾರತ ಈ ದಿಸೆಯಲ್ಲಿ ತನ್ನ ಅತೃಪ್ತಿಯನ್ನು ವ್ಯಕ್ತಪಡಿಸುತ್ತಲೇ ಸಮಾನ ವೇದಿಕೆಗಾಗಿ ಪ್ರಯತ್ನ ಮಾಡುತ್ತಿದೆ.

ರೋಂ ನಗರದಿಂದ ಎಷ್ಟೇ ವೇಗವಾಗಿ ಹೋದರೂ ಎರಡು ಗಂಟೆ ಪ್ರಯಾಣದ ಲಾ'ಕ್ವಿಲಾ ಬಳಿಯ ಕೊಪ್ಪಿತಿಯಂಥ ಒಂದು ಪುಟ್ಟ ಸ್ಥಳದಲ್ಲಿ ಇಂಥ ಬೃಹತ್ ಶೃಂಗ ಸಭೆಯನ್ನು ಸಂಘಟಿಸಿದ್ದಕ್ಕೆ ಇಟಲಿ ಅಧ್ಯಕ್ಷ ಸಿಲ್ವಿಯೊ ಬರ್ಲಿಸ್ಕೋನಿ ಅವರಿಗೆ ಇದ್ದ ಒಂದೇ ಕಾರಣ ಎಂದರೆ ಲಾ'ಕ್ವಿಲಾ ಒಳಗೊಂಡ ಅಬ್ರುಜೊ ಪ್ರಾಂತದಲ್ಲಿ ಸಂಭವಿಸಿದ ಭಾರಿ ಭೂಕಂಪ ಅನಾಹುತದಲ್ಲಿ ನಿರ್ವಸಿತರಾದವರಿಗೆ ಬೆಂಬಲ ಸೂಚಿಸಬೇಕು ಎಂಬುದು. ಯಾರಿಗೂ ಯಾವುದೇ ಕೊರತೆ ಆಗದಂತೆ ಸಿಲ್ವಿಯೊ ವ್ಯವಸ್ಥೆ ಮಾಡಿದ್ದರು. ಆದರೆ, ಈ ಪ್ರಯತ್ನ ಭೂಕಂಪ ಸಂತ್ರಸ್ತರನ್ನು ಮೆಚ್ಚಿಸಿದಂತೆ ಕಾಣಲಿಲ್ಲ. ಕೊಪ್ಪಿತಿ ಮತ್ತು ಲಾ'ಕ್ವಿಲಾ ಶೃಂಗ ಸಭೆಯ ತಾಣಗಳನ್ನು ಅಣಕಿಸುವಂತೆ ಬಲ ಬದಿಯ ಬೋಳು ಬೆಟ್ಟದ ಮೇಲೆ 'ನಾವು ಇನ್ನೂ ಶಿಬಿರದಲ್ಲಿಯೇ ಇದ್ದೇವೆ' ಎಂಬ ಬರಹ ಎದ್ದು ಕಾಣುತ್ತಿತ್ತು.

72 ವರ್ಷದ ಬರ್ಲುಸ್ಕೋನಿ ಅವರನ್ನು ವೈಯಕ್ತಿಕ ಜೀವನದ ತಳಮಳಗಳೂ ಕಾಡುತ್ತಿದ್ದುವು. ತನ್ನ ಗಂಡ ಹದಿಹರಯದ ರೂಪದರ್ಶಿಯ ಜತೆಗೆ ಸಂಬಂಧ ಇಟ್ಟುಕೊಂಡಿದ್ದಾನೆ ಎಂದು ಅವರ ಪತ್ನಿ ಸಿಟ್ಟಿಗೆದ್ದಿದ್ದಾರೆ. ವಿಚ್ಛೇದನ ಕೊಡಲೂ ಸಿದ್ಧರಾಗಿದ್ದಾರೆ. ಶೃಂಗಸಭೆಗೆ ಬಂದಿದ್ದ ಎಲ್ಲ ರಾಷ್ಟ್ರಗಳ ಪ್ರಮುಖರ ಪತ್ನಿಯರು ಭೂಕಂಪ ಸಂತ್ರಸ್ತರ ಪುನರ್ವಸತಿಗೆ ಇಟಲಿ ಮಾಡಿದ ಪ್ರಯತ್ನಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವಾಗ ಸಿಲ್ವಿಯೊ ಅವರ ಹೆಂಡತಿಯೇ ಅಲ್ಲಿ ಇರಲಿಲ್ಲ! ಗೆಲುವಿನಲ್ಲಿಯೂ ಸೋಲು ಇರುತ್ತದೆ ಎಂದರೆ ಇದೇ ಇರಬೇಕು.

■

# ಭೂ ಹಗರಣವೂ, ಲೋಕಾಯುಕ್ತರ ಸ್ವಯಿಚ್ಛೆಯ ತನಿಖಾಧಿಕಾರವೂ...

ಈಗಿನ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಮಾಜಿ ವಸತಿ ಸಚಿವ ಎಸ್.ಎನ್. ಕೃಷ್ಣಯ್ಯ ಶೆಟ್ಟಿ ಅವರ ಸೋದರ ಶ್ರೀನಿವಾಸ ಶೆಟ್ಟಿ ಅವರಿಂದ ಕರ್ನಾಟಕ ಗೃಹ ಮಂಡಳಿಗೆ 50 ಲಕ್ಷ ರೂಪಾಯಿಗೆ ಎಕರೆಯಂತೆ ಜಮೀನು ಖರೀದಿಸಲಾಗಿದೆ. ವಾಸ್ತವವಾಗಿ ಶಿಡ್ಲಘಟ್ಟ ಪರಿಸರದಲ್ಲಿ ಎಕರೆಗೆ 1.20 ಲಕ್ಷದಿಂದ ಎರಡು ಲಕ್ಷ ರೂಪಾಯಿ ಬೆಲೆ ಬಾಳುವ ಈ ಜಮೀನಿಗೆ ಹೆಚ್ಚೂ ಕಡಿಮೆ 40ರಿಂದ 50 ಪಟ್ಟು ಹೆಚ್ಚು ಹಣ ಪಾವತಿಯಾಗಿದೆ. ಕೃಷ್ಣಯ್ಯಶೆಟ್ಟರು, 'ನಾವು ವಣಿಕರು, ವ್ಯಾಪಾರ ಮಾಡುವುದೇ ನಮ್ಮ ವೃತ್ತಿ' ಎಂದು ಸಮರ್ಥಿಸಿಕೊಂಡಿದ್ದಾರೆ. ಇದು ಭ್ರಷ್ಟಾಚಾರವೇ? ಸ್ವಜನ ಪಕ್ಷಪಾತವೇ? ಸರ್ಕಾರಕ್ಕೆ ಹಾಕಿರುವ ಪಂಗನಾಮವೇ? ಅಥವಾ ಎಲ್ಲವೂ ಹೌದೇ?... ಈ ಹಗರಣದ ತನಿಖೆಯನ್ನು ಮುಖ್ಯ ಕಾರ್ಯದರ್ಶಿಗಳಿಂದ ಮಾಡಿಸು ವುದಾಗಿ ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಲೋಕಾಯುಕ್ತ ಅಥವಾ ಸಿ.ಬಿ.ಐ ತನಿಖೆಗೆ ಅವರು ಸಿದ್ಧರಿಲ್ಲ. ವಿರೋಧ ಪಕ್ಷದ ನಾಯಕರು ವಿಧಾನಸೌಧದಿಂದ ರಾಜಭವನಕ್ಕೆ ಪಾದ ಯಾತ್ರೆಯಲ್ಲಿ ತೆರಳಿ ತನಿಖೆಗೆ ಆಗ್ರಹಿಸಿದ್ದಾರೆ.

ಇದು ಒತ್ತಟ್ಟಿಗೆ ಇರಲಿ. ಮಾಧ್ಯಮದಲ್ಲಿ ಒಂದು ಹಗರಣ, ಅಕ್ರಮ ಬಯಲಿಗೆ ಬಂದಾಗ ಅದರ ವಿರುದ್ಧ ಲೋಕಾಯುಕ್ತ ಸಂಸ್ಥೆ ಸ್ವಯಿಚ್ಛೆಯ (ಸುಮೊಟೊ) ತನಿಖೆ ಕೈಗೊಳ್ಳಬಹುದು. ಆದರೆ, ಈ ಹಗರಣ ಉಪ ಲೋಕಾಯುಕ್ತರ ವ್ಯಾಪ್ತಿಗೆ ಬರುವುದಿಲ್ಲ. ಸರ್ಕಾರ ವಹಿಸಿಕೊಟ್ಟರೆ ತನಿಖೆ ಮಾಡುವ ಅಧಿಕಾರ ಲೋಕಾಯುಕ್ತರಿಗೆ ಇದೆ. ಮುಖ್ಯಮಂತ್ರಿ ಅದಕ್ಕೆ ಸಿದ್ಧರಿಲ್ಲ. ಸೋಜಿಗ ಎಂದರೆ, ರಾಜ್ಯಪಾಲರು ಲೋಕಾಯುಕ್ತರಿಗೆ ತನಿಖೆ ಮಾಡುವಂತೆ ಸೂಚಿಸುವ ಅಧಿಕಾರ ಹೊಂದಿಲ್ಲ. ಆ ಅರ್ಥದಲ್ಲಿ ವಿರೋಧ ಪಕ್ಷಗಳು ರಾಜಭವನಕ್ಕೆ ಮಾಡಿದ ಪಾದ ಯಾತ್ರೆ ಬರೀ 'ದಂಡ'ಯಾತ್ರೆ ಅಷ್ಟೇ!

ಲೋಕಾಯುಕ್ತದ ಕೈಗಳನ್ನು ಹೀಗೆ ಕೈ ಕಟ್ಟಿ ಹಾಕಿದ ವಿಚಾರವೂ ಬುಧವಾರವಷ್ಟೇ ವಿಧಾನ ಪರಿಷತ್ತಿನಲ್ಲಿ ಚರ್ಚೆಗೆ ಬಂದಿತ್ತು. ಲೋಕಾಯುಕ್ತಕ್ಕೆ ಸ್ವಯಿಚ್ಛೆಯ ತನಿಖೆ ಅಧಿಕಾರವನ್ನು ಕೊಡಲು ಮುಖ್ಯಮಂತ್ರಿಗಳು ಶಾಸಕಾಂಗದ ಆದೇಶ ಬೇಕು ಎಂದು ಕೇಳಿದ್ದಾರೆ. ಇದರ ಗೂಢಾರ್ಥಗಳನ್ನು ಬಿಚ್ಚಿ ಹೇಳುವುದು ಅನಗತ್ಯ.

ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ (1985) ಅಸ್ತಿತ್ವಕ್ಕೆ ಬಂದ ಕರ್ನಾಟಕ ಲೋಕಾಯುಕ್ತಕ್ಕೆ ಆರಂಭದಲ್ಲಿ ಮುಖ್ಯಮಂತ್ರಿ, ಸಚಿವರು, ಶಾಸಕರು ಮತ್ತು ಸರ್ಕಾರಿ ಅಧಿಕಾರಿಗಳ ವಿರುದ್ಧ ಸ್ವಯಿಚ್ಛೆಯ ತನಿಖಾಧಿಕಾರ ಕೊಡಲಾಗಿತ್ತು. ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರಲ್ಲಿ ಯಾರ ವ್ಯಾಪ್ತಿಗೆ ಯಾವ 'ಸಾರ್ವಜನಿಕ ಸೇವಕರು' ಬರುತ್ತಾರೆ ಎಂಬುದನ್ನೂ ವಿಂಗಡಿಸಲಾಗಿತ್ತು. ಲೋಕಾಯುಕ್ತರ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿ, ಸಚಿವರು, ಶಾಸಕರು ಮತ್ತು ತಿಂಗಳಿಗೆ ರೂ. 20,000ಕ್ಕಿಂತ ಹೆಚ್ಚು ಸಂಬಳ ಪಡೆಯುವ ಅಧಿಕಾರ ವರ್ಗ ಇದ್ದರೆ ಉಪ ಲೋಕಾಯುಕ್ತರ ವ್ಯಾಪ್ತಿಯಲ್ಲಿ ತಿಂಗಳಿಗೆ ರೂ. 20,000ಕ್ಕಿಂತ ಕಡಿಮೆ ಸಂಬಳ ಪಡೆಯುವ ಸರ್ಕಾರಿ ಸಿಬ್ಬಂದಿ ಮಾತ್ರ ಇದ್ದಾರೆ.

ಲೋಕಾಯುಕ್ತ ಸಂಸ್ಥೆ ಅಸ್ತಿತ್ವಕ್ಕೆ ಬರುತ್ತಿದ್ದಂತೆಯೇ ಲೋಕಾಯುಕ್ತರಿಗೆ ಇದ್ದ ಸ್ವಯಿಚ್ಛೆಯ ಕ್ರಮದ ಅಧಿಕಾರವನ್ನು ಹೆಗಡೆ ಅವರೇ ಕಿತ್ತುಕೊಂಡರು. ಆದರೆ, 'ಯಾರಾದರೂ ಲೋಕಾಯುಕ್ತರ ವ್ಯಾಪ್ತಿಯ 'ಸಾರ್ವಜನಿಕ ಸೇವಕರ' ವಿರುದ್ಧ (ಅವರು ಬೇಕಾದರೆ ಮುಖ್ಯಮಂತ್ರಿಯೇ ಇರಲಿ) ದೂರು ಕೊಡಬೇಕಾದರೆ ಪ್ರತಿಜ್ಞಾ ಪ್ರಮಾಣಪತ್ರದ ಜತೆಗೆ ನಿಗದಿತ ದೂರು ಅರ್ಜಿ ಸಲ್ಲಿಸಬೇಕು. ಆ ದೂರು ನಿರಾಧಾರವಾದುದು ಎಂದು ಗೊತ್ತಾದರೆ ಶಿಕ್ಷೆಗೆ ಗುರಿಯಾಗಬೇಕು' ಎಂಬ ವಿಧಿಯನ್ನು ಸೇರಿಸಿದರು. ಉಪಲೋಕಾಯುಕ್ತರು ಮಾತ್ರ. ಮಾಧ್ಯಮಗಳಲ್ಲಿ ಬಂದ ಸುದ್ದಿ, ಪತ್ರ ಅಥವಾ ದೂರವಾಣಿ ಮೂಲಕ ಬಂದ ಖಚಿತ ಮಾಹಿತಿ ಆಧರಿಸಿ ಸ್ವಯಿಚ್ಛೆಯ ಕ್ರಮ ತೆಗೆದುಕೊಳ್ಳಬಹುದು. ಶಿಡ್ಲಘಟ್ಟ ಭೂ ಹಗರಣವನ್ನು ಈ ತಿದ್ದುಪಡಿಗಳ ಪ್ರಕಾರ ಲೋಕಾಯುಕ್ತರು, ಅವರಿಗೆ ವ್ಯಾಪ್ತಿಯಿದ್ದರೂ, ಸ್ವಯಿಚ್ಛೆಯಿಂದ ತನಿಖೆ ಮಾಡಲು ಬರುವುದಿಲ್ಲ. ಉಪ ಲೋಕಾಯುಕ್ತರ ವ್ಯಾಪ್ತಿಗೆ ಅದು ಒಳಪಡುವುದಿಲ್ಲ!

ಮಾಧ್ಯಮಗಳಲ್ಲಿ ಬಂದ ವರದಿ, ತಮಗೆ ಬರೆದ ಪತ್ರ, ಬಂದ ದೂರವಾಣಿ

ಕರೆಯಂಥ 'ವಿಶ್ವಾಸಾರ್ಹ' ಆಧಾರಗಳನ್ನು ಇಟ್ಟುಕೊಂಡು ಉಪ ಲೋಕಾಯುಕ್ತರು ಬಾಯಿಯಿಲ್ಲದ ಜನರಿಗೆ ಅನುಕೂಲವಾಗುವಂಥ ಕೆಲಸಗಳನ್ನು ಮಾಡಲು, ಮಾಡಿಸಲು ಸಾಧ್ಯವಾಗಿದ್ದರೆ ಇದೇ ಕೆಲಸವನ್ನು ಮಾಡಲು ಲೋಕಾಯುಕ್ತರಿಗೆ ಸಾಧ್ಯವಾಗುತ್ತಿಲ್ಲ. ಅವರು ತಮ್ಮ ವ್ಯಾಪ್ತಿಯ ಯಾವುದೇ ಸಾರ್ವಜನಿಕ ಸೇವಕರ ವಿರುದ್ಧ ಸ್ವಯಿಚ್ಛೆಯಿಂದ ಯಾವುದೇ ತನಿಖೆಗೆ ಮುಂದಾಗುವಂತಿಲ್ಲ. ಹೀಗಾಗಿ ಒಂದು ಅರ್ಥದಲ್ಲಿ ಲೋಕಾಯುಕ್ತ ಸಂಸ್ಥೆಯಲ್ಲಿ ಉಪ ಲೋಕಾಯುಕ್ತರಿಗೆ ಮಾತ್ರ ಕೆಲಸ. ಅವರು ಕ್ರಮ ಕೈಗೊಳ್ಳುವುದು ಕೂಡ ರೂ.20,000ಕ್ಕಿಂತ ಕಡಿಮೆ ಸಂಬಂಳ ಇರುವ ಅಧಿಕಾರಿಗಳ ವಿರುದ್ಧ.

ರೂ.20,001 ಸಂಬಳ ತೆಗೆದುಕೊಳ್ಳುವ ಅಧಿಕಾರಿ ಲೋಕಾಯುಕ್ತರ ವ್ಯಾಪ್ತಿಗೆ ಬರುತ್ತಾನೆ ಮತ್ತು ಆತ ಏನೇ ಅಕ್ರಮ ಮಾಡಿಯೂ ದಕ್ಕಿಸಿಕೊಳ್ಳಬಹುದು. ಇಲ್ಲಿರುವ ವಿಪರ್ಯಾಸ ಎಂದರೆ ಕೇವಲ ಒಂದು ರೂಪಾಯಿ ಸಂಬಳ ಹೆಚ್ಚು ಇರುವ ಅಧಿಕಾರಿ ಸ್ವಯಿಚ್ಛೆಯ ತನಿಖಾಧಿಕಾರದಿಂದ ತಪ್ಪಿಸಿಕೊಳ್ಳುವುದು! ಮೇಲು ಹಂತದ ಅಧಿಕಾರಿಗಳನ್ನು ರಕ್ಷಿಸುವುದೇ ಹೆಗಡೆ ಅವರು ತಂದ ತಿದ್ದುಪಡಿಯ ಉದ್ದೇಶವಾಗಿತ್ತೇ? ಅದು ತಪ್ಪು ಎನ್ನುವುದಾದರೆ ಕಳೆದ 24 ವರ್ಷಗಳ ಅವಧಿಯಲ್ಲಿ ಅದಕ್ಕೊಂದು ತಿದ್ದುಪಡಿ ತರಲು ಏಕೆ ಸಾಧ್ಯವಾಗಲಿಲ್ಲ?

ಲೋಕಾಯುಕ್ತರ ಕಚೇರಿಯಲ್ಲಿ ಭ್ರಷ್ಟಾಚಾರ ನಿಷೇಧ ದಳವೊಂದು ಕೆಲಸ ಮಾಡುತ್ತದೆ. ಅದು ಸ್ವಾಯತ್ತವಾದ ದಳ. ಕೇಂದ್ರ ಸರ್ಕಾರದ ಭ್ರಷ್ಟಾಚಾರ ನಿಷೇಧ ಕಾಯ್ದೆ ಅನುಸಾರ ಈ ದಳ ಕೆಲಸ ನಿರ್ವಹಿಸುತ್ತಿದ್ದು ಅದಕ್ಕೆ ಮುಖ್ಯಮಂತ್ರಿಯಿಂದ ಹಿಡಿದು ಗ್ರಾಮ ಸೇವಕನವರೆಗೆ ಈ ಕಾಯ್ದೆ ಅನುಸಾರ ಕ್ರಮ ಜರುಗಿಸಲು, ದಾಳಿ ಮಾಡಲು ಅಧಿಕಾರ ಇದೆ. ಆದರೆ, ಅದು ಮುಖ್ಯಮಂತ್ರಿ, ಮಂತ್ರಿಗಳು ಇರಲಿ ಐ.ಎ.ಎಸ್. ಅಧಿಕಾರಿಗಳನ್ನು ಮುಟ್ಟುವುದಕ್ಕೇ ಹೆದರುತ್ತದೆ. ಅದಕ್ಕೆ ಕಾರಣಗಳೂ ಸ್ಪಷ್ಟವಾಗಿವೆ.

ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರಿಗೆ ಇರುವ ಅಧಿಕಾರದ ಗೊಂದಲದ ಒಂದು ಉದಾಹರಣೆ ನೋಡೋಣ: ಬೆಂಗಳೂರಿನ ದೊಡ್ಡ ಸರ್ಕಾರಿ ಆಸ್ಪತ್ರೆಯೊಂದರ ದುಃಸ್ಥಿತಿ ಬಗ್ಗೆ ಏನಾದರೂ ಮಾಡಬೇಕು ಎಂದರೆ ಆ ಆಸ್ಪತ್ರೆಯ ಸೂಪರಿಂಟೆಂಡೆಂಟ್‌ರ ಸಂಬಳ ರೂ. 20,000 ಕ್ಕಿಂತ ಹೆಚ್ಚು ಇತ್ತು. ಹಾಗಾಗಿ ಉಪ ಲೋಕಾಯುಕ್ತರು ಏನೂ ಮಾಡಲು ಸಾಧ್ಯವಾಗಲಿಲ್ಲ. ಲೋಕಾಯುಕ್ತರು ಏನಾದರೂ ಕ್ರಮ ತೆಗೆದುಕೊಳ್ಳಬೇಕು ಎಂದರೆ ಅವರಿಗೆ ಸ್ವಯಿಚ್ಛೆಯ ತನಿಖೆಯ ಅಧಿಕಾರ ಇರಲಿಲ್ಲ; ಈ ಬಗ್ಗೆ ಯಾರೂ ದೂರನ್ನೂ ಸಲ್ಲಿಸಿರಲಿಲ್ಲ. ಆಸ್ಪತ್ರೆಯ ದುಃಸ್ಥಿತಿ ಹಾಗೆಯೇ ಮುಂದುವರಿಯಿತು. ಜನರ ಕಣ್ಣೀರೂ ಹಾಗೆಯೇ ಹರಿದುವು.

ತನ್ನ ಇಂಥ ಅಸಹಾಯಕತೆಯ ನಿವಾರಣೆಗಾಗಿಯೇ ಲೋಕಾಯುಕ್ತ, ಸ್ವಯಿಚ್ಛೆಯ ತನಿಖಾಧಿಕಾರವನ್ನು ಕೇಳುತ್ತಲೇ ಇದೆ. ಕುಮಾರಸ್ವಾಮಿಯವರು ಮುಖ್ಯಮಂತ್ರಿ ಹುದ್ದೆ ಕಳೆದುಕೊಳ್ಳುವ ಹಂತದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿವರೆಗೆ ಇಂಥ ತನಿಖೆಯ ಅಧಿಕಾರವನ್ನು ಲೋಕಾಯುಕ್ತರಿಗೆ ಕೊಡಲು ಸುಗ್ರೀವಾಜ್ಞೆ ಹೊರಡಿಸಿದರು.

ಅತ್ತ ಅವರು ಅಧಿಕಾರವನ್ನೂ ಕಳೆದುಕೊಂಡರು. ರಾಜ್ಯಪಾಲರ ಆಡಳಿತ ಅವಧಿಯಲ್ಲಿ ಅಧಿಕಾರಗಳದೇ ದರ್ಬಾರು. ರಾಜ್ಯಪಾಲರ ಅಂಕಿತ ಬೀಳಲೇ ಇಲ್ಲ. ಈಗ ಮತ್ತೆ ವಿಧಾನ ಪರಿಷತ್ತಿನಲ್ಲಿ ಆ ಅಧಿಕಾರ ಕೊಡಬೇಕು ಎಂಬ ಮಾತು. ಮುಖ್ಯಮಂತ್ರಿಗಳು ಶಾಸಕಾಂಗದ ಸಮ್ಮತಿ ಕೇಳುತ್ತಿದ್ದಾರೆ. ಮುಖ್ಯಮಂತ್ರಿಗಳ ಮೇಲೆ ಈಗ ಯಾರ ಒತ್ತಡ? ಭ್ರಷ್ಟಾಚಾರದ ಪೆಡಂಭೂತದ ಬಗ್ಗೆ ಕಳವಳ ವ್ಯಕ್ತಪಡಿಸುತ್ತಲೇ ಇತ್ತ ಅದಕ್ಕೆ ಕಡಿವಾಣ ಹಾಕುವುದಕ್ಕೆ ಹಿಂಜರಿಕೆ ಏಕೆ? ಇದೇ ಯಡಿಯೂರಪ್ಪನವರು ಇದೇ ಸ್ವಯಿಚ್ಛೆಯ ಅಧಿಕಾರಕ್ಕೆ ಹಿಂದೆ ಆಗ್ರಹ ಮಾಡಿದ್ದನ್ನು ಮರೆತುಬಿಟ್ಟರೇ? ಶಿಡ್ಲಘಟ್ಟ ಭೂ ಹಗರಣವನ್ನು ಸಿ.ಬಿ.ಐಗೆ ಹೋಗಲಿ ಲೋಕಾಯುಕ್ತ ತನಿಖೆಗೆ ಒಪ್ಪಿಸಲು ಇರುವ ಅಡ್ಡಿ ಯಾದರೂ ಏನು? ಅವರು ಯಾರನ್ನು ರಕ್ಷಣೆ ಮಾಡುತ್ತಿದ್ದಾರೆ? ಮತ್ತು ಏಕೆ? ■

# ತಿರುವಳ್ಳುವರ್ ವಿರೋಧಿಸಿ, ಸಣ್ಣವರಾಗುವುದು ಬೇಡ

ಕಾವೇರಿ ನದಿ ತಟದ ಪೂಂಪುಹಾರ್ ಎಂಬ ಊರಿನಲ್ಲಿ ಒಬ್ಬ ನೇಕಾರನಿದ್ದ. ಬಟ್ಟೆ ನೇಯ್ದು ಮಾರಾಟ ಮಾಡುವುದು ಆತನ ಜೀವನೋಪಾಯ. ಅದೇ ಊರಿನ ಘನ ಶ್ರೀಮಂತನ ಒಬ್ಬ ಪುಂಡುಪುತ್ರ ಈ ನೇಕಾರನ ಬಳಿ ಬಂದು ಆತ ಮಾರಾಟ ಮಾಡುವ ಒಂದು ಸೀರೆ ಎತ್ತಿಕೊಂಡು ಅದರ ಬೆಲೆ ಎಷ್ಟು ಎಂದು ಕೇಳಿದ. 'ಮೂರು ರೂಪಾಯಿ' ಎಂದ ನೇಕಾರ. ಸೀರೆಯನ್ನು ಅರ್ಧ ಹರಿದ ಯುವಕ ಕೇಳಿದ, 'ಇದಕ್ಕೆ ಬೆಲೆ ಎಷ್ಟು' ಎಂದು. 'ಒಂದೂವರೆ ರೂಪಾಯಿ' ಎಂದ ನೇಕಾರ. ಸೀರೆಯನ್ನು ಮತ್ತೆ ಅರ್ಧ ಹರಿದ ಯುವಕ ಮತ್ತೆ ಕೇಳಿದ 'ಇದಕ್ಕೆ ಎಷ್ಟು ಬೆಲೆ' ಎಂದು. 'ಹನ್ನೆರಡಾಣೆ' ಎಂದ ನೇಕಾರ. ಯುವಕನಿಗೆ ಅಚ್ಚರಿ. ನೇಕಾರನಿಗೆ ಸಿಟ್ಟೇ ಬರುವುದಿಲ್ಲವೇ ಎಂದು. ಕೇಳಿಯೂ ಬಿಟ್ಟ: 'ನೀವು ನೇಯ್ದ ಸೀರೆಯನ್ನು ನಿಮ್ಮ ಮುಂದೆಯೇ ಹೀಗೆ ಹರಿದರೂ ನಿಮಗೇಕೆ ಸಿಟ್ಟು ಬರುವುದಿಲ್ಲ'. ನೇಕಾರ ಹೇಳಿದ: 'ಮಗೂ ಕ್ಷಮೆ ಎಂಬುದೇ ಸತ್ಯ. ಅದೇ ಸಚ್ಚಾರಿತ್ರ್ಯ. ಅದೇ ಅಹಿಂಸೆ. ಜೀವನ ಸಂತೋಷದ ಮೂಲ... ಕ್ಷಮೆಗಿಂತ ಈ ಜಗತ್ತಿನಲ್ಲಿ ದೊಡ್ಡದು ಯಾವುದೂ ಇಲ್ಲ.'

–ಆ ನೇಕಾರನೇ ತಮಿಳುನಾಡಿನ ದೊಡ್ಡ ಕವಿ ತಿರುವಳ್ಳುವರ್. ಏಸು ಕ್ರಿಸ್ತನಿಗಿಂತ ಮೂವತ್ತು ವರ್ಷ ಮುಂಚೆ ಹುಟ್ಟಿದ್ದ ತಿರುವಳ್ಳುವರ್ ಬರೀ ಕವಿಯಲ್ಲ, ಮಹಾ ದಾರ್ಶನಿಕ. ಅವರು ಬರೆದ ಕಾವ್ಯ 'ತಿರುಕ್ಕುರಳ್' ಮೂರು ಭಾಗ, 133 ಅಧ್ಯಾಯಗಳ ಈ ದ್ವಿಪದಿ ಕಾವ್ಯದಲ್ಲಿ 1330 ಪದ್ಯಗಳಿವೆ. ಧರ್ಮ, ಅರ್ಥ (ಆಡಳಿತ) ಮತ್ತು ಕಾಮ ಎಂಬ ಮೂರು ಭಾಗದಲ್ಲಿ ಜೀವನ ಕಲೆಯನ್ನೆಲ್ಲ (ಆರ್ಟ್ ಆಫ್ ಲಿವಿಂಗ್) ಹೇಳಿಕೊಡುವ ಈ ಕಾವ್ಯದ ಒಳನೋಟಗಳು ಜಗತ್ತಿನ ಯಾವ ದಾರ್ಶನಿಕ ಒಳನೋಟಗಳಿಗೂ ಕಮ್ಮಿಯಲ್ಲ. ತಮಿಳುನಾಡು ಮಾತ್ರವಲ್ಲ ಭಾರತದ ಇನ್ಯಾವ ರಾಜ್ಯವೂ ಮತ್ತೊಬ್ಬ ತಿರುವಳ್ಳುವರ್‌ನನ್ನು ಇದುವರೆಗೆ ಕಂಡಿಲ್ಲ. ಕನ್ನಡ ವಿಶ್ವಕೋಶದ ಮಾಹಿತಿ ಪ್ರಕಾರ ತಿರುವಳ್ಳುವರ್ ಹುಟ್ಟಿದ್ದು ಭಗವನ್ ಎಂಬ ಬ್ರಾಹ್ಮಣ ಮತ್ತು ಆದಿ ಎಂಬ ಹೊಲತಿಗೆ. ವಳ್ಳುವರ್ ಎಂದರೆ ಅಂತ್ಯಜ ಎಂದೇ ಅರ್ಥ. ಆದರೆ, 'ತಿರುಕ್ಕುರಳ್'ನಲ್ಲಿ ಕವಿಯ ಬಗ್ಗೆ ಯಾವುದೇ ಮಾಹಿತಿಯಿಲ್ಲ. ಆತ ಶೈವ, ವೈಷ್ಣವ, ಜೈನ, ಬೌದ್ಧ ಎಂದು ಆಯಾ ಧರ್ಮದವರು ಹೇಳಿಕೊಂಡರೂ ಕವಿ ತನ್ನ ಕುಲದ ಬಗ್ಗೆ ಮೌನ ತಾಳಿದ್ದಾನೆ. ಆತ ಹೇಳುವುದು 'ಮಾನವ ಕುಲ ಒಂದೇ' ಎಂದು.

ಬೆಂಗಳೂರಿನ ಹಲಸೂರಿನ ತಮಿಳು ಸಂಘದ ಆವರಣದಲ್ಲಿ ತಿರುವಳ್ಳುವರ್ ಪ್ರತಿಮೆ ಸ್ಥಾಪನೆಗೆ ಕನ್ನಡ ಚಳವಳಿಗಾರರು ವಿರೋಧ ಮಾಡಿದಾಗ ಸುಮ್ಮನೇ ತಿರುವಳ್ಳುವರ್ ಕುರಿತು ಓದುತ್ತ ಹೋದಂತೆ ನನಗೆ ದಿಗ್ಭ್ರಮೆಯಾಯಿತು: ನಮ್ಮ ಪಕ್ಕದ ರಾಜ್ಯದಲ್ಲಿ ಹುಟ್ಟಿದ ತಿರುವಳ್ಳುವರ್ ಬಗ್ಗೆ ನಮಗೆ ಏನೂ ಗೊತ್ತಿಲ್ಲವಲ್ಲ ಎಂದು. ನಾವು ಯಾವುದನ್ನು ವಿರೋಧ ಮಾಡಬೇಕು? ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ನಡುವಿನ ಜಗಳಗಳಿಗೂ ತಿರುವಳ್ಳುವರ್ ಪ್ರತಿಮೆ ಸ್ಥಾಪನೆಗೂ ಸಂಬಂಧ ಕಲ್ಪಿಸಬೇಕೇ? ಇಲ್ಲಿ ತಿರುವಳ್ಳುವರ್ ಪ್ರತಿಮೆ ಸ್ಥಾಪನೆ ಆದ ಕೂಡಲೇ ಚೆನ್ನೈನ ಅಯನಾವರಂ ಕನ್ನಡ ಸಂಘದ ಆಶ್ರಯದಲ್ಲಿ ಸರ್ವಜ್ಞ ಪ್ರತಿಮೆಯ ಅನಾವರಣವೂ ಆಗುತ್ತಿದೆ. ಎರಡೂ ರಾಜ್ಯ ಸರ್ಕಾರಗಳ ಮಟ್ಟದಲ್ಲಿ ಈಗಾಗಲೇ ಮಾತುಕತೆ ಆಗಿದೆ, ಪ್ರತಿಮೆ ಅನಾವರಣಕ್ಕೆ ದಿನಾಂಕವೂ ನಿಗದಿಯಾಗಿದೆ. ತಿರುವಳ್ಳುವರ್ ಪ್ರತಿಮೆ ಅನಾವರಣಕ್ಕೆ ಕರುಣಾನಿಧಿ ಬರುತ್ತಿದ್ದಾರೆ. ಸರ್ವಜ್ಞ ಪ್ರತಿಮೆ ಅನಾವರಣಕ್ಕೆ ಯಡಿಯೂರಪ್ಪ ಹೋಗುತ್ತಿದ್ದಾರೆ. ಇನ್ನೇನು ಬೇಕು? ತಿರುವಳ್ಳುವರ್ ಪ್ರತಿಮೆ ಅನಾವರಣ ಆಗದೇ ಇದ್ದರೆ, 17 ವರ್ಷಗಳಿಂದ ಅದಕ್ಕೆ ಹಾಕಿದ ಮುಸುಗು ಹಾಗೇ ಉಳಿಯುತ್ತದೆ. ಅತ್ತ ಕನ್ನಡ ಭವನದ ನೆಲಮಹಡಿಯಲ್ಲಿ ಆರು ವರ್ಷಗಳಿಂದ ಮುಸುಗು ಹಾಕಿಕೊಂಡು ನಿಂತ ಸರ್ವಜ್ಞ ಮೂರ್ತಿಯ ಮುಸುಗೂ ಹಾಗೆಯೇ ಉಳಿಯುತ್ತದೆ. ಆಗ ಕನ್ನಡ ಚಳವಳಿಗಾರರು ಏನು ಸಾಧನೆ ಮಾಡಿದಂತೆ ಆಗುತ್ತದೆ?

ತಿರುವಳ್ಳುವರ್, ಸರ್ವಜ್ಞರಂಥವರನ್ನು ಒಂದು ರಾಜ್ಯಕ್ಕೆ ಕಟ್ಟಿ ಹಾಕಲು ಆಗುತ್ತದೆಯೇ? ಪಂಪ, ಕುವೆಂಪು, ಕಾರಂತ, ಮಾಸ್ತಿ, ಅನಂತಮೂರ್ತಿ, ಭೀಮಸೇನ ಜೋಶಿ, ಗಂಗೂಬಾಯಿ, ಕುಮಾರ ಗಂಧರ್ವ ಯಾವ ರಾಜ್ಯಕ್ಕೆ ಸೇರಿದವರು? ಭೈರಪ್ಪನವರ ಬಹುತೇಕ ಕಾದಂಬರಿಗಳು ಎಲ್ಲ ಭಾಷೆಗಳಿಗೆ ಅನುವಾದ ಆಗಲಿಲ್ಲವೇ? ಜನ ಅವುಗಳನ್ನು ಪ್ರೀತಿಯಿಂದ ಓದಲಿಲ್ಲವೇ? ಅಲ್ಲಿ ಭಾಷೆ, ಗಡಿ, ನೆಲ, ಜಲ

ವಿಚಾರಗಳು ಅಡ್ಡಿಯಾದುವೇ? ಬೈಬಲ್ ಮತ್ತು ಕುರಾನ್ ಬಿಟ್ಟರೆ ಅತಿ ಹೆಚ್ಚು ಭಾಷೆಗಳಿಗೆ ಅನುವಾದ ಆದುದು 'ತಿರುಕ್ಕುರಳ್' ಮಾತ್ರ. ಅದು ಹೇಗೆ ಸಾಧ್ಯವಾಯಿತು? ಮೊನ್ನೆ ಮೊನ್ನೆಯಷ್ಟೇ ವೀರಪ್ಪ ಮೊಯಿಲಿಯವರ 'ರಾಮಾಯಣ ಮಹಾನ್ವೇಷಣಂ' ಕಾವ್ಯದ ತಮಿಳು ಅನುವಾದವನ್ನು ಕರುಣಾನಿಧಿ ಬಿಡುಗಡೆ ಮಾಡಿದ್ದಾರೆ. ಅದಕ್ಕಿಂತ ಮುಂಚೆ ಕನ್ನಡದ ಹಿರಿಯ ಲೇಖಕ ಶೇಷನಾರಾಯಣ ಅವರಿಗೆ ತಮಿಳು ಮತ್ತು ಕನ್ನಡ ಸಾಹಿತ್ಯಗಳನ್ನು ಪರಸ್ಪರರ ಭಾಷೆಗೆ ಅನುವಾದ ಮಾಡಿದ್ದಕ್ಕಾಗಿ ತಮಿಳುನಾಡು ರಾಜ್ಯ ಸರ್ಕಾರ ನೀಡುವ ಅತ್ಯುನ್ನತ 'ಕಲೈಮಾಮಣಿ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಇಂಥ ಕೆಲಸವನ್ನು ಕನ್ನಡಿಗರಾದ ನಾವು ಮಾಡಿದ್ದೇವೆಯೇ?

ರಾಮೇಶ್ವರ ಠಾಕೂರ್ ರಾಜ್ಯಪಾಲರಾಗಿದ್ದಾಗ ಆಂಧ್ರದ ರಾಜ್ಯಲಕ್ಷ್ಮಿ ಎಂಬುವರನ್ನು ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ನೇಮಿಸಿದ್ದನ್ನೇ ನಾವು ಸಹಿಸಲಿಲ್ಲ. ರಾಜ್ಯಲಕ್ಷ್ಮಿ ಅವರ ಅರ್ಹತೆಯ ಬಗ್ಗೆ ಯಾವ ಪ್ರಶ್ನೆಗಳೂ ಇರಲಿಲ್ಲ. ಅವರು ಆಂಧ್ರದವರು ಎಂಬುದೊಂದೇ ನಮಗೆ ಎದ್ದು ಕಂಡಿತು. ನಮ್ಮ ಅನಂತಮೂರ್ತಿಯವರನ್ನು ಕೇರಳದ ಕೊಟ್ಟಾಯಂನ ಗಾಂಧಿ ವಿಶ್ವವಿದ್ಯಾಲಯದ ಕುಲಪತಿಯಾಗಿ ಅದಕ್ಕೂ ಬಹು ಮುಂಚೆಯೇ ನೇಮಕ ಮಾಡಿದ್ದು ನಮಗೆ ಮರೆತು ಹೋಯಿತು. ನಮ್ಮ ಬಿ.ವಿ. ಕಾರಂತರನ್ನು ಮಧ್ಯಪ್ರದೇಶದ ಭೋಪಾಲ್‌ನ ಭಾರತ ಭವನ್ ರೆಪರ್ಟರಿ ನಿರ್ದೇಶಕ ಹುದ್ದೆಗಾಗಿ ಅಲ್ಲಿನ ಸರ್ಕಾರ ಕರೆದುಕೊಂಡು ಹೋಗಿರಲಿಲ್ಲವೇ? ಮೊನ್ನೆ ಮೊನ್ನೆ ನಮ್ಮ ಎನ್. ಎಸ್. ರಾಮೇಗೌಡರನ್ನು ಸಿಕ್ಕಿಂ ರಾಜ್ಯದ ವಿಶ್ವವಿದ್ಯಾನಿಲಯವೊಂದರ ಕುಲಪತಿ ಯಾಗಿ ನೇಮಕ ಮಾಡಲಿಲ್ಲವೇ? ಇದು ಬರೀ ನಮ್ಮ ಅರ್ಹತೆ ಅಷ್ಟೇ ಹೌದೇ? ಅಥವಾ ನೆರೆಯ ರಾಜ್ಯಗಳ ಔದಾರ್ಯವೂ ಹೌದೇ?

ನಿಜ, ಕಾವೇರಿ ವಿಚಾರದಲ್ಲಿ ನಮಗೆ ಅನ್ಯಾಯವಾಗಿದೆ. ತಮಿಳುನಾಡು ಕಾವೇರಿ ನದಿ ಹರಿವಿನ ಕೆಳಹಂತದ ರಾಜ್ಯವಾದರೂ ಐತಿಹಾಸಿಕ ಕಾರಣಗಳಿಂದ ಈ ನದಿಯಲ್ಲಿನ ನಮ್ಮ ಪಾಲನ್ನು ನಾವು ಸಮರ್ಪಕವಾಗಿ ಬಳಸಿಕೊಳ್ಳಲು ಆಗಿಲ್ಲ. ಅದು ಕನ್ನಡಿಗರ ಐತಿಹಾಸಿಕ ದೌರ್ಬಲ್ಯದ ಸಂಕೇತ. ಹಾಗೆಂದು ತಿರುವಳ್ಳುವರ್ ಪ್ರತಿಮೆ ಅನಾವರಣಕ್ಕೆ ಅಡ್ಡಿ ಮಾಡಿದರೆ ಕಾವೇರಿ ನೀರನ್ನೆಲ್ಲ ನಾವೇ ಬಳಸಿಕೊಳ್ಳಲು ಆದೀತೇ? ದುರಂತ ಎಂದರೆ ಕನ್ನಡಿಗರು 'ಜಗಳಗಂಟರು' ಎಂದು ಈಗಾಗಲೇ ದೇಶದ ಮಟ್ಟದಲ್ಲಿ ನಮಗೆ ಕೆಟ್ಟ ಹೆಸರು ಬಂದಿದೆ. ಈಗ, ತಿರುವಳ್ಳುವರ್ ಪ್ರತಿಮೆಗೆ ಅಡ್ಡಿ ಮಾಡಿದರೆ 'ಅಸಹನೆಯವರು' ಎಂಬ ಬಿರುದೂ ಬಂದೀತು.

ಮೂರು ನಾಲ್ಕು ವರ್ಷಗಳ ಹಿಂದೆ ರಜನಿಕಾಂತ್ ನಟಿಸಿದ 'ಶಿವಾಜಿ' ಚಿತ್ರದ 24 ಪ್ರಿಂಟ್‌ಗಳನ್ನು, ನಾಲ್ಕು ಪ್ರಿಂಟ್‌ಗಳ ಬದಲಿಗೆ, ಬೆಂಗಳೂರಿನಲ್ಲಿ ಬಿಡುಗಡೆ ಮಾಡಲಾಯಿತು. ಇಷ್ಟು ಪ್ರಿಂಟ್‌ಗಳನ್ನು ಒಂದೇ ಸಾರಿ ಬಿಡುಗಡೆ ಮಾಡಿದರೆ ಎಲ್ಲ ಕನ್ನಡ ಸಿನಿಮಾಗಳು ಚಿತ್ರಮಂದಿರಗಳಿಂದ ಗಂಟು ಮೂಟೆ ಕಟ್ಟಬೇಕಾಗುತ್ತದೆ ಎಂದು ಗೊತ್ತಿದ್ದೂ ಕನ್ನಡ ಚಳವಳಿಗಾರರು ಗಪ್‌ಚಿಪ್ ಆದರು. ಏಕೆ ಎಂಬುದು ಕನ್ನಡ

ಜನರಿಗೆ ಗೊತ್ತಿಲ್ಲವೇ? ತಿರುವಳ್ಳುವರ್ ಜಾತಿಯಿಲ್ಲದ ಕವಿ. ಸರ್ಜಜ್ಞ, ಹಿಂದುಳಿದ ಕುಂಬಾರ (ಸರ್ವಜ್ಞ ತನ್ನನ್ನು ಶಿವನ ಮೇಳದವನು ಎಂದು ಕರೆದುಕೊಂಡ) ಮನೆತನದವನು. ಇವರು ದೊಡ್ಡ ಜಾತಿಗೆ ಸೇರಿದ್ದರೆ ಈ ಅಡ್ಡಿ ಬರುತ್ತಿತ್ತೇ? ಯಾವುದೇ ವಿಚಾರವನ್ನು ಪ್ರತಿಷ್ಠೆ ಮಾಡಿಕೊಂಡರೆ ಅದು ಪೆಡಸಾಗುತ್ತದೆಯೇ ಹೊರತು ಹಗುರವಾಗುವುದಿಲ್ಲ. ತಿರುವಳ್ಳುವರ್ ಪ್ರತಿಮೆ ಅನಾವರಣಕ್ಕೆ ಕನ್ನಡಿಗರು ಅಡ್ಡಿ ಮಾಡಿಯಾರು ಎಂಬ ಭಯದಿಂದಲೇ ಸರ್ವಜ್ಞ ಪ್ರತಿಮೆ ಅನಾವರಣದ ದಿನಾಂಕವನ್ನು ತಮಿಳುನಾಡು ನಂತರ ಇಟ್ಟುಕೊಂಡಿರಬಹುದು. ಪ್ರತಿಮೆ ಒಂದು ಸಂಕೇತ. ಸಂಕೇತಗಳನ್ನು ಅಲ್ಲಗಳೆಯುವ ಸ್ಥಿತಿಯಲ್ಲಿ ನಾವು ಇಲ್ಲ. ಇದ್ದಿದ್ದರೆ ವಿಧಾನಸೌಧದ ಸುತ್ತ ಪ್ರತಿಮೆಗಳು ಏಳುತ್ತಿರಲಿಲ್ಲ. ತಮಿಳು ಸಂಘಕ್ಕೆ ತಿರುವಳ್ಳುವರ್ ಒಂದು ದೊಡ್ಡ ಸಂಕೇತ. ಆ ಕವಿಯ ಹುಟ್ಟೇ ತಮಿಳುನಾಡಿನ ಶಕೆಯ ಆರಂಭವೂ ಹೌದು. ಆ ಕವಿಯ ನೆನಪಿನಲ್ಲಿ, ಕುರಳ್‌ನ 133 ಅಧ್ಯಾಯಗಳ ಸಂಕೇತವಾಗಿ 133 ಅಡಿ ಎತ್ತರದ ತಿರುವಳ್ಳುವರ್ ಪ್ರತಿಮೆಯನ್ನು ಕನ್ಯಾಕುಮಾರಿಯಲ್ಲಿ ಪ್ರತಿಷ್ಠಾಪಿಸ ಲಾಗಿದೆ. ಅಂಥ ಶಕಪುರುಷನ ಪ್ರತಿಮೆಯ ಅನಾವರಣಕ್ಕೆ ನಾವು ಅಡ್ಡಿ ಮಾಡುವುದು ಬೇಡ. ಅಡ್ಡಿ ಮಾಡಿ ಕನ್ನಡಿಗರು 'ಸಣ್ಣ ಮನಸ್ಸಿನವರು' ಎಂಬ ಕಳಂಕ ಹೊತ್ತುಕೊಳ್ಳು ವುದೂ ಬೇಡ.

■

# ಇಬ್ಬರು ಸುಂದರಿಯರ 'ನಿರ್ಗಮನ'

ಕಳೆದ ವಾರ ಜಗತ್ತು ಇಬ್ಬರು ಸುರಸುಂದರಿಯರನ್ನು ಕಳೆದುಕೊಂಡಿದೆ. ಒಬ್ಬರು ಜೈಪುರದ ರಾಜಮಾತೆ ಮಹಾರಾಣಿ ಗಾಯತ್ರಿ ದೇವಿ. ಇನ್ನೊಬ್ಬರು ಚಿತ್ರನಟಿ ಲೀಲಾ ನಾಯ್ಡು. ಗಾಯತ್ರಿದೇವಿ ಹುಟ್ಟಿದ್ದು (ಮೇ 23, 1920) ಪಶ್ಚಿಮ ಬಂಗಾಳದ ಕೂಚ್‌ಬಿಹಾರ್‌ದಲ್ಲಿ. ಆಕೆ ಹುಟ್ಟಿದ್ದೇ ಬೆಳ್ಳಿ ಚಮಚ ಬಾಯಿಯಲ್ಲಿ ಇಟ್ಟುಕೊಂಡು, ತಂದೆ-ತಾಯಿ ಕೂಡ ರಾಜರು. ತಂದೆ ಜಿತೇಂದ್ರ ನಾರಾಯಣ, ತಾಯಿ ಇಂದಿರಾ ರಾಜೇ. ಗಾಯತ್ರಿ ಆರಂಭದಲ್ಲಿ ಓದಿದ್ದು ರವೀಂದ್ರರ ಶಾಂತಿನಿಕೇತನದಲ್ಲಿ. ನಂತರ ಓದಿದ್ದು ಸ್ವಿಡ್ಜರ್‌ಲೆಂಡ್ ಹಾಗೂ ಲಂಡನ್‌ನಲ್ಲಿ. 20ನೇ ವಯಸ್ಸಿಗೇ ಜೈಪುರದ ಎರಡನೇ ಸವಾಯಿ ಮಾನ್‌ಸಿಂಗ್ ಜತೆ ಮದುವೆಯೂ ಆಯಿತು.

ರಾಜ ಮನೆತನದಲ್ಲಿ ಹುಟ್ಟಿದ್ದರೂ ಅರಸರ ಹೆಣ್ಣಿನ ಹುಚ್ಚುಗಳು ಗಾಯತ್ರಿ ದೇವಿಗೆ ಅಪರಿಚಿತ. ಸವಾಯಿ ಮಾನ್‌ಸಿಂಗ್ ಜತೆಗೆ ಇದೇ ವಿಷಯ ಕುರಿತು ಚರ್ಚೆ, ವಾಗ್ವಾದ, 'ರಾಜರಿಗೆ ಪರಸ್ತ್ರೀಯರ ಜತೆಗೆ ಸಂಗ ಸಾಮಾನ್ಯ. ಅದನ್ನೆಲ್ಲ ಮದುವೆ ಯಾದ ಮೇಲೆ ನೀನು ಆಕ್ಷೇಪಿಸಬಾರದು' ಎಂದು ಅಣ್ಣನಿಂದ ವಕಾಲತ್ತು. 'ನಾನು (ನನ್ನಂಥ ಸುಂದರಿ)

ಅವನ ಪತ್ನಿಯಾಗಿರುವಾಗ ಬೇರೆ ಹೆಂಗಸರ ಸಂಗ ಏಕೆ?' ಎಂಬುದು ಗಾಯತ್ರಿ ಹಟ. ಕೊನೆಗೂ ತಂಗಿಗೆ ಅರಸರ ಹುಚ್ಚುಗಳನ್ನು ಮನವರಿಕೆ ಮಾಡಿಕೊಡಲು ಅಣ್ಣನಿಗೆ ಸಾಧ್ಯವಾಗಲಿಲ್ಲ. ಮದುವೆಯಾದ ನಂತರವೂ ಸವಾಯಿ ಮಾನ್‌ಸಿಂಗ್‌ರಿಗೆ ಎದುರು ಬಂದ ಸುಂದರಿಯರಿಗೆ, 'ಹಲೋ ಬ್ಯೂಟಿಫುಲ್', 'ಹೌ ಈಸ್ ಮೈ ವಂಡರ್‌ಫುಲ್ ಗರ್ಲ್' ಎಂದು ಉದ್ಗಾರ ತೆಗೆಯುತ್ತ ಅವರ ಕೆನ್ನೆಗೆ ಮುತ್ತು ಕೊಡುವ ಚಟ ಇದ್ದೇ ಇತ್ತು. ಗಾಯತ್ರಿ ದೇವಿ, 'ಇದೆಲ್ಲ ಏಕೆ? ನನಗೆ ಇದು ಅರ್ಥವೂ ಆಗುವುದಿಲ್ಲ' ಎಂದು ಗೊಣಗುತ್ತಿದ್ದರು. ಆದರೆ, ಸವಾಯಿ ಮಾನ್‌ಸಿಂಗ್‌ರು ಅದಕ್ಕಿಂತ ಮುಂದೆ ಹೋದಂತೆ ಕಾಣುವುದಿಲ್ಲ!

ಗಾಯತ್ರಿದೇವಿ ಅರಸು ಮನೆತನಗಳಿಗೆ ಸಾಮಾನ್ಯವಾಗಿದ್ದ 'ಪರ್ಧಾ' ಪದ್ಧತಿಯನ್ನು ತೀವ್ರವಾಗಿ ವಿರೋಧಿಸಿದರು. ಮದುವೆ ಮಂಟಪಕ್ಕೆ ಹೋಗುವ ಸಂದರ್ಭದಲ್ಲಿ ಅವಕುಂಠನ ಹಾಕಿದಾಗ ಸಂಕಟಪಟ್ಟರು. ಬಹುಶಃ ಇಂಥ ಅನುಭವಗಳೇ ಅವರನ್ನು ಸ್ತ್ರೀ ಶಿಕ್ಷಣಕ್ಕೆ ಆದ್ಯತೆ ಕೊಡುವಂತೆ ಮಾಡಿರಬೇಕು. "ಮಹಾರಾಣಿ ಗಾಯತ್ರಿದೇವಿ ಶಾಲೆ"ಯನ್ನು ಬಾಲಕಿಯರಿಗಾಗಿಯೇ ಆರಂಭಿಸಿದರು.

ಗಾಯತ್ರಿದೇವಿಯದು ತಾಯಿಯಿಂದ ಬಳುವಳಿಯಾಗಿ ಬಂದ ಸೌಂದರ್ಯ. ತಮ್ಮ ತಾಯಿ ಜಗತ್ತಿನ ಅದ್ವಿತೀಯ ಸುಂದರಿ ಎಂದು ಆಕೆ ಹೇಳುತ್ತಿದ್ದರು. ಗಾಯತ್ರಿದೇವಿ ಕೂಡ ಜಗತ್ತಿನ ಹತ್ತು ಮಂದಿ ಅಪ್ರತಿಮ ಸುಂದರಿಯರಲ್ಲಿ ಒಬ್ಬರು ಎಂದು 'ವೋಗ್' ನಿಯತಕಾಲಿಕ ಹೆಸರಿಸಿತ್ತು. ಈ ಹತ್ತು ಮಂದಿಯಲ್ಲಿ ಇನ್ನೊಬ್ಬ ಅಪ್ರತಿಮ ಸುಂದರಿ ನಟಿ ಲೀಲಾ ನಾಯ್ಡು.

ಗಾಯತ್ರಿದೇವಿ 1962ರಲ್ಲಿ ಸ್ವತಂತ್ರ ಪಕ್ಷದಿಂದ ಜೈಪುರ ಲೋಕಸಭಾ ಕ್ಷೇತ್ರದಲ್ಲಿ ಗೆದ್ದ ಅಂತರ ಅವರನ್ನು ಗಿನ್ನಿಸ್ ದಾಖಲೆಗೆ ಸೇರಿಸುವಷ್ಟು ದೊಡ್ಡದಿತ್ತು. ಒಟ್ಟು 2.46 ಲಕ್ಷ ಮತಗಳಲ್ಲಿ ಗಾಯತ್ರಿದೇವಿಗೆ ಬಿದ್ದುದು 1.75 ಲಕ್ಷ ಮತಗಳು! ಉಳಿದವರೆಲ್ಲರ ಠೇವಣಿ ಜಪ್ತಿಯಾಯಿತು. 1967, 71ರಲ್ಲಿಯೂ ಇದೇ ಕ್ಷೇತ್ರದಿಂದ ಸ್ವತಂತ್ರ ಪಕ್ಷದ ಅಭ್ಯರ್ಥಿಯಾಗಿ ಆಕೆ ಮತ್ತೆ ಲೋಕಸಭೆ ಪ್ರವೇಶಿಸಿದರು. ಅರಸು ಮನೆತನದವರು ಪ್ರಜಾಸತ್ತಾತ್ಮಕ ಚುನಾವಣೆಯಲ್ಲಿ ಭಾಗವಹಿಸಿದ ಮೊದಲ ಉದಾಹರಣೆಯಿದು. ಆದರೆ, 71ರಲ್ಲಿ ರಾಜಧನ ರದ್ದತಿಯಾದ ನಂತರ ಗಾಯತ್ರಿದೇವಿ ತೆರಿಗೆ ಕಾಯ್ದೆ ಉಲ್ಲಂಘಿಸಿದ ಆರೋಪದ ಮೇಲೆ ಐದು ತಿಂಗಳು ತಿಹಾರ್ ಜೈಲಿಗೆ ಹೋಗಿದ್ದರು. 1999ರಲ್ಲಿ ಕೂಚ್ ಬಿಹಾರ್ ಕ್ಷೇತ್ರದಿಂದ ತೃಣಮೂಲ ಕಾಂಗ್ರೆಸ್‌ನ ಅಭ್ಯರ್ಥಿಯಾಗಿ ಅವರನ್ನು ಆಯ್ಕೆ ಮಾಡಲಾಗಿತ್ತು. ಆದರೆ ಆಕೆ ಕಣಕ್ಕೆ ಇಳಿಯಲು ಮನಸ್ಸು ಮಾಡಲಿಲ್ಲ. 1976ರಲ್ಲಿ ಅವರು ತಮ್ಮ ಅದುವರೆಗಿನ ನೆನಪುಗಳನ್ನೆಲ್ಲ ಸೇರಿಸಿ ಪ್ರಕಟಿಸಿದ 'ದಿ ಪ್ರಿನ್ಸೆಸ್ ರಿಮೆಂಬರ್ಸ್' ಎಂಬ ಆತ್ಮಕಥನ (ಲೇ ಸಂತಾ ರಾಮರಾವ್) ಈಗಲೂ ಹಾಟ್ ಕೇಕ್‌ನಂತೆ ಮಾರಾಟವಾಗುತ್ತಿದೆ.

ನಟಿ ಲೀಲಾ ನಾಯ್ಡು ಅವರದು ಗಾಯತ್ರಿದೇವಿಯ ಹಾಗೆ ಗುಲಾಬಿ ಹಾಸಿನ ಬದುಕಲ್ಲ. ತಂದೆ ಪ್ರಖ್ಯಾತ ಅಣು ವಿಜ್ಞಾನಿ ರಾಮಯ್ಯ ನಾಯ್ಡು. ತಾಯಿ ಐರಿಷ್ ಮಹಿಳೆ. ಹುಟ್ಟಿದ್ದು 1940ರಲ್ಲಿ. ಹದಿನಾಲ್ಕನೇ ವಯಸ್ಸಿಗೇ ಫೆಮಿನಾ ಮಿಸ್ ಇಂಡಿಯಾ

ಕಿರೀಟ ಧಾರಣೆ. 17ನೇ ವಯಸ್ಸಿಗೆ ಒಬೆರಾಯ್ ಮನೆತನದ ಕುಡಿ ತಿಲಕ್‌ರಾಜ್ ಜತೆಗೆ ಮದುವೆ. ಆಗ ತಿಲಕ್‌ರಾಜ್ ವಯಸ್ಸು 33. ಕಮಲಾದೇವಿ ಚಟ್ಟೋಪಾಧ್ಯಾಯರ ಕ್ಯಾಮೆರಾ ಸೆರೆ ಹಿಡಿದಿದ್ದ ಲೀಲಾ ನಾಯ್ಡು ಚಿತ್ರ ನೋಡಿದ ಪ್ರಖ್ಯಾತ ನಿರ್ದೇಶಕ ಹೃಷಿಕೇಶ್ ಮುಖರ್ಜಿ 'ಅನುರಾಧಾ' ಚಿತ್ರದ ನಾಯಕಿಯಾಗಿ ಆಕೆಯನ್ನು ಆಯ್ಕೆ ಮಾಡಿದರು. ಚಿತ್ರದಲ್ಲಿ ಲೀಲಾ ಅವರ ನಾಯಕ ನಟ ಬಲರಾಜ್ ಸಾಹ್ನಿ. ಸಿತಾರ್‌ಗುರು ರವಿಶಂಕರ್ ಸಂಗೀತ ನಿರ್ದೇಶನದ ಈ ಚಿತ್ರದ 'ಜಾನೆ ಕೈಸೆ ಸಪ್ನೊ ಮೇ ಖೋ ಗಯಿ ಆಂಖೇ' ಮತ್ತು 'ಕೈಸೆ ದಿನ್ ಬೀತೇಂ ಕೈಸಿ ಬೀತೇ ರಾತೇ' ಹಾಡುಗಳು ಎಲ್ಲರ ನಾಲಿಗೆಯ ಮೇಲೆ ನಲಿದಾಡಿದುವು. ಆ ವರ್ಷದ ದೇಶದ ಅತ್ಯುತ್ತಮ ಚಿತ್ರ ಎಂಬ ಪ್ರಶಸ್ತಿಯೂ 'ಅನುರಾಧಾ' ಸಿನಿಮಾಕ್ಕೆ ಸಂದಿತು.

ನಿತಿನ್ ಬೋಸ್ ಅವರ 'ಉಮೀದ್' ಲೀಲಾಗೆ ಖ್ಯಾತಿ ತಂದ ಮತ್ತೊಂದು ಚಿತ್ರ. ಮಹಿಳಾ ವಿಮೋಚನೆ ಕುರಿತು ಆರ್.ಕೆ. ನಯ್ಯರ್, ನಾನಾವತಿ (ಸೇನಾ ಅಧಿಕಾರಿಯೊಬ್ಬರ ಪತ್ನಿಯ ದುರಂತ ಪ್ರೇಮ ಕಥನ) ಪ್ರಕರಣವನ್ನು ಆಧಾರವಾಗಿ ಇಟ್ಟುಕೊಂಡು ತಯಾರಿಸಿದ 'ಏ ರಾಸ್ತೆ ಹೈ ಪ್ಯಾರ್‌ಕೆ' ಚಿತ್ರದಲ್ಲಿ ಬೇರೆ ನಟಿಯರು ಮುಖ್ಯ ಪಾತ್ರ ನಿರ್ವಹಿಸಲು ನಿರಾಕರಿಸಿದರೂ ಲೀಲಾ ನಾಯ್ಡು ಹಿಂದೇಟು ಹಾಕಲಿಲ್ಲ. ನಾಯಕ ನಟ ಸುನೀಲ್ ದತ್ ಜತೆಗಿನ ಡುಯೆಟ್ ಹಾಡು 'ಯೆ ಖಾಮೋಶಿಯಾಂ, ಯೆ ತನ್ಹಾಯಿಯಾ' ಹಾಡು ಸಾರ್ವಕಾಲಿಕ ಹಿಟ್‌ಗಳಲ್ಲಿ ಒಂದು ಎಂದು ಹೆಸರಾಯಿತು. ದೇವಾನಂದ್ ಅವರ 'ಗೈಡ್' ಚಿತ್ರದಲ್ಲಿ ನಾಯಕಿ ಪಾತ್ರವನ್ನು ವಹಿದಾ ರೆಹಮಾನ್‌ಗೆ ಬಿಟ್ಟುಕೊಟ್ಟ ಲೀಲಾ ನಂತರ ಹೆಚ್ಚಿನ ಯಶಸ್ಸು ಗಳಿಸಲಿಲ್ಲ. ಆಕೆಯ ಜೀವನವೂ ಹಳಿ ತಪ್ಪಿದ ಗಾಡಿಯಾಯಿತು. ಒಬೆರಾಯ್ ವಂಶಸ್ಥ ತಿಲಕ್‌ರಾಜ್‌ಗೆ ವಿಚ್ಛೇದನ ಕೊಟ್ಟ ನಂತರ ಅವರು ಮದುವೆಯಾದುದು ಪ್ರಖ್ಯಾತ ಆಂಗ್ಲ ಕವಿ ಡಾಮ್ ಮೊರೇಸ್ ಅವರನ್ನು. ಡಾಮ್ ಬಗ್ಗೆ ಬಾಲ್ಯ ಕಾಲದಿಂದಲೂ ಲೀಲಾಗೆ ಪ್ರೀತಿಯಿದ್ದರೂ ಈ ದಾಂಪತ್ಯ ಬಾಳಿದ್ದು ಕೇವಲ ಹತ್ತು ವರ್ಷ. ತಿಲಕ್‌ರಾಜ್‌ಗೆ ಹುಟ್ಟಿದ ಅವಳಿ ಹೆಣ್ಣು ಮಕ್ಕಳ ಪಾಲನೆಯ ಹಕ್ಕನ್ನೂ ಕಳೆದುಕೊಂಡ ಲೀಲಾ, ತತ್ವಜ್ಞಾನಿ ಜೆ. ಕೃಷ್ಣಮೂರ್ತಿಯವರ ಪ್ರೇಮಪಾಶದಲ್ಲಿ ಸಿಲುಕಿದ್ದರು!

ಅಪ್ರತಿಮ ಸೌಂದರ್ಯದಲ್ಲಿ, ಜೀವನ ಪ್ರೀತಿಯಲ್ಲಿ, ಉಡುಪು ತೊಡಪಿನಲ್ಲಿ ಶ್ರೀಮಂತರಾಗಿದ್ದ ಗಾಯತ್ರಿದೇವಿ ಒಬ್ಬ ಯಶಸ್ವಿ ಮಹಿಳೆ; ಲೀಲಾ ನಾಯ್ಡು ಒಬ್ಬ ದುರಂತ ನಾಯಕಿ. ಈ ಇಬ್ಬರು ಸುಂದರಿಯರನ್ನು ಕಳೆದುಕೊಂಡ ಜಗತ್ತು ಅಪ್ಸರ ಮಟ್ಟಿನ ಸೌಂದರ್ಯದಿಂದ ವಂಚಿತವಾಗಿದೆ.

■

# ಮಾರಾಮಾರಿ ಬೇಡ 'ಮಾತಿನ ಮನೆ'ಯಾಗಲಿ

ಕೆಲವು ದಿನಗಳ ಹಿಂದೆ ದೇಶದ ಹಿರಿಯ ಪತ್ರಕರ್ತ ಕುಲದೀಪ್ ನಯ್ಯರ್ ಅವರ ಜತೆಗೆ ಮಾತನಾಡುತ್ತಿದ್ದೆ. ಅವರು ವರದಿಗಾರರಾಗಿ ಅನೇಕ ವರ್ಷ ಕೆಲಸ ಮಾಡಿದವರು. ಲೋಕಸಭೆ, ರಾಜ್ಯಸಭೆಯ ಕಲಾಪಗಳನ್ನು 'ಕವರ್' ಮಾಡಿದವರು. ಪತ್ರಕರ್ತರಾಗಿ ನಿವೃತ್ತರಾದ ನಂತರ ರಾಜ್ಯಸಭೆಯ ಸದಸ್ಯರೂ ಆಗಿದ್ದವರು. ನನ್ನ ಜತೆ ಮಾತನಾಡುವಾಗ ಅವರ ದನಿಯಲ್ಲಿ ತೀವ್ರ ಹತಾಶೆ ಇತ್ತು. ರಾಜಕಾರಣಿಗಳ ಅಧೋಗತಿಯ (ಪತ್ರಿಕೋದ್ಯಮದ ಅಧೋಗತಿಯ ಬಗೆಗೂ ಅವರು ಈಚೆಗೆ ಬರೆದಿದ್ದಾರೆ) ಬಗ್ಗೆ ಮಾತನಾಡುತ್ತಲೇ ಸಂಸದೀಯ ಕಲಾಪಗಳ ಅಧೋಗತಿ ಸ್ಥಿತಿಯ ಬಗೆಗೂ ಅವರು ಮಾತನಾಡಿದರು. 'ನಾನು ಹಲವು ವರ್ಷಗಳ ಹಿಂದೆ ಇದೇ ಲೋಕ ಸಭೆ, ರಾಜ್ಯಸಭೆಯ ಕಲಾಪಗಳ ವರದಿ ಮಾಡಿದ್ದೆ. ಕೆಲವು ವರ್ಷಗಳ ಹಿಂದೆ ಅದೇ ರಾಜಸಭೆಯಲ್ಲಿ ಕುಳಿತುಕೊಳ್ಳುವ ಯೋಗವೂ ನನ್ನದಾಯಿತು. ಆದರೆ, ಆಗಿನ ಕಾಲ ಎಲ್ಲಿ, ಈಗಿನ ಕಾಲ ಎಲ್ಲಿ? ಆಗ ಎಂಥ ಮಾತುಗಾರರು ಇದ್ದರು? ಈಗ ಎಂಥವರು ಇದ್ದಾರೆ. ಛೇ!' ಎಂದು ಕೈಕೋಲು ಹಿಡಿದುಕೊಂಡು ನಡೆದು ಹೋದ

ಕುಲದೀಪ ನಯ್ಯರ್ ಅವರ ಆಜಾನುಬಾಹು ವ್ಯಕ್ತಿತ್ವ ವಿಷಾದದಿಂದ ಬಾಗಿದಂತೆ ಕಾಣುತ್ತಿತ್ತು.

ನಮ್ಮ ಸಂಸದೀಯ ವ್ಯವಹಾರಗಳ ಸಚಿವ ಎಸ್. ಸುರೇಶ ಕುಮಾರ್ ಸಂಪಾದಕರಿಗೆ, ಹಿರಿಯ ಪತ್ರಕರ್ತರಿಗೆಲ್ಲ ಈಚೆಗೆ ಪತ್ರ ಬರೆದು ವಿಧಾನ ಮಂಡಲ ಕಲಾಪದ ಮಟ್ಟವನ್ನು ಎತ್ತರಿಸುವ ಬಗ್ಗೆ ಸಲಹೆ, ಸೂಚನೆ ಕೇಳಿದ್ದಾರೆ. ಅವರ ಪತ್ರ ಕೈ ಸೇರಿದಾಗ ನಯ್ಯರ್ ಆಡಿದ ಮಾತುಗಳು ನೆನಪಾದುವು. ನಾನು ವಿಧಾನ ಮಂಡಲದ ಕಲಾಪ ವರದಿ ಮಾಡಿದ 80ರ ದಶಕದ ದಿನಗಳೂ ನೆನಪಾದುವು. ಆಗ ವಿಧಾನ ಪರಿಷತ್ತಿನ ಸದಸ್ಯರಾಗಿದ್ದವರು ಕೆ.ಎನ್. ನಾಗೇಗೌಡ. ನಾಗೇಗೌಡ, ಪ್ರಚಾರಪ್ರಿಯ ಎಂಬುದರಲ್ಲಿ ಅನುಮಾನವಿಲ್ಲ. ಆದರೆ, ಅವರು ಕಲಾಪದಲ್ಲಿ ಭಾಗ ವಹಿಸುವುದಕ್ಕಿಂತ ಮುಂಚೆ ಮಾಡಿಕೊಳ್ಳುತ್ತಿದ್ದ ಸಿದ್ಧತೆ ಕಣ್ಣಿಗೆ ಕಟ್ಟಿದಂತಿದೆ. ಎ.ಕೆ. ಸುಬ್ಬಯ್ಯ ಆಗಲೇ ಭಾರೀ ದೊಡ್ಡ ಹೆಸರು ಮಾಡಿದ ವಿರೋಧಿ ನಾಯಕರಲ್ಲಿ ಒಬ್ಬರಾಗಿದ್ದರು. ಕೂರಂಬಿನಂಥ ಅವರ ಮಾತು, ವಾಕ್ಚಟುತ್ವ ಆಡಳಿತ ನಡೆಸುವವರು ಬೆಚ್ಚಿ ಬೀಳಿಸುವಂತೆ ಇರುತ್ತಿತ್ತು. ಕರ್ನಾಟಕ ಇಂಥ ಅನೇಕ ಸಂಸದೀಯ ಪಟುಗಳನ್ನು ಕಂಡಿದೆ. ಇವು ಒಂದೆರಡು ಹೆಸರು ಮಾತ್ರ. ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಶಾಂತವೇರಿ ಗೋಪಾಲಗೌಡ, ದೇವರಾಜ ಅರಸು ಅವರಂತೆ ಮಾತ ನಾಡಿದವರು ವಿರಳ. 60–70ರ ದಶಕದಲ್ಲಿಯಂತೂ 'ಸದನದಲ್ಲಿ ಕೇಳಿಸಿದ್ದು' ಅಂಕಣದ ಅಡಿಯಲ್ಲಿ ಬರುತ್ತಿದ್ದ ಮಾತುಗಳಲ್ಲಿ ಎಂಥ ಚುರುಕು, ಪಂಚ್ ಇರುತ್ತಿತ್ತು. ಈಗ ಆ ಪಂಚ್ ಹೊರಟು ಹೋಗಿದೆ.

ಸಂಸತ್ ಅಥವಾ ವಿಧಾನ ಮಂಡಲದ ಎರಡೂ ಮನೆಗಳು ಮಾತಿನ ಮನೆಗಳು, ಅದೇ ಸಂವಿಧಾನಕರ್ತರ ಆಶಯವಾಗಿತ್ತು. ಆದರೆ, ಈಗ ಅವು ಹೊಡೆದಾಟದ ಮನೆಗಳಾಗಿವೆ. ಈಗ ಕಲಾಪ ಎಂದರೆ, ಧರಣಿ, ಸಭಾತ್ಯಾಗ, ಬಹಿಷ್ಕಾರ ಅಷ್ಟೇ. ಕರ್ನಾಟಕದ ಉಭಯ ಸದನಗಳ ಸದಸ್ಯರು ಅದೃಷ್ಟವಶಾತ್ ಇಷ್ಟಕ್ಕೇ ನಿಂತಿದ್ದಾರೆ. ತಮಿಳುನಾಡು, ಬಿಹಾರ, ಉತ್ತರ ಪ್ರದೇಶ, ಜಮ್ಮು ಕಾಶ್ಮೀರ ಮುಂತಾದ ರಾಜ್ಯಗಳ ಶಾಸಕರು ಕೈಗೆ ಸಿಕ್ಕುದನ್ನು ತೆಗೆದು ಕೊಂಡು ಬಿಸಾಕಿದ ನಿದರ್ಶನಗಳಿಗೆ ಲೆಕ್ಕವಿಲ್ಲ. ಮೊನ್ನೆ ಮೊನ್ನೆ ಜಮ್ಮು ಕಾಶ್ಮೀರ ವಿಧಾನಸಭೆಯಲ್ಲಿ ಪಿಡಿಪಿ ಸದಸ್ಯೆ ಮೆಹಬೂಬಾ ಮುಫ್ತಿ ಮೈಕನ್ನೇ ಕಿತ್ತು ಎಸೆದು ಹಾಕಿದರು. ಕಳೆದ ತಿಂಗಳು ಕೊನೆಗೊಂಡ ರಾಜ್ಯ ವಿಧಾನಮಂಡಲ ಅಧಿವೇಶನದಲ್ಲಿ ಇಂಥ ಘಟನೆ ನಡೆಯ ದಿದ್ದರೂ ಇಡೀ ಅಧಿವೇಶನದಲ್ಲಿ ನಡೆದುದು ಗಲಾಟೆ, ಧರಣಿ, ಸಭಾತ್ಯಾಗ, ಹಗರಣಗಳ ಕೋಲಾಹಲ.

ಸರ್ಕಾರವನ್ನು ಬಡಿಯಲು ವಿರೋಧ ಪಕ್ಷಗಳಿಗೆ ಹಗರಣಗಳು ದೊಡ್ಡ ಅಸ್ತ್ರಗಳಂತೆ ನೆರವಾಗುತ್ತವೆ. ಆದರೆ, ಹಗರಣಗಳ ಆಚೆ, ಸಾಮಾನ್ಯ ಜನರೂ ಇದ್ದಾರೆ. ಅವರಿಗೆ ಬಾಯಿಯಿಲ್ಲ. ಇದ್ದರೂ ಅದನ್ನು ಕೇಳುವವರು ಇಲ್ಲ. ಅಧಿವೇಶನ ನಡೆದಾಗಲೆಲ್ಲ ತಮ್ಮ ಕಷ್ಟ ಕೋಟಲೆಗಳ ಬಗ್ಗೆ ಏನಾದರೂ ಚರ್ಚೆ ಆದೀತು, ಅದರಿಂದ ಪರಿಹಾರ ಸಿಕ್ಕೀತು ಎಂದು ಕಾಯುತ್ತಿರುತ್ತಾರೆ. ಆದರೆ, ಜನರ ಸಮಸ್ಯೆಗಳಿಗಿಂತ ಹಗರಣಗಳೇ ವಿರೋಧ ಪಕ್ಷಗಳಿಗೆ ಹೆಚ್ಚು ಆಕರ್ಷಕವಾಗಿ ಕಾಣಿಸಿದರೆ ಜನಸಾಮಾನ್ಯರ ಪಾಡು ನಾಯಿ ಪಾಡು

ಆಗುತ್ತದೆ. ನಕಾರಾತ್ಮಕ ಸಂಗತಿಗಳೇ ಮಾಧ್ಯಮಗಳಲ್ಲಿ ಹೆಚ್ಚು ವಿಜೃಂಭಿಸುವುದು ಕೂಡ ವಿರೋಧ ಪಕ್ಷಗಳು ದಾರಿ ತಪ್ಪಲು ಕಾರಣವಾಗಿರಬೇಕು. ಆದರೆ ಮಾಧ್ಯಮಗಳು ಈಗ ತಮ್ಮ ತಪ್ಪನ್ನು ತಿದ್ದಿಕೊಂಡಿದ್ದು ಧರಣಿ, ಸಭಾತ್ಯಾಗ, ಕೋಲಾಹಲಗಳನ್ನೆಲ್ಲ ಈಗ ಒಳಪುಟಕ್ಕೆ ತಳ್ಳುತ್ತಿವೆ. ಆದರೂ, ವಿರೋಧ ಪಕ್ಷಗಳು ಹಳೆಯ ಚಟವನ್ನು ಇನ್ನೂ ಬಿಟ್ಟಿಲ್ಲ. ಈಚಿನ ಹತ್ತಾರು ವರ್ಷಗಳ ಲೋಕಸಭೆಯ ಕಲಾಪವನ್ನು ನೋಡಿದರೂ ಪರಿಸ್ಥಿತಿ ಭಿನ್ನ ಎನಿಸುವುದಿಲ್ಲ. ಸೋಮನಾಥ ಚಟರ್ಜಿಯವರಂಥ ಬಹುದೊಡ್ಡ ಸಂಸದೀಯ ಪಟು ಕೂಡ ಸ್ಪೀಕರ್ ಆಗಿ ಸದನವನ್ನು ನಿಯಂತ್ರಿಸಲು ಕಡುಕಷ್ಟ ಪಟ್ಟರು.

ಕರ್ನಾಟಕದಲ್ಲಿ 60ರ ದಶಕದಲ್ಲಿ ವೈಕುಂಠ ಬಾಳಿಗಾ ವಿಧಾನ ಸಭಾಧ್ಯಕ್ಷರಾಗಿ ದೊಡ್ಡ ಹೆಸರು ಮಾಡಿದವರು. ಕರ್ನಾಟಕ ಮತ್ತೆ ಅಂಥ ಸಭಾಧ್ಯಕ್ಷರನ್ನು ಕಂಡಿಲ್ಲ. ಕೆ.ಎಚ್. ರಂಗನಾಥ, ಎಸ್.ಎಂ. ಕೃಷ್ಣ, ಡಿ.ಬಿ. ಚಂದ್ರೇಗೌಡ, ರಮೇಶಕುಮಾರ್ ಅವರಂಥ ಹಿರಿಯರು ಸಭಾಧ್ಯಕ್ಷರಾಗಿ ಕೆಲಸ ಮಾಡಿದರೂ ಬಾಳಿಗಾ ಮಟ್ಟಕ್ಕೆ ಏರಲು ಅವರಿಗೆ ಆಗಲಿಲ್ಲ. ಇದಕ್ಕೆ ಕಾರಣ, ಶಾಸಕರಾಗಿ ಆಯ್ಕೆಯಾದವರ 'ಮಟ್ಟ'ವೂ ಇರಬಹುದು. ಇಂದು ಸದನಗಳು ಅನಿಯಂತ್ರಿತವಾಗಿಯೇ ನಡೆಯುತ್ತಿವೆ. ಸಭಾಧ್ಯಕ್ಷ ಅಥವಾ ಸಭಾಪತಿ ಮೂಕ ಪ್ರೇಕ್ಷಕನಾಗಿ ಇರುವುದೇ ಹೆಚ್ಚು. ಸದಸ್ಯರು ತಮ್ಮ ಆಸನದಲ್ಲಿ ನಿಂತು ಮಾತನಾಡುವುದಕ್ಕಿಂತ ಸಭಾಧ್ಯಕ್ಷರ ಮುಂದಿನ ಅಂಗಳಕ್ಕೆ ಬರುವುದಕ್ಕೆ ಹೆಚ್ಚು ಆತುರರಾಗಿರುವಂತೆ ಕಾಣುತ್ತದೆ. ಅವರಿಗೆ ಮೇಲ್ಪಂಕ್ತಿಯಾಗಿ ವಿರೋಧ ಪಕ್ಷದ ನಾಯಕರೇ ಇರುತ್ತಾರೆ; ಅವರಿಗೆ ಈ ಅಂಗಳ ಇನ್ನೂ ಹತ್ತಿರ! ಒಂದು ಸಾರಿ ಹೀಗೆ ಸದಸ್ಯರು ಅಂಗಳಕ್ಕೆ ಬಂದರೆ ಮುಗಿಯಿತು, ಸದನದ 'ಆರ್ಡರ್' ಹೊರಟು ಹೋಗುತ್ತದೆ. ಯಾರು ಆಡಿದ ಮಾತೂ ದಾಖಲೆಗೆ ಹೋಗುವುದಿಲ್ಲ. ದಾಖಲೆಗೆ ಹೋಗದ ಮಾತು ವರದಿಯೂ ಆಗುವುದಿಲ್ಲ. ಅಂಗಳದಲ್ಲಿ ಕೂಗಾಟ, ಅರಚಾಟಗಳಿಗೆ ಮಾತ್ರ ಅವಕಾಶ. ಅದು ಒಂದು ಅರ್ಥದಲ್ಲಿ ಕಂಠಶೋಷಣೆ ಮಾತ್ರ. ಕಂಠಶೋಷಣೆ ಏಕೆ ಎಂದರೆ ಇಂಥ ಧರಣಿಗಳ ಮೂಲಕ ಸರ್ಕಾರವನ್ನು ಮಣಿಸಿದ ನಿದರ್ಶನಗಳು ವಿರಳಾತಿ ವಿರಳ.

ಇಂಥ ತೋಳ್ಬಲ, ಕಂಠಬಲವನ್ನು ತಪ್ಪಿಸಬೇಕು ಎಂದೇ ಸಂಸದೀಯ ನಡವಳಿಕೆಗೆ ಕೆಲವು ಸೂತ್ರಗಳು ಇವೆ. ಸಭಾಧ್ಯಕ್ಷರ ಅನುಮತಿ ಪಡೆದೇ ಮಾತನಾಡಬೇಕು. ಒಬ್ಬ ಸದಸ್ಯರು ಎದ್ದು ನಿಂತು ಮಾತನಾಡುವಾಗ ಇನ್ನೊಬ್ಬರು ಮಾತನಾಡಬಾರದು ಮಾತನಾಡುವ ಸದಸ್ಯರು ಕೂಡ ಸಭಾಧ್ಯಕ್ಷರನ್ನು ಉದ್ದೇಶಿಸಿಯೇ ಮಾತನಾಡಬೇಕು. ಯಾರಾದರೂ ಮಧ್ಯಪ್ರವೇಶ ಮಾಡಬೇಕಾಗಿದ್ದರೆ ಆಗ ಮಾತನಾಡುತ್ತಿರುವ ಸದಸ್ಯರಿಗೆ 'ಈಲ್ಡ್' ಆಗುವಂತೆ ಮನವಿ ಮಾಡಿಕೊಳ್ಳಬೇಕು. ಒಬ್ಬ ಸದಸ್ಯರು ಮಾತನಾಡುತ್ತಿದ್ದರೆ ಅವರ ಮತ್ತು ಸಭಾಧ್ಯಕ್ಷರ ನಡುವೆ ಹಾಯ್ದು ಇನ್ನೊಬ್ಬ ಸದಸ್ಯರು ಅಡ್ಡಾಡಬಾರದು. ಸದಸ್ಯರು ತಮ್ಮ ಜಾಗದಿಂದಲೇ ಮಾತನಾಡಬೇಕು ಇತ್ಯಾದಿ... ಈಗ ಸಭಾಧ್ಯಕ್ಷರ ಅನುಮತಿ ಕೇಳಿ ಯಾರು ಮಾತನಾಡುತ್ತಾರೆ? ಒಂದೇ ಸಾರಿ ಗುಂಪಾಗಿ ಎದ್ದು ನಿಂತು 'ಹೋ' ಎಂದು ಕೂಗುವುದೇ ಈಗ ಮಾತುಗಾರಿಕೆ ಎನ್ನುವಂತಾಗಿದೆ ಅಥವಾ ಇನ್ನೊಬ್ಬರು ಮಾತನಾಡುವುದಕ್ಕೆ ಅಡ್ಡಿ ಮಾಡುವುದೂ ಒಂದು ಹೆಚ್ಚುಗಾರಿಕೆ ಆಗಿದೆ.

ಇದು ತನ್ನ ವಾದವನ್ನು ಸಮರ್ಥವಾಗಿ ಮಂಡಿಸಲು ಆಗದ ದೌರ್ಬಲ್ಯವೇ? ವಾಗ್ಮಿತೆಯ ಕೊರತೆಯೇ ಅಸಂಸದೀಯ ಪದಗಳನ್ನು ಬಳಸಬಾರದು ಎಂಬ ನಿರ್ಬಂಧವಿದ್ದರೂ ಸಣ್ಣ ಪುಟ್ಟ ಟೀಕೆಗಳನ್ನು ಸಹಿಸುವ ಔದಾರ್ಯವೂ ಈಗ ಹೊರಟು ಹೋದಂತಿದೆ. ಮೊನ್ನೆಯ ಅಧಿವೇಶನದಲ್ಲಿ 'ಹುಚ್ಚುಚ್ಚಾರ' ಎಂಬ ಪದ ಬಳಕೆ ಇಡೀ ಕಲಾಪವನ್ನೇ ಹಾಳು ಮಾಡಿತು. ಈ ಪದವನ್ನು ಯಾರೇ ಬಳಸಿರಲಿ, ಅದು ಅಂಥ ಅಸಂಸದೀಯ ಪದವೇ? ಆ ಪದ ಬಳಸಿದವರಿಗೆ 'ನೀವೂ ಹುಚ್ಚುಚ್ಚಾರ ಮಾತನಾಡುತ್ತಿದ್ದೀರಿ' ಎಂದು ಪ್ರತ್ಯುತ್ತರ ಕೊಟ್ಟಿದ್ದರೆ ಮುಗಿದೇ ಹೋಗುತ್ತಿತ್ತಲ್ಲ?

ವಿಧಾನಸಭೆ ಅಥವಾ ಲೋಕಸಭೆಗೆ ಆಯ್ಕೆಯಾಗಿ ಹೋಗುವವರಿಗೆ ಯಾವುದೇ ವಿದ್ಯಾರ್ಹತೆಯನ್ನು ನಿಗದಿ ಮಾಡಿಲ್ಲ. ಈಚೀಚೆಗಂತೂ ಅವರ ಅರ್ಹತೆಗಳು ಬೇರೆಯೇ ಇವೆ! ಅದು ಪ್ರಜಾಪ್ರಭುತ್ವದ ವೈಶಿಷ್ಟ್ಯ. ಅದಕ್ಕೆ ಉಪಾಯವಿಲ್ಲ. ಆದರೆ, ಒಂದು ಸಾರಿ ಆಯ್ಕೆಯಾದ ನಂತರ ಅವರಿಗೆ ತರಬೇತಿ ಕೊಡುವ ವ್ಯವಸ್ಥೆಯೇನಾದರೂ ಇದೆಯೇ? ಇದ್ದರೆ ಅದು ಸರಿಯಾಗಿ ನಡೆಯುತ್ತಿದೆಯೇ? ಶಾಸಕ ಅಥವಾ ಸಂಸದನಾಗಿ ಪ್ರಮಾಣ ವಚನ ಸ್ವೀಕರಿಸುವಾಗ ಕೊಡುವ ನಿಯಮದ ಪುಸ್ತಕವನ್ನು ಎಷ್ಟು ಜನ ತೆಗೆದು ನೋಡುತ್ತಾರೆ? ಓದುತ್ತಾರೆ? ಸದನದ ಕಲಾಪದಲ್ಲಿ ಭಾಗವಹಿಸುವುದಕ್ಕಿಂತ ಹೆಚ್ಚಿಗೆ ಸಚಿವರ ಹತ್ತಿರ ಚೀಟಿ (ವರ್ಗಾವಣೆ?) ಹಿಡಿದುಕೊಂಡು ಓಡಾಡಿ ಕೆಲಸ ಮಾಡಿಸಿಕೊಳ್ಳುವುದರಲ್ಲಿಯೇ ಅವರಿಗೆ ಏಕೆ ಆಸಕ್ತಿ? ಪ್ರಶ್ನೋತ್ತರ ಅವಧಿ (ಇದರ ಅವಧಿ ಒಂದು ಗಂಟೆ ಮಾತ್ರ) ಯಾವತ್ತಾದರೂ ಒಂದು ಗಂಟೆಯಲ್ಲಿ ಮುಗಿದುದು ಉಂಟೇ? ಈ ಅವಧಿ ಮುಗಿದ ನಂತರ ಇಡೀ ಸದನ ಏಕೆ ಖಾಲಿ ಖಾಲಿ ಆಗುತ್ತದೆ? ವಿಧಾನಸಭೆಗೆ ಆರಿಸಿ ಬಂದ 224 ಜನ ಶಾಸಕರ ಪೈಕಿ ಐದು ವರ್ಷದ ತಮ್ಮ ಅವಧಿಯಲ್ಲಿ ಎಷ್ಟು ಜನ ಬಾಯಿ ತೆರೆದು ಮಾತನಾಡುತ್ತಾರೆ? ಮಾತನಾಡಲು ಅವರಿಗೆ ಏಕೆ ನಾಚಿಕೆ? (ರಮೇಶಕುಮಾರ್ ತಮ್ಮ ಸ್ಪೀಕರ್ ಅವಧಿ ಮುಗಿದ ನಂತರ ಎಷ್ಟು ಜನ ಆ ಐದು ವರ್ಷಗಳ ಅವಧಿಯಲ್ಲಿ ಬಾಯಿ ಬಿಡಲೇ ಇಲ್ಲ ಎಂಬ ಪಟ್ಟಿ ಕೊಟ್ಟಿದ್ದರು!)

ಲೋಕಸಭೆಯಲ್ಲಿ ಪ್ರತಿವರ್ಷ ಅತ್ಯುತ್ತಮ ಸಂಸದೀಯ ಪಟು ಪ್ರಶಸ್ತಿ ಕೊಡುತ್ತಾರೆ. ಕರ್ನಾಟಕದಲ್ಲಿಯೂ ಇಂಥ ಒಂದು ಪ್ರಶಸ್ತಿಯನ್ನು ಏಕೆ ಕೊಡಬಾರದು? ಅದು ಒಬ್ಬ ಶಾಸಕನಿಗೆ ಸಲ್ಲುವ ದೊಡ್ಡ ಗೌರವ. ಮಲ್ಲಿಕಾರ್ಜುನ ಖರ್ಗೆ ಕೆಳಮನೆ ಸದಸ್ಯರಾಗಿದ್ದ ಅವಧಿಯುದ್ದಕ್ಕೂ ಬೇಸರ ಮಾಡಿಕೊಳ್ಳದೇ ಸದನದಲ್ಲಿ ಗಟ್ಟಿಯಾಗಿ ಕುಳಿತು ಕೊಳ್ಳುತ್ತಿದ್ದರು. ಕೊನೆಯ ಪಕ್ಷ ಹಾಗೆ ಕುಳಿತುಕೊಳ್ಳುವ ತಾಳ್ಮೆಯಾದರೂ ಶಾಸಕರಿಗೆ ಏಕೆ ಇಲ್ಲ? ಕಲಾಪವನ್ನು ಸೂಕ್ಷ್ಮವಾಗಿ ಗಮನಿಸುವ, ಹಿಂದಿನ ಕಲಾಪದ ಪುಸ್ತಕಗಳನ್ನು ಓದುವ ಮೂಲಕ ಕಲಿಯುವುದು ಬೇಕಾದಷ್ಟು ಇದೆ. ಈಗಿನ ಕಲಾಪ ವೈಖರಿಯಿಂದ ಬೇಸತ್ತ, ಈ ಸದನಕ್ಕೆ ಏಕಾದರೂ ಬಂದೆವಪ್ಪ ಎಂದು ವಿಷಾದ ಪಡುವ ಸಜ್ಜನ ಸದಸ್ಯರು ಇಲ್ಲ ಎಂತಲ್ಲ. ದುರದೃಷ್ಟ ಎಂದರೆ ಅವರಿಗೂ ಬಾಯಿಯಿಲ್ಲ! ಈಗ ಮಾರಾಮಾರಿಯ ಅಖಾಡ ಆಗಿರುವ ಸದನಗಳನ್ನು ಮಾತಿನ ಮನೆಯಾಗಿ ಮಾಡಲು ಹೊರಟಿರುವ ಸುರೇಶಕುಮಾರ್ ಅವರಿಗೆ ಯಶ ಸಿಗಲಿ; ಏಕೆಂದರೆ ಅವರು ಸಂಸದೀಯ ವ್ಯವಸ್ಥೆಗೆ ಅರ್ಥ ತರಬೇಕು ಎಂದು ಹೊರಟಿದ್ದಾರೆ.

# ಇರಬೇಕು ಇಂಥ ಜಿಲ್ಲಾಧಿಕಾರಿ

ಇದು ಸಾಧ್ಯವೇ? ಎಲ್ಲಾದರೂ ಉಂಟೇ? ಒಬ್ಬ ಮನುಷ್ಯ ಏನು ಮಾಡಿಯಾನು ಎಂದೆಲ್ಲ ಅನುಮಾನ ಪಡುವ ಜನರು ಒಂದು ಸಾರಿ ಬೀದರ್‌ಗೆ ಹೋಗಿ ಬರಬೇಕು; ಅದೇ ಒಬ್ಬ ವ್ಯಕ್ತಿ ಏನು ಮಾಡಲು ಸಾಧ್ಯ ಎಂದು ಕಣ್ಣಾರೆ ನೋಡಿ ನಂಬಬಹುದು.

ಬೀದರ್, ಬೆಂಗಳೂರಿನಿಂದ ಬಹುದೂರ (729 ಕಿ.ಮೀ) ಅಭಿವೃದ್ಧಿಯಿಂದ ಮತ್ತೂ ದೂರ. 'ದೊರೆ'ಯ ದೃಷ್ಟಿಯಿಂದ ದೂರ ಇರುವ ಎಲ್ಲ ಊರುಗಳ ಕಥೆಯದು. ಕೇವಲ ಎರಡು ವರ್ಷಗಳ ಹಿಂದೆ ಬೀದರ್ ಕಥೆ ಭಿನ್ನವಾಗಿರಲಿಲ್ಲ. ಅದು ಒಂದು ಶಾಪಗ್ರಸ್ತ ಊರು ಎಂದು ಹೆಸರು ಮಾಡಿತ್ತು. ಊರಿನಲ್ಲಿ ಎಲ್ಲೆಂದರಲ್ಲಿ ಕೋಟೆ ಕೊತ್ತಲಗಳು, ಕಂದಕಗಳು, ಭಿನ್ನ, ಭಗ್ನ ಅವಶೇಷಗಳು. ಊರಿನ ಚಿತ್ರವೂ ಹಾಗೆಯೇ. ಉಸಿರುಗಟ್ಟುವಷ್ಟು ಇಕ್ಕಟ್ಟಾದ ರಸ್ತೆಗಳು, ಆ ರಸ್ತೆಗಳೋ ದೂಳು ದೂಳು. ಬೀದಿ ದೀಪಗಳು ಪತ್ತೆಯೇ ಇಲ್ಲ. ರಾತ್ರಿಯಾದರೆ ಸಾಕು. ಇಡೀ ಊರು ಜಂಗಲ್ ತರಹ. ಮಹಿಳೆಯರ ಸರಗಳು, ಪುರುಷರ ಕೈಗಳ ಮೊಬೈಲ್‌ಗಳು ಕಳ್ಳರ ಪಾಲು. ಸಂಜೆ ವಿರಮಿಸೋಣ ಎಂದರೆ ಪಾರ್ಕುಗಳು ಇಲ್ಲ. ಪಾರ್ಕು ಎಂದರೆ

ಏನು ಎಂದು ಕೇಳುವ ಕಾಲ ಅದು. ಇಂಥ ಊರಿನಲ್ಲಿ ಶಿಕ್ಷಣ ಹೇಗಿರಬಹುದು? ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಕೊನೆಯ ರ್‍ಯಾಂಕ್ ಈ ಜಿಲ್ಲೆಗೇ ಕಟ್ಟಿಟ್ಟಿದ್ದು. ಅದನ್ನು ಮುರಿಯುವವರು ಯಾರು?!

ಈಗ ಬೀದರ್ ಬದಲಾಗುತ್ತಿದೆ. ಊರಿನಲ್ಲಿ ಅತ್ಯಂತ ಕಿರಿದಾದ ರಸ್ತೆಯ ಅಗಲವೇ 60 ಅಡಿ! ಮುಖ್ಯ ರಸ್ತೆಗಳ ಅಗಲ ನೂರು ಅಡಿಗೂ ಹೆಚ್ಚು!! ಎಲ್ಲ ಬೀದಿಗಳಲ್ಲಿ ರಾತ್ರಿ ಇಡೀ ಉರಿಯುವ ದೀಪಗಳು. ಒಂದಲ್ಲ ಎರಡಲ್ಲ 60 ಉದ್ಯಾನಗಳು. ಒಂದು ಅಂತರ್ ರಾಷ್ಟ್ರೀಯ ಮಟ್ಟದ ಈಜುಕೊಳ, ಅದೇ ಮಟ್ಟದ ಒಂದು ಕ್ರೀಡಾಂಗಣ. ಒಂದು ಸಾಂಸ್ಕೃತಿಕ ಸಂಕೀರ್ಣ. (ಉದ್ಯಾನ, ಈಜುಕೊಳ, ಕ್ರೀಡಾಂಗಣ, ಸಾಂಸ್ಕೃತಿಕ ಸಂಕೀರ್ಣದ ಕೆಲಸ ಇನ್ನೂ ಆಗಬೇಕಿದೆ) ಇದು ಬರೀ ಬೀದರ್‌ನಲ್ಲಿ ಆದ ರೂಪಾಂತರವಲ್ಲ. ಜಿಲ್ಲೆಯ ಎಲ್ಲ ಐದು ತಾಲ್ಲೂಕುಗಳಲ್ಲಿಯೂ ಇದೇ ರೂಪಾಂತರ.

ಇದೆಲ್ಲ ಹೇಗೆ ಸಾಧ್ಯವಾಯಿತು? ಸಾಧ್ಯವಾದುದು ಒಬ್ಬ ವ್ಯಕ್ತಿಯಿಂದಲೇ. ಆ ವ್ಯಕ್ತಿ ಬೀದರ್ ಜಿಲ್ಲಾಧಿಕಾರಿ ಹರ್ಷ ಗುಪ್ತಾ ಅವರದು ದೆಹಲಿ ಮೂಲ. ಮನಸ್ಸು ಮಾಡಿದರೆ ಮಾರ್ಗ ಇರುತ್ತದೆ. ಗುರಿ ಸರಿ ಇದ್ದರೆ ಸಾಧನವೂ ಜತೆಯಾಗುತ್ತದೆ. ದಿಟ್ಟವಾಗಿ, ಪ್ರಾಮಾಣಿಕವಾಗಿ ನಡೆದುಕೊಂಡರೆ ಜನರೂ ಜತೆಯಾಗುತ್ತಾರೆ ಎಂಬುದನ್ನು ಗುಪ್ತಾ ಬರೀ ಬೀದರ್‌ಗೆ ಮಾತ್ರವಲ್ಲ ಇಡೀ ರಾಜ್ಯಕ್ಕೆ ತೋರಿಸಿ ಕೊಟ್ಟಿದ್ದಾರೆ. ಅವರ ಹಾಗೆ ದೈತ್ಯಶಕ್ತಿಯಿಂದ ನಡೆದುಕೊಂಡ ಅಧಿಕಾರಿಗಳು ವಿರಳ. ಅವರಿಗೆ ಅಧಿಕಾರದಲ್ಲಿ ಇರುವವರನ್ನು, ಕಾನೂನು ಮುರಿಯುವವರನ್ನು ಎದುರು ಹಾಕಿಕೊಳ್ಳುವುದು ಎಂದರೆ ಇಷ್ಟ. ತಿಳಿದೋ, ತಿಳಿಯದೆಯೋ, ಮನುಷ್ಯ ಸಹಜವಾದ ಅತಿಕ್ರಮಣ ಆಸೆಗೆ ಬಲಿಯಾಗಿಯೋ ಕಾನೂನು ಮುರಿದ ಸಾಮಾನ್ಯರು, 'ನಮ್ಮಿಂದ ತಪ್ಪಾಗಿದೆ' ಎಂದರೆ ಅವರಿಗೆ ಕಾನೂನು ಮೀರಿಯೂ ಸಹಾಯ ಮಾಡುವುದ ರಲ್ಲಿಯೂ ಹರ್ಷಗುಪ್ತಾ ಮುಂದು.

ಕಲ್ಯಾಣ ಚಾಲುಕ್ಯರಿಂದ ಹಿಡಿದು 14ನೇ ಶತಮಾನದ ಬಹಮನಿ, ಬರೀದ್‌ಶಾಹಿ ಅರಸರವರೆಗೆ ಅನೇಕ ರಾಜರ, ಪ್ರಧಾನಿಗಳ ಆಡಳಿತ ಕಂಡ ಬೀದರ್ ಒಂದು ಕಾಲದಲ್ಲಿ ಮಾದರಿ ನಗರ ಎಂದು ಹೆಸರಾಗಿತ್ತು. ಬೀದರ್ ಅತ್ಯಂತ ಹಳೆಯ ನಗರಗಳಲ್ಲಿ ಒಂದು. ಈ ನಗರದ ಯೋಜನೆಯನ್ನು ಮಾದರಿಯಾಗಿ ಇಟ್ಟುಕೊಂಡೇ ಗೋಲ್ಕೊಂಡ, ಬೆಂಗಳೂರಿನಂಥ ನಗರಗಳನ್ನು ನಿರ್ಮಿಸಲಾಯಿತು ಎಂಬ ಇತಿಹಾಸ ಓದಿದವರಿಗೆ ಹರ್ಷ ಗುಪ್ತಾ ಜಿಲ್ಲಾಧಿಕಾರಿ ಆಗಿ ಬರುವ ವರೆಗಿನ ಬೀದರ್, ದುಃಸ್ವಪ್ನ ದಂತೆ ಕಾಣುತ್ತಿತ್ತು. ಇಲ್ಲಿಗೆ ವರ್ಗವಾದ ಅಧಿಕಾರಿಗಳು ಬರುತ್ತಲೇ ಇರಲಿಲ್ಲ. ಅನೇಕ ಮುಖ್ಯಮಂತ್ರಿಗಳು ಬೀದರ್‌ಗೆ ಬರದೆಯೇ ತಮ್ಮ ಅಧಿಕಾರ ಅವಧಿ ಮುಗಿಸಿದ ನಿದರ್ಶನಗಳಿಗೂ ಕೊರತೆಯಿಲ್ಲ. ಈಗಿನ ಬೀದರ್ ಹೇಗಿದೆ ಎಂದು ಗೊತ್ತಿಲ್ಲದೆಯೋ ಏನೋ ಈಗಲೂ ಜಿಲ್ಲೆಯಲ್ಲಿ 450 ಗೆಜೆಟೆಡ್ ಹುದ್ದೆಗಳು ಖಾಲಿಯೇ ಇವೆ. 'ಅಲ್ಲಿಗೆ ಯಾರು ಹೋಗುತ್ತಾರೆ' ಎಂಬ ಉದಾಸೀನ ಅಥವಾ ಭಯ.

2007ರ ಸೆಪ್ಟೆಂಬರ್‌ನಲ್ಲಿ ಹರ್ಷ ಗುಪ್ತಾ ಜಿಲ್ಲಾಧಿಕಾರಿ ಆಗಿ ವರ್ಗವಾದರು. ಅದಕ್ಕಿಂತ ಮುಂಚೆ ಅವರು ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಜಂಟಿ ಆಯುಕ್ತರಾಗಿದ್ದರು.

ಬೀದರ್‌ನಲ್ಲಿ ಒಂದು ಸರ್ಕಾರಿ ವೈದ್ಯಕೀಯ ಕಾಲೇಜು ಇದೆ. ಪಕ್ಕದಲ್ಲಿಯೇ ಆಸ್ಪತ್ರೆಯೂ ಇದೆ. ಮಧ್ಯದಲ್ಲಿ ಉದಗೀರ್-ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿ. ಭಾರತೀಯ ವೈದ್ಯಕೀಯ ಮಂಡಳಿ (ಎಂ.ಸಿ.ಐ) ಅಧಿಕಾರಿಗಳು ತಪಾಸಣೆಗೆ ಬರುವಾಗಲೆಲ್ಲ ಈ ರಸ್ತೆಯನ್ನು ಎರಡೂ ಕಡೆ ಬಂದ್ ಮಾಡಿ ಮಂಡಳಿಯ ಮಾನ್ಯತೆಯನ್ನು ಕಾಲೇಜಿಗೆ ದೊರಕಿಸುವುದು. ಅವರು ಅತ್ತ ಹೋಗುತ್ತಿದ್ದಂತೆಯೇ ಇತ್ತ ರಸ್ತೆಯನ್ನು ಮುಕ್ತ ಮಾಡುವುದು ರೂಢಿಯಾಗಿತ್ತು. ಮಂಡಳಿಯ ಅಧಿಕಾರಿಗಳೂ ಇದನ್ನು ನೋಡಿ ನೋಡಿ ಬೇಸತ್ತು 'ಕಾಲೇಜು ಮತ್ತು ಆಸ್ಪತ್ರೆ ಎರಡೂ ಒಂದೇ ಆವರಣದಲ್ಲಿ ಇರಬೇಕು. ಮಧ್ಯದಲ್ಲಿ ರಸ್ತೆ ಇರಕೂಡದು. ನೀವು ರಸ್ತೆಯನ್ನು ಬಂದ್ ಮಾಡದಿದ್ದರೆ ಕಾಲೇಜಿನ ಮಾನ್ಯತೆ ನವೀಕರಣ ಆಗದು' ಎಂದು ತಾಕೀತು ಮಾಡಿ ಹೊರಟು ಹೋದರು. ಅದು ಬೀದರ್ ಅಭಿವೃದ್ಧಿಯ ಟರ್ನಿಂಗ್ ಪಾಯಿಂಟ್ ಕೂಡ ಆಯಿತು.

ಹರ್ಷ ಗುಪ್ತಾ ರಾತ್ರೋ ರಾತ್ರಿ ಕಾರ್ಯಾಚರಣೆ ಮಾಡಿ ಪಕ್ಕದ ಬೈಪಾಸ್ ರಸ್ತೆಯಲ್ಲಿನ ಅತಿಕ್ರಮಣವನ್ನೆಲ್ಲ ಒಡೆದು ಹಾಕಿದರು. ಮೊದಲು ಅವರು ದಾಳಿ ನಡೆಸಿದ್ದು ಗಣ್ಯ, ಅತಿಗಣ್ಯ ವ್ಯಕ್ತಿಗಳು ಮಾಡಿಕೊಂಡ ಅತಿಕ್ರಮಣದ ಮೇಲೆ. ಅತ್ತ ಜೆ.ಸಿ.ಬಿ. ಯಂತ್ರಗಳು ದಾಳಿ ಇಡುತ್ತಿದ್ದಂತೆಯೇ, ಸಾಮಾನ್ಯ ಜನರೆಲ್ಲ ಜಿಲ್ಲಾಧಿಕಾರಿಗಳ ಬಳಿ ಬಂದು ತಾವು ಮಾಡಿಕೊಂಡ ಅತಿಕ್ರಮಣವನ್ನು ತಾವೇ ತೆರವು ಮಾಡುವುದಾಗಿ ಹೇಳಿದರು. ಅದರಂತೆಯೇ ನಡೆದುಕೊಂಡರು. ಇದು ಒಂದು ರೀತಿಯಲ್ಲಿ 'ರಕ್ತ ರಹಿತ ಕ್ರಾಂತಿ'ಯಂತೆ ನಡೆದು ಹೋಯಿತು. ಬೀದರ್‌ನಲ್ಲಿ ಆದುದು ಬಸವಕಲ್ಯಾಣ, ಔರಾದ್ ಮುಂತಾದ ತಾಲ್ಲೂಕುಗಳಲ್ಲಿ ಆಗಲು ತಡವಾಗಲಿಲ್ಲ. ತೆರವು ಮಾಡಲು ಒಪ್ಪದೆ ಕೋರ್ಟು, ಕಾನೂನು, ತಡೆಯಾಜ್ಞೆ ಎಂದೆಲ್ಲ ತರಲೆ ಮಾಡಿದವರಿಗೆ ಕೋರ್ಟ್, ಕಾನೂನು ಮೂಲಕವೇ ಜಿಲ್ಲಾಧಿಕಾರಿ ಉತ್ತರ ಕೊಟ್ಟರು!

ಅತಿಕ್ರಮಣವನ್ನು ತೆರವು ಮಾಡಿದ್ದೇನೋ ಆಯಿತು. ಆದರೆ, ರಸ್ತೆ ಅಗಲ ಮಾಡಲು ಜಿಲ್ಲಾಧಿಕಾರಿ ಕಚೇರಿಯ ಬೊಕ್ಕಸವೇನೂ ತುಂಬಿ ತುಳುಕುತ್ತಿರಲಿಲ್ಲ. ಪರಿಚಯದ ಕೆಲವರು ಗುತ್ತಿಗೆದಾರರಿಗೆ ಕರೆದು 'ನಂತರ ದುಡ್ಡು ಕೊಡುತ್ತೇನೆ. ಈಗ ಕೆಲಸ ಮಾಡಿ' ಎಂದು ಹರ್ಷ ಗುಪ್ತಾ ದಬಾಯಿಸಿದರು. 'ಜಿಲ್ಲಾಧಿಕಾರಿಯನ್ನು ಎಲ್ಲಿ ಎದುರು ಹಾಕಿಕೊಳ್ಳುವುದು' ಎಂದು ಗುತ್ತಿಗೆದಾರರೂ ಮೆತ್ತಗೆ ಕೆಲಸ ಶುರು ಮಾಡಿದರು. ಊರಿನ ಅಭಿವೃದ್ಧಿಗಾಗಿ ದುಡ್ಡು ಎಲ್ಲಿಂದ ತರುವುದು ಎಂದು ಗುಪ್ತಾ ತಲೆ ಕೆದರಿಕೊಳ್ಳುತ್ತಲೇ, ನಾಂದೇಡ್‌ನಲ್ಲಿ ಸಿಖ್‌ರ 'ಗುರು ಗ್ರಂಥ ಸಾಹಿಬ್'ಗೆ ಪಟ್ಟ ಕಟ್ಟಿದ 300ನೇ ವರ್ಷೋತ್ಸವದ ಅದ್ದೂರಿ ಸಿದ್ಧತೆ ನೋಡಲು ಹೋದರು. ಅಲ್ಲಿಗೆ ಬಂದ ಸಿಖ್ ಭಕ್ತರು ಲಕ್ಷಾಂತರ ಸಂಖ್ಯೆಯಲ್ಲಿ ಬೀದರ್‌ನ ಗುರುನಾನಕ್ ಝೀರಾದ ದರ್ಶನಕ್ಕೂ ಬರುವವರಿದ್ದರು. ನಾಂದೇಡ್ ನಗರದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ನರ್ಮ್ ಯೋಜನೆಯಡಿ 1,400 ಕೋಟಿ ರೂಪಾಯಿ ಹಣ ಕೊಟ್ಟಿತ್ತು. ಸಂಬಂಧಪಟ್ಟ ಕಡತಗಳನ್ನೆಲ್ಲ ತರಿಸಿಕೊಂಡು ಗುಪ್ತಾ ಅವರು ನಾಂದೇಡ್ ಮಾದರಿಯಲ್ಲಿ ಬೀದರ್ ಅಭಿವೃದ್ಧಿಗಾಗಿ ಹೆಚ್ಚುವರಿ ಕೇಂದ್ರ ನೆರವಿಗೆ (ಅಡಿಷನಲ್ ಸೆಂಟ್ರಲ್ ಅಸಿಸ್ಟನ್ಸ್) ಕೋರಿಕೆ ಸಿದ್ಧಪಡಿಸಿದರು.

ರಾಜ್ಯದ ಯೋಜನಾ ಗಾತ್ರಕ್ಕೆ ಅನುಮತಿ ಪಡೆಯಲು ಕೇಂದ್ರ ಯೋಜನಾ ಆಯೋಗದ ಸಭೆಗೆ ಹೋಗಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಮುಖ್ಯ ಕಾರ್ಯದರ್ಶಿ ಕೆ. ಸುಧಾಕರ ರಾವ್ ಈ ಕೋರಿಕೆಯನ್ನು ಆಯೋಗದ ಉಪಾಧ್ಯಕ್ಷ ಮೊಂಟೆಕ್‌ಸಿಂಗ್ ಎದುರು ಇಟ್ಟರು. ಹರ್ಷ ಗುಪ್ತಾ ಸಿದ್ಧಪಡಿಸಿದ ಯೋಜನೆಯನ್ನು ಮೆಚ್ಚಿಕೊಂಡ ಮೊಂಟೆಕ್‌ಸಿಂಗ್ ರಾಜ್ಯದ ಯೋಜನಾ ಗಾತ್ರವನ್ನೇ 136 ಕೋಟಿ ರೂಪಾಯಿಗಳಷ್ಟು ಹಿಗ್ಗಲಿಸಿದರು. (ಮೊಂಟೆಕ್‌ಸಿಂಗ್ ಬೀದರ್‌ನ ಗುರುನಾನಕ್ ಝೀರಾದ ಭಕ್ತರೂ ಆಗಿರುವುದು ಕೆಲಸ ಹೂ ಎತ್ತಿದಷ್ಟು ಸುಲಭವಾಗಲು ಕಾರಣವಾಗಿರಬಹುದು!) ಬೀದರ್ ಅಭಿವೃದ್ಧಿಯ ಕನಸೂ ಹೂ ಎತ್ತಿದಷ್ಟು ಸುಲಭವಾಯಿತು.

ಒಳ್ಳೆಯ ಕೆಲಸಕ್ಕೆ ವಿರೋಧ ಇದ್ದೇ ಇರುತ್ತದೆ. ಮೂರು ಕಾಸಿನ ಕೆಲಸ ಮಾಡದ ರಾಜಕಾರಣಿಗಳಿಗಂತೂ ಇದು ನುಂಗಲಾಗದ ತುಪ್ಪ. ಅವರು ಜಿಲ್ಲಾಧಿಕಾರಿಯನ್ನು ಸುಮ್ಮನೇ ಬಿಟ್ಟಾರೆಯೇ? ವಿರೋಧ ಪಕ್ಷದಲ್ಲಿ ಇದ್ದವರು ಎಲ್ಲವನ್ನೂ ವಿರೋಧ ಮಾಡಲೇಬೇಕು. ಈಗ ಬಿಜೆಪಿಗೆ ಬರುವುದಕ್ಕಿಂತ ಮುಂಚೆ ಕಾಂಗ್ರೆಸ್‌ನಲ್ಲಿ ಇದ್ದ ಜಿಲ್ಲೆಯ ಮುಖಂಡರೊಬ್ಬರಿಗೆ ಜಿಲ್ಲಾಧಿಕಾರಿಯನ್ನು ಟೀಕಿಸುವು ದೊಡ್ಡ ಕೆಲಸ. ಆಗ, ಬಿಜೆಪಿಯ ಧುರೀಣರೆಲ್ಲ ಜಿಲ್ಲಾಧಿಕಾರಿ ಬೆಂಬಲಕ್ಕೆ ನಿಂತರು. ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿ ಚುನಾವಣೆಗೂ ನಿಂತ ಆ ಮುಖಂಡರು 'ಈ ಜಿಲ್ಲಾಧಿಕಾರಿ ಬೀದರ್‌ನಲ್ಲಿ ಹೇಗೆ ಇರುತ್ತಾನೆ ನೋಡಿಯೇ ಬಿಡುತ್ತೇನೆ' ಎಂದು ಬೆಂಗಳೂರು ಹಾದಿ ಹಿಡಿಯುತ್ತಿದ್ದಂತೆಯೇ ಕಾಂಗ್ರೆಸ್ ಧುರೀಣರು, 'ಜಿಲ್ಲಾಧಿಕಾರಿ ಯನ್ನು ವರ್ಗ ಮಾಡಿದರೆ ಬೀದರ್‌ನಲ್ಲಿ ರಕ್ತಪಾತ ಆಗುತ್ತದೆ' ಎಂದು ರಣಕಹಳೆ ಮೊಳಗಿಸಿದರು!

ಸರ್ಕಾರಿ ಕೆಲಸ ಎಂದ ಮೇಲೆ ವರ್ಗ ಇದ್ದೇ ಇರುತ್ತದೆ. ಹರ್ಷ ಗುಪ್ತಾ ಅವರಿಗೂ ಒಂದು ದಿನ ವರ್ಗ ಆಗಬಹುದು. ಆದರೆ, ಅವರು ಬೀದರ್ ಅಭಿವೃದ್ಧಿ ಪೂರ್ಣಗೊಳಿಸುವ ವರೆಗೆ ಸರ್ಕಾರ ಅವರನ್ನು ಮುಟ್ಟಬಾರದು. ಪತ್ನಿ ಹಿಮಾನಿ, ಆರ್ಯನ್ (9), ಅಹನ್ (4) ಎಂಬ ಪುಟ್ಟ ಸಂಸಾರದ ಗುಪ್ತಾ ಅವರಿಗೆ, ಇಷ್ಟೆಲ್ಲ ಕೆಲಸ ಮಾಡಬೇಕು ಎಂದು ನಿಮಗೆ ಏಕೆ ಅನಿಸಿತು ಎಂದು ಕೇಳಿದರೆ, 'ಇದೆಲ್ಲ ಆಗಬೇಕು ಎಂದು ಇಲ್ಲಿನ ಜನರೇ ಬಯಸಿದ್ದರು. ಅನೇಕ ಸಾರಿ ನಾವು ಮಾಡುವ ಒಳ್ಳೆಯ ಕೆಲಸಗಳಿಗೆ ಎಲ್ಲೆಲ್ಲಿಂದಲೋ ಸಹಾಯವೂ ಸಿಗುತ್ತದೆ. ಬಹುಶಃ ನನಗೂ ಹಾಗೆಯೇ ಆಯಿತು' ಎಂದು ನಮ್ರವಾಗಿ ಹೇಳುತ್ತಾರೆ. ದಿನಕ್ಕೆ 12–16 ಗಂಟೆ ಹೊತ್ತು ಗೊತ್ತಿಲ್ಲದೆ, ರಾತ್ರಿ ಹಗಲು ಎಂದು ತಿಳಿಯದೇ ದುಡಿಯುವ ಅವರಿಗೆ ಪತ್ನಿ ಹಿಮಾನಿ ಕೇಳುತ್ತಾರಂತೆ, 'ನಿಮಗೆ ಮನೆಯೂ ಒಂದು ಇದೆ ಎಂಬುದು ಗೊತ್ತಿದೆಯೇ' ಎಂದು. ಇದು ಒಂದು ರೀತಿಯಲ್ಲಿ ಆಕ್ಷೇಪ; ಇನ್ನೊಂದು ರೀತಿಯಲ್ಲಿ ಪ್ರಶಂಸೆ. ಇದಕ್ಕಿಂತ ಹೆಚ್ಚಿನ ಪ್ರಶಂಸೆ ಯಾವ ಗಂಡನಿಗೆ ಬೇಕು?!

■

# ಅಟ್ಟಾವರ ರಾಮದಾಸ್ ಎಂಬ ಅಪರಂಜಿ ಕನ್ನಡಿಗ

ಅವರು ಬಿ.ಎಂ.ಡಬ್ಲ್ಯು. ಕಾರಿನ ಒಡೆಯ. ಆದರೆ, ತಮ್ಮ ಹಳೆಯ ಸ್ಕೂಟರ್ ಮೇಲೆ ಕುಳಿತುಕೊಂಡು ಪ್ರತಿಮೆಯೊಂದರ ಸುತ್ತ ಸುತ್ತು ಹಾಕುತ್ತಲೇ ಇದ್ದರು. 12 ವರ್ಷಗಳ ಕನಸು ನನಸಾಗಿತ್ತು. ಅಂದು ಆಗಸ್ಟ್ 8ರ ರಾತ್ರಿ 10.45. ಅದೇ ವೇಳೆಗೆ ಇನ್ನೊಂದು ಕಡೆಯೂ ಮತ್ತೊಂದು ಪ್ರತಿಮೆ ಪೀಠದ ಮೇಲೆ ಪ್ರತಿಷ್ಠಾಪನೆಯಾಯಿತು.

ಸ್ಕೂಟರ್ ಮೇಲೆ ಹಾಗೆ ಭಾವುಕರಾಗಿ ಪ್ರತಿಮೆಯ ಪ್ರದಕ್ಷಿಣೆ ಹಾಕಿದವರು ಅಟ್ಟಾವರ ರಾಮದಾಸ್, ಚೆನ್ನೈನ ಅಯನಾವರಂನ ಕನ್ನಡ ಸಂಘದ ಆವರಣದಲ್ಲಿ ಪ್ರತಿಷ್ಠಾಪನೆಯಾದ ಪ್ರತಿಮೆ ಕುಲವಿಲ್ಲದ ಕವಿ ಸರ್ವಜ್ಞನದು. ಅಂದೇ ರಾತ್ರಿ ಬೆಂಗಳೂರಿನಲ್ಲಿ ಪ್ರತಿಷ್ಠಾಪನೆಯಾದ ಇನ್ನೊಂದು ಪ್ರತಿಮೆ ದಾರ್ಶನಿಕ ಕವಿ ತಿರುವಳ್ಳುವರ್ ಅವರದು.

ತಿರುವಳ್ಳುವರ್ ಪ್ರತಿಮೆ ಪ್ರತಿಷ್ಠಾಪನೆಯಾದ ಸಂದರ್ಭದಲ್ಲಿಯೇ ಚೆನ್ನೈನಲ್ಲಿಯೂ ಪ್ರತಿಮೆ ಅನಾವರಣ ಆಗಬೇಕು ಎಂಬ ಆಗ್ರಹಕ್ಕೆ ಪೂರಕವಾಗಿ ಎರಡೂ ಪ್ರತಿಮೆಗಳನ್ನು, ನಕ್ಷತ್ರಗಳು ಮಿನುಗುವ ಗಳಿಗೆಯಲ್ಲಿ ಪೀಠದ ಮೇಲೆ ನಿಲ್ಲಿಸುವ

ತೀರ್ಮಾನವನ್ನು ಬೆಂಗಳೂರಿನ ತಮಿಳರು ಮತ್ತು ಚೆನ್ನೈನ ಕನ್ನಡಿಗರು ಕೈಗೊಂಡರು. ಈಗ ಇದೆಲ್ಲ ಕಥೆ, ಇತಿಹಾಸ.

ಹೌದು, ಜೀವನ ಕಥೆಗಿಂತ ರೋಚಕವಾಗಿರುತ್ತದೆ. ಚೆನ್ನೈನಲ್ಲಿ ಸರ್ವಜ್ಞ ಕವಿಯ ಪ್ರತಿಮೆ ಅನಾವರಣ ಆಗಬೇಕು ಎಂದು ಹೆಚ್ಚೂ ಕಡಿಮೆ ಏಕಾಂಗಿಯಾಗಿ ಹೋರಾಡಿದ ಅಟ್ಟಾವರ ರಾಮದಾಸ್ ಅವರ ಜೀವನ, ಕಥೆಗಿಂತ ರೋಚಕವಾಗಿದೆ. ಅವರು ಹುಟ್ಟಿದ್ದು ಹಾಸನ ಜಿಲ್ಲೆ ದುದ್ದ ಹೋಬಳಿ ಅಟ್ಟಾವರದಲ್ಲಿ (1947 ಮಾರ್ಚ್ 24). ತಂದೆ ಶಾನುಭೋಗರು; ಅಂದರೆ ಬಡವರು ಎಂದು ಬೇರೆ ಹೇಳಬೇಕಿಲ್ಲ! ಹಾಗೂ ಹೀಗೂ ಕಷ್ಟಪಟ್ಟು ಓದಿದ್ದು ಡಿಪ್ಲೊಮಾ ಎಂಜಿನಿಯರಿಂಗ್, ಓದುವಾಗಲೇ ನಾಟಕದ ಗೀಳು, ಕ್ರಿಕೆಟ್ ಹುಚ್ಚು. ತಾತ ಹೇಳಿಕೊಟ್ಟಿದ್ದು ದೈವ ಭಕ್ತಿ. ಮನೆಯ ಬಳಿ ಊದುಬತ್ತಿ ಮಾರಲು ಬಂದ ಹುಡುಗಿಗೆ ಉಂಗುರವನ್ನೇ ಬಿಚ್ಚಿಕೊಟ್ಟು ಆ ಊದುಬತ್ತಿಯನ್ನು ದೇವರಿಗೆ ಬೆಳಗಿ ತಂದೆಯಿಂದ ಬೆತ್ತದ ರುಚಿ ಅನುಭವಿಸಿದ ಹುಚ್ಚು ಎನ್ನುವಂಥ ದೈವಭಕ್ತಿ.

ಯಗಚಿ ಹೊಳೆಯಲ್ಲಿ ತೇಲಿ ಹೋಗುತ್ತಿದ್ದ ಅಕ್ಕನ ಮಗ ಶೇಷಾದ್ರಿಯನ್ನು ಬದುಕಿಸಲು ಹೋಗಿ ತಾನೂ ಮುಳುಗಿ ಹೋಗುವ ಸಂದರ್ಭ. ಯಾರೋ ಬಂದು ಇಬ್ಬರನ್ನೂ ಒದ್ದು ದಡಕ್ಕೆ ತಳ್ಳಿದ್ದು ಮಾತ್ರ ನೆನಪು. ಒದ್ದು ಬದುಕಿಸಿದವನು ಭಗವಂತನೇ ಇರಬೇಕು ಎಂಬ ನಂಬಿಕೆ ಈಗಲೂ. ಉದ್ಯೋಗಕ್ಕಾಗಿ ಮುಂಬೈ, ಬರೋಡಾ ಎಂದೆಲ್ಲ ಅಲೆದಾಡಿ ಕೊನೆಗೆ ಚೆನ್ನೈನ ಮದ್ರಾಸ್ ರಿಫೈನರಿ ಕನ್‌ಸ್ಟ್ರಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದ ಅಣ್ಣ ನರಸಿಂಹ ಪ್ರಕಾಶ್ ಕೃಪೆಯಲ್ಲಿ ರೇಡಿಯೋಗ್ರಾಫರ್ ಆಗಿ ಬದುಕು ಆರಂಭ. ಆಗಲೂ ಬಿಡದ ಸಿನಿಮಾ ಹುಚ್ಚು. ಹತ್ತಿರದ ಶಾಮಲಾ ಸ್ಟುಡಿಯೊಕ್ಕೆ ಅಲೆದಾಟ. ನಟ ದ್ವಾರಕೀಶ್, ನಿರ್ದೇಶಕ ಭಾರ್ಗವ, ಹುಣಸೂರು ಕೃಷ್ಣಮೂರ್ತಿ ಅವರ ಒಡನಾಟ. ಸಿನಿಮಾ ಜತೆಗೆ ಹೋಂ ಸಿಕ್‌ನೆಸ್ ಕೂಡ ಕಾಡುತ್ತಿತ್ತು. ತಂದೆ-ತಾಯಿ ನೆನಪಾದ ಕೂಡಲೇ ಸತ್ಯಮಂಗಲ ಬಸ್ಸು ಹತ್ತಿ ಊರಿಗೆ ಓಡಿಬಿಡುವ ತವಕ. ಎಂಟು ಹತ್ತು ವರ್ಷಗಳ ಸತತ ಪರಿಶ್ರಮದ ನಂತರ, ಇಂಡಸ್ಟ್ರಿಯಲ್ ರೇಡಿಯೋಗ್ರಾಫಿಕ್ ಇನ್‌ಸ್ಪೆಕ್ಷನ್ ಎಂಬ ಅಟ್ಟಾವರರ ಕಂಪೆನಿಯನ್ನು ಅಣುವಿಜ್ಞಾನಿ ಎಂ.ಆರ್. ಶ್ರೀನಿವಾಸನ್ ಚೆನ್ನೈನಲ್ಲಿ ಉದ್ಘಾಟಿಸಿದರು. 'ನಾನು ಸಿನಿಮಾ ಫಿಲ್ಮಿನ ಬೆನ್ನು ಹತ್ತಿದ್ದರೆ ಹಾಳಾಗಿ ಹೋಗುತ್ತಿದ್ದೆ. ಕ್ಷ ಕಿರಣದ ಫಿಲ್ಮ್ ಬೆನ್ನು ಹತ್ತಿ ಬಚಾವಾದೆ' ಎನ್ನುತ್ತಾರೆ ರಾಮದಾಸ್!

ಪರಮಾಣು, ಉಷ್ಣವಿದ್ಯುತ್, ರಿಫೈನರೀಸ್ ಮತ್ತು ಪೆಟ್ರೋಕೆಮಿಕಲ್ಸ್ ಸ್ಥಾವರಗಳಲ್ಲಿ ಬಳಕೆಯಾಗುವ ಕೊಳವೆಗಳಲ್ಲಿನ ಸೋರಿಕೆಯನ್ನು ಕ್ಷಕಿರಣ ತಂತ್ರಜ್ಞಾನದ ಮೂಲಕ ಪತ್ತೆ ಮಾಡುವುದು ಈ ಕಂಪೆನಿಯ ಕೆಲಸ. ಪತ್ತೆ ಮಾಡಿ ಅದನ್ನು ಮುಚ್ಚುವುದಲ್ಲದೆ, ಆ ಕೊಳವೆಗಳ ಗುಣಮಟ್ಟ ಹೆಚ್ಚಿಸುವ ಕೆಲಸವನ್ನೂ ಕಂಪೆನಿ ಮಾಡುತ್ತದೆ. ಈಗ ಅವರ ಕಂಪೆನಿಯ ವಹಿವಾಟು ಸುಮಾರು 40 ಕೋಟಿ ರೂಪಾಯಿ. ಒಂದು ಕಾಲದಲ್ಲಿ ಅಟ್ಟಾವರ್ ಕುಟುಂಬಕ್ಕೆ ಒಂದು ಹೊತ್ತಿನ ಊಟಕ್ಕೂ ಗತಿ ಇರಲಿಲ್ಲ. ಒಂದು ಸಾರಿ ಅವರು ಬರೋಡಾಕ್ಕೆ ರೈಲಿನ ಟಾಯ್ಲೆಟ್ಟಿನಲ್ಲಿ ಕುಳಿತು, ಮಲಗಿ ಪ್ರಯಾಣ

ಮಾಡಿದ್ದರು. ಈಗ ಹೆಲಿಕಾಪ್ಟರ್‌ನಲ್ಲಿಯೂ ಪ್ರಯಾಣ ಸಲೀಸು. ಬದುಕು ಎಷ್ಟು ವಿಚಿತ್ರ ಅಲ್ಲವೇ?

ಈಗ ಅವರ ಕುಟುಂಬ ತಮಿಳುನಾಡು, ಕರ್ನಾಟಕ, ಕೇರಳ, ಆಂಧ್ರಪ್ರದೇಶಗಳಲ್ಲಿ ಒಟ್ಟು ಹತ್ತು ಘಟಕಗಳನ್ನು ಹೊಂದಿದೆ. ಒಂದೊಂದು ಘಟಕವನ್ನು ಒಬ್ಬೊಬ್ಬ ಸೋದರ ನೋಡಿಕೊಳ್ಳುತ್ತಿದ್ದಾರೆ. ಅಣ್ಣ ನರಸಿಂಹಪ್ರಕಾಶ್ ತಮಗೆ ದಾರಿ ತೋರಿದರೆ, ರಾಮದಾಸ್ ಉಳಿದ ತಮ್ಮಂದಿರಿಗೆ ದಾರಿ ಮಾಡಿಕೊಟ್ಟರು. ಎಲ್ಲ ಅಣ್ಣ ತಮ್ಮಂದಿರಲ್ಲಿ ಅಪರೂಪದ ಸ್ನೇಹ. ಅಂದ ಹಾಗೆ ಅಟ್ಟಾವರ ರಾಮದಾಸ್ ಈಗ 'ಸ್ನೇಹ' ಎಂಬ ಕನ್ನಡ ಸಾಮಾಜಿಕ ಸಾಂಸ್ಕೃತಿಕ ಸಂಘದ ಅಧ್ಯಕ್ಷರು. 'ನೀವು ಅಣ್ಣ ತಮ್ಮಂದಿರು ಜಗಳ ಮಾಡುವುದಿಲ್ಲವೇ' ಎಂದರೆ 'ಏಕೆ ಜಗಳ ಮಾಡಬೇಕು? ಕುಳಿತುಕೊಂಡು ಮಾತನಾಡಿದರೆ ಎಲ್ಲವೂ ಬಗೆ ಹರಿಯುತ್ತದಲ್ಲ' ಎಂದು ಮರುಪ್ರಶ್ನೆ ಹಾಕುತ್ತಾರೆ. ಸೋದರ ಮಾವನ ಮಗಳು ನಿರ್ಮಲಾಳನ್ನು ಪ್ರೀತಿಸಿ ಮದುವೆಯಾದ ರಾಮದಾಸ್ ಅವರಿಗೆ ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಮಗ. ಮಗಳು ಅಂಜಲಿ ಭರತ ನಾಟ್ಯ ಪ್ರವೀಣೆ. ಮಗ ಬದ್ರಿ ಅಟ್ಟಾವರ, ತಮಿಳುನಾಡಿನ ಅಂಡರ್ ನೈಂಟೀನ್ ಕ್ರಿಕೆಟ್ ಟೀಮಿನ ನಾಯಕನಾಗಿದ್ದವ.

ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದಾಗ ರಾಮದಾಸರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂತು. ಪ್ರಶಸ್ತಿ ಸ್ವೀಕರಿಸಿ ಚೆನ್ನೈಗೆ ಮರಳುತ್ತಿದ್ದಾಗ ಪಲಮನೇರ್ ಬಳಿ ಭಾರಿ ಮಳೆಯಲ್ಲಿ ನೆನೆದು ನಡುಗುತ್ತಿದ್ದ ದಂಪತಿಗೆ ಪ್ರಶಸ್ತಿಯ ಶಾಲನ್ನೇ ಹೊದಿಸಿ ರಾಮದಾಸ್ ಕಾರು ಮುಂದೆ ಚಲಿಸಿತು. ಪ್ರಶಸ್ತಿಯ ಮೊತ್ತವಾಗಿ ಬಂದ ಹತ್ತು ಸಾವಿರ ರೂಪಾಯಿಗೆ ಇನ್ನೂ 50,000 ರೂಪಾಯಿ ಸೇರಿಸಿ ದುದ್ದ ಗ್ರಾಮದಲ್ಲಿ ಅಂಬರೀಷ್ ಸೇರಿದಂತೆ 27 ಮಂದಿ ನಟ ನಟಿಯರನ್ನು ಕರೆಸಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಿದರು. ತಮ್ಮ ಊರಿನ ಜನ ಈ ನಟನಟಿಯರನ್ನು ನೋಡಬೇಕು, ಸಂತೋಷಪಡಬೇಕು ಎಂಬುದು ರಾಮದಾಸ್ ಆಸೆ.

ರಾಮ್‌ದಾಸ್‌ರದು ಅಪ್ಪಟ ಕನ್ನಡ ಮನಸ್ಸು. ಚೆನ್ನೈಗೆ ತೆರಳಿ ದಶಕಗಳೇ ಕಳೆದು ಹೋಗಿವೆ. ಅವರ ಮನೆಗೆ ಯಾರು ಫೋನ್ ಮಾಡಿದರೂ, 'ಇದು ಅಟ್ಟಾವರ ರಾಮದಾಸ್' ಎಂದು ಕನ್ನಡದಲ್ಲಿಯೇ ಅವರು ಉತ್ತರ ಕೊಡುತ್ತಾರೆ. 'ಅದರಿಂದ ಕಷ್ಟ ಆಗಿಲ್ಲವೇ? ತಮಿಳರಿಗೆ ಕೋಪ ಬಂದಿಲ್ಲವೇ' ಎಂದರೆ, 'ನಿಮಗೆ ನಂಬಿಕೆ ಬರಲಿಕ್ಕಿಲ್ಲ, ಆದರೆ ಇದು ನಿಜ. ನಾನು ಕನ್ನಡದಲ್ಲಿಯೇ ಮಾತನಾಡುವುದರಿಂದ ಯಾರಿಗೂ ಬೇಸರ ಆಗಿಲ್ಲ' ಎಂಬ ಉತ್ತರ ಅವರದು. 1992ರಲ್ಲಿ ಬೆಂಗಳೂರಿನಲ್ಲಿ ಕಾವೇರಿ ಗಲಾಟೆ ಆದಾಗ, ಚೆನ್ನೈನ ಇವರ ಮನೆಗೆ ಒಬ್ಬ ಫೋನ್ ಮಾಡಿ 'ನಿನ್ನ ತಲೆ ಒಡೆದು ಹಾಕುತ್ತೇನೆ' ಎಂದು ಹೆದರಿಸಿದ. 'ನನ್ನ ತಲೆ ಒಡೆದು ಹಾಕುವುದಕ್ಕಿಂತ ಮುಂಚೆ ಪಯಸ್ ಗಾರ್ಡನ್‌ನ ಜಯಲಲಿತಾ, ರಜನಿಕಾಂತ್ ಅವರ ತಲೆಯನ್ನೂ ಒಡೆದು ಹಾಕು' ಎಂದು ರಾಮದಾಸ್ ಉತ್ತರ ಕೊಟ್ಟರು. ಫೋನ್ ಮಾಡಿದವ ನಕ್ಕು ನಕ್ಕು ಫೋನ್ ಇಟ್ಟ. ರಾಮದಾಸ್‌ಗೆ ಮುಂಚಿನಿಂದಲೂ ತಮಾಷೆಯಲ್ಲಿ, ತಮಾಷೆ ಪಾತ್ರಗಳಲ್ಲಿ ಆಸಕ್ತಿ. ನಾಟಕದಲ್ಲಿ ಅವರು ಮಾಡಿದ್ದು ತಮಾಷೆ ಪಾತ್ರಗಳನ್ನೇ ಹೆಚ್ಚು!

ಚೆನ್ನೈನಲ್ಲಿ ಸರ್ವಜ್ಞ ಪ್ರತಿಮೆ ಕೂಡ್ರಿಸಲು ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಅಯನಾವರಂ ಕನ್ನಡ ಸಂಘದ ಆವರಣದಲ್ಲಿ ಈ ಪ್ರತಿಮೆ ನಿಲ್ಲಿಸಲು ಕೆಲವು ಕನ್ನಡಿಗರಿಂದಲೇ ವಿರೋಧವಿತ್ತು. ಅವರಿಗೆ ಸರ್ವಜ್ಞ ಪ್ರತಿಮೆ ಬೇಡವಾಗಿತ್ತು. ಮರೀನಾ ಬೀಚ್‌ಗೆ ಪ್ರತಿಮೆಯನ್ನು 'ತಳ್ಳುವ' ವಿಚಾರವೂ ಇತ್ತು. ಆದರೆ, ರಾಮದಾಸ್ ಪಟ್ಟು ಬಿಡಲಿಲ್ಲ. 97ರಲ್ಲಿ ಮೇಯರ್ ಆಗಿದ್ದ ಎಂ.ಕೆ. ಸ್ಟಾಲಿನ್ ಅವರನ್ನು ಕಂಡು ಅಯನಾವರಂ ಕನ್ನಡ ಸಂಘದ ಆವರಣದಲ್ಲಿಯೇ ಪ್ರತಿಮೆ ಸ್ಥಾಪಿಸಲು ಅನುಮತಿ ಪಡೆದರು. ಅದಕ್ಕೆ ತಗುಲಿದ 30,000 ರೂಪಾಯಿ ಶುಲ್ಕದಲ್ಲಿ 25,000 ರೂಪಾಯಿಗಳನ್ನು ಇವರು ಕಟ್ಟಿದರು. ಉಳಿದ 5,000 ರೂಪಾಯಿ ಕೊಟ್ಟವರು ಎಂ.ಆರ್. ಜಯರಾಂ. 'ತಿರುವಳ್ಳುವರ್ ಹಾಗೆ ಸರ್ವಜ್ಞ ಕೂಡ ಜಾತಿ ಯಿಲ್ಲದ ಕವಿ. ತಮಿಳು ಜನರು 'ತಿರುಕ್ಕುರಳ್'ನ ದ್ವಿಪದಿಗಳನ್ನು ಬಸ್ಸುಗಳಲ್ಲಿಯೂ ಬರೆಸಿದ್ದಾರೆ. ಅಷ್ಟೇ ಶ್ರೇಷ್ಠ ಕವಿ ಸರ್ವಜ್ಞ. ಅದಕ್ಕಾಗಿಯೇ ಸರ್ವಜ್ಞ ಪ್ರತಿಮೆ ಸ್ಥಾಪಿಸಲು ನಾನು ಪಟ್ಟು ಹಿಡಿದೆ' ಎಂದು ಅವರು ಹೇಳುತ್ತಾರೆ. 'ನಾನು ಗಳಿಸಿದ ದುಡ್ಡನ್ನು ಕೇವಲ ನನಗಾಗಿಯೇ ಬಳಸಿಲ್ಲ. ಕರ್ನಾಟಕ, ತಮಿಳುನಾಡಿನಲ್ಲಿ ಅನೇಕ ದೇವಸ್ಥಾನಗಳ ಜೀರ್ಣೋದ್ದಾರಕ್ಕೆ ದುಡ್ಡು ಕೊಟ್ಟಿದ್ದೇನೆ. ಮುಳಬಾಗಿಲು ಬಳಿಯ- ಉತ್ತನೂರಿನಲ್ಲಿ ಪ್ರಯೋಗ ವರದಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಮಾಡಿ ಪ್ರತಿಮೆಯನ್ನು ನಿಲ್ಲಿಸಿದಾಗ ಆದ ಸಂತೋಷವೇ ಸರ್ವಜ್ಞ ಪ್ರತಿಮೆ ನಿಲ್ಲಿಸಿದಾಗಲೂ ಆಯಿತು' ಎಂದು ಭಾವುಕರಾಗುತ್ತಾರೆ ರಾಮದಾಸ್.

ಸರ್ವಜ್ಞ ಪ್ರತಿಮೆ ನಿಲ್ಲಲು ತಮ್ಮ ಜತೆಗೆ ನಿಂತವರು ಎಂ. ಚಿದಾನಂದ ಮೂರ್ತಿ, ಎಲ್.ಎಸ್. ಶೇಷಗಿರಿರಾವ್, ಸಂಜೆವಾಣಿಯ ಮಣಿ, ಕನ್ನಡ ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಜಯರಾಮರಾಜ ಅರಸ್, ನಿರ್ದೇಶಕ ಮನು ಬಳಿಗಾರ್ ಎಂದು ರಾಮದಾಸ್ ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ. ಕರ್ನಾಟಕ ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳ ಪಾತ್ರವಂತೂ ಮುತ್ಸದ್ದಿತನದ್ದು ಎಂದು ಬಿಡಿಸಿ ಹೇಳುತ್ತಾರೆ. 'ಚೆನ್ನೈನಲ್ಲಿ ಸರ್ವಜ್ಞ ಪ್ರತಿಮೆಗೆ ಪೊಲೀಸರ ಕಾವಲು ಬೇಡ. ಎಷ್ಟೇ ಗಲಾಟೆಯಾದರೂ ಆ ಪ್ರತಿಮೆಗೆ ತಮಿಳು ಜನ ಧಕ್ಕೆ ಮಾಡುವುದಿಲ್ಲ' ಎಂಬ ನಂಬಿಕೆ ಅವರದು. ಆ ನಂಬಿಕೆಯನ್ನು ಬೆಂಗಳೂರಿನ ತಿರುವಳ್ಳುವರ್ ಪ್ರತಿಮೆಯ ಬಗೆಗೂ ನಾವು ತುಂಬಬೇಕು. ಅದು ಸಾಧ್ಯವೇ?

■

# ಗುಳೆ ಬಂದ ಮಲ್ಲಪ್ಪ ಹೇಳಿದ್ದು ಕಣ್ಣೀರ ಕಥೆ

ಅವನ ಹೆಸರು ಮಲ್ಲಪ್ಪ. ಅದು ಬಸಪ್ಪ, ಕಲ್ಲಪ್ಪ ಎಂದಿದ್ದರೂ ಹೆಚ್ಚು ವ್ಯತ್ಯಾಸವೇನೂ ಆಗದು. ಊರು ಗುಲ್ಬರ್ಗ ಜಿಲ್ಲೆ ಯಾದಗಿರಿ. ಹೆಂಡತಿ ಮಕ್ಕಳ ಜತೆಗೆ ಬೆಂಗಳೂರಿಗೆ ಗುಳೆ ಬಂದು ತಿಂಗಳುಗಳೇ ಕಳೆದಿವೆ. ಊರಿನಲ್ಲಿ ಆರು ಎಕರೆ ಒಣ ಜಮೀನು. ಅದು ಯಾವಾಗ ಬೆಳೆಯುತ್ತದೆ, ಯಾವಾಗ ಇಲ್ಲ ಎಂದು ತಿಳಿಯು ವುದಿಲ್ಲ. ಎಲ್ಲವೂ ಮಳೆರಾಯನ ಕೃಪೆ ಅಥವಾ ಅವಕೃಪೆ ಮೇಲೆ ಅವಲಂಬಿತ.

ಬೆಂಗಳೂರಿನ ಕಟ್ಟಡ ಕಂಟ್ರಾಕ್ಟರ್‌ವೊಬ್ಬರ ಬಳಿ ಈ ಕುಟುಂಬ ಕೆಲಸಕ್ಕೆ ಇದೆ. ಆತ ಕೆಲಸ ಕೊಟ್ಟರೆ ಉಂಟು ಇಲ್ಲದಿದ್ದರೆ ಇಲ್ಲ. ಈಗ ಆರ್ಥಿಕ ಹಿಂಜರಿತದಿಂದ ಕಟ್ಟಡ ನಿರ್ಮಾಣದ ಕೆಲಸಗಳೂ ನಿಧಾನವಾಗಿವೆ ಇಲ್ಲವೇ ನಿಂತೇ ಹೋಗಿವೆ. ವಾಪಸು ಊರಿಗೆ ಹೋಗಿ ಹೊಲದಲ್ಲಿ ದುಡಿಯೋಣ ಎಂದರೆ ಹೊಲವನ್ನು ಒತ್ತೆ ಹಾಕಿದ್ದಾಗಿದೆ. ಹೊಲದಲ್ಲಿ ಬಿತ್ತಿ ಬೆಳೆ ಬಂದ ನಂತರ ಸಾಲ ತೀರಿಸೋಣ ಎಂದರೆ ಮಳೆರಾಯನೂ ಕೈ ಕೊಟ್ಟಿದ್ದಾನೆ. 'ಬಿತ್ತಿದ ಬೆಳೆಯೂ

ಒಣಗಿ ಹೋಗಿದೆ' ಎಂದು ಊರಿನಲ್ಲಿ ಇರುವ ತಮ್ಮ ಪತ್ರ ಬರೆದಿದ್ದಾನೆ.

ಕಂಟ್ರಾಕ್ಟರ್ ಬಳಿ ವಾರದಲ್ಲಿ ಐದು ದಿನ ಮಾತ್ರ ಕೆಲಸ. ಶನಿವಾರ, ಭಾನುವಾರ ಬೇರೆ ಕೆಲಸ ಹುಡುಕಿಕೊಂಡು ಓಣಿ ಓಣಿ ಅಲೆದಾಟ. ಯಾರಾದರೂ ಏನಾದರೂ ಕೆಲಸ ಕೊಟ್ಟಾರು ಎಂದು ಆಸೆ. ಕೆಲಸ ಹುಡುಕಿಕೊಂಡು ಮಲ್ಲಪ್ಪ ನಮ್ಮ ಮನೆಯ ಹತ್ತಿರವೂ ಬಂದಿದ್ದ. ನಾನು ಕಾರು ನಿಲ್ಲಿಸುವ ಜಾಗದ ಪಕ್ಕದ ಮೋರಿಯನ್ನು ಕಾರ್ಪೊರೇಷನ್‌ನವರು ಹತ್ತು ವರ್ಷಗಳ(!) ನಂತರ ಸ್ವಚ್ಛ ಮಾಡುವಾಗ ಮೋರಿಯ ಮೇಲೆ ಹಾಕಿದ್ದ ಕಲ್ಲುಗಳನ್ನೆಲ್ಲ ಹೇಗೆಂದರೆ ಹಾಗೆ ಕಿತ್ತು ಹಾಕಿ ಹೋಗಿದ್ದರು. ಕಲ್ಲು ಸರಿ ಮಾಡುವವರೆಗೆ ಕಾರು ಹೊರಗೆ ತೆಗೆದು ಮತ್ತೆ ಅದರ ಜಾಗಕ್ಕೆ ನಿಲ್ಲಿಸುವುದು ದೊಡ್ಡ ಸರ್ಕಸ್‌ನ ಹಾಗೆ ಆಗಿತ್ತು.

ಮೋರಿ ಮೇಲಿನ ಕಲ್ಲು ಸರಿಪಡಿಸುವ ಕೆಲಸವನ್ನು ಹೊರ ರಾಜ್ಯದವರಿಗಿಂತ ಉತ್ತರ ಕರ್ನಾಟಕದಿಂದ ಗುಳೆ ಬಂದವರಿಗೆ ಕೊಟ್ಟರೆ ಅವರಿಗೆ ಅನುಕೂಲವಾದೀತು ಎಂದು ನನ್ನ ಹೆಂಡತಿ, ಮಲ್ಲಪ್ಪನಿಗೇ ಕೆಲಸ ವಹಿಸಿದಳು. ಮಲ್ಲಪ್ಪ ನನ್ನ ಬಳಿ ಮುಂಗಡ ಹಣ ತೆಗೆದುಕೊಂಡು ಹೋಗುವ ದಿನ, 'ನೋಡು ನನ್ನ ಮೊಬೈಲ್ ನಂಬರ್ ಬರೆದು ಇಟ್ಟುಕೊ. ಕೆಲಸದ ಸಾಮಾನುಗಳನ್ನೂ ನಿನ್ನ ಮನೆಯಲ್ಲಿಯೇ ಇಟ್ಟು ಹೋಗುತ್ತೇನೆ. ನಿನ್ನ ಹಣ ತೆಗೆದುಕೊಂಡು ನಾನೆಲ್ಲೂ ಹೋಗುವುದಿಲ್ಲ' ಎಂದು ನನ್ನ ಅನುಮಾನಗಳನ್ನು ತಾನೇ ಪರಿಹರಿಸಿ ಮೊದಲ ದಿನ ಹೊರಟು ಹೋದ. ಮರುದಿನ ಹೇಳಿದ ವೇಳೆಗೆ ಸರಿಯಾಗಿ ಬಂದು ಇಡೀ ದಿನ ಕೆಲಸ ಮಾಡಿದ. ಇನ್ನೇನು ಕೆಲಸ ಮುಗಿಯಬೇಕು ಎನ್ನುವ ವೇಳೆಗೆ ಭಾರಿ ಮಳೆ ಬಂದು ಆತ ಹಾಕಿದ ಸಿಮೆಂಟ್ ಕೂಡ ಅರೆಬರೆಯಾಗಿ ಕಿತ್ತುಕೊಂಡುಹೋಯಿತು. ಸ್ವಲ್ಪ ಸಿಮೆಂಟ್ ಹಾಗೇ ಉಳಿದಿದ್ದರೆ ಅದಕ್ಕೆ ಕಾರಣ, ಆತ ನನ್ನ ಕಾರಿನ ಕವರ್ ಅನ್ನು ಆ ಹಸಿ ಸಿಮೆಂಟ್ ಮೇಲೆ ಹಾಕಿ ಅದರ ಮೇಲೆ ಕಲ್ಲು ಇಟ್ಟುಹೋದುದು. ಮರುದಿನ ಮತ್ತೆ ಬೆಳಿಗ್ಗೆ ಬಂದು ಕಿತ್ತುಹೋದ ಸಿಮೆಂಟ್ ಮತ್ತೆ ಹಾಕಿ 'ನಾನು ಹಾಗೇ ಬಿಟ್ಟು ಹೋಗಿದ್ದರೆ, ಯಾವನು ಈ ಕೆಲಸ ಮಾಡಿದ್ದಾನೆ ಎಂದು ಜನ ನಿನಗೆ ಬೈಯ್ಯುತ್ತಿದ್ದರು. ನಿನ್ನ ಕಾರಿನ ಕವರ್ ವಾಷ್ ಮಾಡಿದ್ದೇನೆ. ಮಳೆ ಬಂದು ಹೊಲಸಾದ ಕಾರನ್ನೂ ಸ್ವಚ್ಛ ಮಾಡಿದ್ದೇನೆ' ಎಂದು ಆತ ನನಗೆ ಮಾತನಾಡಲೂ ಅವಕಾಶ ಕೊಡಲಿಲ್ಲ. ನನ್ನ ಹೆಂಡತಿಯ ಬಳಿ ಆಕೆಯ ಕೆಲವು ಹಳೆಯ ಸೀರೆ, ನನ್ನ ಹಳೆಯ ಬಟ್ಟೆಗಳನ್ನು ಬಾಕಿ ದುಡ್ಡಿನ ಜತೆಗೆ ತೆಗೆದುಕೊಂಡು ಹೊರಡಲು ಸನ್ನದ್ಧನಾದ.

'ನೀನು ಆರು ಎಕರೆ ಹೊಲದ ಮಾಲೀಕ. ಅಲ್ಲಿ ದುಡಿದು ತಿನ್ನಲು ಆಗದೇ? ಇಲ್ಲಿಗೆ ಏಕೆ ಬಂದೆ? ನಿಮ್ಮ ಊರಿನಲ್ಲಿ ಉದ್ಯೋಗ ಖಾತ್ರಿ ಯೋಜನೆ ಇಲ್ಲವೇ?' ಎಂದೆಲ್ಲ ಆತನಿಗೆ ಕೇಳಿದೆ. ಅದೆಲ್ಲ ದೊಡ್ಡ ಕಥೆ ಎನ್ನುವಂತೆ ಆತ ತನ್ನ ಕಥೆ ಹೇಳಿದ: 'ನನಗೆ ಆರು ಎಕರೆ ಹೊಲ ಇರುವುದು ನಿಜ. ನಮ್ಮ ಮನೆಯಲ್ಲಿ ಮದುವೆ ಆಗುವಾಗಲೊಮ್ಮೆ ಹೊಲವನ್ನು ಒತ್ತೆ ಹಾಕಬೇಕು. ಹೆಣ್ಣು ಮಗಳ ಮದುವೆಯಾದರೆ ಕನಿಷ್ಠ ಎಂದರೂ ಒಂದು ಲಕ್ಷ ಬೇಕು. ಗಂಡು ಮಗನ ಮದುವೆಯಾದರೆ 60,000 ರೂಪಾಯಿ ಬೇಕು. ಈ ಹಣಕ್ಕೆ ಮೂರರ ಬಡ್ಡಿ. ಬಡ್ಡಿ ಕಟ್ಟದಿದ್ದರೆ ಹೊಲವನ್ನೇ

ಮಾರಬೇಕಾಗುತ್ತದೆ. ಬಡ್ಡಿ ಕಟ್ಟಲು ಹಣ ಎಲ್ಲಿಂದ ತರಲಿ? ಹೊಲದಲ್ಲಿ ಈ ವರ್ಷ ಹುಲ್ಲು ಕಡ್ಡಿಯೂ ಬೆಳೆದಿಲ್ಲ. ನೀನು ಬಂದು ಒಂದು ಸಾರಿ ನಮ್ಮ ಹೊಲ ನೋಡು' ಎಂದ. ನನಗೆ ಗೊತ್ತು ಎನ್ನುವಂತೆ ಕತ್ತು ಅಲ್ಲಾಡಿಸಿದೆ.

'ಇಲ್ಲಿ ನಿಮ್ಮ ಮನೆ ಎಲ್ಲಿ, ಹೆಂಡತಿ ಮಕ್ಕಳು ಎಲ್ಲಿ ಇರುತ್ತೀರಿ' ಎಂದು ಕೇಳಿದೆ. 'ನಮಗೆ ಮನೆಯೆಲ್ಲ ಯಾಕೆ? ನಿಮ್ಮಂಥವರು ಮನೆ ಕಟ್ಟಿದರೆ ಅದು ಮುಗಿಯಲು ಒಂದು ವರ್ಷ ಆಗುತ್ತದೆ. ಮುಗಿಯುವವರೆಗೆ ಅಲ್ಲಿಯೇ ನಮ್ಮ ಸಂಸಾರ. ಆ ಮನೆ ಮುಗಿದ ಮೇಲೆ ಮತ್ತೊಂದು ಮನೆಯ ಕಟ್ಟಡ ಕೆಲಸಕ್ಕೆ ಹೊರಟು ಹೋಗುತ್ತೇವೆ. ಅಲ್ಲಿ ವಾಸ ಮಾಡುತ್ತೇವೆ. ಮನೆ ಯಾಕೆ ಬೇಕು' ಎಂದು ನನ್ನನ್ನೇ ನೋಡುತ್ತ ನಕ್ಕ. ಮಲ್ಲಪ್ಪ ಮತ್ತು ಅವನಂಥವರ ಜೀವನ (ಅದು ಜೀವನವೇ?) ಹೀಗೇ ಸಾಗುತ್ತದೆ. ಇನ್ನೊಬ್ಬರ ಮನೆಯಲ್ಲಿ (ಅದು ಮನೆಯೇ?) ಅವರ ಸಂಸಾರ ನಡೆಯುತ್ತದೆ. ಅಲ್ಲಿಯೇ ರೊಟ್ಟಿ ಬೇಯುತ್ತದೆ; ಪಲ್ಯ ಸಿದ್ಧವಾಗುತ್ತದೆ. ಗಂಡ ಹೆಂಡತಿ, ಮಕ್ಕಳು ಜತೆಯಾಗಿ ಊಟ ಮಾಡಿ ಕೆಲಸಕ್ಕೆ ಹೋಗುತ್ತಾರೆ. ಸಂಜೆ ಬಂದು ಮಲಗುತ್ತಾರೆ. ಖಾಸಗಿತನವೇ ಇಲ್ಲದ ಪರಿಸರದಲ್ಲಿ ಮಕ್ಕಳೂ ಆಗುತ್ತವೆ. ಸಂಸಾರದ ಚಕ್ರ ಸುತ್ತುತ್ತಲೇ ಇರುತ್ತದೆ. ಕೆಲಸಕ್ಕೆ ಹೋದಲ್ಲಿ ಯಾರಾದರೂ ಖುಷಿಯಿಂದ ಹತ್ತು ರೂಪಾಯಿ ಹೆಚ್ಚಿಗೆ ಕೊಟ್ಟರೆ ಹೋಟೆಲು ತಿಂಡಿಗೆ ಖರ್ಚಾಗುತ್ತದೆ. ಇಲ್ಲವಾದರೆ ಮತ್ತೆ ಸಂಜೆ ಮನೆಗೆ ಹೋಗಿ ಹೆಂಡತಿ ಬೇಯಿಸುವ ರೊಟ್ಟಿಗೆ ಹೊಟ್ಟೆ ತಾಳ ಹಾಕುತ್ತ ಇರುತ್ತದೆ.

ಮುಖ್ಯಮಂತ್ರಿ ಯಡಿಯೂರಪ್ಪನವರು, 'ಜನರು ಗುಳೆ ಹೋದರೆ ಅಧಿಕಾರಿ ಗಳನ್ನೇ ಹೊಣೆ ಮಾಡಲಾಗುವುದು' ಎಂದು ಮೊನ್ನೆ ಎಚ್ಚರಿಸಿದ್ದಾರೆ. ಜನರಿಗೆ ಉದ್ಯೋಗ, ಕುಡಿಯುವ ನೀರು, ದನಗಳಿಗೆ ಮೇವು ಇತ್ಯಾದಿ ಎಲ್ಲವನ್ನೂ ಪೂರೈಸಲು ತಾಕೀತು ಮಾಡಿದ್ದಾರೆ. ಇದು ಪ್ರತಿ ವರ್ಷ ಜಿಲ್ಲಾಧಿಕಾರಿಗಳ ಸಭೆ ನಡೆದಾಗಲೆಲ್ಲ ಕೇಳಿ ಬರುವ ವಿಧ್ಯುಕ್ತ ಕ್ರಿಯೆಯಂಥ ಮಾತು. ಇದು ಒಬ್ಬ ಮುಖ್ಯಮಂತ್ರಿ ಮೊದಲ ಸಾರಿ ಹೇಳಿದ ಮಾತೂ ಅಲ್ಲ; ಕೊನೆಯ ಸಾರಿ ಹೇಳುವ ಮಾತೂ ಅಲ್ಲ. ವಿಡಿಯೊ ಸಂವಾದ ಮುಗಿದ ಮೇಲೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳು ಮುಸಿ ಮುಸಿ ನಕ್ಕು, 'ಹಣ ಕೊಟ್ಟರೆ ತಾನೇ ನಾವು ಅದನ್ನೆಲ್ಲ ಮಾಡುವುದು' ಎಂದು ಮಾತನಾಡಿ ಕೊಳ್ಳುತ್ತಾರೆ. ಬರ ಎನ್ನುವುದು ಒಂದು ವಿಷ ಚಕ್ರ. ಕೃಷಿ ಎನ್ನುವುದು ಒಂದು 'ಕೆಟ್ಟ ಹವ್ಯಾಸ'. ಕೃಷಿ ಮಾಡಿ, ಅದೂ ಒಣ ಬೇಸಾಯ ಮಾಡಿ ದುಡ್ಡು ಮಾಡಿದ ರೈತನನ್ನು ದೀಪ ಹಚ್ಚಿ ಹುಡುಕಬೇಕು. ಆದರೂ ಹಸಿವು, ನಿದ್ರೆ, ಮೈಥುನದ ಹಾಗೆ ಕೃಷಿ ಎನ್ನುವುದೂ ರೈತನಿಗೆ ಒಂದು ಮೂಲ ಪ್ರವೃತ್ತಿಯಂಥ ನೈಸರ್ಗಿಕ ಕ್ರಿಯೆ. ಅದನ್ನು ಆತ ಮಾಡಲಾರ ಅಥವಾ ಮಾಡದೇ ಇರಲಾರ.

ಭೂಮಿ ಬೆಳೆಯುವುದಿಲ್ಲ ಎಂದು ತಿಳಿದ ನಂತರ ಆತ ತನ್ನ ಊರಿನಲ್ಲಿಯೇ ಇನ್ನೊಬ್ಬರ ಹೊಲದಲ್ಲಿ ದುಡಿಯಲು ಹೋಗಲಾರ. ಹೋದರೆ ಮರ್ಯಾದೆಗೆ ಕುಂದು. ಬೆಂಗಳೂರಿಗೆ ಬಂದು ಅನಾಮಧೇಯನ ಹಾಗೆ ಯಾರದೋ ಮನೆಯನ್ನು ಕಟ್ಟಿ ಹೊಟ್ಟೆ ಹೊರೆಯುವುದು ಆತನಿಗೆ ಅವಮಾನವಲ್ಲ. ನಮ್ಮ ಮಲ್ಲಪ್ಪನ ಕಥೆಯೂ ಅಂಥದೇ. 'ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ಮಾಡಬಹುದಲ್ಲ' ಎಂದರೆ

'ಅದು ಕೆಲಸ ಕೊಡುವ ಯೋಜನೆಯಲ್ಲ, ದುಡ್ಡು ಹೊಡೆಯುವ ಯೋಜನೆ. ಬರೀ ಖೊಟ್ಟಿ ಹೆಸರುಗಳಿಗೆ ಬಿಲ್ಲು ಹಾಕಿ ಅಧಿಕಾರಿಗಳು ದುಡ್ಡು ಹೊಡೆಯುತ್ತಾರೆ, ಅವರಿಗೆ ಶಾಸಕರೂ ಸಾಥ್ ಕೊಡುತ್ತಾರೆ' ಎಂದು ಮಲ್ಲಪ್ಪ ಇನ್ನೊಂದು ಕಥೆಯನ್ನು ಶುರು ಮಾಡುತ್ತಾನೆ. ಆತ ಹೇಳುವುದರಲ್ಲಿ ಅತಿಶಯೋಕ್ತಿ ಇರಬಹುದು ಆದರೆ ಅದು ಅಸತ್ಯವಲ್ಲ. ಏಕೆಂದರೆ ಬರ ಬೀಳಲಿ ಎಂದೇ ಅಲ್ಲವೇ ಎಲ್ಲರೂ ಹಾರೈಸುವುದು?

ನಾವು ಎಲ್ಲ ಗ್ರಾಮಗಳನ್ನು ಹಾಳು ಮಾಡಿ ಎಂಥ ಸಮಾಜವನ್ನು ನಿರ್ಮಿಸುತ್ತಿದ್ದೇವೆ?

■

# ಕೆಂಪಯ್ಯ ಸ್ವಯಂ ನಿವೃತ್ತಿಯಪಾಠಗಳು

ಎರಡು ಕೋಣಗಳ ಗುದ್ದಾಟದಲ್ಲಿ ಮರಕ್ಕೆ ಮೃತ್ಯು ಎನ್ನುತ್ತಾನೆ ಕವಿ ರಾಘವಾಂಕ. ಪೊಲೀಸ್ ಮಹಾ ನಿರ್ದೇಶಕ (ಡಿ.ಜಿ.ಪಿ) ಅಜಯಕುಮಾರ್ ಸಿಂಗ್ ಮತ್ತು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಎ.ಡಿ.ಜಿ.ಪಿ) ಕೆಂಪಯ್ಯ ಅವರ ಜಗಳದಲ್ಲಿ ಆಗಿದ್ದು ಕೂಡ ಅದೇ. ಸಿಂಗ್ ಹಟಕ್ಕೆ ಬಿದ್ದು ಕೆಂಪಯ್ಯ ಅವರನ್ನು ಮನೆಗೆ ಕಳಿಸಿದ್ದಾರೆ. ತನ್ನೆಲ್ಲ ನೌಕರರ ತಂದೆ-ತಾಯಿ ಸ್ಥಾನದಲ್ಲಿ ಇರಬೇಕಾದ ಸರ್ಕಾರ ಹೊಣೆಗಾರಿಕೆಯನ್ನು, ವಿವೇಚನೆಯನ್ನು ಕಳೆದುಕೊಂಡು ಎಂದೂ ಕಾಣದ ಗಡಿಬಿಡಿಯಲ್ಲಿ ನಿರ್ಣಯ ತೆಗೆದುಕೊಂಡಿದೆ. ಇದೆಲ್ಲದರ ಪರಿಣಾಮ ಎಂದರೆ ಪೊಲೀಸ್ ಇಲಾಖೆ ತಬ್ಬಿಬ್ಬಾಗಿದೆ. ಒಬ್ಬ ಒಳ್ಳೆಯ ಅಧಿಕಾರಿ ನೌಕರಿ ಕಳೆದುಕೊಂಡಿ ದ್ದಾರೆ.

ಅದೇನು ದೊಡ್ಡ ಜಗಳವಲ್ಲ. ಆಗಸ್ಟ್ 13ರಂದು ಡಿ.ಜಿ.ಪಿ. ಕಚೇರಿಯಲ್ಲಿ ಆಂತರಿಕ ಭದ್ರತೆ ವಿಭಾಗದ ಕಾರ್ಯ ಪ್ರಗತಿ ಕುರಿತು ಸಭೆ ಸೇರಿತ್ತು. ಇಂಥ ಸಭೆ ನಡೆಸಿ ವರದಿ ಸಲ್ಲಿಸಲು ಕೇಂದ್ರ ಸರ್ಕಾರವೇ ಸೂಚಿಸಿತ್ತು. ಈ ವಿಭಾಗದ ಎ.ಡಿ.ಜಿ.ಪಿಯಾದ ಕೆಂಪಯ್ಯ ವಿವರಣೆ ನೀಡುತ್ತಿದ್ದರು.

ಅದನ್ನು ಕೇಳಲು (ಅದು ದೀರ್ಘವಾಗಿತ್ತೇ?) ಸಿಂಗ್ ಅವರಿಗೆ ಸಹನೆ ಇರಲಿಲ್ಲ. ಮಾತಿಗೆ ಮಾತು ಬೆಳೆಯಿತು. ನೀನು, ತಾನು ಎಂದೆಲ್ಲ ಮುಂದುವರಿಯಿತು. 'ನಿನಗೆ ಬಡ್ತಿ ಕೊಟ್ಟುದು ನಾನು ' ಎಂದರು ಸಿಂಗ್. 'ನೀವಲ್ಲ ಸರ್ಕಾರ' ಎಂದರು ಕೆಂಪಯ್ಯ. ಸೋಜಿಗ ಎಂದರೆ ಇಷ್ಟು ಉನ್ನತ ದರ್ಜೆಯ ಈ ಇಬ್ಬರು ಅಧಿಕಾರಿಗಳು ತಮ್ಮ ಕೈಕೆಳಗಿನ ಅಧಿಕಾರಿಗಳ ಎದುರು ತಮ್ಮ ನಾಲಿಗೆಯ ಚಪಲ ತೀರಿಸಿಕೊಂಡುದು.

ಒಂದು ಮಾತು ಇಲ್ಲಿ ಹೇಳಿಬಿಡಬೇಕು. ಸಿಂಗ್ ಅವರು ನಿಷ್ಕಳಂಕ ಅಧಿಕಾರಿ. ಅಪ್ಪಟ ಪ್ರಾಮಾಣಿಕ. ದಕ್ಷ ಕೂಡ. ಮೇಲಾಗಿ ಸಾಹಿತ್ಯ, ಸಂಗೀತದಲ್ಲಿ ಆಸಕ್ತಿಯುಳ್ಳ ಸಂವೇದನಾಶೀಲ. ಆದರೆ, ಸ್ವಭಾವತಃ ಸಿಡುಕ. ಫ್ರೆಂಡ್ಲಿ ಅಲ್ಲ. ಕೆಂಪಯ್ಯ ದಕ್ಷ, ದರ್ಪದ ಅಧಿಕಾರಿ. ಕಡುಬಡತನದಿಂದ ಮೇಲೆ ಬಂದವರು. ಅದರಿಂದಾಗಿ ಸ್ವಾಭಿಮಾನಿ. ಆಂತರಿಕ ಭದ್ರತೆಯ ಎ.ಡಿ.ಜಿ.ಪಿ. ಆಗಿ ಅಧಿಕಾರ ವಹಿಸಿಕೊಂಡು ಆರು ತಿಂಗಳಾದರೂ ಸಿಬ್ಬಂದಿ, ಸಲಕರಣೆ ಯಾವುದೂ ಇಲ್ಲದೇ ಕೇವಲ ಆಪ್ತ ಸಿಬ್ಬಂದಿ ಯನ್ನಷ್ಟೇ ಇಟ್ಟುಕೊಂಡು ಏಗುವುದರ ಜತೆಗೆ ಕೈಕೆಳಗಿನ ಅಧಿಕಾರಿಗಳ ಎದುರು ಆದ ಅವಮಾನ ಸಹಿಸಲಾಗದೇ 19ರಂದು ಸ್ವಯಂ ನಿವೃತ್ತಿಗೆ ಅರ್ಜಿ ಅಲ್ಲಿಸಿದರು. ಸ್ವಯಂ ನಿವೃತ್ತಿ ಅರ್ಜಿ ಅವಧಿ ಮೂರು ತಿಂಗಳದು. ಅದನ್ನು ಒಪ್ಪುವುದಕ್ಕಿಂತ ಮುಂಚೆ ಸಂಬಂಧಪಟ್ಟ ಸಿಬ್ಬಂದಿಯನ್ನು ಕರೆದು ಅವರ ಹೇಳಿಕೆಯನ್ನು ದಾಖಲೆ ಮಾಡಬೇಕು ಎಂಬ ನಿಯಮವೂ ಇದೆ. ಕೆಂಪಯ್ಯ ಅವರ ಅರ್ಜಿ ವಿಚಾರದಲ್ಲಿ ಅದು ಯಾವುದೂ ಆಗಲಿಲ್ಲ. ಸರ್ಕಾರ ಅದನ್ನು ದಾಖಲೆ ವೇಗದಲ್ಲಿ ಅಂಗೀಕರಿಸಿ ಅಧಿಸೂಚನೆಯನ್ನೂ ಹೊರಡಿಸಿ ಬಿಟ್ಟಿದೆ. ಈ ಸ್ವಯಂ ನಿವೃತ್ತಿಯ ಅರ್ಜಿ ವಿಚಾರ ದಲ್ಲಿ ಸಹಜ ನ್ಯಾಯ ಸಿಗಲಿಲ್ಲ ಎಂಬುದು ಮೇಲು ನೋಟಕ್ಕೆ ಭಾಸವಾಗುತ್ತದೆ.

ಕೆಂಪಯ್ಯನವರ ಅರ್ಜಿ ಸ್ವೀಕರಿಸಿದ ವೇಗದಲ್ಲಿಯೇ ಸರ್ಕಾರ ವೀರಭದ್ರಯ್ಯ ಎಂಬ ಒಕ್ಕಲಿಗ ಕೆ.ಎ.ಎಸ್. ಅಧಿಕಾರಿಯ ಇಂಥದೇ ಅರ್ಜಿಯನ್ನು ಸ್ವೀಕರಿಸಿರಲಿಲ್ಲ. ಅವರು ಕಳೆದ ಅಕ್ಟೋಬರ್‌ನಲ್ಲಿ ನಡೆದ ಮಧುಗಿರಿ ಉಪ ಚುನಾವಣೆಯಲ್ಲಿ ಜೆ.ಡಿ (ಎಸ್) ಅಭ್ಯರ್ಥಿಯಾಗಿ ಚುನಾವಣೆಗೆ ನಿಲ್ಲುವ ಸುದ್ದಿ ಇತ್ತು. ಚುನಾವಣೆಗಿಂತ ಸ್ವಲ್ಪ ಮುಂಚೆ ಅರ್ಜಿ ಸಲ್ಲಿಸಿದ್ದ ಅವರು ಈಚೆಗಷ್ಟೇ ಅದನ್ನು ವಾಪಸು ತೆಗೆದುಕೊಳ್ಳಲು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಕೆಂಪಯ್ಯ ಅವರಂಥ ಒಬ್ಬ ಹಿರಿಯ ಅಧಿಕಾರಿ ಹೀಗೆ ಏಕಾ ಏಕಿ ಸ್ವಯಂ ನಿವೃತ್ತಿಗೆ ಏಕೆ ಅರ್ಜಿ ಸಲ್ಲಿಸುತ್ತಾರೆ ಎಂಬುದನ್ನು ತಿಳಿಯುವ ಕುತೂಹಲವನ್ನಾದರೂ ಗೃಹ ಸಚಿವರು ತೋರಿಸಬಹುದಿತ್ತು. ಗೃಹ ಸಚಿವರು ಹೇಳಿದ ಹಾಗೆ, ಕೆಂಪಯ್ಯ ಅಶಿಸ್ತಿನಿಂದ ವರ್ತಿಸಿದ್ದರೆ ಅವರ ವಿರುದ್ಧ ಆರೋಪ ಪಟ್ಟಿ ಹಾಕಿ ವಿಚಾರಣೆಯನ್ನಾದರೂ ನಡೆಸಬಹುದಿತ್ತು.

ಸಿಂಗ್ ಮತ್ತು ಕೆಂಪಯ್ಯ ಇಬ್ಬರೂ ತೀರಾ ದುರ್ಬಲ ವರ್ಗದ ಅಧಿಕಾರಿ ಗಳು. ಇಷ್ಟು ದುರ್ಬಲ ವರ್ಗದ ಅಧಿಕಾರಿಗಳಿಗೆ ಉನ್ನತ ಹುದ್ದೆ ದೊರೆಯುವುದೇ ಕಷ್ಟ. ಅದನ್ನು ಉಳಿಸಿಕೊಳ್ಳಬೇಕಾಗಿದ್ದ ಕೆಂಪಯ್ಯ ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಟ್ಟಿರಬಹುದು. ಆದರೆ, ಸರ್ಕಾರ ದುರ್ಬಲ ವರ್ಗದ ಒಬ್ಬ ಅಧಿಕಾರಿಯ ಸ್ವಯಂ ನಿವೃತ್ತಿಯ ಅರ್ಜಿಯನ್ನು ಅಂಗೀಕರಿಸಲು ತೋರಿದ ತರಾತುರಿಯನ್ನು ಅದೇ ಲಿಂಗಾಯತ,

ಬ್ರಾಹ್ಮಣ ಅಧಿಕಾರಿಯ ವಿಚಾರದಲ್ಲಿಯೂ ತೋರುತ್ತಿತ್ತೇ ಎಂಬ ಪ್ರಶ್ನೆ ಎದ್ದರೆ ಅದಕ್ಕೆ ಉತ್ತರ ಇದ್ದಂತಿಲ್ಲ. ಇಲ್ಲಿಯೇ ಸರ್ಕಾರ ಎಡವಿದಂತಿದೆ. ಖಾಸಗಿ ಕಂಪೆನಿಗಳಲ್ಲಿ ಒಬ್ಬ ಸಿಬ್ಬಂದಿ ನೌಕರಿಗೆ ರಾಜೀನಾಮೆ ಕೊಟ್ಟರೆ ಆತನ 'ಎಕ್ಸಿಟ್ ಇಂಟರ್‌ವ್ಯೂ' ನಡೆಯುತ್ತದೆ. ಕನಿಷ್ಠ ಅದನ್ನಾದರೂ ಸರ್ಕಾರ ಮಾಡಬಹುದಿತ್ತು.

ಕೆಂಪಯ್ಯ ಕಾನೂನು ಹೋರಾಟ ನಡೆಸಿದರೆ ಗೆದ್ದು ಬಿಡಬಹುದು. ಸ್ವಯಂ ನಿವೃತ್ತಿಗೆ ಅರ್ಜಿ ಅಂಗೀಕಾರವಾಗಿ ಪಿಂಚಣಿ ಕೂಡ ತೆಗೆದುಕೊಳ್ಳಲು ಆರಂಭಿಸಿದವರಿಗೆ ಅವರ ಕೋರಿಕೆಯಂತೆ ಮತ್ತೆ ಸೇವೆಗೆ ತೆಗೆದುಕೊಳ್ಳಬೇಕು ಎಂದು ನ್ಯಾಯಾಲಯದ ಆದೇಶಗಳು ಇವೆ. ಅದು ಕೆಂಪಯ್ಯನವರಿಗೆ ಬಿಟ್ಟ ವಿಚಾರ. ಆದರೆ, ಪೊಲೀಸ್ ಇಲಾಖೆ ಹೇಗೆ ನಡೆಯುತ್ತಿದೆ? ಡಿ.ಜಿ.ಪಿ ಸಿಂಗ್ ಸುಖವಾಗಿ ಇದ್ದಾರೆಯೇ? ಅವರಿಗೆ ಏಕೆ ಇಷ್ಟು ಅಸಹನೆ? ಇದು ಹತಾಶೆಯಿಂದ ಬಂದುದೇ?... ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎಷ್ಟು ಮಂದಿ ಪೊಲೀಸ್ ಸಿಬ್ಬಂದಿಯ ವರ್ಗಾವಣೆ ಮಾಡಿದೆ ಎಂಬ ಲೆಕ್ಕ ಇಟ್ಟವರು ಯಾರೂ ಇಲ್ಲ. ಆ ಎಲ್ಲ ವರ್ಗಾವಣೆಗಳು ಆದುದು ಹೇಗೆ? ಇಲಾಖೆಯ ಮುಖ್ಯಸ್ಥರಾದ ಸಿಂಗ್ ಅದಕ್ಕೆ ಶಿಫಾರಸು ಮಾಡಿದರೇ? ಅಥವಾ ವಿಧಾನಸೌಧದ ಮೂರನೇ ಮಹಡಿಯಿಂದ ಬಂದ ಆದೇಶಗಳಿಗೆಲ್ಲ ರುಜು ಹಾಕಿ ಕಳುಹಿಸಿದರೇ? ಖಾಸಗಿಯಾಗಿ ಇದಕ್ಕೆ ಉತ್ತರ ಹೇಳುವ ಪೊಲೀಸ್ ಅಧಿಕಾರಿಗಳು ಅಧಿಕೃತವಾಗಿ ಮಾತನಾಡಲು ಹಿಂದೇಟು ಹಾಕುತ್ತಾರೆ.

ಸಿಂಗ್ ಅವರು ಕೆಂಪಯ್ಯ ಅವರ ಜತೆಗೆ ಜಟಾಪಟಿ ನಡೆದ ಹಿಂದಿನ ದಿನವೂ ಅವರಿಬ್ಬರ ನಡುವೆ ಅಹಿತಕರ ಘಟನೆ ನಡೆದಿತ್ತು. ರಾತ್ರಿ, ಸಿಂಗ್ ಅವರೇ ಫೋನ್ ಮಾಡಿ 'ಡಿಡ್ ಐ ಹರ್ಟ್ ಯು? ಐ ಆ್ಯಂ ಸಾರಿ' ಎಂದಿದ್ದರು. ಇದು ಒಬ್ಬ ನಾಯಕನ ಲಕ್ಷಣ. ಆದರೆ, ಅದೇ ಸಿಂಗ್ ಮರುದಿನ ಬದಲಾದರು. ಕೆಂಪಯ್ಯ ಎಷ್ಟೇ ಹೆಸರು ಮಾಡಿರಬಹುದು. ಆದರೆ ಅವರ ರಾಜೀನಾಮೆ ಅಂಗೀಕಾರವಾದಾಗ ಸಿಹಿ ಹಂಚಿದವರೂ ಇದ್ದರು. ಎಲ್ಲ ಇಲಾಖೆಗಳಲ್ಲಿ ಈ ವೃತ್ತಿಮಾತ್ಸರ್ಯ ಇದ್ದೇ ಇರುತ್ತದೆ; ಅಥವಾ ಕೆಂಪಯ್ಯ ವೈರಿಗಳನ್ನು ಸೃಷ್ಟಿಸಿಕೊಂಡಿದ್ದರೇ?

'ಊರಿಗೆ ಬಂದ ಪತ್ರಗಳನ್ನು ನನ್ನ ಮಗ ಓದಿದರೆ ಸಾಕು' ಎನ್ನುವಂಥ ಕುಟುಂಬದಲ್ಲಿ ಹುಟ್ಟಿದ್ದ (ಕನಕಪುರ ತಾಲ್ಲೂಕು ಗೊಲ್ಲಹಳ್ಳಿ) ಕೆಂಪಯ್ಯ, 'ಐಪಿಎಸ್ ಕೆಂಪಯ್ಯ' ಎಂದು ಹೆಸರು ಮಾಡಿದ್ದು ಮುಳ್ಳು ಕಂಟಿಗಳ ಹಾದಿ. ಎಸ್ಸೆಸ್ಸೆಲ್ಸಿಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗಿ ಶಿಕ್ಷಣ ಮುಂದುವರಿಸಲು ದಾರಿ ತೋರದೆ ಬೆಂಗಳೂರಿನ ಗಲ್ಲಿ ಗಲ್ಲಿಗಳ ಹೋಟೆಲ್‌ಗಳಲ್ಲಿ ಕ್ಲೀನರ್, ಸಪ್ಲೈಯರ್ ಎಂದೆಲ್ಲ ಕೆಲಸ ಮಾಡಿದವರು. ಒಬ್ಬ ಸಪ್ಲೈಯರ್ ನೆರವಿನಿಂದಲೇ ನೌಕರಿಗೆ ಸೇರಿದವರು. ಕೆಲಸ ಮಾಡುತ್ತಲೇ ಸಂಜೆ ಕಾಲೇಜಿನಲ್ಲಿ ಓದಿ ಶಿಕ್ಷಕರೊಬ್ಬರ ನೆರವಿನಿಂದ ಐ.ಪಿ.ಎಸ್ ಪಾಸಾದವರು. ರಾಜೀವ ಗಾಂಧಿ ಹತ್ಯೆ ಮಾಡಿದ ಶಿವರಾಸನ್ ಮತ್ತು ಶುಭಾ ಬಂಧನಕ್ಕೆ ಬೆಂಗಳೂರಿನ ಕೋಣನಕುಂಟೆಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮುಂಚೂಣಿಯಲ್ಲಿ ಇದ್ದವರು. ವೀರಪ್ಪನ್ ಬೇಟೆಗೆ ನಿಯೋಜಿತವಾಗಿದ್ದ ಎಸ್.ಟಿ.ಎಫ್‌ನ ಮುಖ್ಯಸ್ಥರೂ ಆಗಿ ಕೆಲಸ ಮಾಡಿದವರು. ಕೆಲಸ ಮಾಡಿದಲ್ಲೆಲ್ಲ ದಕ್ಷ

ಎಂದು ಹೆಸರು ಮಾಡಿದವರು. ಆದರೆ, ಕೆಂಪಯ್ಯ ಮೇಲೆ ಲೋಕಾಯುಕ್ತ ದಾಳಿ ಆಗಿತ್ತು. ಅವರ ಜಾತಿ ಪ್ರಮಾಣಪತ್ರದ ಬಗ್ಗೆ ಪುಕಾರುಗಳು ಇದ್ದುವು. ಅದೆಲ್ಲ ಸೇವೆಯಲ್ಲಿ ಅವರಿಗೆ ಸಿಕ್ಕ ಬಡ್ತಿಗೆ ಅಡ್ಡಿಯಾಗಿರಲಿಲ್ಲ.

ಸಣ್ಣ ತಪ್ಪಿಗೂ 'ಸಾರಿ' ಎನ್ನುವ ಸಿಂಗ್, ನಮ್ರ ಹಿನ್ನೆಲೆಯಿಂದ ಬಂದ ಕೆಂಪಯ್ಯ ಇನ್ನಷ್ಟು ಪ್ರಬುದ್ಧವಾಗಿ ವರ್ತಿಸಬೇಕಿತ್ತು. ತಮ್ಮ ಭಿನ್ನಾಭಿಪ್ರಾಯಗಳನ್ನು ತಮ್ಮ ಕೈಕೆಳಗಿನ ಅಧಿಕಾರಿಗಳ ಎದುರು ತೋರಿಸಬಾರದಿತ್ತು. ತೋರಿಸಿದ್ದು ತಪ್ಪಾಯ್ತು ಎಂದು ಇಬ್ಬರೂ ತಿಳಿದುಕೊಳ್ಳಬೇಕಿತ್ತು. ಸ್ವಯಂ ನಿವೃತ್ತಿ ಅರ್ಜಿ ಬರೆಯುವುದಕ್ಕಿಂತ ಮುಂಚೆ ಕೆಂಪಯ್ಯ ಗೃಹ ಸಚಿವರನ್ನೋ, ಮುಖ್ಯಮಂತ್ರಿಯವರನ್ನೋ ಭೇಟಿ ಮಾಡಬಹುದಿತ್ತು. ತಮ್ಮ ಹುದ್ದೆಗೆ ತಕ್ಕ ಸಿಬ್ಬಂದಿಯಿಲ್ಲ, ಏನು ಮಾಡಲಿ ಎಂದು ಕೇಳಬೇಕಿತ್ತು. ಸರ್ಕಾರವೂ ಎಲ್ಲಿಯೋ ತಪ್ಪಾಗಿದೆ ಎಂದು ತಿಳಿಯಲು ಪ್ರಯತ್ನ ಮಾಡಬಹುದಿತ್ತು. ವಿಚಿತ್ರ ಎಂದರೆ ಯಾರೂ ವಿವೇಚನೆ ಬಳಸಿದಂತೆ ಕಾಣುವುದಿಲ್ಲ. ಅದರ ಪರಿಣಾಮಗಳು ಮುಂದೆ ಗೋಚರಿಸಬಹುದು. ಗೋಚರಿಸದೆಯೂ ಇರಬಹುದು. ಆದರೆ, ಇಂಥ ಘಟನೆಗಳು ಎಲ್ಲರಿಗೂ ಒಂದು ಪಾಠ ಆಗಬೇಕು. ಆದಾವೇ ಎಂಬುದೇ ಪ್ರಶ್ನೆ.

■

# ಮರಳಿ ಶಾಲೆಗೆ ಹೋದರು 25 ವರ್ಷಗಳ ನಂತರ!

*ಕೋಯಿ ಲೌಟಾ ದೇ ಮೇರೆ ಬಿತೆ ಹುವೆ ದಿನ್ ಬಿತೆ ಹುವೆ ದಿನ್ ಥೇ ಮೇರೆ ಪ್ಯಾರೆ ಪಲ್‌ಚಿನ್...* ಕಳೆದು ಹೋದ ಬಾಲ್ಯವನ್ನು, ಕಲಿತ ಶಾಲೆಯನ್ನು, ವಾರಿಗೆಯ ಗೆಳೆಯರನ್ನು, ಕಲಿಸಿದ ಗುರುಗಳನ್ನು, ಪ್ರೇಮಿಯನ್ನು, ಕಳೆದುಕೊಂಡ ಅಪ್ಪ ಅವ್ವನನ್ನು ನೆನಪಿಸಿಕೊಂಡಾಗಲೆಲ್ಲ ಮನಸ್ಸು ಆರ್ದ್ರವಾಗುತ್ತದೆ. ಭಾವುಕವಾಗುತ್ತದೆ.

ನೆನಪುಗಳೇ ಹಾಗೆ; ಕೆಲವು ಕಹಿ, ಕೆಲವು ಸಿಹಿ. ಒಂದಕ್ಕೊಂದು ಸಂಬಂಧವಿಲ್ಲದ ನೆನಪುಗಳೆಲ್ಲ ತಳಕು ಹಾಕಿಕೊಂಡು ಮನಸ್ಸನ್ನು ಮುತ್ತುತ್ತವೆ. ಮುತ್ತಿ ಕಾಡುತ್ತವೆ. ಮತ್ತೆ ಆ ದಿನಗಳು ಬಂದಾವೇ ಎನಿಸುತ್ತದೆ. 'ಯಾರಾದರೂ ಆ ದಿನಗಳನ್ನು ಮರಳಿಸುವಿರಾ?' ಎಂದು ಮನಸ್ಸು ಆರ್ತವಾಗಿ ಮೊರೆಯುತ್ತದೆ. ಕಿಶೋರ್ ಹಾಡಿದ 'ಕೊಯಿ ಲೌಟಾ ದೇ...' ಹಾಡು ಕೇಳುತ್ತ ಕೇಳುತ್ತ ಕಣ್ಣು ತೇವವಾಗುತ್ತವೆ, ಮನಸ್ಸು ಒದ್ದೆಯಾಗುತ್ತದೆ.

ಒಂದು ಜೀವ ಬದುಕುವ ದಾರಿಯನ್ನು, ಅನ್ನವನ್ನು ಹುಡುಕಿಕೊಂಡು ಎಲ್ಲಿಗೋ ಹೋಗುತ್ತದೆ. ಅನೇಕ ಸಾರಿ ಅದು ಹುಟ್ಟಿ ಬೆಳೆದ ನೆಲದ ಬೇರುಗಳಿಂದ ದೂರ... ಬಹು

ದೂರ... ಹಾಗಾಗಿಯೇ ಹುಟ್ಟಿದ ಊರು ಮತ್ತೆ ನೆನಪಿನ ಪಟಲದಲ್ಲಿ ಮೂಡಿ ಮೂಡಿ ಮರೆಯಾಗುತ್ತ ಇರುತ್ತದೆ.

ಹೀಗೆ ದೂರ ಬಹು ದೂರ ಹೋದವರು ಮೊನ್ನೆ ಬೆಳಗಾವಿಯ ಚಿಂತಾಮಣಿ ರಾವ್ ಸರ್ಕಾರಿ ಪ್ರೌಢಶಾಲೆಯಲ್ಲಿ ಮತ್ತೆ ಸೇರಿದ್ದರು. ಅದೂ ಸರಿಯಾಗಿ 25 ವರ್ಷಗಳ ನಂತರ!

40ರ ಅಂಚಿನ ಈ ವಿದ್ಯಾರ್ಥಿಗಳೆಲ್ಲ ತಾವು ಕಲಿಯುವಾಗ ಇದ್ದ ಖಾಕಿ ಪ್ಯಾಂಟು, ಬಿಳಿ ಅಂಗಿಯ ಸಮವಸ್ತ್ರ ಧರಿಸಿ, ಹೆಗಲಿಗೆ ಒಂದು ಬ್ಯಾಗು, ಅದರಲ್ಲಿ ಒಂದಿಷ್ಟು ಪುಸ್ತಕ ಹಾಕಿಕೊಂಡು ಸೈಕಲ್ ಹತ್ತಿ ಶಾಲೆಗೆ ಹೊರಟರು. ಶಾಲೆ ಆವರಣದಲ್ಲಿ ಆಗ ಪೆಪ್ಪರ್‌ಮಿಂಟ್ ಬರ್ಫ, ಶೇಂಗಾ, ಪೆನ್, ಪೆನ್ಸಿಲ್, ನೋಟು ಪುಸ್ತಕ ಮಾರುತ್ತಿದ್ದವರೂ ಅಂಗಡಿ ಹಾಕಿದ್ದರು. ಹಾಕುವಂತೆ ಹಳೆಯ ವಿದ್ಯಾರ್ಥಿಗಳೇ ಹೇಳಿದ್ದರು. ಆಗ ಚಲಾವಣೆಯಲ್ಲಿ ಇದ್ದು ಈಗ ಎಲ್ಲಿಯೂ ಸಿಗದಿರುವ ಮೂರು, ಐದು ಮತ್ತು ಹತ್ತು ಪೈಸೆ ನಾಣಗಳನ್ನೂ ಗೆಳೆಯರು ಕೂಡಿ ಹಾಕಿದ್ದರು. ಪೆಪ್ಪರ್‌ಮಿಂಟ್ ಖರೀದಿಸಲು! ಕೆಲವರು ಹಿಂದಿನ ಹಾಗೆಯೇ ಕ್ರಾಫ್ ಮಾಡಿಸಿ ಕೊಂಡಿದ್ದರು. ಆಗ ಕರೆಯುತ್ತಿದ್ದ 'ಅಡ್ಡ' ಹೆಸರುಗಳಾದ ಅಭ್ಯಾ, ರವ್ಯಾ, ಸುಂಬಳ್ಯಾ. ಚಕ್ಕಲಿ, ನಾಗಿನ್ ಎಂದೆಲ್ಲ ಪರಸ್ಪರರನ್ನು ಕರೆದುಕೊಂಡು ಮಜಾ ಮಾಡಿದರು.

25 ವರ್ಷಗಳ ಹಿಂದೆ ಪ್ರಾರ್ಥನೆ ಹೇಳುತ್ತಿದ್ದ ಗುರುಗಳು ಈಗಲೂ ಪ್ರಾರ್ಥನೆ ಮಾಡಿಸಿದರು. ಅದಕ್ಕಿಂತ ಮುಂಚೆ ಆಗ ಗಂಟೆ ಬಾರಿಸುವವರೇ ಬಂದು ಗಂಟೆಯನ್ನೂ ಬಾರಿಸಿದರು. ಆಗ ಇದ್ದ ಪಠ್ಯ ಪುಸ್ತಕಗಳನ್ನೇ ಬೆಳಗಾವಿ, ಧಾರವಾಡ, ಬಾಗಲಕೋಟೆ ಇತ್ಯಾದಿ ಊರುಗಳನ್ನು ಸುತ್ತಿ, ಹಳೆಯ ಪುಸ್ತಕದ ಅಂಗಡಿ ಅಲೆದಾಡಿ ಹುಡುಗರು ತಂದಿದ್ದರು. ತಾವು ಆಗ ಕುಳಿತುಕೊಳ್ಳುತ್ತಿದ್ದ ಬೆಂಚುಗಳ ಮೇಲೆಯೇ ಈಗಲೂ ಕುಳಿತುಕೊಂಡರು. ಈಗ ನಿವೃತ್ತರಾಗಿ ಮನೆಯಲ್ಲಿ ಇರುವ ಆಗಿನ ಶಿಕ್ಷಕರು ಅದೇ ಹಾಜರಿ ಪುಸ್ತಕ ಹಿಡಿದು ಹಾಜರಿ ತೆಗೆದುಕೊಂಡರು. ಅದೇ ಪುಸ್ತಕಗಳನ್ನು ಇಟ್ಟುಕೊಂಡು ಪಾಠ ಮಾಡಿದರು. ತಪ್ಪು ಉತ್ತರ ಕೊಟ್ಟ ವಿದ್ಯಾರ್ಥಿಗಳಿಗೆ ಉಟಾಬಸಿ ಶಿಕ್ಷೆ ಕೊಟ್ಟರು, ಕಿವಿ ಹಿಂಡಿದರು. ಶಿಕ್ಷೆ ಅನುಭವಿಸಿದವರಲ್ಲಿ ಬೆಳಗಾವಿ ದಕ್ಷಿಣ ಕ್ಷೇತ್ರದ ಶಾಸಕ ಅಭಯ ಪಾಟೀಲರೂ ಒಬ್ಬರು. ವಿಶೇಷ ಎಂದರೆ ಅಭಯ ಪಾಟೀಲರೇ ಈ ಇಡೀ ಹಳವಂಡದ ಕೇಂದ್ರ ಬಿಂದು. ಎರಡು ಸಾರಿ ಶಾಸಕರಾಗಿ ಆಯ್ಕೆಯಾದ ಅವರನ್ನು ಸನ್ಮಾನಿಸಲು ಗೆಳೆಯರೆಲ್ಲ ತೀರ್ಮಾನಿಸಿದಾಗ ತಮ್ಮನ್ನು ಸನ್ಮಾನಿಸುವ ಬದಲು ನಮಗೆಲ್ಲ ಕಲಿಸಿದ ಗುರುಗಳಿಗೆ ಸನ್ಮಾನಿಸೋಣ, ಶಾಲೆಯನ್ನು ಅಭಿವೃದ್ಧಿ ಮಾಡೋಣ ಎಂದು ಅಭಯ್ ಸೂಚಿಸಿದ್ದರು.

ಎರಡು ದಿನಗಳ ಈ ಕ್ಲಾಸ್‌ಗಳು ಮುಗಿದ ಮೇಲೆ ಆಗಿನ 52 ವಿದ್ಯಾರ್ಥಿಗಳ ಪೈಕಿ 46 ವಿದ್ಯಾರ್ಥಿಗಳಿಗೆ ಅಂದು ಉಪಯೋಗಿಸುತ್ತಿದ್ದ ಕಂಪಾಸ್ ಪೆಟ್ಟಿಗೆ, ಒಂದು ತಿಂಗಳ ಶಾಲಾ ಹಾಜರಾತಿಯ ಪ್ರತಿ, ಶಾಲೆಯ ಚಿತ್ರ ಇರುವ ನೆನಪಿನ ಕಾಣಿಕೆಗಳನ್ನು ಕೊಟ್ಟು ಸತ್ಕರಿಸಿದ್ದೂ ಆಯಿತು. ತಮಗೆ ಕಲಿಸಿದ 19 ಮಂದಿ ಶಿಕ್ಷಕರಿಗೆ ಬೆಳ್ಳಿ ತಟ್ಟೆ, ಶಾಲು ಫಲಪುಷ್ಪಗಳನ್ನು ಕೊಟ್ಟು ವಿದ್ಯಾರ್ಥಿಗಳೂ ಸನ್ಮಾನಿಸಿದರು. ಸಂದರ್ಭದ ನೆನಪಿಗಾಗಿ

'ನೆನಪಿನ ಬುತ್ತಿ' ಎಂಬ ಸ್ಮರಣ ಸಂಚಿಕೆಯನ್ನು ಹೊರತಂದರು. ಕಾರಂಜಿ ಮಠದ ಗುರುಸಿದ್ಧ ಸ್ವಾಮಿಗಳು ಈ ಸಂಭ್ರಮಕ್ಕೆಲ್ಲ ಸಾಕ್ಷಿಯಾದರು.

ಹೊಳೆಯ ನೀರು ಹರಿದು ಹೋದಂತೆ ಆಗ ಜತೆಯಾಗಿ ಕಲಿತವರೆಲ್ಲ ಎಲ್ಲೆಲ್ಲಿಯೋ ಚದರಿ ಹೋಗಿದ್ದರು. ಗುರುಗಳೂ ಅಷ್ಟೇ. ಅದರಲ್ಲಿಯೂ ಹೆಣ್ಣು ಮಕ್ಕಳನ್ನು ಹುಡುಕುವುದು ಕಷ್ಟ. ಹುಡುಕಲು ಹೋದರೆ 'ಏಕೆ' ಎಂದೆಲ್ಲ ಅನುಮಾನದ ಕಣ್ಣುಗಳು ಬೆನ್ನು ಹತ್ತಿದವು. ಮಂಜುಳಾ ಟೀಚರ್‌ಗಾಗಿ ಬೆಳಗಾವಿ ಸುತ್ತಮುತ್ತ ಮಾತ್ರವಲ್ಲ, ಚಾಮರಾಜನಗರ, ಮಂಡ್ಯ, ಮೈಸೂರುವರೆಗೂ ಹೋಗಿ ಶೋಧ ನಡೆಯಿತು. ಇವರು ಹುಡುಕಿದ್ದು ಹೈಸ್ಕೂಲಿನಲ್ಲಿ, ಅವರು ಇದ್ದುದು ಮೈಸೂರಿನ ಜೂನಿಯರ್ ಕಾಲೇಜಿನಲ್ಲಿ! ಮತ್ತೊಬ್ಬ ಸಹಪಾಠಿಗಾಗಿ ಗದಗ, ಕೊಪ್ಪಳ, ಗಂಗಾವತಿ, ರಾಯಚೂರು, ಗುಲ್ಬರ್ಗ ಎಂದೆಲ್ಲ ಹುಡುಕಿದರೂ ಅವರು ಸಿಕ್ಕಿದು ವಿಜಾಪುರದಲ್ಲಿ. ಒಬ್ಬ ಸಹಪಾಠಿ ಬೆಳಗಾವಿಯಲ್ಲಿಯೇ ಇದ್ದಾರೆ ಎಂದು ತಿಳಿದು ಯಾವುದೋ ಮನೆಗೆ ಹೋದರೆ ಆ ಮನೆಯಿಂದ ಹೊರಗೆ ಬಂದವರು ಅದೇ ಹೆಸರಿನ 60ರ 'ಹರಯ'ದ ವೃದ್ಧೆ!

ಈ ಹುಡುಗರು ಹೇಗೆ ಹೇಗೋ ಕೂಡಕೊಂಡು ಬರೀ ಪೆಪ್ಪರ್‌ಮಿಂಟ್ ತಿಂದು, ಸನ್ಮಾನ ಮಾಡಿ, ಮಾಡಿಸಿಕೊಂಡು ಮನೆಗೆ ಹೋಗಲಿಲ್ಲ ಎಂಬುದೇ ಅದೃಷ್ಟ. ತಾವು ಕಲಿತ ಶಾಲೆಯ ಜೀರ್ಣೋದ್ಧಾರಕ್ಕಾಗಿ ಒಂದು ಕೋಟಿ ರೂಪಾಯಿ ವೆಚ್ಚದ ಯೋಜನೆಯನ್ನು ಈ ಕಾರ್ಯಕ್ರಮಕ್ಕಿಂತ ಮೊದಲೇ ರೂಪಿಸಿದ್ದರು. ಸರ್ವ ಶಿಕ್ಷಣ ಅಭಿಯಾನ, ಶಾಸಕರ ನಿಧಿ ಮತ್ತು ವಿದ್ಯಾರ್ಥಿಗಳ ದೇಣಿಗೆ ಒಟ್ಟುಗೂಡಿಸಿ 40 ಲಕ್ಷ ರೂಪಾಯಿ ವೆಚ್ಚದಲ್ಲಿ ಶಾಲಾ ಕೊಠಡಿಗಳ ನವೀಕರಣ, ಇನ್ನು 40 ಲಕ್ಷ ರೂಪಾಯಿಗಳಲ್ಲಿ ಹೊಸ ಕೊಠಡಿಗಳ ನಿರ್ಮಾಣ (ಈ ಕೆಲಸ ಬಹುತೇಕ ಮುಗಿಯುವ ಹಂತಕ್ಕೆ ಬಂದಿದೆ), ಉಳಿದ 20 ಲಕ್ಷ ರೂಪಾಯಿಗಳಲ್ಲಿ ವಾಚನಾಲಯ, ಪ್ರಯೋಗಾಲಯ, ಸುಣ್ಣ ಬಣ್ಣ, ಆವರಣ ಗೋಡೆ ನಿರ್ಮಾಣ ಮಾಡಲು ತೀರ್ಮಾನಿಸಿದ್ದಾರೆ. ಶಾಲೆಗೆ ಬಂದ ದಿನವೇ ಇವರೆಲ್ಲ ಶ್ರಮದಾನ ಮಾಡಿ ಸುಣ್ಣ ಬಣ್ಣವನ್ನೂ ಬಳಿದೇ ಬಿಟ್ಟರು. ಈ ಶಾಲೆಯಲ್ಲಿ ಓದುವ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರಿಸಲು 10 ಲಕ್ಷ ರೂಪಾಯಿಗಳ ಒಂದು ನಿಧಿ ಸ್ಥಾಪಿಸಲು ನಿರ್ಧರಿಸಲಾಗಿದೆ. ಇತರ ಗೆಳೆಯರ ಹಾಗೆ ತನಗೆ ದುಡ್ಡು ಕೊಡಲು ಆಗದು ಎಂದ ಒಬ್ಬ ವಿದ್ಯಾರ್ಥಿ, ಶಾಲೆಯಲ್ಲಿ ನೆಟ್ಟ ಗಿಡಗಳಿಗೆ ಒಂದು ವರ್ಷ ಕಾಲ ನೀರು ಹಾಕಲು ಮುಂದೆ ಬಂದಿದ್ದಾನೆ.

ಅನೇಕ ಸಾರಿ ಶಾಲೆಯ, ಗೆಳೆಯರ ಹಳವಂಡಗಳಲ್ಲಿಯೇ ಸಂತಸ ಅಥವಾ ಆತ್ಮರತಿ ಅನುಭವಿಸುತ್ತ ಕಾಲ ಕಳೆಯುತ್ತ ಇರುತ್ತೇವೆ. ಅದು ಇಂಥ ಸಾರ್ಥಕ ಕ್ರಿಯೆಯಾಗಿ ಪರ್ಯವಸಾನ ಆಗುವುದೇ ಇಲ್ಲ. ಯಾವುದೋ ಶಾಲೆಯಲ್ಲಿ ಕಲಿತು ಎಲ್ಲೆಲ್ಲಿಗೋ ಹೋಗಿ ಜೀವನ ಸಾಗಿಸುವ ಜನರು ಒಂದಾಗಿ ಕಲಿತ ಶಾಲೆಗೆ ಒಂದಿಷ್ಟು ಸವಲತ್ತು ಒದಗಿಸುವುದು ಸಾಧ್ಯವಾದರೆ ಅದಕ್ಕಿಂತ ದೊಡ್ಡ ಸೇವೆ ಇನ್ನೊಂದು ಇರಲಾರದು. ಏಕೆಂದರೆ ಯಾವುದೇ ಶಾಲೆಗೆ ಅಥವಾ ಶಿಕ್ಷಕರಿಗೆ ವಿದ್ಯಾರ್ಥಿಯಿಂದ ಯಾವ ಪ್ರತಿಫಲಾಪೇಕ್ಷೆಯೂ ಇರುವುದಿಲ್ಲ. ಸರ್ಕಾರಿ ಶಾಲೆಗಳಿಗಂತೂ ಇಂಥ ಸೇವೆಯ ಅಗತ್ಯ

ಇನ್ನೂ ಹೆಚ್ಚು. ಆದರೆ, ಹಾಗೆ ಮಾಡುವವರು ಕಡಿಮೆ. ಚಿಂತಾಮಣರಾವ್ ಶಾಲೆ ಆ ದೃಷ್ಟಿಯಿಂದ ಅದೃಷ್ಟಶಾಲಿ. ಅದು ಕಾಕತಾಳೀಯವ್ವೋ ಅಥವಾ ಜಗತ್ತಿನ ಬೇರೆ ಬೇರೆ ಸ್ಥಳಗಳಲ್ಲಿ ಏಕಕಾಲದಲ್ಲಿಯೇ ಒಂದೇ ಬಗೆಯ ಘಟನೆಗಳು ನಡೆಯುತ್ತವೆ ಎಂಬುದನ್ನು ನಿಜಗೊಳಿಸಲೋ ಇಂಥದೇ ಘಟನೆ ಇದೇ ದಿನಗಳಲ್ಲಿ ಮೈಸೂರಿನ ಮರಿಮಲ್ಲಪ್ಪ ಶಾಲೆಯಲ್ಲಿಯೂ ನಡೆಯಿತು. ಆ ಶಾಲೆಯ ಹಳೆಯ ವಿದ್ಯಾರ್ಥಿಗಳಲ್ಲಿ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಅವರೂ ಒಬ್ಬರು. ಅವರೂ ಶಾಲೆಗೆ ಮರಳಿ ಬಂದಿದ್ದರು ಎಂಬುದು ವಿಶೇಷ.

*ಎ ಶೌರತ್ ಭೀ ಲೇಲೊ*

*ಎ ದೌಲತ್ ಭೀ ಲೇಲೊ*

*ಮಗರ್ ಮುಝೆ ಲೌಟಾದೊ*

*ಮೇರಾ ಬಚ್‌ಪನ್‌ಕಾ ಸಾವನ್...*

ಎಂದು ಬಹುಶಃ ಅವರೆಲ್ಲ ಅಂದು ಹಾಡಿಕೊಂಡಿರಬಹುದು!

■

# ಬರ: ಮಾತಿಗೇನು ಬರ? ಕೃತಿಗೆ....?!

ಮತ್ತೊಂದು ಅಧಿವೇಶನ ಮುಕ್ತಾಯವಾಗಿದೆ. ಇದು ಹತ್ತರಲ್ಲಿ ಹನ್ನೊಂದನೇ ಅಧಿವೇಶನ ಆಗಿರಲಿಲ್ಲ. ಅದಕ್ಕೆ ವಿಶೇಷ ಉದ್ದೇಶವಿತ್ತು, ಹಿನ್ನೆಲೆಯಿತ್ತು. ಒಂದು ಅಜೆಂಡಾ ಇಟ್ಟುಕೊಂಡು ಅಧಿವೇಶನ ನಡೆದುದು ಈಚಿನ ದಶಕಗಳಲ್ಲಿ ಇದೇ ಮೊದಲು. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಕುರಿತು ಹಿಂದೆ ಚರ್ಚೆ ನಡೆದ ಉದಾಹರಣೆ ಯಂತೂ ಇಲ್ಲವೇ ಇಲ್ಲ. ಜನರಿಗೆ ತೀರಾ ಹತ್ತಿರವಾದ ಈ ಎರಡು ವಿಷಯ ಕುರಿತು ಅಧಿವೇಶನದಲ್ಲಿ ಏನು ಚರ್ಚೆ ನಡೆಯುತ್ತದೆ, ಸರ್ಕಾರ ಅದಕ್ಕೆ ಏನು ಉತ್ತರ ಕೊಡುತ್ತದೆ ಎಂಬ ಕುತೂಹಲ ಸರ್ವೇಸಾಮಾನ್ಯವಾಗಿತ್ತು.

ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಕೆಲವರು ಸಹೋದ್ಯೋಗಿಗಳು ಚೀನಾ ಪ್ರವಾಸ ಕೈಗೊಂಡು ಅಧಿವೇಶನದ ಹಿಂದಿನ ದಿನವಷ್ಟೇ ಮರಳಿ ಬಂದಿದ್ದರು. ವಿದೇಶಕ್ಕೆ ಹೋಗಿ ಬಂದ ಎಲ್ಲರಲ್ಲಿ ಇರುವ ಹಾಗೆ ಯಡಿಯೂರಪ್ಪ ಮತ್ತು ಅವರ ಸಹೋದ್ಯೋಗಿಗಳಲ್ಲಿ ಚೀನಾ 'ಹ್ಯಾಂಗ್ ಓವರ್' ಇತ್ತು. ಅದು ಅಲ್ಲಿನ ಅಭಿವೃದ್ಧಿಯನ್ನು ಕಣ್ಣಾರೆ ಕಂಡು ಬಂದ 'ಹ್ಯಾಂಗ್ ಓವರ್'.

80–90 ವರ್ಷದ ಚೀನಾ ಕೃಷಿಕರು ಭಾರವಾದ ವಸ್ತುಗಳನ್ನು ತಾವೇ ಎತ್ತಿ ಇಡುವುದನ್ನು ಯಡಿಯೂರಪ್ಪ ಕಣ್ಣಾರೆ ಕಂಡಿದ್ದರು. ಚೀನಾದಲ್ಲಿನ ಕೃಷಿ ಉತ್ಪಾದನೆ ಜತೆಗೆ ಅಲ್ಲಿನ ಕೃಷಿಕರ ಆರೋಗ್ಯವಂತಿಕೆ ಕೂಡ ಅವರ ಕಣ್ಣು ಕುಕ್ಕಿತ್ತು. ಚೀನಾದ ಕೃಷಿ ಸಂಪತ್ತಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಈಗ ತದ್ವಿರುದ್ಧ ಚಿತ್ರ. 80ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಬರ ಬಿದ್ದಿದೆ. ಕೃಷಿಕರು ಗುಳೆ ಹೋಗಿದ್ದಾರೆ. ನೀರಿಗೆ ಹಾತೊರೆದು ಭೂಮಿ ಬಿರುಕು ಬಿಟ್ಟಿದೆ. ಕೃಷಿ ಕೈಕೊಟ್ಟು ಗ್ರಾಮೀಣ ಬದುಕು ತತ್ತರಿಸಿ ಹೋಗಿದೆ. ವಿಶೇಷ ಅಧಿವೇಶನದ ಕಡೆಗೆ ರೈತರು, ಗ್ರಾಮೀಣರು ಕಣ್ಣು ನೆಡಲು ಇದೆಲ್ಲ ಹಿನ್ನೆಲೆಯಾಗಿತ್ತು. ಆದರೆ, ಅವರ ಎಲ್ಲ ಆಸೆಗಳಿಗೆ ತಣ್ಣೀರು ಎರಚುವಂಥ ವಿದ್ಯಮಾನ ವಿಧಾನಮಂಡಲದಲ್ಲಿ ನಡೆಯಿತು.

'ವಿರೋಧ ಪಕ್ಷಗಳು ಕದನ ಕುತೂಹಲಿಗಳಾಗಿದ್ದಾರೆ. ಅವರಿಗೆ ಕೃಷಿ, ಗ್ರಾಮೀಣ ಅಭಿವೃದ್ಧಿಗಿಂತ ತಮ್ಮನ್ನು ಹಣಿಯುವುದು, ಇಕ್ಕಟ್ಟಿಗೆ ಸಿಲುಕಿಸುವುದೇ ಮುಖ್ಯ' ಎಂಬುದನ್ನು ತಿಳಿಯದಷ್ಟು ಯಡಿಯೂರಪ್ಪ ಅನನುಭವಿಯೇನೂ ಅಲ್ಲ. ಅದಕ್ಕಾಗಿಯೇ ಮೊದಲ ಮೂರು ದಿನಗಳ ಕಾಲ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕುರಿತು ಮಾತ್ರ ಚರ್ಚೆ ನಡೆಯಬೇಕು. ವಿರೋಧ ಪಕ್ಷಗಳಿಗೆ ಬೇಕಾದ ಹಗರಣಗಳ ಚರ್ಚೆಗೆ ಮತ್ತೆ ಮೂರು ದಿನ ಅವಕಾಶ ಕೊಡಲಾಗುವುದು ಎಂದು ಅಧಿವೇಶನದ ಅವಧಿಯನ್ನೇ ವಿಸ್ತರಿಸಲಾಯಿತು. ಅದರ ಪರಿಣಾಮ ಏನಾಯಿತೆಂದರೆ ಮೊದಲ ಮೂರು ದಿನದ ಕಲಾಪದಲ್ಲಿ ಸ್ವಾರಸ್ಯವೇ ಹೊರಟು ಹೋಯಿತು. ವಿರೋಧ ಪಕ್ಷದ ನಾಯಕರು ತಮ್ಮ ನಾಲಿಗೆಯನ್ನು ಝಳಪಿಸಿಕೊಂಡಿದ್ದೇ ಬೇರೆ ಕಾರಣಕ್ಕೆ! ಸುದೀರ್ಘ ಮೂರು ದಿನಗಳ ಕಾಲ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಕುರಿತು ಮಾತನಾಡುವಷ್ಟು 'ಬಂಡವಾಳ' ಯಾರ ಬಳಿಯೂ ಇರಲಿಲ್ಲ. 'ಬಂಡವಾಳ' ಇದ್ದವರಿಗೆ ಮಾತನಾಡಲು ಅವಕಾಶ ಸಿಗಲಿಲ್ಲ.

ದುರಂತ ಏನು ಎಂದರೆ ಕೃಷಿ ಮತ್ತು ಹಳ್ಳಿಗಳ ಅಭಿವೃದ್ಧಿಗೆ ನಾವು ಚೀನಾ ಅಥವಾ ಇಸ್ರೇಲ್‌ನಲ್ಲಿ ಮಾದರಿ ಹುಡುಕಲು ಹೊರಡುವುದು. ಯಡಿಯೂರಪ್ಪ ಅವರು ಚೀನಾಕ್ಕೆ ಹೋಗಿ ಬರುವುದಕ್ಕಿಂತ ಹಲವು ವರ್ಷಗಳ ಮುಂಚೆ ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದಾಗ ಆಗಿನ ಕೃಷಿ ಸಚಿವ ಬೈರೇಗೌಡರು ಶಾಸಕರ ಒಂದು ತಂಡ ಕಟ್ಟಿಕೊಂಡು ಇಸ್ರೇಲಿಗೆ ಹೋಗಿದ್ದರು. ಮಾತು ಮಾತಿಗೊಮ್ಮೆ 'ನೀರೇ ಇಲ್ಲದ ಇಸ್ರೇಲಿನಲ್ಲಿ ಹಾಗೆ ಮಾಡಿದ್ದಾರೆ. ಹೀಗೆ ಮಾಡಿದ್ದಾರೆ' ಎಂದು ಬೈರೇಗೌಡರು ಮತ್ತು ಅವರ ತಂಡದವರು ಹೇಳಿದ್ದೇ ಹೇಳಿದ್ದು. ಕನಿಷ್ಠ ಒಂದು ಹಳ್ಳಿಯಲ್ಲಿ ಇಸ್ರೇಲ್ ಮಾದರಿಯನ್ನು ಅನುಸರಿಸಲು ಪ್ರಯತ್ನ ಮಾಡಿದ ಉದಾಹರಣೆ ಕಾಣಲಿಲ್ಲ. ಈಗ ಯಡಿಯೂರಪ್ಪ ಚೀನಾದ ಹಳವಂಡದಲ್ಲಿ ಇದ್ದಾರೆ. ದೂರದ ಮಾದರಿಗಳ ಅನುಕರಣೆಯ ಸಮಸ್ಯೆ ಇದೇ.

ಪಕ್ಕದ ಮಹಾರಾಷ್ಟ್ರದಲ್ಲಿ ಅದ್ಭುತ ಮಾದರಿಗಳು ಇವೆ. ಆಂಧ್ರ, ತಮಿಳುನಾಡು, ಕೇರಳದಲ್ಲಿಯೂ ಅಂಥ ಮಾದರಿಗಳು ಇದ್ದಾವು. ಮಹಾರಾಷ್ಟ್ರದಲ್ಲಿ ಅಣ್ಣಾ ಹಜಾರೆ, ನಾನಾಜಿರಾವ್ ದೇಶಮುಖ್, ಪೋಪಟ್‌ರಾವ್ ಪವಾರ್ ಅವರಂಥವರ ಸಾಧನೆಗಳು

ಜಗತ್ತಿನ ಅನೇಕ ದೇಶಗಳ ಕಣ್ಣು ಸೆಳೆದಿವೆ. ತೆರೆದಿವೆ. ಅಹ್ಮದನಗರ ಜಿಲ್ಲೆಯ ಹಿವರೆ ಬಜಾರ್ ಎಂಬ ಪುಟ್ಟ ಹಳ್ಳಿಯಲ್ಲಿ ಮಾಜಿ ಕ್ರಿಕೆಟಿಗ ಪೋಪಟ್‌ರಾವ್ ಪವಾರ್ ಮಾಡಿದ ಕೃಷಿ ಪವಾಡ ನೋಡಲು ಕಳೆದ ಹತ್ತು ವರ್ಷಗಳಲ್ಲಿ ಕನಿಷ್ಠ 70 ದೇಶಗಳ ಕುತೂಹಲಿಗಳು, ತಜ್ಞರು ಬಂದು ಹೋಗಿದ್ದಾರೆ. ಕೇವಲ ಸಾವಿರ, ಎರಡು ಸಾವಿರ ಜನಸಂಖ್ಯೆಯ ಹಿವರೆ ಬಜಾರ್ ಹಳ್ಳಿಯಲ್ಲಿ ಈಗ ಪ್ರತಿಯೊಬ್ಬನ ತಲಾವಾರು ಆದಾಯ ರೂ. 24,000. ಪೋಪಟ್‌ರಾವ್ ಅಲ್ಲಿ ನೆಲೆಸುವುದಕ್ಕಿಂತ ಮುಂಚೆ ಇದ್ದ ಅವರ ಆದಾಯ 832 ರೂಪಾಯಿ! ಹಳ್ಳಿಯಲ್ಲಿ ಪ್ರತಿ ಮನೆಗೆ ಶೌಚಾಲಯ ಇದೆ. ರಸ್ತೆ, ಚರಂಡಿ ಇದೆ. ವಿದ್ಯುತ್ ದೀಪ ಇದೆ. ತಮ್ಮ ಊರಿನಲ್ಲಿ ನಾಯಿ ಕೂಡ ಶೌಚಾಲಯದಲ್ಲಿಯೇ ಶೌಚಕ್ಕೆ ಹೋಗುತ್ತದೆ ಎಂಬ ಪೋಸ್ಟರ್ ಕೂಡ ಪ್ರದರ್ಶಿಸಲಾಗಿದೆ!

ಹಿವರೆ ಬಜಾರ್ ಪಕ್ಕದಲ್ಲಿ ಒಂದು ಗುಡ್ಡ ಇದೆ. ಅದು ಎಂಥ ಬರಡು ಗುಡ್ಡವಾಗಿತ್ತು ಎಂದರೆ ಅಲ್ಲಿ ಗರಿಕೆ ಹುಲ್ಲು ಕೂಡ ಬೆಳೆಯುತ್ತಿರಲಿಲ್ಲ. ಊರಿನ ಜನರು ಶ್ರಮದಾನ ಮಾಡಿ ಗುಡ್ಡದ ತುಂಬೆಲ್ಲ ಗಿಡ ನೆಟ್ಟರು. ತಾವೇ ನೀರು ಹಾಕಿದರು. ಈಗ ಅದು ದೊಡ್ಡ ಅರಣ್ಯವಾಗಿದೆ. ಕಾಡು ಪ್ರಾಣಿಗಳೂ ವಲಸೆ ಬಂದಿವೆ. ಹಿವರೆ ಬಜಾರ್ ಊರಿಗೆ ನೀವು ಹೋದರೆ ಅಲ್ಲಿನ ಐದಾರು ಕೈಪಂಪ್ ಗಳನ್ನು ಕೇವಲ ಎರಡು ಸಾರಿ ಮಾತ್ರ ಮೇಲೆ ಕೆಳಗೆ ಮಾಡಬೇಕು. ನೀರು ಸುರಿಯುತ್ತದೆ. ಎರಡನೇ ಸಾರಿಗೂ ನೀರು ಬೀಳದಿದ್ದರೆ ನೀವು ಕೇಳಿದ ಬಕ್ಷೀಸ್ ಕೊಡುವೆ ಎಂದು ಆ ಹಳ್ಳಿಯ ಸರಪಂಚರೂ ಆದ ಪೋಪಟ್‌ರಾವ್ ಸವಾಲು ಹಾಕುತ್ತಾರೆ. ಅಲ್ಲಿನ ಸುಂದರ ಮಕ್ಕಳು ಪ್ರತಿದಿನ ಶ್ರಮದಾನ ಮಾಡುವುದು ಕಡ್ಡಾಯ. ತಮ್ಮ ಶಾಲೆಯ ಆವರಣವಲ್ಲದೆ ಹತ್ತಿರದ ರಸ್ತೆಗಳನ್ನೂ ಅವರೇ ಗುಡಿಸುತ್ತಾರೆ. ನಮ್ಮ ಎಚ್.ಕೆ. ಪಾಟೀಲ ಮತ್ತು ಡಿ.ಆರ್. ಪಾಟೀಲ ತಾವಾಗಿ ಹೋಗಿ ಬಂದ ಈ ಊರಿಗೆ ಯಡಿಯೂರಪ್ಪನವರು ಶಾಸಕರನ್ನು ಕಳುಹಿಸುವುದು ಬೇಡವೇ? ಆದರೆ, ಶಾಸಕರಿಗೆ ಹಿವರೆ ಬಜಾರ್‌ಗಿಂತ ಚೀನಾ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ. ಹಿವರೆ ಬಜಾರ್ ಭೇಟಿಯಲ್ಲಿ ಜವಾಬ್ದಾರಿ ಇದೆ, ನಾಚಿಕೆ ಇದೆ. ಚೀನಾ ಭೇಟಿಯಲ್ಲಿ ನಾಚಿಕೆ ಪಡುವುದು ಇರಬಹುದು. ಜವಾಬ್ದಾರಿ ಇದೆ ಎಂದು ಅನಿಸುವುದಿಲ್ಲ. ಏಕೆಂದರೆ ಅಲ್ಲಿ ಮಾಡಿದ್ದು ಇಲ್ಲಿ ಮಾಡಲು ಸಾಧ್ಯವಿಲ್ಲ ಎಂದು ಯಡಿಯೂರಪ್ಪನವರೇ ಈಗ ಕೈ ಚೆಲ್ಲಿದ್ದಾರೆ! 'ಹ್ಯಾಂಗ್ ಓವರ್' ಹೋಗಲು ಎಷ್ಟೊತ್ತು ಬೇಕು?

ಈ ಅಧಿವೇಶನದಲ್ಲಿ ಕೆಳಮನೆಯ ಸದಸ್ಯರೊಬ್ಬರನ್ನು ಮೇಲ್ಮನೆಯಲ್ಲಿ ಅಭಿನಂದಿಸಿದ ಅಪರೂಪದ ಘಟನೆ ನಡೆದಿದೆ. ಅಭಿನಂದನೆಗೆ ಒಳಗಾದವರು ಬೆಳಗಾವಿ ದಕ್ಷಿಣ ಕ್ಷೇತ್ರದ ಶಾಸಕ ಅಭಯ ಪಾಟೀಲ್. ತಮ್ಮ ಕ್ಷೇತ್ರ ವ್ಯಾಪ್ತಿಯ ಹುಲಿಕವಿ ಮತ್ತು ಜಾಫರವಾಡಿ ಗ್ರಾಮಗಳನ್ನು ಹಿವರೆ ಬಜಾರ್, ರಾಳೆಗಾಂವ್‌ಸಿದ್ಧಿ ಮಾದರಿಯಲ್ಲಿಯೇ ಅಭಯ್ ಅಭಿವೃದ್ಧಿಪಡಿಸಿದ್ದಾರೆ. ಕರ್ನಾಟಕದ 'ಮಾದರಿ ಗ್ರಾಮಗಳು' ಎಂದು ಅವು ಈಗಾಗಲೇ ಹೆಸರಾಗಿವೆ. ರಸ್ತೆ, ಚರಂಡಿ, ಶೌಚಾಲಯ ಇತ್ಯಾದಿ ಎಲ್ಲ ಸೌಲಭ್ಯಗಳಿಂದ ಹುಲಿಕವಿ ಸ್ವಯಂಪೂರ್ಣ. ಜಾಫರವಾಡಿಯ ಒಂದು

ರಸ್ತೆಯಲ್ಲಿ ಭೂಮಿಯ ಒಳಗಿನಿಂದ ಕೇಬಲ್ ಹಾಕಿ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಎರಡು ಕಡೆ ಕಾರಂಜಿಗಳೂ ಇವೆ. ತನ್ನ ಮಾದರಿಯಲ್ಲಿ ಇದು ದೇಶದ ಇಂಥ ಏಕೈಕ ಗ್ರಾಮ. ಈ ಊರಿನ ರಸ್ತೆಗಳು, ಚರಂಡಿಗಳು ಅಚ್ಚುಕಟ್ಟು. ಊರಿನ ಎಲ್ಲ ಮನೆಗಳ ಬಣ್ಣ ಕೂಡ ಒಂದೇ. ಗುಡಿ ಗುಂಡಾರಗಳಿಗೆ ಹೋಗಲು ಯಾವ ಜಾತಿಯವರಿಗೂ ನಿರ್ಬಂಧವಿಲ್ಲ.

ವಿಧಾನ ಪರಿಷತ್ತಿನ ಸಭಾಪತಿಯಾಗಿದ್ದ ಸಮಯದಲ್ಲಿ ಹುಲಿಕವಿಗೆ ಭೇಟಿ ನೀಡಿದ್ದ ಪ್ರೊ. ಬಿ.ಕೆ. ಚಂದ್ರಶೇಖರ್, ರಾಜೀವ ಗಾಂಧಿ ಗ್ರಾಮೀಣ ವಿದ್ಯುತ್ ಮಿಷನ್‌ನಿಂದ 150 ಮನೆಗಳಿಗೆ ಸೋಲಾರ್ ದೀಪ ಹಾಕಿಸಿದ್ದರು. ಪ್ರತಿ ಮನೆಗೆ ಸಂಪರ್ಕ ಕಲ್ಪಿಸಲು ತಗುಲಿದ 15,000 ರೂಪಾಯಿ ವೆಚ್ಚವನ್ನು ಮಿಷನ್ ವತಿಯಿಂದಲೇ ಕೊಡಿಸಿದ್ದರು. ಇದೀಗ ಈ ಗ್ರಾಮಕ್ಕೆ ಯೋಜನಾ ಆಯೋಗದ ಉಪಾಧ್ಯಕ್ಷ ಮೊಂಟೆಕ್ ಸಿಂಗ್ ಭೇಟಿ ನೀಡುವ ನಿರೀಕ್ಷೆ ಇದೆ. ಈ ಗ್ರಾಮಕ್ಕೆ ನಮ್ಮ ಶಾಸಕರು ಹೋಗಿ ನೋಡುವುದು ಬೇಡವೇ? ದುರಂತ ನೋಡಿ, ಕೆಲವು ತಿಂಗಳ ಹಿಂದೆ, ಬೆಳಗಾವಿಯಲ್ಲಿ ವಿಧಾನಮಂಡಲ ಅಧಿವೇಶನ ನಡೆದಾಗ ಯಡಿಯೂರಪ್ಪ ನವರು ಮೂರು ವೋಲ್ವೊ ಬಸ್‌ಗಳನ್ನು ಮಾಡಿ ಹುಲಿಕವಿ, ಜಾಫರವಾಡಿ ಭೇಟಿಗೆ ಏರ್ಪಾಡು ಮಾಡಿದರು. ಮೂರೂ ಬಸ್‌ಗಳಲ್ಲಿ ಕುಳಿತ ಶಾಸಕರ ಸಂಖ್ಯೆ ಮೂವತ್ತು ಮೀರಿರಲಿಲ್ಲ. ಇದೂ ನಾಚಿಕೆಯಲ್ಲವೇ?

ಯಡಿಯೂರಪ್ಪನವರಿಗೆ ಅಬ್ದುಲ್ ಕಲಾಂ ಅವರ 'ಪುರ' ಯೋಜನೆಯ ಕನಸು ಬಿದ್ದಿದೆ. ಪುರ ಹೋಗಿ 'ಕಲಾಂಪುರ' ಆಗಿದೆ. 200 ಹೋಬಳಿಗಳಲ್ಲಿ ಇಂಥ 'ಕಲಾಂಪುರ' ಸಾಕಾರ ತಾಳಲಿವೆ. ಖರ್ಚು ಎಷ್ಟು ಎಂದು ಅವರು ಹೇಳಿಲ್ಲ. ಹುಲಿಕವಿ, ಜಾಫರವಾಡಿ ಮಾದರಿ ಗ್ರಾಮಗಳ ನಿರ್ಮಾಣಕ್ಕೆ ಒಟ್ಟು 1.25 ಕೋಟಿ ರೂಪಾಯಿ ಖರ್ಚಾಗಿದೆ. ಆದರೆ, ಕೆಲಸ ಆಗಿರುವುದು 1.65 ಕೋಟಿ ರೂಪಾಯಿ ಯದು. ಹೆಚ್ಚುವರಿ 40 ಲಕ್ಷ ರೂಪಾಯಿಗಳ ಕಾಮಗಾರಿ ಗ್ರಾಮೀಣರ ಶ್ರಮದಾನದ್ದು. ತಿಂಗಳಲ್ಲಿ ಒಂದೊಂದು ದಿನ 15 ಮನೆಗಳ ಗಂಡಾಳು, ಹೆಣ್ಣಾಳುಗಳು ಶ್ರಮದಾನ ಮಾಡಿದ್ದಾರೆ. ಒಂದು ವೇಳೆ ಸರ್ಕಾರ 'ಕಲಾಂಪುರ' ಗ್ರಾಮ ನಿರ್ಮಾಣಕ್ಕೆ ತಲಾ ಕನಿಷ್ಠ ಒಂದು ಕೋಟಿ ರೂಪಾಯಿ ನಿಗದಿ ಮಾಡಿದರೆ ಸೋರಿಕೆ ಹೋಗಿ ಉಳಿಯುವುದು ಎಷ್ಟು? ಲೋಕಾಯುಕ್ತ ಸಂತೋಷ ಹೆಗ್ಡೆ ಅವರ ಪ್ರಕಾರ ಅಭಿವೃದ್ಧಿ ವೆಚ್ಚದಲ್ಲಿ ಅಭಿವೃದ್ಧಿಗಾಗಿಯೇ ಉಳಿಯುವುದು ಕೇವಲ ಶೇ 10ರಷ್ಟು. ಹಾಗಾದರೆ 'ಕಲಾಂಪುರ'ದಲ್ಲಿ ಏನು ಅಭಿವೃದ್ಧಿ ಕಂಡೀತು? ಐದು ವರ್ಷದ ಅವಧಿಯಲ್ಲಿ ಎಲ್ಲ ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಒಂದಾದರೂ ಹುಲಿಕವಿ, ಜಾಫರವಾಡಿ, ಹಿವರೆ ಬಜಾರ್ ನಿರ್ಮಾಣ ಮಾಡುವುದು ಬೇಡವೇ? ಬೇಡವಾದರೆ ಅವರು ನಮಗೆ ಏಕೆ ಬೇಕು? ■

# ಅವರೇಕೆ ಹಾಗೆ!

# ನಾವೇಕೆ ಹೀಗೆ?

ಮತ್ತೆ ಅದೇ ಸಮಸ್ಯೆ. ಅವರು ಹಾಗೇಕೆ? ನಾವು ಹೀಗೇಕೆ? ಎಂಬ ಹೋಲಿಕೆಯ ಸಮಸ್ಯೆ. ಕಳೆದ ವಾರ ಮಹಾರಾಷ್ಟ್ರದ ಹಿವರೆ ಬಜಾರ್ ಹಳ್ಳಿಯಲ್ಲಿ ಆಗಿರುವ ಅಭಿವೃದ್ಧಿ ಕುರಿತು ಸಂಕ್ಷಿಪ್ತವಾಗಿ ಬರೆದಿದ್ದೆ. ಜನರಿಗೆ ಅದೆಷ್ಟು ಕುತೂಹಲ ಎಂದರೆ ಅನೇಕ ಜನ ಆ ಆದರ್ಶ ಹಳ್ಳಿಯ ಬಗ್ಗೆ ಇನ್ನಷ್ಟು ಬರೆಯಿರಿ ಎಂದು ದೂರವಾಣಿ ಕರೆಮಾಡಿ ದುಂಬಾಲು ಬಿದ್ದರು. ಜನರಿಗೆ ಹೀಗೆ ಏಕೆ ಅನಿಸುತ್ತದೆ? ಅವರಿಗೆ ಒಂದು ಕಡೆ ಆಸೆ, 'ನಮ್ಮ ಹಳ್ಳಿಯೂ ಹಿವರೆ ಬಜಾರ್ ಹಾಗೆ ಆದೀತೇ' ಎಂದು. ಇನ್ನೊಂದು ಕಡೆ ಹತಾಶೆ, 'ಇಲ್ಲಿ ಅದೆಲ್ಲ ಆಗುವುದಿಲ್ಲ ಬಿಡಿ' ಎಂದು. ಜನ ಹೀಗೆ ಏಕೆ ಹತಾಶರಾಗುತ್ತಾರೆ? ಅವರಿಗೆ ಭರವಸೆಯೇ ಇಲ್ಲದಂತೆ ಏಕೆ ಆಗುತ್ತದೆ? ರಾಜಕಾರಣಿಗಳು ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕು. ಏಕೆಂದರೆ ಅವರೇ ದೋಷಿಗಳು. ಯೋಜನೆಗಳನ್ನು ರೂಪಿಸುವಲ್ಲಿ ನಿಸ್ಸೀಮರಾದ ರಾಜಕಾರಣಿಗಳು ಅವುಗಳ ಅನುಷ್ಠಾನದಲ್ಲಿ ವಿಫಲರಾಗುತ್ತಾರೆ. ಇಡೀ ವ್ಯವಸ್ಥೆ ಭ್ರಷ್ಟಗೊಂಡಿರುವುದರಿಂದ ಯಾವ ಯೋಜನೆಯೂ ಪರಿಪೂರ್ಣವಾಗಿ ಜನರಿಗೆ ತಲುಪುವುದಿಲ್ಲ. ಅರೆಬರೆಯಾಗಿ

ತಲುಪುವುದು ನಿಷ್ಪ್ರಯೋಜಕ. ಅದಕ್ಕಾಗಿಯೇ ಜನರಿಗೆ ಸರ್ಕಾರಗಳ ಯೋಜನೆಗಳಲ್ಲಿ ನಂಬಿಕೆ ಹೊರಟು ಹೋಗುತ್ತದೆ.

ಆಗ ಕುಮಾರಸ್ವಾಮಿ ಅವರ ಸರ್ಕಾರಕ್ಕೆ ಒಂದು ವರ್ಷ ತುಂಬಿತ್ತು. ಅಧಿಕಾರ ಹಸ್ತಾಂತರಿಸುವ ಕಾಲ ಇನ್ನೇನು ಹತ್ತಿರ ಬರುತ್ತಿತ್ತು. ಗ್ರಾಮ ವಾಸ್ತವ್ಯದ ಗುಂಗಿನಲ್ಲಿ ಇದ್ದ ಕುಮಾರಸ್ವಾಮಿಯವರು ಗ್ರಾಮೀಣ ಕರ್ನಾಟಕಕ್ಕೆ ಏನಾದರು ಮಾಡಬೇಕು ಎಂದು 2006–07ರಲ್ಲಿ ಸುವರ್ಣ ಗ್ರಾಮೋದಯ ಯೋಜನೆ ರೂಪಿಸಿದರು. ಆ ವರ್ಷ ಕರ್ನಾಟಕಕ್ಕೆ 50 ವರ್ಷ ತುಂಬಿತ್ತು. ಮೊದಲ ಹಂತದಲ್ಲಿ 1,204 ಗ್ರಾಮಗಳ ಅಭಿವೃದ್ಧಿಗೆ 1,000 ಕೋಟಿ ರೂಪಾಯಿ ನಿಗದಿ ಮಾಡಲಾಯಿತು. ಮರುವರ್ಷ ಈ ಯೋಜನೆ ಜಾರಿಗೆ ಬಂತು. ಇದುವರೆಗೆ ಈ ಯೋಜನೆಗೆ 800 ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ.

ಸರಿಸುಮಾರು 4,000 ಜನಸಂಖ್ಯೆ ಇರುವ ಪ್ರತಿ ಹಳ್ಳಿಯಲ್ಲಿ ರಸ್ತೆ, ಚರಂಡಿ, ವಿದ್ಯುತ್, ಸಮುದಾಯ ಭವನ, ಅಂಗನವಾಡಿ ಕಟ್ಟಡ, ಕಸ ವಿಲೇವಾರಿಗೆ ಜಮೀನು, ನಿರುದ್ಯೋಗಿ ಯುವಕರಿಗೆ ಕೌಶಲ್ಯ ತರಬೇತಿ ನೀಡುವುದು ಈ ಯೋಜನೆಯ ಉದ್ದೇಶ. ಮೊನ್ನೆ ಮೊನ್ನೆ ಗುಲ್ಬರ್ಗದಲ್ಲಿ ನಡೆದ ಸಂಪುಟ ಸಭೆಯಲ್ಲಿ ಮತ್ತೆ 222 ಗ್ರಾಮಗಳನ್ನು ಈ ಯೋಜನೆಯ ಎರಡನೇ ಹಂತದಲ್ಲಿ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ಅದಕ್ಕಾಗಿ 208 ಕೋಟಿ ರೂಪಾಯಿ ಖರ್ಚು ಮಾಡುವ ಗುರಿ ಇದೆ. ಮೂರನೇ ಹಂತದಲ್ಲಿ 1,545 ಗ್ರಾಮಗಳನ್ನು ಮತ್ತೆ 1,000 ಕೋಟಿ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸುವ ಉದ್ದೇಶ ಇದೆ. ಮೂರು ಹಂತದ ಯೋಜನೆಗೆ ಒಟ್ಟು ತಗಲುವ ವೆಚ್ಚ 2,208 ಕೋಟಿ ರೂಪಾಯಿ ಎಂದಂತಾಯಿತು. ಈಗಾಗಲೇ 670 ಕೋಟಿ ರೂಪಾಯಿ ಖರ್ಚಾಗಿದೆ!

ಈಗ ಖರ್ಚಾಗಿರುವ 670 ಕೋಟಿ ರೂಪಾಯಿಗಳ ಭಾರಿ ಮೊತ್ತದಲ್ಲಿ ಏನೇನು ಅಭಿವೃದ್ಧಿಯಾಗಿದೆ ಎಂಬ ಕುತೂಹಲದಿಂದ ಗ್ರಾಮೀಣ ಅಭಿವೃದ್ಧಿ ಇಲಾಖೆಯನ್ನು ಸಂಪರ್ಕಿಸಿದರೆ '786 ಹಳ್ಳಿಗಳ ರಸ್ತೆ ಮತ್ತು ಚರಂಡಿ ಕೆಲಸ ಪೂರ್ಣವಾಗಿದೆ. 920 ಕಟ್ಟಡಗಳೂ ಸಿದ್ಧವಾಗಿವೆ' ಎಂಬ ಸಿದ್ಧ ಉತ್ತರ ಸಿಕ್ಕಿತು. ಅಲ್ಲಿನ ಹಳ್ಳಿಗರ ಬದುಕು ಬದಲಾಯಿತೇ ಎಂಬ ಪ್ರಶ್ನೆಗೆ ಇಲಾಖೆಯ ಅಧಿಕಾರಿ ಕಕ್ಕಾವಿಕ್ಕಿ! ಈ ಪ್ರಶ್ನೆಗೆ ಅವರಷ್ಟೇ ಅಲ್ಲ ಇಡೀ ಇಲಾಖೆಯೇ ಸಿದ್ಧವಿದ್ದಂತಿರಲಿಲ್ಲ. ಜನರಿಗೆ ಏಕೆ ಹತಾಶೆ ಆಗುತ್ತದೆ ಎಂಬುದಕ್ಕೆ ಇದೇ ಉತ್ತರ. ತನ್ನ ಮುಂದೆ ಆಗುವ ಅಭಿವೃದ್ಧಿ ತನ್ನ, ತನ್ನ ಹಳ್ಳಿಯ ಅಭಿವೃದ್ಧಿ ಎಂದು ಅನಿಸುವುದಿಲ್ಲ. ಅದು ಅವರ ಜೀವನ ಮಟ್ಟವನ್ನೂ ಎತ್ತರಿಸುವುದಿಲ್ಲ. ರಸ್ತೆ, ಚರಂಡಿಗಳು ಸುಧಾರಿಸಿದರೂ ಅದು ಎಷ್ಟು ದಿನದ್ದು ಎಂಬ ಅನುಮಾನ ಕಾಡುತ್ತದೆ. ಆ ಅನುಮಾನ ನಿಜ ಎನ್ನುವಂತೆ ಒಂದು ಮಳೆಗೆ ಡಾಂಬರು ಎಲ್ಲ ಕಿತ್ತುಕೊಂಡು ಹೋಗಿ ಚರಂಡಿ ಸೇರುತ್ತದೆ. ತಿಂಗಳುಗಳಲ್ಲೇ ಸಮುದಾಯ ಭವನ ಹಾಳು ಸುರಿಯ ತೊಡಗುತ್ತದೆ. ಒಂದೋ ಕೆಲವರು ಅಲ್ಲಿ ಭಜನೆ ಶುರು ಮಾಡುತ್ತಾರೆ. ಇಲ್ಲವಾದರೆ ಪೋಲಿ ಪಟಾಲಮ್ಮುಗಳು ಟೆಂಟ್ ಹಾಕುತ್ತವೆ... ಇತ್ತ ಮತ್ತೊಂದು 'ಗ್ರಾಮೋದಯ' ಯೋಜನೆಗೆ ರಾಜಕಾರಣಿ ಹೊಂಚು ಹಾಕುತ್ತ

ಇರುತ್ತಾನೆ. ಜನರು ವಿಧವಾ ವೇತನ, ಸಂಧ್ಯಾ ಸುರಕ್ಷಾಗಳಂಥ ವೈಯಕ್ತಿಕ ಅನುಕೂಲದ ಯೋಜನೆಗಳ ಬೆನ್ನು ಹತ್ತುತ್ತಾರೆ.

ಹಿವರೆ ಬಜಾರ್ ಏಕೆ ಅಭಿವೃದ್ಧಿಯಾಗುತ್ತದೆ? ದೇಶದ ಮೊದಲ 'ರಾಷ್ಟ್ರೀಯ ಉತ್ಪಾದಕತಾ ಪ್ರಶಸ್ತಿ'ಯನ್ನು ಪಡೆದುಕೊಳ್ಳುತ್ತದೆ ಎಂಬುದಕ್ಕೆ ಉತ್ತರ ಇಲ್ಲಿಯೇ ಇದೆ. ಹಿವರೆ ಬಜಾರ್ ಅಭಿವೃದ್ಧಿ ಹೊರಗಿನಿಂದ ಆದುದು ಅಲ್ಲ. ಅಲ್ಲಿನ ಗ್ರಾಮಸ್ಥರಿಗೆ ತಮ್ಮ ಹಳ್ಳಿ ಅಭಿವೃದ್ಧಿ ಆಗಬೇಕು ಅನಿಸಿತು. ಸದಾ ಬರಗಾಲ ಪೀಡಿತವಾದ ಅರೆಬಂಜರು ಭೂಮಿಯ ಹಿವರೆ ಬಜಾರ್ ಒಂದು ಕಾಲದಲ್ಲಿ ಕುಸ್ತಿ ಪಟುಗಳಿಗೆ ಹೆಸರು ವಾಸಿಯಾದ ಊರು. 'ಹಿಂದ್ ಕೇಸರಿ'ಯಂಥ ಅತ್ಯುಚ್ಚ ಕುಸ್ತಿ ಪ್ರಶಸ್ತಿಯನ್ನು ಆ ಹಳ್ಳಿಯ ಜನ ಗೆದ್ದವರು. ಆದರೆ, ಪ್ರಕೃತಿಯ ಎದುರು ಅವರ ಹೋರಾಟ ನಡೆಯಲಿಲ್ಲ. ತಮ್ಮ ಕಣ್ಣ ಮುಂದೆಯೇ ಊರು ಬರಡಾಗಿ ಹೋಯಿತು. ಹಳ್ಳಿಯ ಜನ ಮುಂಬೈ, ಪುಣೆಗೆ ವಲಸೆ ಹೋಗುವುದೇ ಲೇಸು ಎಂದುಕೊಂಡರು. ದಿನಕ್ಕೆ 40 ರೂಪಾಯಿ ಕೂಲಿ ಕೂಡ ಹಿವರೆ ಬಜಾರ್‌ನಲ್ಲಿ ಹುಟ್ಟುತ್ತಿರಲಿಲ್ಲ. ಇಲ್ಲಿನ ಜನರು ಮಾತ್ರವಲ್ಲ ಇಡೀ ಹಳ್ಳಿಯೇ ನಾಶವಾಗುತ್ತದೆ ಎಂದು ಭಯಪಟ್ಟ ಕೆಲವರು ಗ್ರಾಮಸ್ಥರು ಇದೇ ಊರಿನಲ್ಲಿ ಹುಟ್ಟಿ ಬೆಳೆದ, ಎಂ.ಕಾಂ ಪದವೀಧರ ಪೋಪಟ್‌ರಾವ್ ಪವಾರ್ ಅವರ ಮೊರೆ ಹೊಕ್ಕರು.

ಹಳ್ಳಿಗೆ ಮರಳಿ ಅಭಿವೃದ್ಧಿಯ ಚಕ್ರಕ್ಕೆ ಕೈ ಹಚ್ಚುವ ಮೊದಲು ಪವಾರ್, ಹಾಕಿದ್ದು ಐದು ಷರತ್ತು: ಮದ್ಯಪಾನ ನಿಷೇಧ, ಜನಸಂಖ್ಯೆ ನಿಯಂತ್ರಣ, ಕಡ್ಡಾಯ ಶ್ರಮದಾನ, ಮರಗಳನ್ನು ಕಡಿಯಬಾರದು ಮತ್ತು ಹೆಚ್ಚು ನೀರು ಬೇಕೆನಿಸುವ ಕಬ್ಬು, ಭತ್ತ, ಬಾಳೆಯಂಥ ಬೆಳೆಗಳನ್ನು ಬೆಳೆಯಬಾರದು. 1990ರ ಜನವರಿ 26ರಂದು ನಡೆದ ಮೊದಲ ಗ್ರಾಮಸಭೆಯಲ್ಲಿ ಪವಾರ್, ಕೃಷಿ ಮಾತ್ರವಲ್ಲದೇ ಅಲ್ಲಿನ ರಸ್ತೆ, ಚರಂಡಿ, ವಿದ್ಯುತ್, ಉದ್ಯೋಗ, ಶಿಕ್ಷಣ, ಆರೋಗ್ಯ ಹಾಗೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಸಮಗ್ರ ಯೋಜನೆ ರೂಪಿಸಿದರು.

ಫಲವತ್ತತೆ ಹೆಚ್ಚಿಸಲು ಮಣ್ಣಿನ ಸಂಸ್ಕರಣೆ, ಮಳೆ ನೀರು ಸಂಗ್ರಹಣೆಗೆ ಕಾಂಟೂರ್‌ಗಳ ನಿರ್ಮಾಣ. ಅಂತರ್ಜಲವೃದ್ಧಿ ಇಂಗು ಕೆರೆ ಮತ್ತು ಚೆಕ್ ಡ್ಯಾಂಗಳ ನಿರ್ಮಾಣ. ಪಕ್ಕದ ಗುಡ್ಡದಲ್ಲಿನ ಮೇವು ಸಾಗಣೆಗೆ ನಿಷೇಧ, ಬದಲಿಗೆ ಅಲ್ಲಿ ಗಿಡ ನೆಡುವಿಕೆಗೆ ಇಡೀ ಊರಿನ ಜನ ಗಮನ ಕೊಟ್ಟರು. ಇದಕ್ಕೆಲ್ಲ ಅವರು ಬಳಸಿಕೊಂಡಿದ್ದು ರಾಜ್ಯ ಸರ್ಕಾರದ ಉದ್ಯೋಗ ಭರವಸೆ ಯೋಜನೆಯ ಹಣವನ್ನು. ಹಳ್ಳಿಯಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ ಎಂದು ಎರಡು ತಿಂಗಳು ಶಾಲೆಯನ್ನೇ ಮುಚ್ಚಿದರು. ಸರ್ಕಾರ ಮಣಿದು ಉತ್ತಮ ಶಿಕ್ಷಕರನ್ನು ಅಲ್ಲಿಗೆ ನಿಯೋಜನೆ ಮಾಡಿತು. ಇಸ್ಪೀಟು, ಕುಡಿತ, ಜೂಜಿನಲ್ಲಿ ಹಾಳಾಗಿ ಹೋಗಿದ್ದ ಊರಿನ ಜನರಲ್ಲಿ ನೈತಿಕತೆ ತರಲು ಪವಾರ್ ಪಟ್ಟ ಕಷ್ಟ ಅಷ್ಟಿಷ್ಟಲ್ಲ. 15 ವರ್ಷಗಳ ನಿರಂತರ ಪರಿಶ್ರಮದ ನಂತರ ಹಿವರೆ ಬಜಾರ್ ಒಂದು ಮಾದರಿ ಗ್ರಾಮ ಆಯಿತು. 40 ರೂಪಾಯಿ ಕೂಲಿ ಕೂಡ ಸಿಗುವುದಿಲ್ಲ ಎಂದು ದೊಡ್ಡ ನಗರಗಳಿಗೆ ವಲಸೆ ಹೋಗಿದ್ದ ಜನ ನಮ್ಮ ಊರೇ ವಾಸಿ, ಇಲ್ಲಿ ದುಡಿದು ಧಣಿಯಾಗಿ ಬಾಳಬಹುದು ಎಂದು ತಮ್ಮ ಊರಿಗೆ

ಮರಳತೊಡಗಿದರು. ನಂಬಿದರೆ ನಂಬಿ ಬಿಟ್ಟರೆ ಬಿಡಿ ಹಾಳುಬಿದ್ದ ಹೊಲಗಳು ಈಗ ನಳನಳಿಸಿ ನಿಂತಿವೆ. ಆ ಹಳ್ಳಿಯ 216 ಕುಟುಂಬಗಳಲ್ಲಿ 54 ಕುಟುಂಬಗಳು 'ಮಿಲಿಯನೇರ್ಸ್' ಎನಿಸಿವೆ! ಇಷ್ಟೆಲ್ಲ ಆಗುವಾಗ ಅಲ್ಲಿ ಒಬ್ಬನೇ ಒಬ್ಬ ಅಧಿಕಾರಿ ಅಥವಾ ಶಾಸಕನನ್ನು ಹತ್ತಿರವೂ ಸೇರಿಸಿರಲಿಲ್ಲ. ಈಗಲೂ ಅಲ್ಲಿ ಗ್ರಾಮಸಭೆಯೇ ನಿರ್ಣಯ ತೆಗೆದುಕೊಳ್ಳುತ್ತದೆ. ಈಗ ಪವಾರ್ ಕೂಡ ಗ್ರಾಮಸಭೆಯಲ್ಲಿ ಪಾಲುಗೊಳ್ಳು ವುದಿಲ್ಲ. ಹಳ್ಳಿಯ ಜನರೇ ಸಭೆ ನಡೆಸಿ ಪವಾರ್ ಅವರಿಗೆ ಮಾಹಿತಿ ಕೊಡುತ್ತಾರೆ ಅಷ್ಟೇ.

ಕರ್ನಾಟಕದ ಸುವರ್ಣ ಗ್ರಾಮೋದಯ ಯೋಜನೆಯಲ್ಲಿ ಈ ಮಾನವೀಯ ಅಂಶವೇ ಇಲ್ಲ, ಹಳ್ಳಿಗರ ಒಳಗೊಳ್ಳುವಿಕೆಯೂ ಇಲ್ಲ. ವಿಚಿತ್ರವೋ, ವಿಪರ್ಯಾಸವೋ ಇದು ಗ್ರಾಮೀಣ ಅಭಿವೃದ್ಧಿ ಇಲಾಖೆಯ ಯೋಜನೆಯಾದರೂ ಅದರ ಅನುಷ್ಠಾನದಲ್ಲಿ ಪಂಚಾಯ್ತಿ ಸಂಸ್ಥೆಗಳನ್ನು ಹಿಂದಿಕ್ಕಿ ಶಾಸಕರದೇ ಮೇಲುಗೈ. ಕೆಲವರು ಶಾಸಕರು, ಯೋಜನೆಯಡಿ ಕಡ್ಡಾಯವಾಗಿರುವ ನಿರುದ್ಯೋಗಿಗಳಿಗೆ ತರಬೇತಿ ನೀಡುವ ಕಂಪೋನೆಂಟ್ ಬೇಡ ಅದನ್ನೂ ರಸ್ತೆ ಮತ್ತು ಚರಂಡಿಗೇ ಬಳಸಿಕೊಳ್ಳುತ್ತೇವೆ ಎಂದು ಇಲಾಖೆಯ ಅಧಿಕಾರಿಗಳಿಗೆ ದುಂಬಾಲು ಬಿದ್ದಿದ್ದಾರೆ. ಇಂಥ ಶಾಸಕರ ಉದ್ದೇಶವೇನು? ದುಡ್ಡು ಹೊಡೆಯುವುದು ಬಿಟ್ಟು ಮತ್ತೇನು?

ಆಶ್ರಯ ಮನೆಗಳನ್ನು ಕಟ್ಟಲು ಆಯಾ ಮನೆ ಮಾಲೀಕರ, ಜಿಲ್ಲಾ ಪಂಚಾಯ್ತಿ ಆಶ್ರಯದಲ್ಲಿ ಶಾಲಾ ಕಟ್ಟಡಗಳನ್ನು ನಿರ್ಮಿಸಲು ಆಯಾ ಊರಿನ ಜನರ ಸಹಭಾಗಿತ್ವ ಕಡ್ಡಾಯ. ಸುವರ್ಣ ಗ್ರಾಮೋದಯ ಯೋಜನೆ ಜಾರಿಗೂ ಆಯಾ ಊರಿನ ಜನರ ಶ್ರಮದಾನ ಅಗತ್ಯ ಎಂದು ಏಕೆ ಮಾಡಬಾರದು? ಹಿವರೆಬಜಾರ್‌ನಲ್ಲಿ ಪವಾರ್ ಅನುಸರಿಸಿದ ಐದು ಷರತ್ತುಗಳನ್ನು ಇಲ್ಲಿಯೂ ಏಕೆ ಕಡ್ಡಾಯ ಮಾಡಬಾರದು? ಈಗಿನ 'ಸುವರ್ಣ ಗ್ರಾಮೋದಯ' ನನಗಾಗಿ, ನನ್ನ ಹಳ್ಳಿಗಾಗಿ ಎಂಬ ಆಪ್ತತೆಯನ್ನು ಹುಟ್ಟು ಹಾಕುವಲ್ಲಿ ಸೋತಿದೆ. ಹಾಗಾದರೆ ಇಡೀ ಯೋಜನೆಯೇ ಸೋತಂತೆ. ಸರ್ಕಾರ, ಇಂಥ ಯೋಜನೆಗಳನ್ನು ಯಾಕಾಗಿ ರೂಪಿಸುತ್ತದೆ? ಯಾರಿಗಾಗಿ ರೂಪಿಸುತ್ತದೆ? ಶೋಭಾ ಕರಂದ್ಲಾಜೆ ಮೈಸೂರಿನಿಂದ ನೇರವಾಗಿ ಹಿವರೆ ಬಜಾರಿಗೆ ಏಕೆ ಹೋಗಬಾರದು?

■

# ಪೋಲೀಸರೇ ನೀವೇಕೆ ಕಾಲ್ಚೆಂಡಾದಿರಿ?

ಕಾಲ ಹೇಗೆ ಬದಲಾಗುತ್ತದೆ ನೋಡಿ. ನಾವು ಚಿಕ್ಕವರಿದ್ದಾಗ ನಮ್ಮನ್ನು ಹೆದರಿಸಲು ಅವ್ವ-ಅಪ್ಪ, 'ದೆವ್ವ ಬಂತು, ಭೂತ ಬಂತು ಎಂದೇನೂ ಹೇಳುತ್ತಿರಲಿಲ್ಲ'. 'ಫೌಜದಾರ್‌ನ್ನ ಕರೀತೀನಿ ನೋಡು' ಎಂದರೆ ಸಾಕು ಬಾಯಿ ಮುಚ್ಚಿಕೊಂಡು ಸುಮ್ಮನಾಗುತ್ತಿದ್ದೆವು. ಊರಿನಲ್ಲಿ ಫಟ್‌ಫಟಿ ಮೇಲೆ ಫೌಜದಾರ್ ಬಂದರೆ ಸಾಕು ಎಲ್ಲರೂ ಹಾದಿ ಬಿಟ್ಟು ಸಂದಿ ಸೇರುತ್ತಿದ್ದರು. ಫೌಜದಾರ್ ಎಂದರೆ ಈಗಿನ ಸಬ್‌ಇನ್ಸ್‌ಪೆಕ್ಟರ್. ಈಗಿನ ಹಾಗೆ ಲಾ ಅಂಡ್ ಆರ್ಡರ್‌ಗೆ ಒಬ್ಬರು, ಕ್ರೈಮ್‌ಗೆ ಒಬ್ಬರು ಎಂದು ಕಾಲಿಗೆ ಒಬ್ಬರು ಕೈಗೆ ಒಬ್ಬರು ಅಧಿಕಾರಿಗಳು ಇರುತ್ತಿರಲಿಲ್ಲ. ಇದ್ದ ಒಬ್ಬ ಫೌಜದಾರ್‌ನೇ ಎಲ್ಲವನ್ನೂ ನಿಭಾಯಿಸುತ್ತಿದ್ದರು. ಅವರು ಯಾರನ್ನಾದರೂ ಒಳಗೆ ಹಾಕಿದರೆ ಯಾರೂ ಠಾಣೆಗೆ ಹೋಗಿ ಬಿಡಿಸಿಕೊಂಡು ಬರುವ ಧೈರ್ಯ ಮಾಡುತ್ತಿರಲಿಲ್ಲ. ನಿಜ, ಸಮಾಜ ಇದ್ದ ಹಾಗೆಯೇ ಇರುವುದಿಲ್ಲ. ಎಲ್ಲವೂ ಅಷ್ಟು ಸರಳವೂ ಆಗಿರುವುದಿಲ್ಲ. ಆದರೆ, ಸಮಾಜ ಸಂಕೀರ್ಣವಾದಷ್ಟೂ ಫೌಜದಾರ್‌ನ ಅಥಾರಿಟಿ ದೃಢವಾಗುತ್ತ ಹೋಗಬೇಕಿತ್ತು. ಹಾಗೆ ಆಗಲಿಲ್ಲ; ಈಗ ಫೌಜದಾರ್ ಅಲ್ಲ

ಒಂದು ಜಿಲ್ಲೆಯ ಮುಖ್ಯಸ್ಥ ಎಸ್.ಪಿ ಬಂದರೂ ಯಾರೂ ಹೆದರುವುದಿಲ್ಲ.

ಏಕೆ ಹೀಗಾಯಿತು? ಕೇಂದ್ರ ಗೃಹ ಸಚಿವ ಚಿದಂಬರಂ ಮೊನ್ನೆ 'ಪೊಲೀಸರು ಫುಟ್‌ಬಾಲ್' ಆಗಿದ್ದಾರೆ ಎಂದರು. ಅವರು ಶಬ್ದಗಳನ್ನು ಪೋಲು ಮಾಡುವವರಲ್ಲ; ತೂಗಿ ಮಾತನಾಡುವವರು. ಅವರು 'ಕರ್ನಾಟಕದಲ್ಲಿ ಪೊಲೀಸರನ್ನು ಫುಟ್‌ಬಾಲ್ ತರಹ ಟ್ರೀಟ್ ಮಾಡಲಾಗುತ್ತಿದೆ' ಎಂದೇನೂ ಬಿಡಿಸಿ ಹೇಳಿರಲಿಲ್ಲ. ಆದರೆ, ಅವರು ಹೇಳದ ಮಾತನ್ನು ರಾಜ್ಯಪಾಲ ಭಾರದ್ವಾಜ್ ಮತ್ತು ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಆರ್. ಶ್ರೀಕುಮಾರ್ ಹೇಳಿಬಿಟ್ಟಿದ್ದಾರೆ. ಇದನ್ನು ಮುಚ್ಚಿ ಅಥವಾ ಬಿಚ್ಚಿ ಹೇಳಲು ಇವರೆಲ್ಲ ಬೇಕಿರಲಿಲ್ಲ. ಯಡಿಯೂರಪ್ಪ ಸರ್ಕಾರ ಕಳೆದ 18 ತಿಂಗಳಲ್ಲಿ ಹೆಚ್ಚೂ ಕಡಿಮೆ ಪ್ರತಿದಿನ ಮಾಡಿರುವ ಪೊಲೀಸ್ ವರ್ಗಾವರ್ಗಿ ಪಟ್ಟಿಯನ್ನು ನೋಡಿದರೇ ಸಾಕು ಪೊಲೀಸರು ಕಾಲ್ಚೆಂಡಿಗಿಂತ ಕಡೆ ಎಂಬುದು ಗೊತ್ತಾಗುತ್ತದೆ.

ಪೊಲೀಸರು ಕಾಲ್ಚೆಂಡು ಆದುದು ಈಗ ಅಲ್ಲ. ರಾಮಕೃಷ್ಣ ಹೆಗಡೆ ಕಾಲದಲ್ಲಿ. ಹೆಗಡೆ ಆರಂಭದಲ್ಲಿ ಆಳಿದ್ದು ಅಲ್ಪಮತದ ಸರ್ಕಾರವನ್ನು. ಶಾಸಕರ ಬೆಂಬಲ ಉಳಿಸಿಕೊಳ್ಳಲು ಅವರಿಗೆ ಬೇರೆ ದಾರಿ ಇರಲಿಲ್ಲವೇನೋ? 'ವರ್ಗಾವರ್ಗಿ ಮಾಡಿ ದುಡ್ಡು ಮಾಡಿಕೊಳ್ಳಿ' ಎಂದು ಹೆಗಡೆ ಸೂಚನೆ ಕೊಟ್ಟರೇನೋ? ಕೊಟ್ಟಿರಲೇಬೇಕು. ಏಕೆಂದರೆ ವರ್ಗಾವರ್ಗಿಯಲ್ಲಿ ಶಾಸಕರ ಮಾತು ನಡೆಯಲು ಆರಂಭವಾಗಿದ್ದು ಆಗಲೇ. ವರ್ಗಾವಣೆ ದುಡ್ಡಿಲ್ಲದ ದಂಧೆ ಎಂದು ಶಾಸಕರಿಗೆ, ಸರ್ಕಾರಕ್ಕೆ ಗೊತ್ತಾಗಿದ್ದೂ ಆಗಲೇ. ರಕ್ತದ ರುಚಿ ಹತ್ತಿದವರು ಸುಮ್ಮನೆ ಇರುತ್ತಾರೆಯೇ? ಹೆಗಡೆ ನಂತರ ಬಂದ ಬಹುತೇಕ ಎಲ್ಲ ಸರ್ಕಾರಗಳಲ್ಲಿ ಇದು ಅನೂಚಾನವಾಗಿ ನಡೆದುಕೊಂಡು ಬಂದಿದೆ. ಹಿಂದೆ ವರ್ಗಾವಣೆಗೆ ಒಂದು ಹೊತ್ತು, ಗೊತ್ತು ಎಂದು ಇರುತ್ತಿತ್ತು. ಈಗ ಅದಕ್ಕೂ ಎಳ್ಳು ನೀರು ಬಿಡಲಾಗಿದೆ. ಈಗ ಇಂಥ ಪೊಲೀಸ್ ಅಧಿಕಾರಿ ಇಂಥ ಜಾಗಕ್ಕೆ ಬರಬೇಕು ಎಂದು ಶಾಸಕರು ಪತ್ರ ಕೊಡುತ್ತಾರೆ. ಅದಕ್ಕೆ ಸಚಿವರು 'ಮಿನಿಟ್' ಹಾಕುತ್ತಾರೆ. ಅದೇ ಆದೇಶವಾಗುತ್ತದೆ.

ಪೊಲೀಸ್ ಇಲಾಖೆಯ ಮ್ಯಾನುಯೆಲ್ ಪ್ರಕಾರ ಕಾನ್ಸ್‌ಟೇಬಲ್‌ನಿಂದ ಎ.ಎಸ್.ಐ. ವರೆಗಿನ ವರ್ಗಾವಣೆಯನ್ನು ಜಿಲ್ಲಾ ಪೊಲೀಸ್ ವರಿಷ್ಠರು ಅಥವಾ ತತ್ಸಮಾನ ದರ್ಜೆ ಅಧಿಕಾರಿ ಮಾಡಬೇಕು. ಸಬ್ ಇನ್ಸ್‌ಪೆಕ್ಟರ್ ವರ್ಗಾವಣೆಯನ್ನು ಡಿ.ಐ.ಜಿ. ಅಥವಾ ಐ.ಜಿ. ದರ್ಜೆಯ ವಲಯ ಮುಖ್ಯಸ್ಥರು, ಇನ್ಸ್‌ಪೆಕ್ಟರ್ ವರ್ಗವನ್ನು ಪೊಲೀಸ್ ಮಹಾ ನಿರ್ದೇಶಕರು ಮಾಡಬೇಕು. ಡಿವೈಎಸ್‌ಪಿ/ಎ.ಸಿ.ಪಿ. ಹಾಗೂ ಅದಕ್ಕಿಂತ ಮೇಲಿನ ಗೆಜೆಟೆಡ್ ಅಧಿಕಾರಿಗಳ ವರ್ಗಾವಣೆಯನ್ನು ಸರ್ಕಾರ ಮಾಡಬೇಕು. ಹೆಗಡೆ ಸರ್ಕಾರದ ನಂತರ ಈ ಮ್ಯಾನುಯೆಲ್ ಮೂಲೆಗೆ ಹೋಗಿದೆ. ಈಗ ಇರುವುದು ಎರಡೇ ಮಾನದಂಡ: ಒಂದನೆಯದು ದುಡ್ಡು, ಎರಡನೆಯದು ಜಾತಿ. ಅಧಿಕಾರಿಗಳು ತಮಗೆ ಬೇಕಾದ ಶಾಸಕರ ಬಳಿ ಹೋಗಿ ಆಯಾ ಹುದ್ದೆಗೆ ತಕ್ಕನಾದ ಹಣ ಕೊಟ್ಟು ವರ್ಗ ಮಾಡಿಸಿಕೊಳ್ಳುತ್ತಾರೆ. ಠಾಣೆಗೆ ಬಂದು 'ಮಾಮೂಲು ದಂಧೆ' ಶುರು ಮಾಡುತ್ತಾರೆ. ಶಾಸಕರು ಹಣ ತೆಗೆದುಕೊಂಡು ವರ್ಗ ಮಾಡಿಸುವಾಗ ಆತ ತಮ್ಮ ಜಾತಿಯವನೇ ಎಂಬುದನ್ನೂ ಖಾತ್ರಿ ಮಾಡಿಕೊಳ್ಳುತ್ತಾರೆ! ಇದು ಬರೀ ಸಬ್

ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್ ಮಾತ್ರವಲ್ಲ ಎಸ್.ಪಿ. ದರ್ಜೆವರೆಗೂ ಇದೇ ಸ್ಥಿತಿ. ಮಂತ್ರಿಯಾದವರು ತಮ್ಮ ಜಿಲ್ಲೆಗೆ ತಮಗೆ ಬೇಕಾದವರೇ ಎಸ್.ಪಿ. ಇರಲಿ ಎಂದು ಬಯಸುತ್ತಾರೆ. ಅದರ ಪರಿಣಾಮ ಎಂದರೆ ಪೊಲೀಸ್ ಅಧಿಕಾರಿಗಳು ತಮ್ಮ ನಿಷ್ಠೆಯನ್ನು ಖಾಕಿ ಬದಲಿಗೆ ಖಾದಿಗೆ ಅಡವಿಟ್ಟಿದ್ದಾರೆ.

ವಿಚಿತ್ರ ಎಂದರೆ ಈ ನಿಷ್ಠೆ ಜಾಸ್ತಿ ದಿನ ಇರುವುದಿಲ್ಲ. ಠಾಣೆಗಳಿಂದ ಮಾಮೂಲು ಸರಿಯಾಗಿ ಬರದೇ ಇದ್ದರೆ ಆತನನ್ನು ಬದಲಿಸಿ ಇನ್ನೊಬ್ಬನನ್ನು ತರುತ್ತಾರೆ. ಯಾವ ಠಾಣೆಯಲ್ಲಿಯೂ ಒಂದೂವರೆ ವರ್ಷಕ್ಕಿಂತ ಹೆಚ್ಚು ಕಾಲ ಯಾವ ಅಧಿಕಾರಿಯೂ ಈಗ ಬಾಳುವುದಿಲ್ಲ. ಎಸ್.ಪಿ.ಗಳ ಕಥೆಯೂ ಅದೇ ಆಗಿದೆ. ಉತ್ತರ ಪ್ರದೇಶದಲ್ಲಿ ಆರು ತಿಂಗಳಲ್ಲಿಯೇ ಅಧಿಕಾರಿ ಜಾಗ ಖಾಲಿ ಮಾಡಬೇಕಾಗು ತ್ತದೆ. ಅದೃಷ್ಟ ಎಂದರೆ ಇನ್ನೂ ಮಾಯಾವತಿ ಚಾಳಿಯನ್ನು ನಮ್ಮ ಸರ್ಕಾರ ಅನುಸರಿಸಿಲ್ಲ.

ಒಬ್ಬ ಅಧಿಕಾರಿ ಠಾಣೆಯೇ ಇರಲಿ, ಜಿಲ್ಲೆಯೇ ಇರಲಿ ಕನಿಷ್ಠ ಎರಡು ವರ್ಷ ಕೆಲಸ ಮಾಡಿದರೆ ಆತನಿಗೆ ಏನು ಎತ್ತ ಎಂದು ಗೊತ್ತಾಗುತ್ತದೆ. ಕಳ್ಳರು ಯಾರು ಸುಳ್ಳರು ಯಾರು ಎಂದು ಆತ ಮಾಹಿತಿ ಸಂಗ್ರಹಿಸಬಹುದು. ತದನಂತರ ತನ್ನ ಏರಿಯಾದ ಮೇಲೆ ನಿಯಂತ್ರಣ ಸಾಧಿಸಬಹುದು. ಅದು ತಿಳಿಯುವುದಕ್ಕೆ ಈಗ ಅವಕಾಶವೇ ಇಲ್ಲ. ಆತನಿಗೂ ಅದರಲ್ಲಿ ಆಸಕ್ತಿಯಿಲ್ಲ. ಯಾವಾಗ ಎತ್ತಂಗಡಿ ಆಗುತ್ತದೋ ಯಾರಿಗೆ ಗೊತ್ತು? ಬಂದಷ್ಟು ಬಾಚಿಕೊಂಡು ಮುಂದಿನ ಊರಿಗೆ ಹೋದರೆ ಆಯಿತು ಎಂಬುದರ ಕಡೆಗೇ ಅವನಿಗೆ ಗಮನ.

ಬೆಂಗಳೂರಿನಲ್ಲಿ ಡಿ.ಸಿ.ಪಿ ಆಗಿ, ಬೆಳಗಾವಿ, ಗುಲ್ಬರ್ಗ, ಮಂಗಳೂರು, ಮೈಸೂರಿನಂಥ ದೊಡ್ಡ ಜಿಲ್ಲೆಗಳ ಎಸ್.ಪಿ. ಆಗಿ ಕೆಲಸ ಮಾಡಬೇಕಿದ್ದರೆ ಕನಿಷ್ಠ ಹತ್ತು ಹನ್ನೊಂದು ವರ್ಷ ಸರ್ವೀಸ್ ಮಾಡಿ ಸೆಲೆಕ್ಷನ್ ಗ್ರೇಡ್ ಮುಟ್ಟಿದ ಅಧಿಕಾರಿಗಳನ್ನೇ ನೇಮಿಸಲಾಗುತ್ತಿತ್ತು. ಅವರಿಗೆ ಅಷ್ಟು ಅನುಭವ ಇರಬೇಕು ಎಂಬುದು ಕಡ್ಡಾಯವಾಗಿತ್ತು. ಈಗ ಆ ಅನುಭವವೆಲ್ಲ ಮುಖ್ಯವಲ್ಲ. ಒಂದು ವರ್ಷ ಸರ್ವೀಸ್ ಆದವರೂ ಬೆಂಗಳೂರಿನಲ್ಲಿ ಡಿ.ಸಿ.ಪಿ. ಆಗಬಹುದು, ದೊಡ್ಡ ಜಿಲ್ಲೆಗಳ ಎಸ್.ಪಿ.ಯೂ ಆಗಬಹುದು. ಹೀಗಾದರೆ ಹಾಡುಹಗಲೇ ಸರಗಳ್ಳರು ವಿಜೃಂಭಿಸದೇ, ಕೊಲೆ ಸುಲಿಗೆ ಆಗದೇ ಇನ್ನೇನಾಗುತ್ತದೆ? ಶಂಕರ್ ಬಿದರಿ, ಅಜಯಕುಮಾರ್ ಸಿಂಗ್ ಯಾರನ್ನು ದೂರುತ್ತಾರೆ?

ಖಾಕಿ ಬಟ್ಟೆ ಹಾಕಿಕೊಂಡು ದರ್ಬಾರು ಮಾಡುವ ಎಕ್ಸಿಕ್ಯೂಟಿವ್ ಹುದ್ದೆಗಳ ಹಣೆಬರಹ ಹೀಗಾದರೆ ಸಿ.ಐ.ಡಿ. ಟ್ರೇನಿಂಗ್, ಗುಪ್ತದಳದಂಥ ವಿಭಾಗಗಳಲ್ಲಿ ಕೆಲಸ ಮಾಡುವವರನ್ನು ಐದು ವರ್ಷವಾದರೂ ಕ್ಯಾರೆ ಎಂದು ಮಾತನಾಡಿಸುವವರು ಯಾರೂ ಇರುವುದಿಲ್ಲ. ಏಕೆಂದರೆ ಅಲ್ಲಿಗೆ ಪೋಸ್ಟಿಂಗ್ ಮಾಡಲು ದುಡ್ಡು ಬೇಕು. ಆದರೆ, ಸಿ.ಐ.ಡಿ. ಟ್ರೇನಿಂಗ್ ಗುಪ್ತದಳದಲ್ಲಿ ಕೆಲಸ ಮಾಡುವವರಿಗೆ ಯಾರು ದುಡ್ಡು ಕೊಡುತ್ತಾರೆ? ಸಹಜವಾಗಿ ಅವರಿಗೆ ಹತಾಶೆ ಕಾಡುತ್ತದೆ. ತನಿಖೆ ಮತ್ತು ತರಬೇತಿ ಇಲಾಖೆಗಳಲ್ಲಿಯೇ ಹತಾಶೆ ಕಾಡಿದರೆ ಇಡೀ ಪೊಲೀಸಿಂಗ್ ಹೇಗಿರುತ್ತದೆ?

ಶ್ರೀಕುಮಾರ್ ಅವರು ನಿವೃತ್ತರಾದ ನಂತರ ಇದೆಲ್ಲದರ ವಿರುದ್ಧ ಧ್ವನಿ ಎತ್ತಿದ್ದಾರೆ.

ಆದರೆ, ಉತ್ತರ ಪ್ರದೇಶದ ನಿವೃತ್ತ ಮಹಾ ನಿರ್ದೇಶಕ ಪ್ರಕಾಶ್ ಸಿಂಗ್ ಪೊಲೀಸರ ಕಾಲ್ಚೆಂಡು ಸ್ಥಿತಿಯ ವಿರುದ್ಧ ಸುಪ್ರೀಂ ಕೋರ್ಟ್‌ಗೇ ಮೊರೆ ಹೊಕ್ಕರು. ಅವರ ಅರ್ಜಿ ಆಧರಿಸಿ, ಪೊಲೀಸ್ ವರ್ಗಾವರ್ಗಿಯಲ್ಲಿ ಮೂಲಭೂತ ಸುಧಾರಣೆಗೆ ಕೋರ್ಟ್ ಆದೇಶ ನೀಡಿದೆ. ಅದಕ್ಕಾಗಿ ಪೊಲೀಸ್ ಆಡಳಿತ ಸುಧಾರಣೆಗೆ ಸಮಿತಿ ರಚಿಸಿದೆ. ಅದರ ನೇತೃತ್ವವನ್ನು ನಿವೃತ್ತ ನ್ಯಾಯಮೂರ್ತಿ ಕೆ.ಟಿ. ಥಾಮಸ್ ಅವರಿಗೆ ವಹಿಸಲಾಗಿದೆ. ಪ್ರಕಾಶ್‌ಸಿಂಗ್ ಸದಸ್ಯರಾಗಿದ್ದಾರೆ. ಸುಪ್ರೀಂ ಕೋರ್ಟ್ ಸೂಚನೆಯಂತೆ ರಾಜ್ಯದಲ್ಲಿಯೂ ಪೊಲೀಸ್ ಆಡಳಿತ ಮಂಡಳಿ ರಚಿಸಲಾಗಿದೆ. ಡಿ.ಜಿ.ಪಿ. ಸೇರಿದಂತೆ ನಾಲ್ವರು ಅದೇ ದರ್ಜೆಯ ಅಧಿಕಾರಿಗಳು ಮಂಡಳಿಯಲ್ಲಿ ಇದ್ದಾರೆ. ಈ ಮಂಡಳಿಯೇ ಎಲ್ಲ ವರ್ಗಾವಣೆ ಮಾಡಬೇಕು. ಎರಡು ವರ್ಷಕ್ಕಿಂತ ಮುಂಚೆ ಯಾವ ಅಧಿಕಾರಿಯನ್ನೂ ವರ್ಗ ಮಾಡುವಂತಿಲ್ಲ. ಕೋರ್ಟು ಚಾಪೆ ಕೆಳಗೆ ನುಸುಳಿದರೆ ಸರ್ಕಾರ ರಂಗೋಲಿ ಕೆಳಗೆ ನುಸುಳುತ್ತದೆ. ಮಂಡಳಿ ಅಸ್ತಿತ್ವಕ್ಕೆ ಬರುವುದ ಕ್ಕಿಂತ ಮುಂಚೆಯೇ ಸರ್ಕಾರ ಎಷ್ಟು ಸಾಧ್ಯವೋ ಅಷ್ಟು ವರ್ಗಾವಣೆ ಮಾಡಿದೆ. ಅದೇ ಸರ್ಕಾರದ ನಿಯಮದ ಪ್ರಕಾರ ಏಪ್ರಿಲ್/ಮೇ ಒಳಗೆ ಮಾತ್ರ ವರ್ಗಾವರ್ಗಿ ಮಾಡಬೇಕು. ಆ ನಿಯಮದ ಪ್ರಕಾರ ಮಂಡಳಿ ಈಗ ಯಾವುದೇ ವರ್ಗಾವಣೆ ಮಾಡುವಂತಿಲ್ಲ! ಅದು ಎರಡು ಬಾರಿ ಸಭೆ ಮಾತ್ರ ನಡೆಸಿದೆ. ಸರ್ಕಾರಗಳು ಎಷ್ಟು ಬಲಿಷ್ಠವಾಗಿರುತ್ತವೆ ಎಂದರೆ ತಮಗೆ ಬೇಕಾದ ವರ್ಗಾವಣೆಯನ್ನು ಈ ಮಂಡಳಿ ಮೂಲಕವೇ ಮಾಡಿಸಿದರೆ ಅಚ್ಚರಿ ಪಡಬೇಕಿಲ್ಲ.

ಪೊಲೀಸರ ಬೇಕಾಬಿಟ್ಟಿ ವರ್ಗಾವಣೆ ವಿರುದ್ಧ ಧ್ವನಿ ಎತ್ತಿದ ಒಬ್ಬರೇ ಒಬ್ಬ ಅಧಿಕಾರಿ ಎಂದರೆ 80ರ ದಶಕದಲ್ಲಿ ಬೆಂಗಳೂರು ಪೊಲೀಸ್ ಕಮಿಷನರ್ ಆಗಿದ್ದ ಪಿ.ಜಿ. ಹಲರಂಕರ್ (ಹರ್ಲಂಕರ್ ಎಂದೇ ಅವರು ಪ್ರಸಿದ್ಧ). 'ಹೆಗಡೆ ಸರ್ ನೀವು ಹೇಳಿದಂತೆ ವರ್ಗ ಮಾಡಲು ಆಗುವುದಿಲ್ಲ; ಮಾಡಬೇಕು ಎನ್ನುವುದಾದರೆ ನಾನು ಇಲ್ಲಿ ಇರುವುದಿಲ್ಲ' ಎಂದಿದ್ದರು ಹಲರಂಕರ್. ಬಹುಶಃ ಅದೇ ಕಾರಣಕ್ಕಾಗಿ ಅವರು ರಾಜ್ಯದಲ್ಲಿ ಪೊಲೀಸ್ ಮಹಾ ನಿರ್ದೇಶಕರೂ ಆಗಲಿಲ್ಲ. ಕೇಂದ್ರ ಸೇವೆಗೆ ತೆರಳಿ ಅದಕ್ಕಿಂತ ಉನ್ನತ ಹುದ್ದೆ ಅಲಂಕರಿಸಿದರು ಎಂಬುದು ಬೇರೆ ಮಾತು. ಸರ್ಕಾರಕ್ಕೆ ಡೊಗ್ಗು ಸಲಾಮು ಹಾಕದ ಅಂಥ ಅಧಿಕಾರಿಗಳು ಈಗ ಎಲ್ಲಿ ಸಿಕ್ಕಾರು?

ಚಿದಂಬರಂ ಕರೆದಿದ್ದ ಪೊಲೀಸ್ ಮಹಾ ನಿರ್ದೇಶಕರ ಸಭೆಯಲ್ಲಿ ಭಾಗವಹಿಸಿ ಲಖನೌಗೆ ವಾಪಸಾದ ಉತ್ತರ ಪ್ರದೇಶದ ಡಿ.ಜಿ.ಪಿ. ವಿಕ್ರಂ ಸಿಂಗ್ ಅವರಿಗೆ 'ಫುಟ್‌ಬಾಲ್ ಸೇವೆ' ಕಾದಿತ್ತು. ಅವರನ್ನು ಆ ಹುದ್ದೆಯಿಂದ ಎತ್ತಂಗಡಿ ಮಾಡಲಾಗಿತ್ತು! ಹಲರಂಕರ್ ಹಾಗೆ ಮಾತನಾಡಲು ಅಧಿಕಾರಿಗಳು ಏಕೆ ಹೆದರುತ್ತಾರೆ ಎಂದು ಗೊತ್ತಾಯಿತಲ್ಲ? ಆದರೆ, ಎಲ್ಲ ಡಿ.ಜಿ.ಪಿ.ಗಳು 'ರಾಜ್ಯ ಹಾಳಾಗಿ ಹೋಗಲಿ ನಮ್ಮ ಹುದ್ದೆ ಗಟ್ಟಿ ಇದ್ದರೆ ಸಾಕು' ಎಂದು ಬೆಚ್ಚಗಿದ್ದರೆ ಜನರ ಗತಿಯೇನು?

■

# ಜನ ಕೊಟ್ಟ ದುಡ್ಡು ಲೂಟಿಯಾದೀತು ಎಚ್ಚರ!

ಅದು 1966ರ ಕಾಲ. ಪಾಕಿಸ್ತಾನ ಜತೆಗಿನ ಯುದ್ಧ ಆಗಷ್ಟೇ ಮುಗಿದಿತ್ತು. ದೇಶ ಹಣಕಾಸು ಬಿಕ್ಕಟ್ಟಿನಿಂದ ತತ್ತರಿಸಿ ಹೋಗಿತ್ತು. ವಿಜಾಪುರ ಜಿಲ್ಲೆಯ ಜನ ಆಗ ದೇಶಕ್ಕಾಗಿ ತೋರಿಸಿದ ಔದಾರ್ಯ ಈಗಲೂ ಇತಿಹಾಸದ ಪುಟಗಳಲ್ಲಿ ಉಳಿದಿದೆ. ಪ್ರಧಾನಿ ಇಂದಿರಾ ಗಾಂಧಿಯವರನ್ನು ವಿಜಾಪುರಕ್ಕೆ ಕರೆಸಿ ಅವರನ್ನು ಮತ್ತು ಆಗಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರನ್ನು ಬಂಗಾರದಲ್ಲಿ ತೂಗಿ ಅಷ್ಟೂ ಬಂಗಾರವನ್ನು ಇಂದಿರಾ ಉಡಿಯಲ್ಲಿ ಹಾಕಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಜಿಲ್ಲೆಯ ಜನ ಕಳುಹಿಸಿಕೊಟ್ಟಿದ್ದರು. ಅದರಲ್ಲಿ ಎಷ್ಟೋ ಹೆಣ್ಣು ಮಕ್ಕಳು ಮಾಂಗಲ್ಯ ಬಿಟ್ಟು ಉಳಿದ ಬಂಗಾರವನ್ನೆಲ್ಲ ತಕ್ಕಡಿಗೆ ಹಾಕಿದ್ದರು. ಅಂದು ತೂಗಿದ್ದು 1.21 ಕ್ವಿಂಟಲ್ ಚಿನ್ನ!

ಆ ಜನವೇ ಹಾಗೆ, 'ಡೋಣಿಸಾಲು ಬೆಳೆದರೆ ಓಣಿಯೆಲ್ಲ ಜೋಳ, ನಮಗೇನು ಕಮ್ಮಿ' ಎಂದು ಬೀಗಿದವರು; ಮೀಸೆ ತಿರುವಿದವರು. ಈಗ ನೋಡಿ, ಬರೀ ವಿಜಾಪುರ ಮಾತ್ರವಲ್ಲ ಇಡೀ ಉತ್ತರ ಕರ್ನಾಟಕದ ಹತ್ತು ಹನ್ನೆರಡು ಜಿಲ್ಲೆಗಳ ಗೌಡ, ಕುಲಕರ್ಣಿ, ತೋಟಿ, ತಳವಾರರೆಲ್ಲ ಒಂದೇ ಸ್ಥಿತಿಗೆ

ಬಂದಿದ್ದಾರೆ. ಹೊಲದಲ್ಲಿ ಬೆಳೆಯಿಲ್ಲ. ಮನೆಯಲ್ಲಿ ಕಾಳು ಇಲ್ಲ. ಎಲ್ಲರ ಕೈಗೂ ತಟ್ಟೆ ಬಂದಿದೆ. 'ದೇವರು ಹೀಗೇಕೆ ಮಾಡುತ್ತಾನೆ?' ಎಂದು ಎಲ್ಲರೂ ಆಕಾಶದ ಕಡೆಗೆ ಮುಖ ಮಾಡಿದ್ದಾರೆ. ಇಷ್ಟು ವರ್ಷ ಅವರು ಆಕಾಶದ ಕಡೆಗೆ ಮುಖ ಮಾಡಿದ್ದು ಮಳೆರಾಯ ಕರುಣಿಸಲಿ ಎಂದು; ಈಗ 'ಮಳೆ ಏಕಾದರೂ ಬರುತ್ತದೆ?' ಎಂದು!

ಈ ಮಳೆ ಒಂದು ತಲೆಮಾರೇ ನೋಡದ್ದು. ಪ್ರತಿ ಊರಿನಲ್ಲಿ ಅರ್ಧದಷ್ಟು ಮನೆಗಳು ನೆಲ ಕಚ್ಚಿವೆ. ಇನ್ನು ಅರ್ಧದಷ್ಟು ಮನೆಗಳು ವಾಸಕ್ಕೆ ಅಯೋಗ್ಯವಾಗಿವೆ. ಗಾಳಿ ಬೀಸಿದರೆ ಸಾಕು ಅವು ಧರೆಗೆ ಉರುಳುತ್ತವೆ. ರೈತ ತನ್ನ ಮನೆ, ಮಡದಿಗಿಂತ ಹೆಚ್ಚು ಪ್ರೀತಿಸಿದ್ದ ಜಾನುವಾರುಗಳೂ ಗಂಗೆ ಪಾಲಾಗಿವೆ. ಹೊಲದಲ್ಲಿನ ಬೆಳೆ ಮಾತ್ರವಲ್ಲ, ಒಡ್ಡಗಳೂ ಕಿತ್ತುಕೊಂಡು ಹೋಗಿವೆ. ಹೊಳೆಸಾಲಿನ ಹೊಲಗಳಲ್ಲಿ ಕೆಸರು ತುಂಬಿಕೊಂಡಿದೆ. ಊರಿನ, ಊರಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು, ಸೇತುವೆಗಳು ಕೊಚ್ಚಿಕೊಂಡು ಹೋಗಿ ಬದುಕು ಬಯಲಿನಲ್ಲಿ ಬಂದು ನಿಂತಿದೆ. ನಡ ಮುರಿದು ಹೋಗಿದೆ.

ಗುಡಿ ಗುಂಡಾರ ಸೇರಿರುವ ಜನ ಮತ್ತೆ ಸಾವರಿಸಿಕೊಂಡು ಎದ್ದು ನಿಲ್ಲಬೇಕು. ಬಿದ್ದ ಮನೆಯನ್ನು ಕಟ್ಟಿಕೊಳ್ಳಬೇಕು. ಹೊಲದಲ್ಲಿ ಬೆಳೆ ಬೆಳೆಯಬೇಕು. ಎಲ್ಲ ಪಾಠಗಳಿಗಿಂತ ಜೀವನ ಕಲಿಸುವ ಪಾಠಗಳು ಕಠೋರವಾಗಿರುತ್ತವೆ. ಸಾವು, ವಿನಾಶ ಜೀವನವನ್ನು ನಿಲ್ಲಿಸುವುದಿಲ್ಲ. ಜನ ಹೇಗೋ ಬದುಕಿನ ಬಂಡಿ ಎಳೆಯಲು ಕಲಿಯುತ್ತಾರೆ. 'ನಮ್ಮ ನಸೀಬು ಇದು' ಎಂದು ಅಂದುಕೊಳ್ಳುತ್ತಾರೆ. ಅವರು ಹಾಗೆ ಅಂದುಕೊಳ್ಳಲು ಬಿಡಬಾರದು. ಅವರ ಜತೆಗೆ ಸರ್ಕಾರ ನಿಲ್ಲಬೇಕು. ಈ ವಿನಾಶಕ್ಕೆ ಬರೀ ಸರ್ಕಾರ ಮಾತ್ರದಿಂದ ಉತ್ತರ ಕೊಡಲು ಸಾಧ್ಯವಾದೀತು ಎಂದು ಅನಿಸುವುದಿಲ್ಲ. ಯುದ್ಧಕಾಲದಲ್ಲಿ ಜನರು ದೇಶದ ನೆರವಿಗೆ ನಿಂತ ಹಾಗೆಯೇ ಉತ್ತರ ಕರ್ನಾಟಕದ ಜನರ ನೆರವಿಗೆ ಈಗ ನಿಲ್ಲಬೇಕು.

ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಸಚಿವರು ಸುತ್ತೂರಿನ ಕೊನೆಯ ದಿನದ ಬೈಠಕ್ ಬಿಟ್ಟು ಬಂದಿದ್ದರೆ ಚೆನ್ನಾಗಿತ್ತು. ಬರಲಿಲ್ಲ. ಅವರು ತಪ್ಪನ್ನು ತಕ್ಷಣ ತಿದ್ದಿಕೊಂಡರು. ರಾತ್ರೋರಾತ್ರಿ ಬಳ್ಳಾರಿ ತಲುಪಿ ಅಲ್ಲಿ ಮಾತ್ರವಲ್ಲದೇ ಇತರ ಎಲ್ಲ ಜಿಲ್ಲೆಗಳಲ್ಲಿ ಆಗಿರುವ ವಿನಾಶವನ್ನು ಕಣ್ಣಾರೆ ಕಂಡರು. ಅದರ ಫಲವೇ ಈಗ ಪಾದಯಾತ್ರೆ ಮಾಡಿ ಹಣ ಸಂಗ್ರಹಿಸುತ್ತಿದ್ದಾರೆ. ಯಡಿಯೂರಪ್ಪ ಇದಕ್ಕಿಂತ ಹೆಚ್ಚಿಗೆ ಮಾಡಬಹುದಿತ್ತು. ಮಾಡಬೇಕಿತ್ತು ಎಂದು ಅನಿಸುವುದಿಲ್ಲ. ಜನರೂ ಮತ್ತೆ ಔದಾರ್ಯ ಮೆರೆಯುತ್ತಿದ್ದಾರೆ. ಹಣ, ನೆರವು ಹರಿದು ಬರುತ್ತಿದೆ. ಓಣಿ–ಓಣಿಗಳಲ್ಲಿ ಸ್ವಯಂ ಪ್ರೇರಿತರಾಗಿ, ಬಟ್ಟೆ ಅಕ್ಕಿ ಸಂಗ್ರಹಿಸುತ್ತಿದ್ದಾರೆ. ವಿಶೇಷ ಎಂದರೆ ಆ ಜಾತಿ, ಈ ಜಾತಿ ಎಂದು ಭೇದ ಮರೆತು ಎಲ್ಲ ಜಾತಿ, ಮತಗಳವರು, ಮಠ–ಮಂದಿರಗಳು ನೆರವಿಗೆ ಮುಂದೆ ಬರುತ್ತಿರುವುದು ಉತ್ತರ ಕರ್ನಾಟಕದ ಜನತೆಗೆ ದೊಡ್ಡ ಅಭಯ.

ಸೋಜಿಗ ಎಂದರೆ, ಜನರು ಇಷ್ಟು ಅಭಯ ಹಸ್ತ ಚಾಚಿದರೂ, ಯಡಿಯೂರಪ್ಪ, ಅವರ ಜತೆಗೆ ಪಾದಯಾತ್ರೆಯಲ್ಲಿ ಭಾಗವಹಿಸುತ್ತಿರುವ ಅನಂತಕುಮಾರ್ ಮತ್ತು ಕಟ್ಟಾ, ಅಶೋಕ, ಶೋಭಾ ಅವರಂಥ ಸಚಿವರು ವೈಯಕ್ತಿಕವಾಗಿ ಒಂದೇ ಒಂದು

ಪೈಸೆಯನ್ನೂ ಸಂತ್ರಸ್ತರ ಪರಿಹಾರ ನಿಧಿಗೆ ಪ್ರಕಟಿಸದೇ ಇರುವುದು. ಬರೀ ಬಿಜೆಪಿ ಶಾಸಕರು ಸಚಿವರು ಏಕೆ, ಕಾಂಗ್ರೆಸ್, ಜೆ.ಡಿ.(ಎಸ್) ಶಾಸಕರು, ಮುಖಂಡರು (ಅವರಲ್ಲಿ ಅನೇಕರು ಕೋಟ್ಯಧೀಶರಾದರೂ) ಬಿಡಿಗಾಸು ಬಿಚ್ಚದಿರುವುದು! ಬಹುಶಃ ದಾನ ಮಾಡುವುದನ್ನು ಅವರು ಸಾಮಾನ್ಯ ಜನರಿಗೇ ಬಿಟ್ಟಿರಬೇಕು!

ರಾಜ್ಯದಲ್ಲಿ ಆಗಿರುವ ನಷ್ಟ ದೊಡ್ಡದು. ಅದು 17,000 ಕೋಟಿ ರೂಪಾಯಿ ಗಳಿಂದ 20,000 ಕೋಟಿಗಳ ಆಸುಪಾಸು. ಜನ ಎಷ್ಟೇ ಔದಾರ್ಯ ತೋರಿದರೂ ಇಷ್ಟು ಹಣವನ್ನು ಕೂಡಿಸಿಕೊಟ್ಟಾರು ಎಂದು ಅನಿಸುವುದಿಲ್ಲ. ರಾಜ್ಯ ಸರ್ಕಾರದ ಬೊಕ್ಕಸದಲ್ಲಿಯೂ ಬೇಕಾದಷ್ಟು ಹಣವಿಲ್ಲ. ವಿಚಿತ್ರ ಎಂದರೆ ಪ್ರಕೃತಿ ಜತೆಗೆ ಕೇಂದ್ರ ಸರ್ಕಾರವೂ ನಮ್ಮ ಮೇಲೆ ಮುನಿಸಿಕೊಂಡಂತೆ ಕಾಣುತ್ತದೆ. ಸೋನಿಯಾ ಗಾಂಧಿ ಆಂಧ್ರಕ್ಕೆ ಹೋಗಿ ಕರ್ನಾಟಕಕ್ಕೆ ಬಂದರು. ಪ್ರಧಾನಿ ಕೂಡ ಹಾಗೆಯೇ ಮಾಡಿದರು. ವಿನಾಶ ಆಗಿದ್ದು ಮೊದಲು ಕರ್ನಾಟಕದಲ್ಲಿ ಅಲ್ಲವೇ? ನಷ್ಟು ಆಗಿದ್ದೂ ನಮ್ಮಲ್ಲಿಯೇ ಹೆಚ್ಚು ಅಲ್ಲವೇ? ಬೆಂಗಳೂರಿಗೆ ನೇರವಾಗಿ ಬಂದು ನೆರೆಪೀಡಿತ ಪ್ರದೇಶಗಳಿಗೆ ಹೋಗಲು ಆಗುತ್ತಿರಲಿಲ್ಲವೇ? ಇಬ್ಬರಲ್ಲಿ ಒಬ್ಬರಾದರೂ ಆ ಕೆಲಸ ಮಾಡಬಹುದಿತ್ತಲ್ಲ? ಬರಕ್ಕೆ, ನೆರೆಗೆ ಕನ್ನಡಿಗರು, ತೆಲುಗರು ಎಂದು ಭೇದವಿಲ್ಲ. ಆದರೆ, ಕೇಂದ್ರಕ್ಕೆ ಇದ್ದಂತೆ ಕಾಣುತ್ತದೆ. ಯಾವ ರಾಜ್ಯದಲ್ಲಿ ಯಾವ ಪಕ್ಷದ ಸರ್ಕಾರ ಇದೆ ಎಂದು ಪರಿಹಾರ ಕೊಡಲು ಆಗುತ್ತದೆಯೇ? ವಿನಾಶವನ್ನು ಅಂದಾಜು ಮಾಡಲು ಆಗುತ್ತದೆಯೇ? ಕೇಂದ್ರ ಹಾಗೆ ಮಾಡುತ್ತಿದೆ.

ದುರಂತ ಎಂದರೆ ರಾಜ್ಯದ ಕಾಂಗ್ರೆಸ್ ನಾಯಕರೂ ಅದೇ ಧಾಟಿಯಲ್ಲಿ ಮಾತನಾಡುತ್ತಿದ್ದಾರೆ. ಕೊಟ್ಟ ದುಡ್ಡನ್ನು ಖರ್ಚು ಮಾಡಲಿ ಎನ್ನುತ್ತಿದ್ದಾರೆ. ಕೊಟ್ಟ ದುಡ್ಡಾದರೂ ಎಷ್ಟು? 52 ಕೋಟಿ. ಇದು ಯಾವ ಲೆಕ್ಕ? ಯಾವ ಗಣಿತ? ಕರ್ನಾಟದಲ್ಲಿ ಆಗಿರುವ ಹಾನಿಯ ಅಂದಾಜು ಕೇಂದ್ರಕ್ಕೆ ಇಲ್ಲವೇ? ವಿಶ್ವಸಂಸ್ಥೆಯೇ ಕರ್ನಾಟಕ, ಆಂಧ್ರದಲ್ಲಿ ಆಗಿರುವ ಹಾನಿಗೆ ಪರಿಹಾರ ಕೊಡಲು ಸಿದ್ಧ ಎನ್ನುತ್ತದೆ. ಕೇಂದ್ರ ಬರೀ ಬಾಯಿ ಮಾತು ಹೇಳಿದರೆ ಸಾಕೇ? ನಮ್ಮ ಹಕ್ಕಿನ ದುಡ್ಡಿನ ಜತೆಗೆ ಮತ್ತಷ್ಟು ಹಣವನ್ನು ತಕ್ಷಣ ಕೊಡಬಾರದಿತ್ತೇ? ಹೋಗಲಿ, ಸೋನಿಯಾ, ಪ್ರಧಾನಿ ಬರುವುದಕ್ಕಿಂತ ಮುಂಚೆ ಕೇಂದ್ರದಿಂದ ಒಂದು ತಂಡವಾದರೂ ನಷ್ಟದ ಅಂದಾಜು ಮಾಡಲು ಬರುವುದು ಬೇಡವೇ? ಸೋನಿಯಾ, ಪ್ರಧಾನಿಗಳ ವೈಮಾನಿಕ ಸಮೀಕ್ಷೆಯಿಂದ ನಷ್ಟದ ವಾಸ್ತವ ಅಂದಾಜು ಆದೀತೇ? ಕನ್ನಡದ ಜನರ ದುರಂತ ಅನುಭವಕ್ಕೆ ಬಂದೀತೇ? ಎಷ್ಟೊಂದು ಪ್ರಶ್ನೆಗಳು...?

ಇದುವರೆಗೆ ರಾಜ್ಯ ಸರ್ಕಾರಕ್ಕೂ ನಷ್ಟದ ಖಚಿತ ಅಂದಾಜು ಮಾಡಲು ಆಗಿಲ್ಲ. ಇನ್ನಷ್ಟೇ ಅದು ಆರಂಭವಾಗಬೇಕು. ಜನರು ಮುರಿದು ಬಿದ್ದ ಜಂತಿಗಳನ್ನು ಜೋಡಿಸಿ ಮನೆಗಳನ್ನು ಮತ್ತೆ ನಿಲ್ಲಿಸುವ ಯತ್ನ ಮಾಡುತ್ತಿದ್ದಾರೆ. ಅದು ಮತ್ತೆ ಬಿದ್ದೀತು ಎಂಬ ಭಯ, ಅಭದ್ರತೆ ಕಾಡುತ್ತದೆ. ಎಷ್ಟು ಸಾಧ್ಯವೋ ಅಷ್ಟು ಜನರನ್ನು ಸುರಕ್ಷಿತ ಮನೆಗಳಿಗೆ ಕಳುಹಿಸುವುದು ಈಗ ಸರ್ಕಾರದ ಕೆಲಸ. ಜನ ಕೂಡ ಹಳೆಯ ಮನೆಗಳಲ್ಲಿಯೇ ಇರುವ ಹಟ ಮಾಡಬಾರದು. ಬಾಗಲಕೋಟೆ ಪುನರ್ವಸತಿ ಕೇಂದ್ರ ಹಾಳು

ಸುರಿಯುತ್ತಿರುವುದು ಜನರ ಇಂಥ ಹಟದ ನಿದರ್ಶನ. ಮುಳುಗಡೆ ಪ್ರದೇಶ ಎಂದು ಒಂದು ಸಾರಿ ಗುರುತಿಸಿದ ಮೇಲೆ ಅಲ್ಲಿಯೇ ಇರುವುದು ಸುರಕ್ಷಿತವಲ್ಲ.

ಈ ಪರಿಸ್ಥಿತಿ ರಾಜ್ಯ ಸರ್ಕಾರಕ್ಕೆ ಒಂದು ಅವಕಾಶ, ಒಂದು ಸವಾಲು. ಸರ್ವನಾಶವಾದ ಜಾಗದಲ್ಲಿ ಮತ್ತೆ ಹೊಸ ಜೀವನ ಕಲ್ಪಿಸುವ, ಹೊಸ ಚಿಗುರು ಮೊಳೆಯಿಸುವ ಹೊಣೆ ಸರ್ಕಾರದ ಮೇಲಿದೆ. ಅದು ಸಾಧ್ಯವಾದರೆ ಯಡಿಯೂರಪ್ಪ ಸರ್ಕಾರಕ್ಕೆ ಜೀವಮಾನದ ಸಾಧನೆ. ಆಗದಿದ್ದರೆ ಕಪ್ಪು ಚುಕ್ಕೆ. ಕಷ್ಟದಲ್ಲಿರುವ ಜನರಿಗೆ ಪುನರ್ವಸತಿ ಕಲ್ಪಿಸಲು ಸರ್ಕಾರ ಎಸ್.ಎಂ. ಜಾಮದಾರ್ ಅವರಂಥ ನಿಷ್ಠುರ, ಪ್ರಾಮಾಣಿಕ ಅಧಿಕಾರಿಯನ್ನು ನೇಮಕ ಮಾಡಿದೆ. ಪೈಸೆಗೆ ಪೈಸೆ ಲೆಕ್ಕವಿಟ್ಟು ಕೆಲಸ ಮಾಡುವ ಅಧಿಕಾರಿ ಜಾಮದಾರ್. ಹೌದು, ಇಲ್ಲಿ ಪ್ರತಿಯೊಂದು ಪೈಸೆಯೂ ಮುಖ್ಯ ಪರಿಹಾರಕ್ಕೆಂದು ಬಂದಿರುವ ಎಲ್ಲ ದುಡ್ಡು ಜನರು ಕೊಟ್ಟದು. ಜನರು, ರಾಜಕಾರಣಿಗಳನ್ನು ನೋಡಿ ದುಡ್ಡು ಕೊಟ್ಟಿಲ್ಲ. ಕಷ್ಟದಲ್ಲಿರುವ ಜನರನ್ನು ನೋಡಿ ಕೊಟ್ಟಿದ್ದಾರೆ. ಈ ದುಡ್ಡು ಪೋಲಾಗಬಾರದು. ಲೂಟಿಯಾಗಬಾರದು. ಯಾರಾದರೂ ಲೂಟಿ ಮಾಡಿದರೆ ಅವರು ಈ ಜನ್ಮದಲ್ಲಿಯೇ ನರಕ 'ಕಾಣು'ತ್ತಾರೆ! ■

# ಹೆಜ್ಜೆ ಮೂಡಿಸುವ ಹಾದಿಯಲ್ಲಿ...

'ನೋಡಿ ಈ ಮಗುವಿನ ಎಡಗಾಲು ಚಿಕ್ಕದು', 'ಈ ಮಗುವಿನ ಎರಡೂ ಕಾಲು ಜೋತಾಡುತ್ತಿವೆ, ನಡೆಯಲು ಬಾರದು'; 'ಈ ಮಗುವಿನ ಪೃಷ್ಠ ಭಾಗದಲ್ಲಿಯೇ ಸಮಸ್ಯೆ ಇದೆ'... ಇಂಥ 200 ಮಕ್ಕಳು ಸಾಲಾಗಿ ವಾರ್ಡಿನಲ್ಲಿ ಮಲಗಿದ್ದುವು. ಎಲ್ಲ ಮಕ್ಕಳಿಗೆ ತೊಂದರೆ ಇರುವ ಭಾಗದಲ್ಲಿ ಶಸ್ತ್ರ ಚಿಕಿತ್ಸೆ ಆಗಿತ್ತು. ಕೆಲವು ಮಕ್ಕಳು ನೋವಿನಿಂದ ಅಳುತ್ತಿದ್ದುವು. ಹಲವು ಮಕ್ಕಳು ಅತ್ತು ಅತ್ತು ಸಾಕಾಗಿ ನಿದ್ದೆ ಹೋಗಿದ್ದುವು. ಅವುಗಳ ಪಕ್ಕದಲ್ಲಿ ಆಚೆ ಈಚೆ ತಂದೆ ತಾಯಿಯರು ಆತಂಕದಲ್ಲಿ, ಕಳವಳದಲ್ಲಿ ನಿಂತಿದ್ದರು. ಮತ್ತೆ ತಮ್ಮ ಮಗು ಇತರ ಎಲ್ಲ ಮಕ್ಕಳ ಹಾಗೆ ನಡೆದಾಡೀತೇ? ಕುಣಿದು ಕುಪ್ಪಳಿಸೀತೇ ಎಂಬ ನಿರೀಕ್ಷೆ ಅವರದು.

ನನ್ನ ಜತೆಗೆ ಇದ್ದವರು ಡಾ. ಶರಣ್ ಪಾಟೀಲ. ಅವರು ಬೆಂಗಳೂರಿನ ಹೊಸೂರು ರಸ್ತೆಯ ನಾರಾಯಣ ಹೃದಯಾಲಯ ಆವರಣದ 'ಸ್ಪರ್ಶ' ಆಸ್ಪತ್ರೆಯ ಮುಖ್ಯಸ್ಥ. ಪ್ರತಿ ಬೆಡ್ ಬಳಿ ಡಾ. ಪಾಟೀಲ ಬಂದಾಗಲೆಲ್ಲ ಮಕ್ಕಳ ಪಕ್ಕದಲ್ಲಿ ಇದ್ದ ತಂದೆ-ತಾಯಿಯರ ಕೈಗಳು ಕೃತಜ್ಞತೆಯಿಂದ ಮುಗಿಯುತ್ತಿದ್ದುವು. ಕಣ್ಣಂಚಿನಲ್ಲಿ ನೀರು ಜಿನುಗುತ್ತಿತ್ತು.

'ಇವರು ಇಲ್ಲದಿದ್ದರೆ, ಶಸ್ತ್ರಚಿಕಿತ್ಸೆ ಮಾಡದೇ ಇದ್ದರೆ ನಮ್ಮ ಮಕ್ಕಳು ಜೀವನಪೂರ್ತಿ ಅಂಗವಿಕಲರಾಗಿಯೇ ಉಳಿಯುತ್ತಿದ್ದರು' ಎಂಬ ಭಾವ ಅವರ ಮುಖದಲ್ಲಿ ವ್ಯಕ್ತ ವಾಗುತ್ತಿತ್ತು. ಎಲ್ಲರ ಮಾತು ಕಟ್ಟಿ ಹೋಗಿತ್ತು.

ಕಳೆದ ಸೋಮವಾರ 'ಸ್ಪರ್ಶ' ಆಸ್ಪತ್ರೆಯಲ್ಲಿ ಈ ಮಕ್ಕಳ ಶಸ್ತ್ರ ಚಿಕಿತ್ಸೆ ಆರಂಭವಾಯಿತು. ಇಂದು ಅದು ಮುಕ್ತಾಯವಾಯಿತು. ಶರಣ್ ಪಾಟೀಲ ಜತೆಗೆ ಜಗತ್ತಿನ ಬೇರೆ ಬೇರೆ ಆಸ್ಪತ್ರೆಗಳ ಮೂವತ್ತು ಮಂದಿ ಕೀಲು ಮೂಳೆ ತಜ್ಞರ ತಂಡ ಹೆಗೆಲೆಣೆಯಾಗಿ ನಿಂತಿತ್ತು. ಅವರೆಲ್ಲ ಒಂದು ಕೇಸಿಗೆ ಲಕ್ಷಗಟ್ಟಲೆ ಶುಲ್ಕ ವಸೂಲಿ ಮಾಡುವಂಥ ಪರಿಣತರು. ಆದರೆ, ಈ ಇನ್ನೂರು ಮಕ್ಕಳ ಶಸ್ತ್ರ ಚಿಕಿತ್ಸೆಗೆ ಒಬ್ಬರೂ ಒಂದು ಬಿಡಿಗಾಸೂ ಚಾರ್ಜು ಮಾಡಲಿಲ್ಲ. ತಮ್ಮ ಹಣದಲ್ಲಿಯೇ ವಿಮಾನದಲ್ಲಿ ಇಲ್ಲಿಗೆ ಹಾರಿ ಬಂದರು. ಅವರ ವಾಸ್ತವ್ಯಕ್ಕೆ ಹೊಸೂರು ರಸ್ತೆಯ ಒಟ್ಟೇರಾ ಹೋಟೆಲ್ ಮಾಲೀಕರು ದಿನಕ್ಕೆ 12,000 ರೂಪಾಯಿ ಬಾಡಿಗೆಯ ಕೊಠಡಿಗಳನ್ನು ಉಚಿತವಾಗಿಯೇ ಬಿಟ್ಟುಕೊಟ್ಟಿದ್ದರು.

'ಸ್ಪರ್ಶ ವಚನ' ಹೆಸರಿನ ಈ ಶಿಬಿರಕ್ಕೆ ಆರು ತಿಂಗಳ ಹಿಂದೆಯೇ ಮಕ್ಕಳನ್ನು ಆಯ್ಕೆ ಮಾಡಲಾಗಿತ್ತು. ಮಕ್ಕಳ ಬಗೆ ಬಗೆಯ ಕೀಲು, ಮೂಳೆ ಸಮಸ್ಯೆ ನಿವಾರಣೆಗೆ ಇಂಥ ಒಂದು ಶಿಬಿರ ನಡೆಯುತ್ತದೆ ಎಂಬ ಸುದ್ದಿ ತಿಳಿಯುತ್ತಿದ್ದಂತೆಯೇ 'ಆಯ್ಕೆಗೆ' ಮುಗಿಬಿದ್ದವರು ನೂರಾರು ಮಂದಿ. ಯಾರಿಗೆ ವೈದ್ಯರ ಕನ್ಸಲ್ಟೇಶನ್ ಶುಲ್ಕ ಕೂಡ ಕೊಡಲು ಸಾಧ್ಯವಿಲ್ಲವೋ ಅಂಥ 200 ಮಕ್ಕಳನ್ನು ಆಯ್ಕೆ ಮಾಡಲಾಯಿತು. ಕಳೆದ ವಾರ ನಡೆದ ಪ್ರತಿ ಮಕ್ಕಳ ಶಸ್ತ್ರ ಚಿಕಿತ್ಸೆಗೆ 40,000 ದಿಂದ 45,000 ರೂಪಾಯಿ ವೆಚ್ಚವಾಗುತ್ತದೆ. ಇದು ಬರೀ ಅವರಿಗೆ ಅಳವಡಿಸಿದ ಉಪಕರಣಗಳ ಮೊತ್ತ ಮಾತ್ರ. ವೈದ್ಯರ ಫೀ, ಹಾಸಿಗೆ, ನರ್ಸಿಂಗ್ ಶುಲ್ಕವೆಲ್ಲ ಸೇರಿದರೆ ಅದು ಒಂದೂವರೆ ಲಕ್ಷದ ಗಡಿ ದಾಟುತ್ತದೆ. ಆದರೆ, 'ಸ್ಪರ್ಶ ಪ್ರತಿಷ್ಠಾನ' ಎಲ್ಲ ವೆಚ್ಚವನ್ನು ತನ್ನ ಕೈಯಿಂದಲೇ ಭರಿಸಿದೆ. ಮಕ್ಕಳ ಶಸ್ತ್ರ ಚಿಕಿತ್ಸೆ ವೆಚ್ಚವನ್ನು ತೆಗೆದುಕೊಂಡಿಲ್ಲ ಮಾತ್ರವಲ್ಲ ಜತೆಗೆ ಬಂದ ತಂದೆ-ತಾಯಿಗೆ ವಾಸ ಮತ್ತು ಊಟದ ವ್ಯವಸ್ಥೆಯನ್ನೂ ಮಾಡಿದೆ.

ಆಸ್ಪತ್ರೆಯ ಮೆಟ್ಟಿಲು ಹತ್ತಬೇಕು ಎಂದರೆ ಗಡ ಗಡ ನಡುಗುವ ಕಾಲ ಇದು. ಬದುಕಿ ಬರುವಾಗ ಹೋಗಲಿ ಹೆಣ ತೆಗೆದುಕೊಂಡು ಬರುವಾಗಲೂ ವೈದ್ಯರ ಬಿಲ್ ಕಟ್ಟಿದ ಮೇಲೆ ಮಾತ್ರ ಎನ್ನುವ ಕಾಲ ಇದು. ಇಂಥ ಕಾಲದಲ್ಲೂ ಕೆಲವು ಅಪರೂಪದ ಸಂಗತಿಗಳು ಘಟಿಸುತ್ತವೆ. ಅಂಥ ಒಂದು ಘಟನೆ 'ಸ್ಪರ್ಶ ವಚನ'. ಹೀಗೆಲ್ಲ ಮಾಡಬೇಕು ಎಂದು ನಿಮಗೆ ಏಕೆ ಅನಿಸುತ್ತದೆ ಎಂದರೆ ಶರಣ್ ಪಾಟೀಲ ತಮ್ಮ ಜೀವನದ ಪುಟಗಳನ್ನು ತಿರುವತೊಡಗುತ್ತಾರೆ.

ಅವರು ರಾಯಚೂರು ಜಿಲ್ಲೆಯ ಮಾಳದಕಲ್ ಗ್ರಾಮದವರು. ಆಗರ್ಭ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದವರು (1965). ಯಾವುದಕ್ಕೂ ಕೊರತೆ ಇರಲಿಲ್ಲ. ಆಗ ಅಪ್ಪ ವಕೀಲರಾಗಿದ್ದರು. ಬರುಬರುತ್ತ ಅವರು ಸುಪ್ರೀಂ ಕೋರ್ಟಿನ ನ್ಯಾಯ ಮೂರ್ತಿ ಹುದ್ದೆ ವರೆಗೆ ಏರಿದರು. ಅವರು ಶಿವರಾಜ್ ಪಾಟೀಲ್. ಮಗ ವಕೀಲ ಆಗಲಿ ಎಂದು ತಂದೆ ಬಯಸಿದ್ದು ಸಹಜ. ಆದರೆ, ಮಗ ಹಿಡಿದುದು ವೈದ್ಯಕೀಯದ ಹಾಕಿ.

ಗುಲ್ಬರ್ಗದಲ್ಲಿ ಎಂಬಿಬಿಎಸ್, ಮಣಿಪಾಲದಲ್ಲಿ ಎಂ.ಎಸ್ ಮುಗಿಸಿ ಹೆಚ್ಚಿನ ವ್ಯಾಸಂಗಕ್ಕಾಗಿ ಲಂಡನ್‌ಗೆ ತೆರಳಿದರು. ಅಲ್ಲಿ 1926ರಲ್ಲಿ ಪ್ರಾರಂಭವಾದ ಲಿವರ್‌ಪೂಲ್ ವಿಶ್ವವಿದ್ಯಾಲಯದಲ್ಲಿ ಎಂ.ಸಿಎಚ್. ಪದವಿ ಪೂರೈಸಿದಾಗ (1995) ಅದುವರೆಗೆ ಈ ಪದವಿ ಪೂರೈಸಿದ ಅತ್ಯಂತ ಚಿಕ್ಕ ವಯಸ್ಸಿನ ವ್ಯಕ್ತಿ ಎಂಬ ದಾಖಲೆ ಸ್ಥಾಪಿಸಿದರು.

ಎಂಬಿಬಿಎಸ್ ಮುಗಿಸಿ ಬೆಂಗಳೂರಿನ ಸೇಂಟ್ ಮಾರ್ಥಾಸ್ ಆಸ್ಪತ್ರೆಯಲ್ಲಿ ಇಂಟರ್ನ್‌ಶಿಪ್ ಮಾಡುತ್ತಿದ್ದಾಗ ಅಲ್ಲಿನ ನರ್ಸ್‌ಗಳ ಅಂತಃಕರಣ ಶರಣ್ ಪಾಟೀಲರನ್ನು ತೀವ್ರವಾಗಿ ಪ್ರಭಾವಿಸಿತು. ಈ ವೃತ್ತಿಯಲ್ಲಿ ಮಾತ್ರ ಇದು ಸಾಧ್ಯ ಎಂದು ಅನಿಸಿತು. ಲಂಡನ್‌ಗೆ ಕಲಿಯಲು ಹೋಗಿ ಕೆಲವು ಕಾಲ ಅಲ್ಲಿ ಕೆಲಸ ಮಾಡಿದರೂ ಅವರಿಗೆ ಭಾರತಕ್ಕೆ ಮರಳಬೇಕು ಎಂಬ ಆಸೆ ನಿರಂತರವಾಗಿ ತುಡಿಯುತ್ತಿತ್ತು. ಇದು ವಿರುದ್ಧ ದಿಕ್ಕಿನ ಪ್ರತಿಭಾ ಪಲಾಯನ! ಭಾರತಕ್ಕೆ ಬಂದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿದರು. ಬೊಗಸೆ ತುಂಬ ದುಡ್ಡು ಬರುತ್ತಿತ್ತು. ಹಲವು ವರ್ಷ ಅಲ್ಲಿ ಕೆಲಸ ಮಾಡಿದ ನಂತರ 'ನಾನು ಮಾಡು ವುದು ಇಷ್ಟೇನಾ? ಇದನ್ನೇ ಎಷ್ಟು ದಿನ ಮಾಡುವುದು ಎಂಬ ಕೊರಗು ಕಾಡ ತೊಡಗಿತು. ಆ ಕೊರಗು 'ಸ್ಪರ್ಶ' ಆಸ್ಪತ್ರೆಗೆ ಜನ್ಮ ಕೊಟ್ಟಿತು. 108 ಹಾಸಿಗೆ ಸಾಮರ್ಥ್ಯ ಗಳ ಭವ್ಯ ಸುಸಜ್ಜಿತ ಆಸ್ಪತ್ರೆ ತಲೆ ಎತ್ತಿತು. ಸಂಕೀರ್ಣ ಮತ್ತು ವಿಸ್ತೃತ ಎನಿಸುವ ತುಟ್ಟಿ ಚಿಕಿತ್ಸೆಯ ವೆಚ್ಚ ಭರಿಸಲು ಆಗದ ಜನರ ಅನುಕೂಲಕ್ಕಾಗಿ 'ಸ್ಪರ್ಶ ಪ್ರತಿಷ್ಠಾನ'ವೂ ಹುಟ್ಟಿಕೊಂಡಿತು. ಕಳೆದ 36 ತಿಂಗಳ ಅವಧಿಯಲ್ಲಿ 6,000ಕ್ಕೂ ಹೆಚ್ಚು ಮಧ್ಯಮ, ಕೆಳ ಮಧ್ಯಮ ವರ್ಗದವರ ಕೀಲು–ಮೂಳೆ ಸಮಸ್ಯೆಗೆ ಚಿಕಿತ್ಸೆಯೂ ದೊರೆತಿದೆ.

ಶರಣ್ ಪಾಟೀಲರಿಗೆ ದೇವರು ಎಲ್ಲವನ್ನೂ ಕೊಟ್ಟಿದ್ದಾನೆ. ಬಹುಶಃ ಅದೇ ಅವರಿಗೆ ಸಮಾಜಕ್ಕೆ ತಾನೇನಾದರೂ ವಾಪಸು ಕೊಡಬೇಕು ಎಂಬ ಹಾತೊರಿಕೆಗೆ ಕಾರಣವಾಯಿತು. 2007ರಲ್ಲಿ ಬಿಹಾರ ರಾಜ್ಯದ ಕುಗ್ರಾಮದ ಲಕ್ಷ್ಮಿ ತಾತ್ಮಾ ಎಂಬ ಎಂಟು ಕಾಲಿನ ಬಾಲಕಿಗೆ ಶಸ್ತ್ರ ಚಿಕಿತ್ಸೆ ಮಾಡಲು ಹಚ್ಚಿತು. ನಂಬಿದರೆ ನಂಬಿ ಬಿಟ್ಟರೆ ಬಿಡಿ: ಆ ಶಸ್ತ್ರ ಚಿಕಿತ್ಸೆಗೆ ಅಮೆರಿಕಾ ಆಸ್ಪತ್ರೆಯಲ್ಲಿ ಎಂಟು ಕೋಟಿ ರೂಪಾಯಿ ಖರ್ಚಾಗುತ್ತದೆ ಎಂದು ಲೆಕ್ಕ ಹಾಕಲಾಗಿತ್ತು. 'ಸ್ಪರ್ಶ' ಆಸ್ಪತ್ರೆಯ ವೈದ್ಯರು ಬಿಡಿಗಾಸು ತೆಗೆದುಕೊಳ್ಳದೆ ಸತತವಾಗಿ 27 ಗಂಟೆಗಳ ಕಾಲ ಶಸ್ತ್ರ ಚಿಕಿತ್ಸೆ ಮಾಡಿ ಎಂಟು ಕಾಲುಗಳ ಬಾಲಕಿಯನ್ನು ನಮ್ಮ ನಿಮ್ಮ ಹಾಗೆ ಎರಡು ಕಾಲಿನ ಮನುಷ್ಯಳನ್ನಾಗಿ ಮಾಡಿದರು. ನಿಜ, ಆಕೆಗೆ ಬಿಹಾರದ ಅನಕ್ಷರಸ್ಥರು ದೇವಿಯ ಪಟ್ಟವನ್ನೇ ಕಟ್ಟಿ ಬಿಟ್ಟಿದ್ದರು. ಇಡೀ ಜಗತ್ತು ಬಿಟ್ಟ ಕಣ್ಣು ಬಿಟ್ಟು ಈ ಶಸ್ತ್ರ ಚಿಕಿತ್ಸೆಯ ಯಶಸ್ಸಿನ ಮೇಲೆ ದೃಷ್ಟಿ ನೆಟ್ಟಿತ್ತು. ಆಪರೇಷನ್ ವಾರ್ಡಿನಿಂದ ಹೊರಗೆ ಬಂದ ಶರಣ್ ಪಾಟೀಲರಿಗೆ ಪ್ರಧಾನಿ ಡಾ. ಮನಮೋಹನಸಿಂಗ್‌ರ ಪ್ರಶಂಸೆಯ ಪತ್ರ ಕಾಯುತ್ತಿತ್ತು. ಒಬ್ಬ ವೈದ್ಯನ ಜೀವನದಲ್ಲಿ ಇದಕ್ಕಿಂತ ಹೆಚ್ಚಿನ ಸಂಭ್ರಮ ಏನಿದ್ದೀತು? ಎಷ್ಟು ಜನರಿಗೆ ಈ ಭಾಗ್ಯ ಇದ್ದೀತು? 'ಈಗ ಲಕ್ಷ್ಮಿ ನಡೆದಾಡುತ್ತಿದ್ದಾಳೆ. ಆಕೆ ಎಲ್ಲರ ಹಾಗೆ ಜೀವನ ಮಾಡುತ್ತಾಳೆ. ಅವಳಿಗೂ ಮದುವೆಯಾಗುತ್ತದೆ, ಮಕ್ಕಳಾಗುತ್ತವೆ' ಎಂಬ ನಂಬಿಕೆ ಡಾ. ಪಾಟೀಲರದು.

'ಸ್ಪರ್ಶ' ಆಸ್ಪತ್ರೆಯ ಇತಿಹಾಸದಲ್ಲಿ ಲಕ್ಷ್ಮಿ ತಾತ್ಮಾ ಶಸ್ತ್ರ ಚಿಕಿತ್ಸೆ ಒಂದು ಮೈಲಿಗಲ್ಲು; ಒಂದು ಹೆಜ್ಜೆ ಗುರುತು. ಈ ಗುರುತಿನ ನೆನಪಿಗಾಗಿ ಪಾಟೀಲರು 'ಹೆಜ್ಜೆ ಗುರುತು' ಎಂಬ ಯೋಜನೆ ಪ್ರಾರಂಭಿಸಿದ್ದಾರೆ. ವಕ್ರಪಾದ ಸಮಸ್ಯೆಯಿಂದ ಹುಟ್ಟುವ ಮಕ್ಕಳಿಗೆ ಚಿಕಿತ್ಸೆ ಕೊಡುವುದು ಈ ಯೋಜನೆಯ ಮುಖ್ಯ ಗುರಿ. ಪ್ರತಿವರ್ಷ ಕರ್ನಾಟಕವೊಂದರಲ್ಲಿಯೇ 1,500 ಮಕ್ಕಳು ಇಂಥ ವೈಕಲ್ಯದೊಡನೆ ಹುಟ್ಟುತ್ತವೆ. ಸಮಸ್ಯೆಗೆ ಕಾರಣ ಗೊತ್ತಿಲ್ಲ. ತಂದೆ-ತಾಯಿಯ ಮೊದಲ ಮಗುವಿನಲ್ಲಿ ಈ ಸಮಸ್ಯೆ ಸಾಮಾನ್ಯ. ಆದರೆ, ಸಂಕೀರ್ಣ. ಸುಲಭವಾಗಿ ಪರಿಹಾರ ಕಾಣದಂಥದು. ಖರ್ಚು ವೆಚ್ಚವೂ ದುಬಾರಿ. ಶಸ್ತ್ರ ಚಿಕಿತ್ಸೆಯೂ ಒಂದು ಸಾರಿ ಮುಗಿಯುವಂಥದಲ್ಲ. ಈ ಮಕ್ಕಳು ಮತ್ತೆ ಸಹಜವಾಗಿ ನಡೆಯುವಂತೆ ಮಾಡಲು ನೆರವಾಗುವುದು 'ಹೆಜ್ಜೆ ಗುರುತಿನ' ಗುರಿ. ಚಿಕ್ಕ ವಯಸ್ಸಿನಲ್ಲಿಯೇ ಆಸ್ಪತ್ರೆಗೆ ಬಂದರೆ ಪ್ರಯತ್ನ ಮಾಡಲು ಅನುಕೂಲ. ಈಗ ಇಂಥ ಐನೂರು ಮಕ್ಕಳಿಗೆ ಚಿಕಿತ್ಸೆ ಸಿಕ್ಕಿದೆ. ಬಹುಪಾಲು ಮಕ್ಕಳು ನಡೆದಾಡುತ್ತಿದ್ದಾರೆ.

ಶರಣ್ ಪಾಟೀಲರು ಬಹುಮಂದಿ ವೈದ್ಯರು ನಡೆಯದ ಹಾದಿಯಲ್ಲಿ ಹೆಜ್ಜೆ ಮೂಡಿಸುವ ಛಲ ತೊಟ್ಟಿದ್ದಾರೆ. ಅವರ ಜತೆಗೆ ಅವರಷ್ಟೇ ಬದ್ಧತೆಯುಳ್ಳ ವೈದ್ಯರ ತಂಡವಿದೆ. ಡಾ. ಪಾಟೀಲರು ಕಳೆದ ವಾರದ ಹಾಗೆ ನಾಲ್ಕು ದಿನ ಮನೆಗೆ ಹೋಗದೆ ಆಸ್ಪತ್ರೆಯಲ್ಲಿಯೇ ಇದ್ದರೂ ಮನೆಯನ್ನು ನೋಡಿಕೊಳ್ಳಲು ಮನ ಮೆಚ್ಚಿದ ಮಡದಿ ಮೀನಾ ಇದ್ದಾರೆ. ಅವರು ಶಾಮನೂರು ಶಿವಶಂಕರಪ್ಪ ಅವರ ಮಗಳು. ಸೃಷ್ಟಿ ಮತ್ತು ಸಂಸ್ಕೃತಿ ಎಂಬ ಇಬ್ಬರು ಹೆಣ್ಣು ಮಕ್ಕಳ ತಂದೆ ಶರಣ್ ಪಾಟೀಲರ ಹೆಂಗರುಳು ಇದೇ ರೀತಿ ಸದಾ ಮಿಡಿಯುತ್ತಿರಲಿ. ಅಂಗವಿಕಲತೆಯಿಂದ ಹುಟ್ಟಿದ ಮಕ್ಕಳ ಬಾಳಿನಲ್ಲಿ ಸಂತಸದ ಬೆಳಕು ಮೂಡಿಸುತ್ತ ಇರಲಿ.

■

# ಸರ್ಕಾರ ಉಳಿದು ಮನಸು ಮುರಿದರೆ ಏನು ಬಂತು?

ರಾಜಕಾರಣಿಗಳು ಇತಿಹಾಸದಿಂದ ಪಾಠ ಕಲಿಯುವುದಿಲ್ಲ. ದುರಂತ ಎಂದರೆ ವರ್ತಮಾನದಿಂದಲೂ ಅವರು ಪಾಠ ಕಲಿಯುವುದಿಲ್ಲ. ಕಚ್ಚಾಡುತ್ತ ಅಧಿಕಾರ ನಡೆಸಿದ ಯಾವ ಪಕ್ಷವೂ ಎಲ್ಲಿಯೇ ಆಗಲಿ ಸುಸ್ಥಿರ ಸರ್ಕಾರ ನೀಡಲು ಸಾಧ್ಯವಿಲ್ಲ. ಕರ್ನಾಟಕದಲ್ಲಿ 80 ಮತ್ತು 90ರ ದಶಕದಲ್ಲಿ ಜನತಾ ಮತ್ತು ಜನತಾದಳ ಸರ್ಕಾರ ಇದ್ದಾಗ ಆಂತರಿಕ ಕಚ್ಚಾಟದಿಂದ ಆದ ಪರಿಣಾಮ ಏನು ಎಂಬುದು ಇತಿಹಾಸದಲ್ಲಿ ದಾಖಲಾಗಿದೆ. 1989ರಲ್ಲಿ ಇದುವರೆಗಿನ ದಾಖಲೆ ಬಹುಮತದಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಕೂಡ ಐದು ವರ್ಷಗಳಲ್ಲಿ ಮೂವರು ಮುಖ್ಯಮಂತ್ರಿಗಳನ್ನು ಕಂಡು ಆಡಳಿತ ದಿಕ್ಕೆಟ್ಟು ಹೋಯಿತು. ದೇವರಾಜ ಅರಸು ನಂತರ ಕರ್ನಾಟಕ ಸ್ಥಿರ ಆಡಳಿತ ಕಂಡುದು 1999-2004ರ ಅವಧಿಯಲ್ಲಿ ಎಸ್.ಎಂ.ಕೃಷ್ಣ ಸರ್ಕಾರ ಇದ್ದಾಗ. ನಡು-ನಡುವೆ ಒಂದಿಷ್ಟು ಒಳ್ಳೆಯ ಆಡಳಿತದ ಝಲಕುಗಳು ಮಾತ್ರ ಇದ್ದುವು. ಈ ಎಲ್ಲ ರಾಜಕೀಯ ವಿದ್ಯಮಾನಗಳಿಗೆ ಈಗಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಸಂಪುಟದ ಬಹುತೇಕ ಸಚಿವರು

ಪ್ರತ್ಯಕ್ಷ ಸಾಕ್ಷಿ. ಕಳೆದ 18 ತಿಂಗಳ ಅಧಿಕಾರದಲ್ಲಿ ಎರಡನೇ ಬಾರಿ ಭಿನ್ನಮತದ ಬಿರುಗಾಳಿಗೆ ಸಿಲುಕಿ ತತ್ತರಿಸುತ್ತಿರುವ ಬಿಜೆಪಿ ಸರ್ಕಾರಕ್ಕೆ ಮತ್ತು ಅದರ ಧುರೀಣರಿಗೆ ಇತಿಹಾಸ ಬಹುಬೇಗ ಮರೆತು ಹೋದಂತೆ ಕಾಣುತ್ತದೆ.

ಇತಿಹಾಸ ಯಾರಿಗೆ ನೆನಪಿರುತ್ತದೆ ಎಂದರೆ ವರ್ತಮಾನದಲ್ಲಿ ನಡೆಯುವ ಸಂಗತಿಗಳಾದರೂ ಇವರಿಗೆ ಪಾಠಗಳಾಗಬಾರದೇ? ಕಳೆದ ಏಪ್ರಿಲ್‌ನಲ್ಲಿಯಷ್ಟೇ ನಡೆದ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಸೋತು ಸುಣ್ಣವಾಗಿದೆ. ಆ ಪಕ್ಷದ ಎಲ್ಲ ನಾಯಕರು ಮುಖ ಮುಚ್ಚಿಕೊಂಡು ಕುಳಿತಿದ್ದಾರೆ. ಮೊನ್ನೆ ನಡೆದ ಮಹಾರಾಷ್ಟ್ರ ಮತ್ತು ಇತರ ಎರಡು ರಾಜ್ಯಗಳ ವಿಧಾನಸಭೆ ಚುನಾವಣೆಗಳಲ್ಲಿಯೂ ಬಿಜೆಪಿಗೆ ಮತ್ತೆ ಮುಖಭಂಗವಾಗಿದೆ. ಈಗ ಇಷ್ಟು ದೊಡ್ಡ ರಾಷ್ಟ್ರದಲ್ಲಿ ಬಿಜೆಪಿ ಅಧಿಕಾರದಲ್ಲಿ ಇರುವುದೇ ಮೂರು ಮತ್ತೊಂದು ರಾಜ್ಯದಲ್ಲಿ. ಇದು ಜಗಳ ಆಡುವ ಸಮಯವೇ? ಅಥವಾ ಮುಚ್ಚಿಕೊಂಡು ಆಡಳಿತ ಮಾಡುವ ಕಾಲವೇ? ಮನೆಯಲ್ಲಿ ಹಿರಿಯರು ದುರ್ಬಲರಾದರೆ ಕಿರಿಯರು ಆಡಿದ್ದೇ ಆಟವಾಗುತ್ತದೆ. ಬಿಜೆಪಿಯಲ್ಲಿ ಈಗ ಆಗಿರುವುದೂ ಅದೇ. ಕೇವಲ ಒಂದು ಕೈಸನ್ನೆಯಿಂದ, ಒಂದು ಮಾತಿನಿಂದ, ಒಂದು ದಿವ್ಯ ಮೌನದಿಂದ ಎಲ್ಲವನ್ನೂ ನಿಯಂತ್ರಿಸುತ್ತಿದ್ದ ವಾಜಪೇಯಿ ಹಾಸಿಗೆ ಹಿಡಿದಿದ್ದಾರೆ. ಅವರ ನಂತರದ ಪ್ರಬಲ ನಾಯಕ ಅಡ್ವಾಣಿ ಕೂಡ ಭಗ್ನ ಕನಸುಗಳ ಚಿಪ್ಪಿನೊಳಗೆ ಸೇರಿಕೊಂಡಿದ್ದಾರೆ. ರಾಷ್ಟ್ರ ಮಟ್ಟದ ನಾಯಕರು ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಮುಖ ಮಾಡಿಕೊಂಡಿದ್ದಾರೆ. ಈಗ ಯಾರಿಗೆ ಯಾರು ಬುದ್ಧಿ ಹೇಳಬೇಕು?

ದಕ್ಷಿಣ ಭಾರತದಲ್ಲಿ ಸ್ವತಂತ್ರವಾಗಿ ಆಡಳಿತ ಹಿಡಿಯಬೇಕು ಎಂಬುದು ಬಿಜೆಪಿಯ ದೊಡ್ಡ ಕನಸಾಗಿತ್ತು. ಈ ಕನಸು ನನಸಾಗುವುದಾದರೆ ಅದು ಕರ್ನಾಟಕದಲ್ಲಿ ಮಾತ್ರ ಎಂಬುದೂ ಆ ಪಕ್ಷಕ್ಕೆ ಗೊತ್ತಿತ್ತು. ಆ ಕನಸು ನಿಜವಾಗಿದೆ. ಜನರ ಭರವಸೆಯ ಅಲೆಗಳ ಮೇಲೆ ಯಡಿಯೂರಪ್ಪ ಸರ್ಕಾರ ಅಧಿಕಾರಕ್ಕೆ ಬಂದಿದೆ. ಬಿಜೆಪಿ ತಾನೊಂದು ಭಿನ್ನ ಪಕ್ಷ ಎಂದು ಹೇಳಿಕೊಳ್ಳುತ್ತದೆ. ಆದರೆ, ಕಳೆದ 18 ತಿಂಗಳಲ್ಲಿ ಯಡಿಯೂರಪ್ಪ ಸರ್ಕಾರ ಹಿಂದಿನ ಯಾವ ಸರ್ಕಾರಗಳಿಗಿಂತ ಭಿನ್ನ ಎಂದು ಅನಿಸಿದೆ? ಭಿನ್ನ ಅನಿಸಿದ್ದರೆ ಈಗಿನ ಕಿತ್ತಾಟ ಏಕೆ ಇರುತ್ತಿತ್ತು? ಯಡಿಯೂರಪ್ಪ, ರಾಜ್ಯ ಬಿಜೆಪಿಯ ಪ್ರಶ್ನಾತೀತ ನಾಯಕ ಎನಿಸಿಕೊಂಡವರು. ಈಗ ಅವರ ನಾಯಕತ್ವದ ಮೇಲೆಯೇ ಏಕೆ ಪ್ರಶ್ನಾರ್ಥಕ ಚಿಹ್ನೆ ಮೂಡಿದೆ? ಎಲ್ಲಿ ತಪ್ಪಾಯಿತು? ತಪ್ಪಾಗಿದ್ದು ಇದೇ ಮೊದಲ ಸಾರಿಯೇ? ಅವರ ನಾಯಕತ್ವವನ್ನು ಪ್ರಶ್ನೆ ಮಾಡಿದ್ದು ಇದೇ ಮೊದಲ ಸಲವೇನೂ ಅಲ್ಲವಲ್ಲ? ಆಗಾಗ ಕೇಳಿಬಂದ ಅಪಸ್ವರಗಳಿಗೆ ಯಡಿಯೂರಪ್ಪ ಉತ್ತರ ಕಂಡುಕೊಳ್ಳಲು ಪ್ರಯತ್ನ ಪಟ್ಟರೇ? ಊರಿಗೆಲ್ಲ ಕಾಣುವ ಹಾಗೆ ಜಗಳವಾಡಿ ಏನೂ ಆಗಿಲ್ಲ ಎಂದು ನಟಿಸಿದರೆ ಏನು ಪ್ರಯೋಜನ?

ರಾಜ್ಯದಲ್ಲಿ ಈಗ ಯಡಿಯೂರಪ್ಪ ಒಬ್ಬರೇ ನಾಯಕರಲ್ಲ. ಜಗದೀಶ್ ಶೆಟ್ಟರ್ ಪ್ರತಿನಾಯಕನಾಗಿ ರೂಪುಗೊಂಡಿದ್ದಾರೆ. ಇಬ್ಬರಿಗೂ ಇರುವ ಶಾಸಕರ ಬಲಾಬಲದ ಬಗ್ಗೆ ನಿಖರತೆ ಇಲ್ಲದೇ ಇರಬಹುದು, ಆದರೆ, ಯಡಿಯೂರಪ್ಪ ಅವರು ಏಕಮೇವ ನಾಯಕನಾಗಿ ಉಳಿದಿಲ್ಲ ಎಂಬುದಂತೂ ಸ್ಫಟಿಕ ಸ್ಪಷ್ಟ. ಒಬ್ಬ ಲಿಂಗಾಯತ

ನಾಯಕನನ್ನು ಬಡಿಯಲು ಇನ್ನೊಬ್ಬ ಲಿಂಗಾಯತ ನಾಯಕನ ಸುತ್ತ ಸೇರಿಕೊಳ್ಳುವುದರ ಹಿಂದೆ ದೊಡ್ಡ ಜಾತಿ ರಾಜಕಾರಣವೇ ಇರಬಹುದು. ಯುದ್ಧದಲ್ಲಿ ಹೇಗೋ ಹಾಗೆಯೇ ರಾಜಕಾರಣದಲ್ಲಿ ಎಲ್ಲವೂ ಸಾಧು. ಶತ್ರುವಿನ ಶತ್ರು ಸಹಜ ಮಿತ್ರ ಎನಿಸಿಕೊಳ್ಳುತ್ತಾನೆ. ಶೆಟ್ಟರ್ ಅವರನ್ನು ಮೂಕರನ್ನಾಗಿ ಕೂಡಿಸುವುದಕ್ಕಾಗಿಯೇ ಅವರನ್ನು ವಿಧಾನಸಭಾಧ್ಯಕ್ಷರನ್ನಾಗಿ ಯಡಿಯೂರಪ್ಪ ನೇಮಿಸಿದ್ದರು. ಆದರೆ, ಆ ಹುದ್ದೆಯನ್ನು ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡ ಶೆಟ್ಟರ್‌ಗೆ ಒಂದು ವರ್ಷದಲ್ಲಿ ಸಚಿವ ಸ್ಥಾನ ಕೊಡುವ ಭರವಸೆಯನ್ನೂ ನೀಡಲಾಗಿತ್ತು. ಯಡಿಯೂರಪ್ಪ ತಮ್ಮ ವಚನವನ್ನು ಮರೆತರು. ಈಗ ಶೆಟ್ಟರ್ ಉಪಮುಖ್ಯಮಂತ್ರಿ ಹುದ್ದೆಯನ್ನೂ ಒಲ್ಲೆ ಇನ್ನುವಷ್ಟು ಬಲಿಷ್ಠರಾಗಿದ್ದಾರೆ. ಇದು ಯಾರ ಅಪರಾಧ?

ಇಂಥ ಸ್ವಯಂಕೃತಾಪರಾಧಗಳನ್ನು ಯಡಿಯೂರಪ್ಪ ಬೇಕಾದಷ್ಟು ಮಾಡಿದ್ದಾರೆ. 2008ರ ಚುನಾವಣೆಯಲ್ಲಿ ಬಿಜೆಪಿಗೆ ಫಂಡ್ ಕೊಟ್ಟವರು ಯಾರು? ಅವರು 150ರಿಂದ 200 ಕೋಟಿ ರೂಪಾಯಿ ಚುನಾವಣಾ ನಿಧಿ ಕೊಡದೇ ಇದ್ದರೆ ಬಿಜೆಪಿಗೆ ಚುನಾವಣೆ ಎದುರಿಸುವುದು ಸಾಧ್ಯವಿತ್ತೇ? ಇತ್ತು. ಕುಮಾರಸ್ವಾಮಿ ಸರ್ಕಾರ ದಲ್ಲಿ ಸಚಿವರಾಗಿದ್ದವರು ಕಾಸು ಬಿಚ್ಚಬೇಕಿತ್ತು. ಅವರು ಗಂಟನ್ನು ಮನೆಯಲ್ಲಿಯೇ ಇಟ್ಟುಕೊಂಡು ರೆಡ್ಡಿಗಳ ಹಣದಲ್ಲಿ ಚುನಾವಣೆಯಲ್ಲಿ ಗೆದ್ದು ಬಂದರು. ಗೆದ್ದು ಬಂದ 110 ಶಾಸಕರ ಬಲದಿಂದಲೇ ಸರ್ಕಾರ ರಚನೆ ಸಾಧ್ಯವಿರಲಿಲ್ಲ. ಮತ್ತೆ ನಡೆದುದು ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಕಂಡು ಕೇಳಿ ಅರಿಯದ 'ಆಪರೇಷನ್ ಕಮಲ' ನಾಟಕ. ಅದಕ್ಕೆ ದುಡ್ಡು ಕೊಟ್ಟವರು ಯಾರು? ಪ್ರತಿಪಕ್ಷಗಳ ಶಾಸಕರನ್ನು ಬೇಟೆ ಆಡಿದವರು ಯಾರು? ಅದಕ್ಕೆ ಕೊಟ್ಟ ಬೆಲೆ ಎಷ್ಟು? ಇದು ರೆಡ್ಡಿಗಳ ಜತೆಗೆ ಯಡಿಯೂರಪ್ಪ ಮಾಡಿಕೊಂಡ ರಾಜಿ ಅಲ್ಲವೇ? ಈಗ ಹೊಳೆ ದಾಟಿದ ಮೇಲೆ ಅಂಬಿಗನ ಹಂಗೇನು ಎನ್ನಲಾಗುತ್ತದೆಯೇ?

ಕರ್ನಾಟಕ ಸಂಕಷ್ಟದಲ್ಲಿ ಇದೆ. 14-15 ಜಿಲ್ಲೆಗಳ ಜನ ತತ್ತರಿಸಿ ಹೋಗಿದ್ದಾರೆ. ಅವರ ನೆರವಿಗೆ ಯಡಿಯೂರಪ್ಪ ಹೋದ ರೀತಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಆದರೆ, ಇನ್ನೂ ಏನೂ ಕೆಲಸ ಆಗಿಲ್ಲ. ಸಂತ್ರಸ್ತ ಗ್ರಾಮಗಳನ್ನು ಸ್ಥಳಾಂತರಿಸಿ ಹಳ್ಳಿ ಜನರಿಗೆ ನೆಮ್ಮದಿಯ ನೆಲೆ ಕಲ್ಪಿಸಲು ಈ ಸರ್ಕಾರ ಸಾಕಷ್ಟು ಹೆಣಗಬೇಕು. ಬೊಕ್ಕಸದಲ್ಲಿ ಇರುವ ದುಡ್ಡು ಏನಕ್ಕೂ ಆಗದು. ರೆಡ್ಡಿ ಸೋದರರು ತಮ್ಮ ಜಿಲ್ಲೆಯಲ್ಲಿ 50,000 ಮನೆಗಳನ್ನು ಸ್ವಂತ ದುಡ್ಡಿನಲ್ಲಿಯೇ ಕಟ್ಟುತ್ತೇವೆ ಎಂದರೆ ಯಡಿಯೂರಪ್ಪ ಏಕೆ ಬೇಡ ಎನ್ನುತ್ತಾರೆ? ಅಷ್ಟರ ಮಟ್ಟಿಗೆ ಸರ್ಕಾರದ ಮೇಲಿನ ಹೊರೆ ಕಡಿಮೆ ಆಗುವುದಿಲ್ಲವೇ? ಬರೀ ಬಳ್ಳಾರಿ ಏಕೆ ರಾಯಚೂರಿನಲ್ಲಿಯೂ ನೀವೇ ಮನೆ ಕಟ್ಟಿ ಎಂದು ಅವರನ್ನು ಪುಸಲಾಯಿಸುವುದು ಬೇಡವೇ? ಪ್ರವಾಹ ಸಂತ್ರಸ್ತರ ಪುನರ್ವಸತಿ ಕೆಲಸ ಆಗಬೇಕಾದುದು ಕಂದಾಯ ಇಲಾಖೆಯ ನೇರ ಸುಪರ್ದಿಯಲ್ಲಿ. ಅದು ಇರುವುದು ಕರುಣಾಕರ ರೆಡ್ಡಿ ಅವರ ಬಳಿಯಲ್ಲಿ. ಅವರನ್ನು ಬಿಟ್ಟು ಗ್ರಾಮೀಣಾಭಿವೃದ್ಧಿ ಸಚಿವೆ ಶೋಭಾ ಕೈಯಿಂದ ಬಾಗಲಕೋಟೆಯಲ್ಲಿ ಶಂಕು ಸ್ಥಾಪನೆ ಮಾಡಿಸುವ ಅಗತ್ಯ ಏನಿತ್ತು? ಈಗ ಯಡಿಯೂರಪ್ಪ, ಸಂಪುಟದ ಸಚಿವರಿಗೆಲ್ಲ ಅವರವರ ಜಿಲ್ಲೆಯಲ್ಲಿ ಮನೆ ನಿರ್ಮಾಣಕ್ಕೆ


ಶಂಕು ಸ್ಥಾಪನೆ ಮಾಡಲು ನಾನೇ ಹೇಳಿರುವೆ ಎನ್ನುತ್ತಿದ್ದಾರೆ. ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನಲ್ಲಿ ಶಂಕು ಸ್ಥಾಪನೆ ಮಾಡಿ ರೆಡ್ಡಿಗಳು ಬಳಸಿದ ಭಾಷೆ ಎಂಥದು? ಮುಖ್ಯಮಂತ್ರಿಯೇ ಹೇಳಿದ್ದರೆ ಅವರು ಆ ಭಾಷೆ ಏಕೆ ಬಳಸುತ್ತಿದ್ದರು. ಈಗ ಈ ಮಾತು ಕಂಸ ವಧೆಯವರೆಗೆ ಹೋಗಿ ನಿಂತಿದೆ. ಇದು ಯಾರಿಗೆ ಶೋಭೆ?

ಹಣಬಲದ ರೆಡ್ಡಿಗಳನ್ನು ಬಡಿಯುವುದು ಅಷ್ಟು ಸುಲಭ ಎಂದು ಯಡಿಯೂರಪ್ಪ ಅಂದುಕೊಳ್ಳಬಾರದಿತ್ತು. ಹೈಕಮಾಂಡ್‌ನಿಂದ ಸಂಧಾನ ನಡೆಯುವ ಕಾಲಘಟ್ಟದಲ್ಲಿಯೇ ರೆಡ್ಡಿಗಳ 'ರಾಜ್ಯದಲ್ಲಿನ' ಅಧಿಕಾರಿಗಳನ್ನು ಕಾಲ್ಚೆಂಡಿನ ಹಾಗೆ ಬದಲಿಸಬಾರದಿತ್ತು. ಹರ್ಷ ಗುಪ್ತ ಅವರನ್ನು ಬಳ್ಳಾರಿಗೆ ವರ್ಗ ಮಾಡಿ ಯಡಿಯೂರಪ್ಪ ಬೀದರ್ ಜಿಲ್ಲೆಯ ಜನರಿಗೆ ಅನ್ಯಾಯ ಮಾಡಿದ್ದಾರೆ. ಇದು ವಿಘ್ನ ಸಂತೋಷವೇ? ಒಂದು ರಾಷ್ಟ್ರೀಯ ಪಕ್ಷದ ನಾಯಕ ತನ್ನ ಜತೆಗೆ ತನ್ನ ಸರ್ಕಾರವೂ ಹೋಗಲಿ ಎನ್ನಬಾರದು. ಈ ಸರ್ಕಾರ ಬರಲು ಎಲ್ಲರೂ ಎಷ್ಟು ಕಷ್ಟಪಟ್ಟಿದ್ದಾರೆ ಎಂಬುದು ಯಡಿಯೂರಪ್ಪ ಅವರಿಗಿಂತ ಯಾರಿಗೂ ಚೆನ್ನಾಗಿ ಗೊತ್ತಿರಲು ಸಾಧ್ಯವಿಲ್ಲ. ಅವರ ದೊಡ್ಡ ಸಮಸ್ಯೆ ಎಂದರೆ ಅವರು ಯಾರ ಮಾತನ್ನೂ ಕೇಳಿಸಿಕೊಳ್ಳದ ಘಟ್ಟಕ್ಕೆ ಹೋಗಿರುವುದು. ಅವರ ಆಪ್ತವಲಯ ದಿನದಿಂದ ದಿನಕ್ಕೆ ಚಿಕ್ಕದು ಆಗುತ್ತಿದೆ. 34 ಸಚಿವರಲ್ಲಿ ಕೇವಲ ಒಬ್ಬಿಬ್ಬರನ್ನು ನೆಚ್ಚಿಕೊಂಡರೆ ಉಳಿದವರ ಪಾಡೇನು? ಅವರಲ್ಲಿ ನಂಬಿಕೆ ಹೇಗೆ ಬೆಳೆಯುತ್ತದೆ? ಅದರಿಂದ ಆಗಿರುವ ಪರಿಣಾಮ ಏನು ಎಂದರೆ ಯಡಿಯೂರಪ್ಪ ಅಕ್ಕಪಕ್ಕದಲ್ಲಿಯೇ ಇರುವ ಸಚಿವರೇ ಶೆಟ್ಟರ್‌ಗೂ ನಿಷ್ಠೆ ಪ್ರದರ್ಶಿಸುವುದು. 'ನಮ್ಮ ನಾಯಕರು ರಾಜನಾಥಸಿಂಗ್' ಎಂದು ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡುವುದು.

ಸಂಧಾನದಲ್ಲಿ ಜೇಟ್ಲಿ ಸೋತಿದ್ದಾರೆ. ಅವರ ವಕಾಲತ್ತಿನ ವೈಖರಿ ಇಲ್ಲಿ ಕೆಲಸ ಮಾಡಿಲ್ಲ. ಭಿನ್ನಮತದ ಚೆಂಡು ನವದೆಹಲಿಗೆ ಹೋಗಿ ಬಿದ್ದಿದೆ. ಯಡಿಯೂರಪ್ಪ ಅವರನ್ನು ಕೇಂದ್ರ ನಾಯಕತ್ವ ಇಷ್ಟು ಬೇಗ ಬದಲಿಸಿಬಿಡುತ್ತದೆ ಎಂದು ಊಹಿಸುವುದು ಕಷ್ಟ. ಬದಲಿಸದಿದ್ದರೂ ಕಷ್ಟ. ಏಕೆಂದರೆ ಯಡಿಯೂರಪ್ಪ ಅವರ ನಾಯಕತ್ವವನ್ನು ಪ್ರಶ್ನಿಸುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತ ಹೋಗುತ್ತದೆ. ವಿಧಾನಸಭೆಯಲ್ಲಿ ಸಭಾನಾಯಕನ ಮೇಲೆಯೇ ವಿಶ್ವಾಸ ಇಲ್ಲದ ಸಭಾಧ್ಯಕ್ಷರ ನೇತೃತ್ವದಲ್ಲಿ ಕಲಾಪ ನಡೆಯಬೇಕಾಗುತ್ತದೆ! ಅದೇನು ದೊಡ್ಡ ವಿಷಯ ಎಂದರೆ ದಿಕ್ಕು ದೆಸೆಯಿಲ್ಲದ ಒಂದು ಸರ್ಕಾರ ಉತ್ತರ ಕರ್ನಾಟಕದ ಪ್ರವಾಹ ಸಂತ್ರಸ್ತರ ಆಶೋತ್ತರಗಳನ್ನು ಹೇಗೆ ಈಡೇರಿಸುತ್ತದೆ? ಭಿನ್ನಮತ ಬರೀ ಸರ್ಕಾರದ ಸಮಸ್ಯೆ ಎಂದುಕೊಂಡರೆ ತಪ್ಪು. ಅದು ಜನರಿಗೆ ಸಮಸ್ಯೆಯಾಗಿ ಪರಿಣಮಿಸುತ್ತದೆ.

ಸಂಬಂಧ ಎಂಬುದು ಒಂದು ಸುಂದರ ಶಿಲ್ಪ ಇದ್ದಂತೆ. ಉಳಿಯಿಂದ ಕೆತ್ತಿ ಕೆತ್ತಿ ಶಿಲ್ಪವನ್ನು ರೂಪಿಸುತ್ತೇವೆ. ಕೆತ್ತುವುದು ಹೆಚ್ಚೂ ಕಡಿಮೆ ಆದರೆ ಮೂಗು, ಕಣ್ಣು ಕಾಣೆಯಾಗುತ್ತವೆ. ಈಗ ಆಗಿರುವುದೂ ಅದೇ. ಅಂತಿಮವಾಗಿ, ತಾತ್ಕಾಲಿಕವಾಗಿ ಯಾದರೂ, ಯಡಿಯೂರಪ್ಪ ಸರ್ಕಾರ ಉಳಿಯಬಹುದು. ಆದರೆ, ಅದು ಅಂದವ ಶಿಲ್ಪವಾಗಿರುವುದಿಲ್ಲ.

■



ಶ್ರೀ ಪದ್ಮರಾಜ ದಂಡಾವತಿ ಅವರ 'ನಾಲ್ಕನೇ ಆಯಾಮ' ಅಂಕಣ ಬರಹಗಳಿಗೆ ಗೌರವ ತಂದುಕೊಡುವ ಭಿನ್ನ ಆಯಾಮವೂ ಹೌದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ 'ನಾಲ್ಕನೇ ಆಧಾರ'ವಾದ ಪತ್ರಿಕೋದ್ಯಮವನ್ನು ಅಂಕಣದ ಶೀರ್ಷಿಕೆ ಸೂಚಿಸಿದರೂ, ಇಲ್ಲಿನ ಬರಹಗಳ ಭಿತ್ತಿ ವಿಶಾಲವಾದುದು. ರಾಜಕಾರಣ, ಸಾಹಿತ್ಯ, ಮೌಲ್ಯಗಳು, ಮಾನವೀಯತೆ, ತಿರುಗಾಟದ ಅನುಭವಗಳು, ವ್ಯಕ್ತಿಚಿತ್ರಗಳು- ಹೀಗೆ 'ನಾಲ್ಕನೇ ಆಯಾಮ' ತನ್ನ ವಸ್ತುವೈವಿಧ್ಯದಿಂದ ಗಮನಸೆಳೆಯುತ್ತದೆ. ದಿನವೂ ಹತ್ತಾರು ಅಂಕಣಗಳು ಕನ್ನಡದಲ್ಲಿ ಪ್ರಕಟವಾಗುತ್ತಿರುವ ಸಂದರ್ಭದಲ್ಲಿ ಪದ್ಮರಾಜ ದಂಡಾವತಿ ಅವರ ಅಂಕಣ ಭಿನ್ನವಾಗಿ ನಿಲ್ಲುವುದು ಅವರ ಅನುಭವ, ಭಾಷೆಯ ಬಗೆಗಿನ ಪ್ರೀತಿ ಮತ್ತು ಹಿಡಿತದ ಕಾರಣಗಳಿಂದಾಗಿ. ಅವರ ಭಾಷೆಯಲ್ಲಿ ಸಹಜ ಎನ್ನಿಸುವ ಮಟ್ಟಿಗೆ ಅಂತರ್ಗತವಾಗಿರುವ ಕಚಗುಳಿ ಗುಣ ಬರಹಗಳನ್ನು ಪರಿಣಾಮಕಾರಿಯಾಗಿಸಿದೆ. ಕಸರತ್ತು, ಪಾಂಡಿತ್ಯ ಪ್ರದರ್ಶನವಿಲ್ಲದ ಈ ಬರಹಗಳು ತಮ್ಮ ಸರಳತೆಯ ಕಾರಣದಿಂದಲೇ ಹೆಚ್ಚು ಪರಿಣಾಮಕಾರಿಯಾಗಿವೆ. ಎಲ್ಲವನ್ನೂ ಬಲ್ಲೆನೆನ್ನುವ ಅಹಂ ಇಲ್ಲದ, ಓದುಗರನ್ನು ಉದ್ರೇಕಿಸುವ ಉದ್ದೇಶವಿಲ್ಲದ, ಅಗ್ಗದ ರಂಜನೆಯಿಲ್ಲದ ಇಲ್ಲಿನ ಬರಹಗಳಲ್ಲಿ ಅಂಕಣ ಬರಹಗಳಲ್ಲಿ ಅಪರೂಪ ಎನ್ನಬಹುದಾದ ವಿವೇಕವಿದೆ. ಈ ಎಲ್ಲಕ್ಕೂ ಮಿಗಿಲಾಗಿ ಖಚಿತ ನಿಲುವು ಹಾಗೂ ಈಚಿನ ದಿನಗಳಲ್ಲಿ ತುಟ್ಟಿಯಾಗಿರುವ ನೈತಿಕತೆಯ ಪ್ರಭೆಯಿಂದಾಗಿ 'ನಾಲ್ಕನೇ ಆಯಾಮ'ದ ಬರಹಗಳು ವಿಶೇಷ ಹೊಳಪನ್ನು ಪಡೆದಿವೆ. ಪತ್ರಿಕೋದ್ಯಮದ ವಿದ್ಯಾರ್ಥಿಗಳೊಂದಿಗೆ ಸಾಹಿತ್ಯದ ವಿದ್ಯಾರ್ಥಿಗಳೂ ಪ್ರೀತಿಯಿಂದ ಎದುರುಗೊಳ್ಳಬೇಕಾದ ಬರಹಗಳಿವು.

-ರಘುನಾಥ ಚ.ಹ.

SINCE 1967 Sapna
ಸಪ್ನ ಬುಕ್ ಹೌಸ್
3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009
ದೂರವಾಣಿ : 40114455
Shop online : www.sapnaonline.com

ISBN : 978-81-280-1384-3
9 788128 013843
ಬೆಲೆ : ₹ 80/-